
# ಅಪರಂಜಿ

ತಿಳಿನಗೆಯ ಕಾರಂಜಿ



ಜನವರಿ - 2012





# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 29
ಸಂಚಿಕೆ – 4
ಜನವರಿ – 2012

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 4 |
| ಚೋಳರ ಕಾಲದ... | **ವತ್ಸನ** | 10 |
| ಸೊಳ್ಳೆಯ ಪರದಾಟ | **ಲತಾ ಉದಯ ಹೆಗಡೆ** | 17 |
| ಭೂತಾವಾಸ್ಯಮಿದಂ... | **ಎಚ್. ಶಾಂತರಾಜ್ ಐತಾಳ್** | 22 |
| ಪ್ರಯಾಣದ ಪರದಾಟ | **ವೈ.ವಿ. ಗುಂಡೂರಾವ್** | 27 |
| ಸಣ್ಣ ಕಥೆ – ಪುಟ್ಟಾ | **ಕುಮುದಾ ಪುರುಷೋತ್ತಮ್** | 31 |
| ಹಾಲು ಮಾರಲು.... | **ಸಿ.ಆರ್. ಸತ್ಯ** | 37 |
| ಸಿದ್ಧತೆ | **ಸೂರಿ ಹಾರ್ದಳ್ಳಿ** | 41 |
| ದೇವರು ಪ್ರತ್ಯಕ್ಷನಾದಾಗ | **ಕುಮುದಾ ದೇಶಪಾಂಡೆ** | 45 |
| ಹೆಬ್ಬಂಡೆ ರಾಮದಾಸಪ್ಪ | **ಎನ್. ಪ್ರಕಾಶ್** | 49 |
| ಡ್ರೀಮ್ ವೈಫ್ | **ಆನಂದ** | 52 |
| ಚುಟುಕು ಚಟಾಕಿ | **ಬೇಲೂರು ರಾಮಮೂರ್ತಿ** | 54 |

*ಮುದ್ರಣ :* ರವಿ ಗ್ರಾಫಿಕ್ಸ್ – *ಅಕ್ಷರ ಜೋಡಣೆ :* ಒಮೇಗಾ ಲೇಸರ್‌ಟೆಕ್
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: aparanji@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

| | | |
|---|---|---|
| ಗರುಡಾ ಪುರಾಣ | **ನೀರಗುಂದ ಕೇಶವಮೂರ್ತಿ ರಾವ್** | 59 |
| ಬಸ್ ಪ್ರಯಾಣದ...... | **ಅಡ್ಡೂರು ಕೃಷ್ಣರಾವ್** | 63 |
| ರಂಗ ಸ್ವಾರಸ್ಯ | **ಡಾ|| ನಿರುಪಮ** | 66 |
| ತುಂತುರು | **ದಂನಆ** | 71 |
| ಆನಂದ ವಿಹಾರ ಕ್ಲಬ್ | **ಎಚ್.ಆರ್. ಹನುಮಂತ ರಾವ್** | 72 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 78 |
| ವೈಟ್ ದೇವೇಂದ್ರ | **ಗೋಪಾಲಿ** | 81 |
| ಈ ಮಾಯಾಲೋಕದಲ್ಲಿ | **ಗಣೇಶ ಹೆಗ್ಗಡೆ** | 85 |
| ಆ ದಿನಗಳ ಭಾನುವಾರದ.. | **ಇ.ಆರ್. ರಾಮಚಂದ್ರನ್** | 89 |
| ತಾತನ ತಾಪತ್ರಯ | **ಎನ್. ರಾಮನಾಥ್** | 94 |
| ಡೆಡೋನಿಯಾ | **ರಾಮ** | 100 |
| ಬೈರಾಗಿಯ ಪವಾಡದಲ್ಲಿ | **ಗೊರೂರು** | 106 |
| ಮೊಬೈಲಾಯಣ | **ನಾಗರಾಜ್** | 112 |
| ಜನನೀ ಜನ್ಮ ಭೂಮಿಶ್ಚ | **ವಾಣೀ ಸುರೇಶ್** | 114 |
| ಮಾಸ ಭವಿಷ್ಯ | **ಸತ್ಯೋತ್ತಮಾಚಾರ್ಯ** | 118 |


ಮುಖಪುಟ ವ್ಯಂಗ್ಯಚಿತ್ರ : **ಗುಜ್ಜಾರ್**

# ಮೊದಲ ಮಾತು

ಹಾಸ್ಯೋತ್ಸವ 2011 ನಮ್ಮ ಸರಣಿಯ ಹದಿನೇಳನೇ ಹಾಸ್ಯೋತ್ಸವ. ಈ ಸಂಭ್ರಮದ ಥೀಮ್ ಬಹು ಭಾಷಾವೈವಿಧ್ಯತೆಯ ಹಾಸ್ಯೋತ್ಸವ. ತಮಿಳು, ಸಂಸ್ಕೃತ, ತೆಲುಗು, ಮರಾಠಿ ಹಾಗೂ ಮಲೆಯಾಳಂ ಭಾಷೆಗಳ ವೈವಿಧ್ಯಮಯ ನಗೆ ಪ್ರಜ್ಞೆಯ ಸೊಗಡನ್ನು ಈ ಉತ್ಸವದಲ್ಲಿ ಪರಿಚಯಿಸುವ ಯತ್ನ ನಮ್ಮದು. ನಮ್ಮ ಬಳಗದ ಮಿತ್ರರೂ ಅಪರಂಜಿಯ ಬಗ್ಗೆ ಅಭಿಮಾನವನ್ನು ತಳೆದಿರುವವರೂ ಆದ ಪ್ರೊ. ಎಂ. ಕೃಷ್ಣೇಗೌಡರು ಈ ಸಮಾರಂಭದ ಉಸ್ತುವಾರಿಯನ್ನು ನಮ್ಮವರೇ ಆದ ಬೇಲೂರು ಹಾಗೂ ಗುಂಡೂರಾವ್ ಇವರುಗಳೊಂದಿಗೆ ವಹಿಸಿಕೊಂಡಿದ್ದಾರೆ.

ಈ ಸಮಯದಲ್ಲಿ ಬಿಡುಗಡೆ ಆಗುತ್ತಿರುವ ಎರಡು ವೈಶಿಷ್ಟ್ಯಗಳಿವೆ. ಮೊದಲನೆಯದು ಕಳೆದ ಇಪ್ಪತ್ತೆಂಟು ವರ್ಷಗಳಲ್ಲಿ ಮೂಡಿಬಂದ ಸಮಗ್ರ ಅಪರಂಜಿ ಸಂಚಿಕೆಗಳನ್ನು ಒಂದು ಮಾಹಿತಿ ಸುರುಳಿಯ ರೂಪದಲ್ಲಿ ಮಾರುಕಟ್ಟೆಗೆ ನೀಡಲಾಗುತ್ತಿದೆ. ಸಾಂಪ್ರದಾಯಿಕ ಬಿಡುಗಡೆ ಮುಂದಿನ ತಿಂಗಳಾದರೂ, ಹಾಸ್ಯೋತ್ಸವಕ್ಕೆ ಬರುವ ನಮ್ಮ ಓದುಗರಿಗೆ ಈ ಅವಕಾಶ ದೊರಕಲೆಂಬ ಆಶಯದಿಂದ ಈ ಮಾಹಿತಿ ಸುರುಳಿ ನಿಮಗೆ ಹಾಸ್ಯೋತ್ಸವದಲ್ಲೇ ಲಭ್ಯ. ಈ ಮಾಹಿತಿ ಸುರುಳಿಯ ನಿರ್ಮಾಣಕ್ಕೆ ಮುಖ್ಯವಾಗಿ ಭಾರತೀಯ ವಿದ್ಯಾಭವನದ ಅಧ್ಯಕ್ಷರಾದ ಶ್ರೀಯುತ ಎನ್. ರಾಮಾನುಜ ಮತ್ತು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶ್ರೀ ಮನು ಬಳಿಗಾರ್ ಇವರುಗಳ ಸಹಕಾರ ಕಾರಣ. ಈ ಮಹನೀಯರಿಗೆ ಅಪರಂಜಿಯ ತುಂಬು ಹೃದಯದ ಕೃತಜ್ಞತೆಗಳು.

ಎರಡನೆಯ ವಿಶೇಷವೆಂದರೆ ನಿಮ್ಮ ಕೈಯ್ಯಲ್ಲಿರುವ ಈ ವಿಶೇಷ ಸಂಚಿಕೆ. ಅನೇಕ ಬರಹಗಾರರು ಈ ಸಂಚಿಕೆಗೆ ತಮ್ಮ ಲೇಖನಗಳನ್ನು ಕೊಟ್ಟು ಸಹಕರಿಸಿದ್ದಾರೆ. ಅವರೆಲ್ಲರಿಗೂ ಅಪರಂಜಿ ಆಭಾರಿ. ಈ ಬಾರಿಯ ಪ. ರಮಾನಂದರಾವ್ ಸ್ಪರ್ಧೆಗೆ ಬಂದ ಲೇಖನಗಳನ್ನು ಪರಿಶೀಲಿಸಿ ಅವುಗಳಲ್ಲಿ ಇದ್ದದ್ದರಲ್ಲಿ ಉತ್ತಮ ಲೇಖನಗಳನ್ನು ಸಿದ್ಧಪಡಿಸಿ ಕೊಟ್ಟ ಪತ್ರಕರ್ತ ಶ್ರೀ ರಘುನಾಥ ಚ.ಹ. ಅವರಿಗೆ ನಮ್ಮ ಕೃತಜ್ಞತೆಗಳು. ಎಂದಿನಂತೆ ಕರಡನ್ನು ನೋಡಿಕೊಂಡ ಹಾಗೂ ಸಂಚಿಕೆಯನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಿರುವ ಅಪರಂಜಿ ಬಳಗದ ಗೋಪಾಲ್ ಹಾಗೂ ಆನಂದ ಮತ್ತು ಒಮೇಗಾದ ಕುಮಾರಿ. ಶ್ವೇತ ಹಾಗೂ ರವಿ ಗ್ರಾಫಿಕ್ಸ್‌ನ ಚಿ. ಸಂತೋಷ್ ಹಾಗೂ ಚಿ. ನಾಗರಾಜ್ ಇವರಿಗೆ ಅಪರಂಜಿಯ ನಮನ. ಹೊಸವರುಷ ಸಕಲರಿಗೂ ಶುಭದಾಯಕವಾಗಲೆಂದು ಅಪರಂಜಿ ಭಗವಂತನಲ್ಲಿ ಪ್ರಾರ್ಥಿಸುತ್ತಾಳೆ.

**ಶಿವಕುಮಾರ್**

# ಅಪರಂಜಿ ಕಿಡಿ

● ಪ್ರಕಾಶ್



''ಮುಚ್ಚಿ ಇಂಗ್ಲೀಷ್ ಶಾಲೆ'' – ಗಂಗಾವತಿಯಲ್ಲಿ ಗುಡುಗು

**● ಇದನ್ನ ಇಂಗ್ಲೀಷಿನಲ್ಲಿ ಹೇಳಬೇಕಲ್ಲ !!**

★★★

ನಾಲ್ಕು ಟನ್ ಭಾರದ ಕೇಕ್ ಪ್ರದರ್ಶನ – ಸುದ್ದಿ

**● ಬ್ರೆಡ್ ಇಷ್ಟವಾಗದವರಿಗೆ ಸುಸುದ್ದಿ !!**

★★★

ಮಹಾಲಕ್ಷ್ಮಿ ಲೇಔಟ್ ಕ್ಷೇತ್ರ : ನಲವತ್ತು ಕೋಟಿ ಅವ್ಯವಹಾರದ ಶಂಕೆ – ಪತ್ರಿಕೆ

**● ಶ್ರೀಮನ್ಮಹಾಲಕ್ಷ್ಮಿ ನಡುಗಿದಳಂತೆ !!**

★★★

ಕಬ್ಬು ಬೆಳೆಗಾರರ ಪ್ರತಿಭಟನೆ ವಾಪಸ್ ಪಡೆದ ಸಂಘ – ಸುದ್ದಿ

**● ಸಿಹಿ ಸಿಹಿ ಸುದ್ದಿ !!**

★★★

ಮುಖ್ಯಮಂತ್ರಿಗಳು ಏಕೆ ಯಾವಾಗಲೂ ನಗುತ್ತಿರುತ್ತಾರೆ? – ಪ್ರಶ್ನೆ

**● ಅವರ ಹೆಸರಿನಲ್ಲೇ ಇದೆ ಇದರ ಗುಟ್ಟು!!**

★★★

ಪಾಕಿಸ್ತಾನದಲ್ಲಿ ಕ್ಷಿಪ್ರ ಕ್ರಾಂತಿ ಇಲ್ಲ – ಅಮೆರಿಕಾ ಹೇಳಿಕೆ

**● ಕ್ರಾಂತಿ ಮಾಡಿಸೋರೇ ಹೇಳಿದ ಮೇಲೆ !!**

★★★

''ನೈತಿಕತೆ ಬದುಕಿನ ನೆಲೆಗಟ್ಟಾಗಲಿ'' – ಸಲಹೆ

**● ಅರಣ್ಯರೋದನ ಅಂದರೇನು ಅಂತ ಅರ್ಥವಾಯಿತು !!**

★★★

ಕನ್ನಡ ಸಾಹಿತ್ಯ ಪರಿಷತ್ತನ್ನು ''ಕಸಾಪ'' ಅಂತ ಕರೆಯಬೇಡಿ ಪ್ಲೀಸ್ !!

★★★

# ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆಲೇಖನ ಸ್ಪರ್ಧೆ - 2011

## ಬಹುಮಾನಿತರು

**ಮೊದಲನೇ ಬಹುಮಾನ**

**ಸೊಳ್ಳೆಯ ಪರದಾಟ** – ಶ್ರೀಮತಿ ಲತಾ ಉದಯ ಹೆಗಡೆ
ನಂ.207, 'ಚಿನ್ಮಯೀ'
ಕಾಳಿದಾಸನಗರ, ವಿದ್ಯಾನಗರ
ಹುಬ್ಬಳ್ಳಿ – 580 031
ಮೊ: 94804 13322

**ಎರಡನೇ ಬಹುಮಾನ**

**ಭೂತಾವಾಸ್ಯಮಿದಂ ಸರ್ವಂ** – ಎಚ್. ಶಾಂತರಾಜ ಐತಾಳ್
ಅಂಬಲವಾಡಿ
ಉಡುಪಿ – 576 103

ತೀರ್ಪುಗಾರರು

**ರಘುನಾಥ ಚ.ಹ.**

(ಪತ್ರಕರ್ತರು – ಸಾಹಿತಿಗಳು)

## ಶ್ರದ್ಧಾಂಜಲಿ

# ಮಾರಿಯೋ ಮಿರಾಂಡ (1926-2011)



ನಮ್ಮ ನಾಡಿನ ಪ್ರತಿಭಾವಂತ ವ್ಯಂಗ್ಯಚಿತ್ರಕಾರರಲ್ಲಿ ಒಬ್ಬರಾದ ಮಾರಿಯೋ ಮಿರಾಂಡ ಇನ್ನಿಲ್ಲ. ಎಂಭತ್ತೈದು ವರ್ಷಗಳ ತುಂಬು ಬಾಳನ್ನು ನಡೆಸಿದ ಮಾರಿಯೋ ಹುಟ್ಟಿದ್ದು ಗೋವಾದಲ್ಲಿ. ಇವರ ಹೈಸ್ಕೂಲು ವಿದ್ಯಾಭ್ಯಾಸ ಬೆಂಗಳೂರಿನ ಸೇಂಟ್ ಜೋಸೆಫ್ಸ್ ಬಾಯ್ಸ್ ಹೈಸ್ಕೂಲಿನಲ್ಲಿ ಎಂಬುದೇ ಬೆಂಗಳೂರಿಗರಿಗೆ ಒಂದು ಹೆಗ್ಗಳಿಕೆ. ಕಾಲೇಜು ಹಂತವನ್ನು ಮುಂಬೈನಲ್ಲಿ ನಡೆಸಿದ ಮಾರಿಯೋ ಅವರ ಮೊದಲ ಒಲವು ವ್ಯಂಗ್ಯಚಿತ್ರಗಳ ರಚನೆ. ಇವರ ಚಿತ್ರ ರಚನಾ ವೃತ್ತಿ ಮೊದಲು ಪ್ರಾರಂಭವಾದದ್ದು ಒಂದು ಜಾಹೀರಾತಿನ ಸ್ಟುಡಿಯೋದಲ್ಲಿ. ನಾಲ್ಕು ವರ್ಷಗಳು ಇಲ್ಲಿ ಕೆಲಸಮಾಡಿದ ನಂತರ ಮಾರಿಯೋಗೆ ಇಲಸ್ಟ್ರೇಟೆಡ್ ವೀಕ್ಲಿ ಪತ್ರಿಕೆಯಲ್ಲಿ ವ್ಯಂಗ್ಯ ಚಿತ್ರ ಬರೆಯುವ ಅವಕಾಶ ದೊರಕಿತು. ಫೆಮಿನಾ, ಎಕನಾಮಿಕ್ ಟೈಮ್ಸ್, ಕರೆಂಟ್ ಪತ್ರಿಕೆಗಳೂ ಈ ಪ್ರತಿಭಾಶಾಲಿ ಚಿತ್ರಕಾರನಿಗೆ ಮುಕ್ತ ಅವಕಾಶ ನೀಡಿದವು. ಮಾರಿಯೋಗೆ ಒಂದು ವರ್ಷದ ಕಾಲ ಪೋರ್ಚುಗಲ್‌ಗೆ ತೆರಳಿ ವ್ಯಾಸಂಗ ಮಾಡುವ ಅವಕಾಶ ದೊರೆಯಿತು. ಇದರ ನಂತರ ಮಾರಿಯೋ ಇಂಗ್ಲೆಂಡಿಗೆ ಹೋಗಿ ಅಲ್ಲಿ ತನ್ನ ಕಲಾಶಕ್ತಿಯನ್ನು ಪ್ರದರ್ಶಿಸಿದರು. ಲಂಡನ್ನಿನಲ್ಲಿದ್ದಾಗ ಅಲ್ಲಿನ ಖ್ಯಾತ ವ್ಯಂಗ್ಯಚಿತ್ರಕಾರ ರೊನಾಲ್ಡ್ ಸೆರ್ಲ್, ಮಾರಿಯೋಗೆ ಮಾರ್ಗದರ್ಶನ ನೀಡಿದರು.

ಲಂಡನ್ ಪ್ರವಾಸ ಮುಗಿಸಿ ಮಾರಿಯೋ ಪುನಃ ಮುಂಬೈಗೆ ಹಿಂತಿರುಗಿ ಟೈಮ್ಸ್ ಆಫ್ ಇಂಡಿಯಾ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದರು. ಇಲ್ಲಿದ್ದಾಗಲೇ ಮಾರಿಯೋ ಖ್ಯಾತ ಕಲಾವಿದೆ ಹಬೀಬಾ ಹೈದರಿಯನ್ನು ಭೇಟಿಯಾಗಿ ಮದುವೆಯಾದರು. 1974ರಲ್ಲಿ ಮಾರಿಯೋಗೆ ಅಮೆರಿಕೆಗೆ ಹೋಗುವ ಅವಕಾಶ ಒದಗಿ ಬಂತು. ಅಮೆರಿಕೆಯಲ್ಲಿ ಮಿರಾಂಡರ ಪ್ರತಿಭೆ ಬಹುಮುಖವಾಗಿ ಹರಡಿತು. 1988ರಲ್ಲಿ ಭಾರತ ಸರ್ಕಾರ ಮಾರಿಯೋ ಮಿರಾಂಡಾರಿಗೆ ಪದ್ಮಶ್ರೀ ಪ್ರಶಸ್ತಿ ಕೊಟ್ಟು ಗೌರವಿಸಿತು. 2002ನೇ ಇಸವಿಯಲ್ಲಿ ಪದ್ಮಭೂಷಣ್ ಪ್ರಶಸ್ತಿಯೂ ಇವರದ್ದಾಯಿತು. ಡಿಸೆಂಬರ್ ಹನ್ನೊಂದರಂದು ನಿಧನರಾದ ಮಾರಿಯೋ ಮಿರಾಂಡಾ ಅವರಿಗೆ ಅಪರಂಜಿ ಬಳಗದ ಎಲ್ಲರ ಪರವಾಗಿ ಕಂಬನಿದುಂಬಿದ ಬೀಳ್ಕೊಡುಗೆ.



ಮುಂಬೈ ದೃಶ್ಯ





ಖುಷ್‌ವಂತ್ ಸಿಂಗ್




ಮಂತ್ರಿಗಳ ಪ್ರವಾಹ ಅಂತ ಕಾಣುತ್ತೆ !



ಗೋವೆಯ ಗ್ಲಿಟರಾಟ್ಟಿ




ಮುಂಬೈ ಲೋಕಲ್




ಪಣಜಿಯ ಮಾರುಕಟ್ಟೆ




ಚೈತನ್ಯದ ಚಿಲುಮೆ ಗೋವೆಗೆ ಸ್ವಾಗತ



ಹಳ್ಳಿಯ ಬಸ್ಸು



ಮಾರಿಯೋ ಕಂಡ ದಲೈಲಾಮ

ಶರಲೇಖನ ಪುನರಾಗಮನ





# ಚೋಳರ ಕಾಲದ ರಾಜದಂಡ

**ವತ್ಸನ**

**ಡಿ**ಸೆಂಬರ್ ಚಳಿಯ ಸಂಜೆ. ನಾನು ಸೋಫಾದ ಮೇಲೆ ಒರಗಿ ಕ್ಯಾಪ್ಟನ್ ಗೋಪಿನಾಥ್‌ರ ಪುಸ್ತಕದ ಕನ್ನಡ ಭಾಷಾಂತರ 'ಬಾನಯಾನ'ದ ಪುಟಗಳನ್ನು ತಿರುವುತ್ತಿದ್ದೆ. ಶರಲೇಖ ಯಾವುದೋ ಒಂದು ಕೋಲನ್ನು ಕೈಯ್ಯಲ್ಲಿ ಹಿಡಿದು ಬಹು ಕುತೂಹಲದಿಂದ ಪರೀಕ್ಷಿಸುತ್ತಿದ್ದ. ಎಫ್.ಎಮ್. ರೇಡಿಯೋದಲ್ಲಿ ಯಾರೋ ಒಬ್ಬ ಸಂಗೀತಗಾರರು, 'ಕತ್ಲಲ್ಲಿ ಕರಡೀಗೆ ಜಾಮೂನು ತಿನಿಸೋಕೆ ಯಾವತ್ತು ಹೋಗ್ಬಾರ್ದು ರೀ – ಅತ್ಲಾಗೆ ಆ ಹುಡುಗಿ ಇತ್ಲಾಗೆ ಈ ಹುಡುಗಿ ಯಾವತ್ತು ಇರಬಾರ್ದು ರೀ' ಎಂಬ ವ್ಯಾವಹಾರಿಕ ಸತ್ಯವೊಂದನ್ನು ಪ್ರತಿಪಾದಿಸುತ್ತಿದ್ದರು. ಅಡುಗೆ ಮನೆಯಲ್ಲಿ ಸರೋಜಮ್ಮ ಮಾಡುತ್ತಿದ್ದ ಬಸ್ಸಾರಿನ ಘಮ ಘಮ ನಮ್ಮ ಕೋಣೆಗೂ ಹರಡಿತ್ತು. ಒಮ್ಮೆಲೇ ಶರಲೇಖ ನನ್ನ ಕಡೆ ತಿರುಗಿ, 'ಈ ಕೋಲಿನ ಬಗ್ಗೆ ಎಷ್ಟು ಮಾಹಿತಿ ಕಂಡುಹಿಡಿಯ ಬಲ್ಲೆ?' ಎಂದು ಕೇಳುತ್ತಾ ಆ ಕೋಲನ್ನು ನನ್ನ ಕಡೆ ಎಸೆದ. ಧೋನಿ ತರಹ ನಾನು ಆ ಕೋಲನ್ನು ಕ್ಯಾಚ್ ಹಿಡಿದು ಅದನ್ನು ಒಂದು ತುದಿಯಿಂದ ನಿಧಾನವಾಗಿ ನೋಡಲು ಶುರು ಮಾಡಿದೆ. ಅದೊಂದು ತೇಗದ ಮರದ ಕೋಲು. ಬಹು ಹಳೆಯ ಮರದಂತೆ ಕಾಣುತ್ತಿತ್ತು. ಕೆಳತುದಿಯಲ್ಲಿ ಒಂದು ದಢೂತಿಯಾದ ಹಿತ್ತಾಳೆ ಕವಚ. ಕವಚದ ಕೆಳತುದಿ ಸಾಕಷ್ಟು ಸವೆದಿತ್ತು. ಕೋಲಿನ ಉದ್ದಕ್ಕೂ ಅಲ್ಲಲ್ಲಿ ಅನೇಕ ಸಣ್ಣ ಗೀರುಗಳಿದ್ದದ್ದು ಅದರ ಪ್ರಾಚೀನತೆಯನ್ನು ತಿಳಿಸುತ್ತಿದ್ದವು. ಕೋಲಿನ ಮೇಲುತುದಿಯಲ್ಲಿ ಒಂದು ಸಿಂಹದ ತಲೆ. ಕಂಚಿನಿಂದ ಮಾಡಿದ್ದು. ತಲೆ ಎರಕದ್ದಾದರೂ ಬಹು ಕಲಾತ್ಮಕವಾಗಿ ಮೂಡಿಬಂದಿತ್ತು. ಇಷ್ಟು ವಿಷಯಗಳನ್ನು ನಾನು ಶರಲೇಖನಿಗೆ ಹೇಳಿದೆ. ಆತ, 'ಭೇಷ್ ವತ್ಸನ, ಹದ್ದಿನಕಣ್ಣು ನಿನ್ನದು' ಅಂತ ಪ್ರಶಂಸಿಸಿದ. 'ನಾನು ಗಮನಿಸದ ಅಂಶಗಳು ಯಾವುವಾದರೂ ಇವೆಯೇ?' ಅಂತ ತುಸು ಗರ್ವದಿಂದಲೇ ಕೇಳಿದೆ. 'ಸುಮಾರು ಅಂಶಗಳು ನಿನ್ನ ಗಮನಕ್ಕೆ ಬಂದಿಲ್ಲ. ಈ ಕೋಲಿನ ಮಧ್ಯೆ ಎರಡು ಜೊತೆ ಗೀರುಗಳು ನಾಯಿಯೊಂದರ ಹಲ್ಲುಗಳಿಂದ ಆದದ್ದು. ಕೋಲಿನ ಯಜಮಾನ ಗಾಳಿಸಂಚಾರಕ್ಕೆ ಹೋಗುವಾಗ ಅವನ ನಾಯಿ ಈ ಕೋಲನ್ನು ತನ್ನ ಬಾಯಲ್ಲಿ ಕಚ್ಚಿಕೊಂಡು ಅವನೊಂದಿಗೆ ಹೋಗುತ್ತಿತ್ತೆಂದು ಈ ಗೀರುಗಳಿಂದ ನಿರ್ಧರಿಸಬಹುದು. ಗೀರುಗಳ ನಡುವಣ ಅಂತರದಿಂದ ಆ ನಾಯಿ ಆಲ್ಸೇಷನ್ ಜಾತಿಯ ನಾಯಿ ಎಂದು ತರ್ಕಿಸಬಹುದು. ಅದಿರಲಿ. ಈ ಕೋಲನ್ನು ನನಗೆ ಕೊಟ್ಟಿದ್ದು ಮಧುರೆಯ ಒಬ್ಬ ಮಹನೀಯರು. ಇದು ಒಂದು ಬಹು ಪುರಾತನ ಕೋಲು. ರಾಜರಾಜ ಚೋಳನ

ಕಾಲದಿಂದ ಅವನ ವಂಶಸ್ಥರು ಕಾಪಾಡಿಕೊಂಡು ಬಂದದ್ದು. ಈ ಸಿಂಹದ ತಲೆ ಆ ವಂಶದ ಲಾಂಛನ. ಅದರ ಕಲಾತ್ಮಕ ಎರಕ ಹೊಯ್ಯುವಿಕೆ ಸಹಾ ಆಗಿನ ಕಾಲದ್ದೇ. ಈ ಆಧುನಿಕ ಕಾಲದಲ್ಲಿ ಲಾಸ್ಟ್ ವ್ಯಾಕ್ಸ್ ವಿಧಾನ ಎಂದು ಕರೆಯುವ ಎರಕದ ಕಲೆ ಆಗಿನ ಕಾಲದಲ್ಲೇ ನಮ್ಮ ದೇಶದಲ್ಲಿ ಪ್ರಚಲಿತವಾಗಿತ್ತು' ಎಂದ ಶರಲೇಖ.

'ಅಂತಹ ಅಪೂರ್ವ ಕೋಲನ್ನು ನಿನಗೇಕೆ ಕೊಟ್ಟರು ಆ ವಂಶಸ್ಥರು' ಎಂದು ಕೇಳಿದೆ.

'ದೆಹಲಿಯಲ್ಲಿ ನಾನು ನಡೆಸಿದ ಪತ್ತೇದಾರಿಯ ಪರಿಣಾಮವಾಗಿ ಒಬ್ಬ ಅತಿ ಮುಖ್ಯ ರಾಜಕಾರಣಿಯ ದಸ್ತಗಿರಿ ಆದದ್ದು ನಿನಗೆ ನೆನಪಿರಬಹುದು. ಆ ದಸ್ತಗಿರಿಯ ನಂತರ ಈ ಮಹನೀಯರು ನನ್ನ ಬಳಿ ಬಂದು ನನ್ನನ್ನು ಬಹುವಾಗಿ ಅಭಿನಂದಿಸಿದರು. ನಿಮ್ಮ ಕೆಲಸದಿಂದ ನಮ್ಮ ನಾಡಿನ ಜನತೆಯ ಮರ್ಯಾದೆಯನ್ನು ಎತ್ತಿಹಿಡಿದಿದ್ದೀರ. ರಾಜ ರಾಜ ಚೋಳನ ನಾಡಿನಿಂದ ಇಂತಹ ಕುನ್ನಿ ಬರಬಾರದಾಗಿತ್ತು. ವಂಶಪಾರಂಪರ್ಯವಾಗಿ ಬಂದಿರುವ ಈ ಕೋಲನ್ನು ನಿಮಗೆ ಅರ್ಪಿಸುವುದರ ಮೂಲಕ ನಿಮಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಈ ಕೋಲಿನ ಮೇಲಣ ಲಾಂಛನ ಸಮಾಜದ ನ್ಯಾಯ ಮತ್ತು ಧರ್ಮಗಳ ಕುರುಹು. ದಯವಿಟ್ಟು ಸ್ವೀಕರಿಸಬೇಕು ಎಂದೆಲ್ಲಾ ಹೇಳಿ ಈ ಕೋಲನ್ನು ನನಗೆ ಬಳುವಳಿಯಾಗಿ ಕೊಟ್ಟ' ಎಂದ ಶರಲೇಖ.

ಅಷ್ಟು ಹೊತ್ತಿಗೆ ನಮ್ಮ ಎಫ್.ಎಮ್. ಸಂಗೀತಗಾರ, 'ಲೌವ್ವಲ್ಲಿ ಕಣ್ಣೀರು ಕಂಪಲ್ಸರಿ: ಯಾವಕ್ಕೂ ಕರ್ಛೀಫು ಇಟ್ಕೊಂಡಿರಿ' ಎಂದು ಜೀವನದ ದುರಂತ ಮತ್ತು ಮುಂಜಾಗ್ರತಾ ಕ್ರಮಗಳ ಬಗ್ಗೆ ತಿಳಿಸುತ್ತಿದ್ದ. ಅಷ್ಟರಲ್ಲಿ ಬಾಗಿಲಿನ ಕರೆಗಂಟೆ ಕಿಚಿ ಕಿಚಿ ಶಬ್ದ ಮಾಡಿತು. ನಾನೇ ಹೋಗಿ ಬಾಗಿಲು ತೆಗೆದೆ. ಇನ್ಸ್‌ಪೆಕ್ಟರ್ ಉಳ್ಳಾಗಡ್ಡಿ ಒಳಕ್ಕೆ ಬಂದರು. ಅವರ ಜೊತೆ ಒಬ್ಬ ವ್ಯಕ್ತಿ. ಕೋಟು ಟೈ ಧರಿಸಿದ್ದ ಆತ ಸಂಭಾವಿತನಂತೆ ಕಾಣುತ್ತಿದ್ದ. ಉಳ್ಳಾಗಡ್ಡಿ ಪರಸ್ಪರ ಪರಿಚಯ ಮಾಡಿಸಿದರು.

'ಇವರು ಶ್ಯಾಮಸುಂದರ್. ನಾಡಿನ ಖ್ಯಾತ ವಿಮಾ ಸಂಸ್ಥೆಯ ನಿರ್ದೇಶಕರು. ಇವರು ಶರಲೇಖ ಮತ್ತು ಅವರ ಮಿತ್ರ ವತ್ಸನ. ನಿಮ್ಮ ಸಮಸ್ಯೆಗೆ ಪರಿಹಾರವೆಂಬುದೇನಾದರೂ ಇದ್ದರೆ ಇವರ ಮೂಲಕವೇ ಅದು ಸಾಧ್ಯ' ಎಂದು ಉಳ್ಳಾಗಡ್ಡಿ ಆ ಆಗಂತುಕರಿಗೆ ಆಶ್ವಾಸನೆ ನೀಡಿದ ನಂತರ ಇಬ್ಬರೂ ಸೋಫಾಗಳಲ್ಲಿ ಆಸೀನರಾದರು.

ಶರಲೇಖ 'ಏನದು ಸಮಸ್ಯೆ? ವಿವರಿಸಿ ಹೇಳಿ. ಯಾವ ಅಂಶವನ್ನು ಬಿಡಬೇಡಿ' ಎಂದು ಹೇಳಿ ಧ್ಯಾನ ಮಾಡುವಂತೆ ಕಣ್ಣುಗಳನ್ನು ಮುಚ್ಚಿ ಕುಳಿತ.

ಉಳ್ಳಾಗಡ್ಡಿ ತಮ್ಮ ವಿವರಣೆ ಪ್ರಾರಂಭಿಸಿದರು.

'ನಾಡಿನ ಹೆಸರಾಂತ ಚಿತ್ರಶಾಲೆಯೊಂದರಲ್ಲಿ ಇದ್ದ ಒಂದು ಬಹು ಅಮೂಲ್ಯ ವರ್ಣಚಿತ್ರ ಕಳುವಾಗಿದೆ. ಖ್ಯಾತ ಚಿತ್ರಶಿಲ್ಪಿ ಮಾನ್ಯ ವೆಂಕಟಪ್ಪನವರಿಂದ ರಚಿತವಾದ ಚಿತ್ರ ಅದು. ಚಿತ್ರಶಾಲೆಯವರು ಏರ್ಪಡಿಸಿದ್ದ ಒಂದು ವಾರದ ಸಾರ್ವಜನಿಕ ಪ್ರದರ್ಶನದ ಅವಧಿಯಲ್ಲಿ ಈ ಅಮೂಲ್ಯ ಚಿತ್ರದ ರಕ್ಷಣೆಗೆಂದೇ ಇವರ ವಿಮಾ ಸಂಸ್ಥೆಯಿಂದ ಆ ಚಿತ್ರಕ್ಕೆ ಪ್ರತ್ಯೇಕವಾಗಿ ವಿಮೆ ಇಳಿಸಿದ್ದರು.'

‘ಕಳುವಾದದ್ದು ಯಾವಾಗ?’ ಶರಲೇಖ ಕೇಳಿದ.

‘ಮೊನ್ನೆ ಕಳುವಾಯಿತು. ತಕ್ಷಣ ನನಗೆ ಕರೆ ಬಂತು. ಮೊದಲ ಹಂತದ ವಿಚಾರಣೆ ಎಲ್ಲವನ್ನೂ ನಾನು ಮಾಡಿದ್ದೇನೆ. ಇನ್ನೂ ಯಾವ ಚರಹೆಗಳೂ ಸಿಕ್ಕುತ್ತಿಲ್ಲ. ಬೇಗ ಕಳುವಾದ ಚಿತ್ರವನ್ನು ಪತ್ತೆ ಹಚ್ಚದಿದ್ದರೆ ಇವರ ವಿಮಾ ಕಂಪನಿ ಹಲವು ಲಕ್ಷ ರೂಪಾಯಿಗಳನ್ನು ಪರಿಹಾರ ಧನವಾಗಿ ಆ ಚಿತ್ರಶಾಲೆಗೆ ಕೊಡಬೇಕಾಗುತ್ತದೆ. ಹಾಗಾಗಿ ನಮ್ಮಿಬ್ಬರಿಗೂ ಕಳುವಾದ ಚಿತ್ರವನ್ನು ಪತ್ತೆ ಹಚ್ಚುವುದರಲ್ಲಿ ಸಮಾನ ಆಸಕ್ತಿ ಇರುವುದು ಸಹಜ’ ಎಂದರು ಉಳ್ಳಾಗಡ್ಡಿ.

‘ಚಿತ್ರಗಳ ರಕ್ಷಣೆ ಬಗ್ಗೆ ಏನು ವ್ಯವಸ್ಥೆ ಇತ್ತು?’ ಶರಲೇಖನ ಪ್ರಶ್ನೆ.

ಇದಕ್ಕೆ ಶ್ಯಾಮಸುಂದರ್, ‘ಚಿತ್ರದ ಮೌಲ್ಯವನ್ನು ಗಮನಿಸಿ ಹಾಗೂ ವಿಮಾ ಮೊತ್ತವನ್ನು ಲಕ್ಷ್ಯದಲ್ಲಿಟ್ಟು ನಮ್ಮ ವಿಮಾ ಕಂಪನಿಯಿಂದ ಸಹಾ ಮಫ್ತಿಯಲ್ಲಿ ಹಲವು ಕಾವಲುಗಾರರನ್ನು ಚಿತ್ರಶಾಲೆಯ ಸುತ್ತ ಇಪ್ಪತ್ತನಾಲ್ಕು ಗಂಟೆಗಳ ಗಸ್ತನ್ನು ನಿಯೋಜಿಸಿದ್ದೆವು. ಮೊದಲ ಮೂರು ದಿನ ಎಲ್ಲವೂ ಸರಿಯಾಗಿಯೇ ಇತ್ತು. ನಾಲ್ಕನೆಯ ದಿನ ಬೆಳಗ್ಗೆ ಬಂದು ನೋಡಿದರೆ ಚಿತ್ರವಿದ್ದ ಸ್ಥಳದಲ್ಲಿ ಖಾಲಿ ಗೋಡೆ. ಚಿತ್ರ ಹೇಗೆ ಕಳುವಾಯಿತೆಂಬ ಸಂಗತಿ ಅತ್ಯಂತ ನಿಗೂಢವಾಗಿಯೇ ಉಳಿದಿದೆ.’

ಶರಲೇಖನ ಮುಖದಲ್ಲಿ ಒಂದು ಕಿರು ಮಂದಹಾಸ ಮಿಂಚಿ ಮಾಯವಾಯಿತು. ‘ಆಯ್ತು. ನಾಳೆಯಿಂದಲೇ ನನ್ನ ಪತ್ತೇದಾರಿ ಕೆಲಸವನ್ನು ಪ್ರಾರಂಭಿಸುವೆ. ಈಗ ನೀವು ಹೊರಡಬಹುದು’ ಎಂದು ಶರಲೇಖ ಹೇಳಿದ ಮೇಲೆ ಶ್ಯಾಮಸುಂದರ್ ಎಲ್ಲರನ್ನೂ ಬೀಳ್ಕೊಂಡು ಹೊರಟರು. ಅವರ ನಿರ್ಗಮನದ ನಂತರ ಉಳ್ಳಾಗಡ್ಡಿ ಮತ್ತು ಶರಲೇಖ ಬಹುದಿನಗಳ ನಂತರದ ಭೇಟಿಗೆ ಸಹಜವಾದ ಪರಸ್ಪರ ಕುಶಲಗಳನ್ನು ಮಾತನಾಡ ತೊಡಗಿದರು.

ಮಾರನೆಯ ಬೆಳಗ್ಗೆ ಶರಲೇಖನೊಂದಿಗೆ ನಾನೂ ಚಿತ್ರಶಾಲೆಗೆ ಹೊರಟೆ. ಚಿತ್ರಶಾಲೆಯ ಪರಿಸರ ಬಹು ಸುಂದರವಾಗಿತ್ತು. ಕಳುವಿನ ಪ್ರಯುಕ್ತ ಸಾರ್ವಜನಿಕ ಚಿತ್ರ ಪ್ರದರ್ಶನ ರದ್ದಾಗಿತ್ತು. ಹಲವು ಪೋಲೀಸರು ಚಿತ್ರಶಾಲೆಯ ಹೊರ ಆವರಣದಲ್ಲಿ ಸುಳಿದಾಡುತ್ತಿದ್ದರು. ನಾವಿಬ್ಬರೂ ನೇರವಾಗಿ ಚಿತ್ರಶಾಲೆಯ ಒಳಗಣ ವಿಶಾಲವಾದ ಹಾಲ್‌ಗೆ ಹೋದೆವು. ಉಳ್ಳಾಗಡ್ಡಿ ನಮ್ಮ ಬರವನ್ನೇ ಕಾಯುತ್ತಿದ್ದರು. ಶ್ಯಾಮಸುಂದರ್ ಸಹಾ ಅಲ್ಲಿ ಹಾಜರಿದ್ದರು. ಅಲ್ಲಿ ನಿಂತಿದ್ದ ಇನ್ನೊಬ್ಬ ವ್ಯಕ್ತಿಯನ್ನ ‘ಇವರು ಅಜಯ್ ಗುಪ್ತಾ. ಚಿತ್ರಶಾಲೆಯ ನಿರ್ದೇಶಕರು.’ ಅಂತ ನಮ್ಮಿಬ್ಬರಿಗೂ ಉಳ್ಳಾಗಡ್ಡಿ ಪರಿಚಯಿಸಿದರು.

ಶರಲೇಖ ಒಂದು ಸ್ವಲ್ಪವೂ ಕಾಲಹರಣ ಮಾಡದೇ ಆ ಹಾಲ್‌ನ ಎಲ್ಲ ಭಾಗಗಳನ್ನೂ ಕೂಲಂಕುಶವಾಗಿ ಪರೀಕ್ಷಿಸತೊಡಗಿದ. ನಾನೂ ಸಹಾ ನನ್ನದೇ ಆದ ರೀತಿಯಲ್ಲಿ ಪರಿಸರವನ್ನು ಗ್ರಹಿಸತೊಡಗಿದೆ. ಮೊಟ್ಟಮೊದಲಿಗೆ ನನ್ನ ಇದಿರು ಶುಭ್ರವಾಗಿದ್ದ ಬಿಳಿಯ ಬಣ್ಣದ ಗೋಡೆ. ಖಾಲಿ ಗೋಡೆಯ ಮಧ್ಯೆ ಕಳುವಾದ ಚಿತ್ರವನ್ನು ನೇತುಹಾಕಲು ಬಳಸಿದ್ದ ಎರಡು ಮೊಳೆಗಳು ಎದ್ದು ಕಾಣುತ್ತಿದ್ದವು. ಆ ಗೋಡೆಯ ಎದಿರು ದಿಕ್ಕಿನಲ್ಲಿ ಒಂದು ಪುಟ್ಟ ವೇದಿಕೆ. ಅದನ್ನು

ಮುಚ್ಚಿದ್ದ ಒಂದು ಕಡುಗೆಂಪು ಬಣ್ಣದ ತೆರೆ. ಮಿಕ್ಕೆರಡು ಗೋಡೆಗಳ ಮೇಲೆ ಹಲವು ಖ್ಯಾತನಾಮರ ವರ್ಣಚಿತ್ರಗಳು. ಹಾಲ್‌ನ ಮಧ್ಯೆ ಪ್ರೇಕ್ಷಕರಿಗೆ ಕುಳಿತುಕೊಳ್ಳಲು ಅನುಕೂಲವಾಗುವಂತೆ ಒಂದು ಮೆತ್ತೆಹೊಂದಿಸಿದ ಬೆಂಚು. ಇಷ್ಟೇ ನೋಡಿ ಅಲ್ಲಿದ್ದದ್ದು. ಶರಲೇಖ ತನ್ನ ಸುರುಳಿ ಪಟ್ಟಿಯನ್ನು ತೆಗೆದು ಹಾಲ್ ನ ಉದ್ದ ಅಗಲಗಳನ್ನು ಬಹು ನಿಖರವಾಗಿ ಅಳೆಯ ತೊಡಗಿದ. ಅನಂತರ ನಿರ್ದೇಶಕರೊಂದಿಗೆ ಏನೋ ಮಾತನಾಡಿದ ನಂತರ ಅವರಿಬ್ಬರೂ ಹಾಲಿನಿಂದ ಹೊರಕ್ಕೆ ಹೋಗಿ ಮಹಡಿ ಹತ್ತಿ ಮೊದಲ ಮಹಡಿಯ ಮೇಲಿದ್ದ ನಿರ್ದೇಶಕರ ಆಫೀಸಿಗೆ ಹೋದದ್ದನ್ನು ನೋಡಿದೆ. ಅಷ್ಟು ಹೊತ್ತಿಗೆ ನನ್ನ ಮೊಬೈಲ್ ರಿಂಗಾಯಿತು. ಶರಲೇಖ ಆ ತುದಿಯಿಂದ ಮಾತನಾಡುತ್ತಿದ್ದ.' ನನಗೆ ಇಲ್ಲಿ ಸುಮಾರು ಕೆಲಸವಿದೆ. ನನಗಾಗಿ ಕಾಯಬೇಡ. ಸಂಜೆಗೆ ಭೇಟಿ ಮಾಡೋಣ' ಅಂದ ಶರಲೇಖ. ನಾನು ಚಿತ್ರಶಾಲೆ ಹೊರ ಆವರಣದಲ್ಲಿದ್ದ ಪುಟ್ಟ ಸರೋವರದ ಅಂಚಿನಲ್ಲಿ ಕುಳಿತು ನಿಸರ್ಗದ ರಮಣೀಯತೆಯನ್ನು ಸವಿಯತೊಡಗಿದೆ.

ಆ ಸಂಜೆ ಶರಲೇಖ ಫ್ಲಾಟಿಗೆ ಹಿಂತಿರುಗಿದಾಗ ರಾತ್ರಿ ಒಂದು ಗಂಟೆ ಆಗಿದ್ದು ಅವನು ಬಾಗಿಲು ತೆರೆದದ್ದರಿಂದ ತಿಳಿಯಿತು. ಮಾರನೆಯ ಬೆಳಗ್ಗೆ ನಾನು ಏಳುವ ಮುಂಚೆಯೇ ಶರಲೇಖ ತನ್ನ ಕೆಲಸದ ಮೇಲೆ ಹೊರಟುಬಿಟ್ಟಿದ್ದ. ನನಗೆ ಅವನು ಸಿಕ್ಕಿದ್ದು ಮೂರನೆಯ ದಿನ. ಅಂದು ಬೆಳಗ್ಗೆ ಬಚ್ಚಲುಮನೆಯಿಂದ ಮನ್ನಾಡೆ ಹಾಡನ್ನು ಸಿಳ್ಳೆ ಹಾಕುತ್ತಾ ಪ್ರಾತಃರ್ವಿಧಿಗಳನ್ನು ನಡೆಸಿದ್ದ ಶರಲೇಖನ ದನಿ ಕೇಳಿ, ಓಹೋ ಪರಿಸ್ಥಿತಿ ಆಶಾದಾಯಕವಾಗಿದೆ ಎಂದು ನಾನು ತರ್ಕಿಸಿದೆ.

ಅವತ್ತು ಬೆಳಗ್ಗೆ ಹತ್ತು ಗಂಟೆಗೆ ಚಿತ್ರಶಾಲೆಯತ ಹೊರಟೆವು. ಶರಲೇಖ ತನ್ನ ಕೈಯ್ಯಲ್ಲಿ ರಾಜರಾಜಚೋಳನ ದಂಡವನ್ನು ಹಿಡಿದಿದ್ದ. 'ಅಪಾಯವೇನಾದರೂ ಇದೆಯೇನು?' ಅಂತ ನಾನು ಕೇಳಿದೆ. 'ಪತ್ತೇದಾರಿಕೆಯಲ್ಲಿ ಅಪಾಯ ತಪ್ಪಿದ್ದಾದರೂ ಎಂದು? ಆದರೂ ಚಿಂತೆ ಬೇಡ, ನಾನಿಲ್ಲವೇ?' ಎಂದ ಶರಲೇಖ.

ಚಿತ್ರಶಾಲೆಯ ಹಾಲ್‌ನಲ್ಲಿ ಶ್ಯಾಮಸುಂದರ್, ಉಳ್ಳಾಗಡ್ಡಿ ಹಾಗೂ ಅಜಯ್ ಗುಪ್ತಾ ಅಷ್ಟುಹೊತ್ತಿಗಾಗಲೇ ಅಲ್ಲಿಗೆ ಬಂದು ಬೋಳುಗೋಡೆಯ ಮುಂದೆ ನಿಂತಿದ್ದರು. ಶರಲೇಖನನ್ನು ನೋಡಿ ಶ್ಯಾಮಸುಂದರ್, 'ಕಳುವಿನ ಬಗ್ಗೆ ಏನಾದರೂ ಸುಳಿವು ಸಿಕ್ಕಿದೆಯೇ? ಅಪರಾಧಿ ಯಾರೆಂದು ಗೊತ್ತಾಯಿತೇ? ಎಂದು ಸಹಜ ಆತಂಕದಿಂದ ಕೇಳಿದರು.

'ಸಾವಧಾನ, ಈ ಬೆಳಗ್ಗೆ ನನ್ನ ಕೆಲವಸದಲ್ಲಿ ಯಶಸ್ಸು ದೊರಕುವ ಲಕ್ಷಣಗಳು ಕಾಣುತ್ತಿವೆ. ಉಳ್ಳಾಗಡ್ಡಿ ಅವರೇ ಅಪರಾಧಿ ಸಿಕ್ಕ ತಕ್ಷಣ ಅವನನ್ನು ದಸ್ತಗಿರಿ ಮಾಡಲು ಕೈಕೊಳಗಳನ್ನು ತಂದಿದ್ದೀರಿ ತಾನೆ?' ಎಂದು ಶರಲೇಖ ಕೇಳಿದ.

'ಓಹೋ ಎಲ್ಲಾ ರೆಡಿ. ನಿಮ್ಮ ಮೊಬೈಲ್ ಕಾಲ್ ಬಂದಾಗಿನಿಂದ ನಿಮ್ಮ ಹಾದಿಯನ್ನೇ ಕಾಯುತ್ತಿದ್ದೇವೆ' ಅಂದರು ನಮ್ಮ ಇನ್‌ಸ್ಪೆಕ್ಟರು.

ಹಾಲ್‌ನ ಅಂಚಿನಲ್ಲಿ ನಿಂತಿದ್ದ ಐದಾರು ಪೋಲೀಸ್ ಪೇದೆಗಳು ಹಾಲ್‌ನ ನಡುವೆ ನಡೆಯುತ್ತಿದ್ದ ವಿದ್ಯಮಾನಗಳನ್ನು ಬಹು ಕುತೂಹಲದಿಂದ ವೀಕ್ಷಿಸುತ್ತಿದ್ದರು.

ಶರಲೇಖ ಅಜಯ್ ಗುಪ್ತಾರವರನ್ನು ಕುರಿತು, 'ತಾವು ಹಿರಿಯರು, ನಿಂತೇ ಇದ್ದೀರಲ್ಲಾ ಇಲ್ಲಿ, ಈ ಮೆತ್ತೆ ಹಾಕಿರುವ ಬೆಂಚಿನ ಮೇಲೆ ಕೂಡಿ' ಎಂದು ಬಲವಂತಮಾಡಿ ಅವರನ್ನು ಬೆಂಚಿನ ಮೇಲೆ ಕುಳ್ಳಿರಿಸಿದ. ಅನಂತರ ಬೋಳು ಗೋಡೆಯ ಹತ್ತಿರ ನಡೆದು ಹೋಗಿ, ಅದನ್ನು ಮುಟ್ಟುವಂತೆ ನಿಂತು, ನಮ್ಮ ಕಡೆ ತಿರುಗಿ ಹತ್ತು ಹೆಜ್ಜೆಗಳನ್ನು ಎಣಿಸುತ್ತಾ ಇಟ್ಟ. ನಾವೆಲ್ಲಾ ತದೇಕಚಿತ್ತರಾಗಿ ಅವನನ್ನೇ ನೋಡುತ್ತಿದ್ದೆವು. ಹತ್ತು ಹೆಜ್ಜೆಗಳನ್ನು ಇಟ್ಟನಂತರ ಪುನಃ ಗೋಡೆಯ ಕಡೆ ತಿರುಗಿ ನಿಂತ. ಅನಂತರ ಒಮ್ಮೆಲೇ ಅದರತ್ತ ಓಡಿಹೋಗಿ ಗೋಡೆಯ ಮೇಲೆ ಚಿತ್ರವಿದ್ದ ಖಾಲಿ ಜಾಗದತ್ತ ಗುರಿಯಿಟ್ಟು ತನ್ನ ಕೈಲಿದ್ದ ದಂಡದಿಂದ ಗೋಡೆಗೆ ಬಡಿದ. ಗೋಡೆ ಸೀಳು ಬಿಟ್ಟು ನಾಲ್ಕಡಿ ಅಗಲದ ಒಂದು ಮರದ ಹಾಳೆ ಕಿತ್ತುಬಂದು ಕೆಳಗೆ ಬಿತ್ತು. ತಕ್ಷಣ ತನ್ನ ಜೇಬಿನಿಂದ ಎಲ್.ಇ.ಡಿ. ಟಾರ್ಚನ್ನು ತೆಗೆದು ತೆರಪಾದ ಆ ದೊಡ್ಡ ಕಿಂಡಿಯಲ್ಲಿ ಬೆಳಗಿದ. ಮರದ ಹಲಗೆಯದಿಂದೆ ಇದ್ದ ನಿಜವಾದ ಗೋಡೆಯ ಮೇಲೆ ವೆಂಕಟಪ್ಪನವರ ಭವ್ಯ ಕಲಾಕೃತಿ ಕಂಗೊಳಿಸುತ್ತಿದ್ದುದು ಎಲ್ಲರ ಕಣ್ಣಿಗೆ ಬಿತ್ತು. ಜಿಂಕೆಯ ವೇಗದಲ್ಲಿ ಎದ್ದು ಓಡುತ್ತಿದ್ದ ಅಜಯ್‌ಗುಪ್ತರನ್ನು ಬಾಗಿಲ ಬಳಿ ನಿಂತಿದ್ದ ಪೇದೆಗಳು ಹಿಡಿದರು.

ಶರಲೇಖ 'ಉಳ್ಳಾಗಡ್ಡಿ, ಇಗೋ ನಿಮ್ಮ ಅಪರಾಧಿ, ಅಜಯ್ ಗುಪ್ತಾ, ಅವರ ಕೈಗಳು ಭಣಗುಡುತ್ತಿವೆ. ಅವಕ್ಕೆ ಆಭರಣತೊಡಿಸಿ' ಎಂದ.

ಅಜಯ್ ಗುಪ್ತಾ ಕೋಪವನ್ನು ಪ್ರದರ್ಶಿಸುತ್ತಾ, 'ನಾನು ಅಪರಾಧಿ ಅಂತ ಹ್ಯಾಗ್ರೀ ಹೇಳ್ತೀರಾ, ಅದಕ್ಕೆ ಪುರಾವೆ ಏನು?' ಅಂತ ದರ್ಪದಿಂದ ಕೇಳಿದರು.

ಶರಲೇಖ 'ಉಳ್ಳಾಗಡ್ಡಿ, ಸ್ವಲ್ಪ ಆ ಕಡುಗೆಂಪು ಪರದೆಯನ್ನ ಸರಿಸೋದಕ್ಕೆ ನಿಮ್ಮ ಪೇದೆಗೆ ಹೇಳ್ತೀರಾ?' ಎನ್ನುತ್ತಿರುವಾಗಲೇ ಸ್ವತಃ ಉಳ್ಳಾಗಡ್ಡಿ ಅವರೇ ಪರದೆಯ ಬಳಿ ಹೋಗಿ ಅದನ್ನು ಸರಿಸಿದರು. ಅಲ್ಲಿ ವೇದಿಕೆಯ ಮೇಲೆ ಇಬ್ಬರು ವ್ಯಕ್ತಿಗಳು ನಿಂತಿದ್ದರು.

ಶರಲೇಖ ಅವರನ್ನು ಪರಿಚಯಿಸುತ್ತಾ, 'ನೋಡಿ ಬಲಗಡೆ ಇರುವವರು ಪೂಸಲಿಂಗಂ ಅಂತ. ವೃತ್ತಿಯಲ್ಲಿ ಮರಗೆಲಸಕಾರ. ಎಡಗಡೆ ಇರುವವರು ಮೋಹನ್ ಕುಮಾರ್ ಎಂಬುವರು ವೃತ್ತಿಯಲ್ಲಿ ಕಂಪ್ಯೂಟರ್ ಸ್ಪೆಷಲಿಸ್ಟ್, ಇವರಿಬ್ಬರ ಸಹಕಾರದಿಂದ ಈ ಸಮಸ್ಯೆ ಯನ್ನು ಬಿಡಿಸಲು ಸಾಧ್ಯವಾಯಿತು. ಅವರುಗಳೇ ನಿಮ್ಮ ಸಾಕ್ಷಿಗಳು ಉಳ್ಳಾಗಡ್ಡಿ' ಎಂದ.

ಸಾಕ್ಷಿಗಳಿಬ್ಬರ ಮುಖ ನೋಡಿ ಅಜಯ್ ಗುಪ್ತಾ ಇದ್ದಲ್ಲಿಯೇ ಕುಸಿದರು. ಅವರ ಕೈಗಳಿಗೆ ಆಭರಣ ತೊಡಿಸುವಿಕೆ ಅನಗತ್ಯವಾದಂತೆ ಕಂಡಿತು.

ಶ್ಯಾಮಸುಂದರ್ ಬಹು ಸಂತೋಷದಿಂದ ಶರಲೇಖನ ಕೈಗಳನ್ನು ಕುಲುಕಿ, 'ಸಾರ್, ನಿಮ್ಮಿಂದ ನಮ್ಮ ಸಂಸ್ಥೆ ಬಚಾವಾಯಿತು. ಇಷ್ಟು ಬೇಗ ಹೇಗೆ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದಿರಿ ನನಗಂತೂ ಇದೊಂದು ಪವಾಡವೇ ಅನಿಸುತ್ತೆ' ಎಂದರು.

ಶರಲೇಖ ತನ್ನ ವಿವರಣೆ ಶುರುಮಾಡಿದ. 'ನೋಡಿ ಶ್ಯಾಮ ಸುಂದರ್, ಮೊನ್ನೆ ನೀವುಗಳು ಬಂದು ಸಮಸ್ಯೆ ತಿಳಿಸಿದಾಗ ಚಿತ್ರಶಾಲೆಯ ಸುತ್ತ ಇಪ್ಪತ್ತನಾಲ್ಕು ಗಂಟೆಗಳ ಪಹರೆ ನಿಮ್ಮ ಸಂಸ್ಥೆಯಿಂದಲೇ ಏರ್ಪಡಿಸಿದ್ದಿರಿ ಅಂತ ಹೇಳಿದಿರಿ. ಆಗಲೇ ನನಗೆ ಕಳುವಿನ ಮಾಲು ಚಿತ್ರಶಾಲೆಯಲ್ಲೇ ಬಚ್ಚಿಟ್ಟಿರಬೇಕು, ಅನುಕೂಲವಾದಾಗ ಅದನ್ನು ತೆಗೆದು ವಿಲೇವಾರಿ

ಮಾಡಬಹುದು. ಹಾಗಾಗಿ ಚಿತ್ರಶಾಲೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸಬೇಕು ಎಂದು ನಿರ್ಧರಿಸಿದೆ. ಇಲ್ಲಿ ಬಂದತಕ್ಷಣ ನಾನು ಕಳುವಾಗಿದ್ದ ಚಿತ್ರ ಹಾಕಿದ್ದ ಬೋಳು ಗೋಡೆಯನ್ನು ನೋಡಿದೆ. ಅದರ ಬಿಳುಪು ಪಕ್ಕದ ಗೋಡೆಗಳ ಬಿಳುಪಿಗಿಂತ ಸ್ವಲ್ಪ ಹೆಚ್ಚು ಇದ್ದದನ್ನು ಗಮನಿಸಿದೆ. ಅನಂತರ ಹಾಲ್‌ನ ಉದ್ದವನ್ನು ನಿಖರವಾಗಿ ಅಳತೆ ಮಾಡಿ, ಅಜಯ್‌ನ ಆಫೀಸನ್ನು ನೋಡುವ ನೆವದಿಂದ ಮೇಲಿನ ಮಹಡಿಗೆ ಹೋಗಿ ಅಲ್ಲಿ ಈ ಹಾಲ್ ಮೇಲೆ ಇರುವ ಇದೇ ಅಳತೆಯ ಹಾಲ್‌ನ ಉದ್ದವನ್ನು ಅಳೆದೆ. ಒಂದು ಅಡಿ ಜಾಸ್ತಿ ಇತ್ತು ಮೇಲಿನ ಹಾಲು. ಆಗಲೇ ಇಲ್ಲಿ ಒಂದು ಕೃತಕ ಗೋಡೆ ನಿರ್ಮಿಸಿರಬೇಕು ಅಂತ ತಿಳಿಯಿತು. ವರ್ಣಚಿತ್ರವನ್ನು ಬಚ್ಚಿಡಲು ಇದಕ್ಕಿಂತ ಬೇರೆ ಪ್ರಶಸ್ತವಾದ ಜಾಗ ಬೇರಾವುದು' ಕಳುವಾದ ಮಾಲನ್ನು, ಇಟ್ಟ ಜಾಗದಲ್ಲೇ ಯಾರು ಹುಡುಕುತ್ತಾರೆ' ವರ್ಣಚಿತ್ರದ ಮೇಲಿನ ವಿಮೆ ಹಣ ಸಂದಾಯವಾಗಿ ಎಲ್ಲ ತಣ್ಣಗಾದನಂತರ ಅದನ್ನು ವಿಲೇವಾರಿ ಮಾಡುವ ಹಂಚಿಕೆ ಯಾರೋ ಹಾಕಿದ್ದಂತೂ ಸಾಬೀತಾಯಿತು. ಆಮೇಲೆ ಅಪರಾಧಿಯ ಪತ್ತೆಯ ಕೆಲಸ ಉಳಿಯಿತು. ಚಿತ್ರಶಾಲೆಯ ಕಂಪ್ಯೂಟರುಗಳನ್ನು ನೋಡಿಕೊಳ್ಳುವ ಮೋಹನ್‌ನನ್ನು ಸಂಪರ್ಕಿಸಿ ಅವನಿಗೆ ನನಗಿದ್ದ ಸಂಶಯಗಳ ಬಗ್ಗೆ ಹೇಳಿದೆ. ಅಜಯ್ ಕಂಪ್ಯೂಟರಿನಿಂದ ಅವರ ಈಮೇಲ್‌ನ ಪಾಸ್ ವರ್ಡ್‌ಅನ್ನು ಸಂಪಾದಿಸಿದರೆ ಅವರ ಪತ್ರವ್ಯವಹಾರ ನೋಡಬಹುದು ಅಂತ ಹೇಳಿದೆ. ದೇಶದಲ್ಲಿನ ಅವ್ಯವಹಾರಗಳನ್ನು ತಡೆಗಟ್ಟಲು ಎಲ್ಲರ ಸಹಕಾರ ಅಗತ್ಯ ಅಂತ ಹೇಳಿದ ಮೇಲೆ ಆತ ಅವರ ಕಂಪ್ಯೂಟರನ್ನು ದುರಸ್ತಿಗೊಳಿಸುವ ನೆವದಲ್ಲಿ ಅದರಲ್ಲಿನ ಪತ್ರವ್ಯವಹಾರಗಳನ್ನು ನನಗೆ ತೋರಿಸಿದ. ಅಜಯ್ ಲಂಡನ್ನಿನ ಆರ್ಟ್ ಗ್ಯಾಲರಿಯೊಂದರ ದಳ್ಳಾಳಿಯೊಂದಿಗೆ ಸಂಪರ್ಕದಲ್ಲಿದ್ದ. ಈ ವರ್ಣಚಿತ್ರಕ್ಕೆ ಒಂದು ಲಕ್ಷ ಪೌಂಡುಗಳ ಬೆಲೆಯೂ ನಿಷ್ಕರ್ಷೆಯಾಗಿತ್ತು. ಅನಂತರ ನಾನು ಇಲ್ಲಿನ ಚಿತ್ರಗಳಿಗೆ ಫ್ರೇಂ ಹಾಕುವ ಮರಗೆಲಸಕಾರ ಪೂಸಲಿಂಗಂನನ್ನು ಸಂಪರ್ಕಿಸಿದೆ. ಮೊದಲು ಅವನು ಬಾಯಿ ಬಿಡಲಿಲ್ಲ. ಆಮೇಲೆ ಈ ಚೋಳರ ಕಾಲದ ರಾಜದಂಡವನ್ನು ತೋರಿಸಿ ಅಂತಹ ಉನ್ನತ ಸಂಸ್ಕೃತಿಯಿಂದ ಬಂದವರು ಕೀಳುಕೆಲಸ ಮಾಡಬಾರದು ಎಂದು ತಿಳಿಯಹೇಳಿದೆ. ಆತನ ಮನಕರಗಿ ಅವನು ಬಾಯಿಬಿಟ್ಟ. ರಾತ್ರೋ ರಾತ್ರಿ ತಾನು ಬಂದು ಆ ಮರದ ಹಲಗೆಯ ಗೋಡೆಯನ್ನು ನಿರ್ಮಿಸಿದ ಕಥೆ ಹೇಳಿದ. ಪಕ್ಕದ ಗೋಡೆಗಳ ಬಣ್ಣವನ್ನೇ ಹೋಲುವ ಬಣ್ಣವನ್ನು ಮೊದಲೇ ಬಳಿದು ಹಲಗೆಗಳನ್ನು ಸಿದ್ಧಮಾಡಿಕೊಂಡಿದ್ದು ಆ ರಾತ್ರಿ ತಾನು ಗೋಡೆ ನಿರ್ಮಿಸಿದ್ದಾಗಿ ಒಪ್ಪಿಕೊಂಡ. ಇವತ್ತು ಬೆಳಗ್ಗೆ ಸ್ವಲ್ಪ ನಾಟಕ ಇರಲಿ ಅಂತ ನಾನೇ ಗೋಡೆ ಒಡೆದೆ.' ಅಂತ ಶರಲೇಖ ವಿವರಿಸಿದ.

'ನಿನ್ನ ಒಂದೇ ಏಟಿಗೆ ಗೋಡೆ ಒಡೆಯುತ್ತೆ ಅಂತ ಯಾವ ಖಾತ್ರಿ ಇತ್ತು' ಅಂತ ಉಳ್ಳಾಗಡ್ಡಿ ಕೇಳಿದರು.

'ಚೋಳರ ರಾಜಲಾಂಛನದ ಸಿಂಹಕ್ಕೆ ಎಂದಿಗೂ ನ್ಯಾಯ ಧರ್ಮವನ್ನು ಎತ್ತಿಹಿಡಿಯುವ ಶಕ್ತಿ ಇದೆ ಎಂದು ನನ್ನ ನಂಬಿಕೆ' ಎಂದು ನಗುತ್ತಾ ಹೇಳಿದ ಶರಲೇಖ.

# ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆಲೇಖನ ಸ್ಪರ್ಧೆ - 2011

## ತೀರ್ಪುಗಾರರ ಅನಿಸಿಕೆಗಳು

ಬರವಣಿಗೆಯಲ್ಲಿ ಅಡಕವಾಗಿರುವ ಹಾಸ್ಯದ ಹೂರಣ ಧಗೆಯ ದಿನಗಳಲ್ಲಿ ಇದ್ದಕ್ಕಿದ್ದಂತೆ ಸೋಕಿ ಹೋಗುವ ತಣ್ಣನೆ ಗಾಳಿಯ ಪುಳಕದಷ್ಟು ಸಹಜವಾಗಿರಬೇಕು. ಕಲ್ಪನೆ, ಅನಿರೀಕ್ಷಿತ ಗುಣ, ನಾಟಕೀಯತೆಗಳು ಹಾಸ್ಯ ರಸಾಯನ ಕಳೆಗಟ್ಟಲಿಕ್ಕೆ ಅನಿವಾರ್ಯ. ಆದರೆ ಇವೆಲ್ಲವೂ ಇದ್ದು, ಅನುಭವವನ್ನು ಬರಹಕ್ಕೆ ಒಗ್ಗಿಸುವ ಕಸುಬುದಾರಿಕೆ ಹಾಗೂ ಭಾಷೆಯ ಮೇಲಿನ ಹಿಡಿತ ಇಲ್ಲದೆ ಹೋದಲ್ಲಿ ರಸಾಯನದಲ್ಲೂ ಕಲ್ಲುಗಳು ಸಿಕ್ಕುತ್ತವೆ, ರಸಭಂಗಕ್ಕೆ ಕಾರಣವಾಗುತ್ತದೆ. ಪಡುಕೋಣೆ ರಮಾನಂದರಾಯರ ಸ್ಮರಣಾರ್ಥ ಹಾಸ್ಯಸ್ಪರ್ಧೆಗೆ ಬಂದ ಬಹುತೇಕ ಬರಹಗಳಲ್ಲಿ ಎದ್ದು ಕಾಣುವ ಕೊರತೆ ಈ ಕಸುಬುದಾರಿಕೆ ಹಾಗೂ ಭಾಷೆಯ ಬಳಕೆಯಲ್ಲಿನ ಅನನುಭವವೇ. ಇಲ್ಲಿನ ಬಹುತೇಕ ಬರಹಗಳು ಹಾಸ್ಯವನ್ನು ಕೃತಕವಾಗಿ ಆವಾಹಿಸಿಕೊಂಡಿವೆ. ಅಂದರೆ, ಬರವಣಿಗೆಯಲ್ಲಿನ ಚಿತ್ರಗಳನ್ನು ದೃಶ್ಯರೂಪದಲ್ಲಿ ಕಲ್ಪಿಸಿಕೊಂಡಾಗಷ್ಟೇ ರಂಜಕವಾಗುವಂತಿವೆ. ದೃಶ್ಯ ಮಾಧ್ಯಮದ, ಮುಖ್ಯವಾಗಿ ಕಿರುತೆರೆ ಧಾರಾವಾಹಿಗಳ ಪ್ರಭಾವಕ್ಕೆ ಇಲ್ಲಿನ ಕನ್ನಡ ಹಾಸ್ಯ ಬರಹಗಳು ಸಿಲುಕಿದಂತಿವೆ. ಚರ್ವಿತ ಚರ್ವಣ ಪ್ರಸಂಗಗಳನ್ನೇ ಮರು ನಿರೂಪಿಸಲು ಪ್ರಯತ್ನಿಸಿವೆ.

ಸ್ಪರ್ಧೆಗೆ ಬಂದ ಹಾಸ್ಯ ಬರಹಗಳ ಪೈಕಿ ಮೊದಲ ಸ್ಥಾನದಲ್ಲಿ ನಿಲ್ಲುವ ಮೂಲಕ ಬಹುಮಾನಕ್ಕೆ ಆಯ್ಕೆಯಾಗಿರುವ ''ಸೊಳ್ಳೆಗಳ ಪರದಾಟ'' ಬರಹದಲ್ಲೂ ಕೊರತೆಗಳಿವೆ. ಆದರೆ ವಿಭಿನ್ನ ವಸ್ತು ಹಾಗೂ ಅದನ್ನು ನಿಭಾಯಿಸಿರುವ ರೀತಿ ಖುಷಿ ಕೊಡುವಂತಿದೆ. ಭಾಷೆಯ ಬಳಕೆಯೂ ಸಮಾಧಾನಕರವಾಗಿದ್ದು, ಬರಹದಲ್ಲಿ ಹಾಸ್ಯದ ನವಿರುತನ ಅಂತರ್ಗತವಾಗಿದೆ.

ಸಾಹಿತ್ಯದಲ್ಲಿ ಹಾಸ್ಯದ ಕೊರತೆ ಎದ್ದುಕಾಣುತ್ತಿರುವ ದಿನಗಳಲ್ಲಿ ಪಡುಕೋಣೆ ರಮಾನಂದರಾಯರ ಸ್ಮರಣಾರ್ಥ ಹಾಸ್ಯ ಲೇಖನ ಸ್ಪರ್ಧೆಯನ್ನು ನಿಯಮಿತವಾಗಿ ಏರ್ಪಡಿಸುತ್ತಿರುವ ''ಅಪರಂಜಿ'' ಬಳಗದ ಕೆಲಸ ಅಭಿನಂದನೆಗೆ ಅರ್ಹವಾದುದು. ಇಲ್ಲಿನ ಬರಹಗಳ ಅವಲೋಕನದ ಮೂಲಕ ಸಮಕಾಲೀನ ಹಾಸ್ಯ ಸಾಹಿತ್ಯದ ಒಂದು ಇಣುಕು ನೋಟಕ್ಕೆ ಅವಕಾಶ ಕಲ್ಪಿಸಿದ ಪತ್ರಿಕಾ ಬಳಗಕ್ಕೆ ನಾನು ಕೃತಜ್ಞ.

**ರಘುನಾಥ ಚ.ಹ.**

ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ
**ಪ್ರಥಮ ಬಹುಮಾನ** ಪಡೆದ ಲೇಖನ



# ಸೊಳ್ಳೆಯ ಪರದಾಟ

**ಲತಾ ಉದಯ ಹೆಗಡೆ**

**ನೋ**ಡಿಽಽಽ, ಮನುಷ್ಯರಲ್ಲಿ ತಾವೇ ಅತೀ ಬುದ್ಧಿವಂತರು ಅನ್ನೋ (ತಪ್ಪು) ಕಲ್ಪನೆ ಬಲವಾಗಿ ಬೇರೂರ್‍ಬಿಟ್ಟಿದೆ. ಪಾಪ! ಅವರಿಗೇನು ಗೊತ್ತು ಎಷ್ಟೇ ತಿಪ್ಪರಲಾಗ ಹಾಕಿದ್ರೂ ನಮ್ಮಿಂದ ತಪ್ಪಿಸಿಕೊಳ್ಳೋದು ಅಸಾಧ್ಯ ಅಂತ. ಭಗವಂತ ತಾನು ಸೃಷ್ಟಿಸಿದ ಎಲ್ಲ ಜೀವಿಗಳಿಗೂ ಆಹಾರನೂ ಕೊಟ್ಟೇ ಕಳ್ಸಿರ್‍ತಾನೆ. ಅದಕ್ಕೆ ನಾವೆಲ್ಲ ಬದ್ಧರಾಗಿರಬೇಕಾದ್ದು ನ್ಯಾಯ ತಾನೇ? ಆದರೆ ಈ ಮನುಷ್ಯರನ್ನ ನೋಡಿ, ಏನ್‌ಕೊಟ್ರೂ ತಿನ್ತಾರೆ ಹಪಾಹಪಿ ಮುಂಡೇವು! ತರಕಾರಿನೂ ಸೈ, ಹಣ್ಣೂ ಸೈ, ಧಾನ್ಯಗಳೂ ಸೈ, ಕೊನೆಗೆ ಮಾಂಸಾನೂ ಸೈನೇ....!!! ನಾವ್‌ಗಳು ಹಾಗಲ್ಲಪ್ಪ. ಯಾವತ್ತಿಗೂ ನಿಷ್ಠಾವಂತರು. ಬರೀ ರಕ್ತ ಕುಡಿದೇ ಬದುಕೋದು. ಅಂದಿಗೂ, ಇಂದಿಗೂ, ಎಂದೆಂದಿಗೂ ಪ್ರಧಾನ ಮಂತ್ರಿನೇ ಆಗಿರ್‍ಲಿ ಭಿಕ್ಷುಕನೇ ಆಗಿರ್‍ಲಿ ಯಾರಾದ್ರೂ ಸರಿ ನಾವು ನಿಷ್ಪಕ್ಷಪಾತಿಗಳು ನೋಡಿ.

**ಮನುಷ್ಯರು ಒಂದಿಷ್ಟು ವಿಶಾಲ ಮನೋಭಾವ ಬೆಳೆಸಿಕೊಳ್ಳುವ ಅಗತ್ಯವಿದೆ ಎನ್ನುತ್ತವೆ ಸೊಳ್ಳೆಗಳು....**

ನಮ್ ಆಹಾರಾನೇ ಬರೀ ರಕ್ತ ಆಗಿರೋವಾಗ ನಮ್ಮ ಕೈಯಿಂದ ಕ್ಷಮಿಸಿ ಬಾಯಿಂದ ತಪ್ಪಿಸಿಕೊಳ್ಳೋಕೆ ಏನೆಲ್ಲ ಕಸರತ್ತು, ಎಷ್ಟೆಲ್ಲ ತಯಾರಿ ಏನ್ಕತೆ! ಅಲ್ಲ, ದಾನ-ಧರ್ಮ-ಆಧ್ಯಾತ್ಮ ಅಂತೆಲ್ಲ ಬೊಗಳೆ ಬಿಡೋದೇನು..... ಪ್ರವಚನ ಕೇಳೋದೇನು.... 'ಹಸಿದು ಬಂದಾತನನ್ನು ತೃಪ್ತಿಪಡಿಸೋದು ಪರಮಧರ್ಮ' ಗೊತ್ತಿಲ್ಲದೇ ಏನು? ಹಳಸಿದ್ದೋ-ಪಳಸಿದ್ದೋ ಎಂಥದ್ದೋ ಒಂದನ್ನು ಹಸುವಿಗೆ ನಾಯಿಗೆ ಬೆಕ್ಕಿಗೆ ಭಿಕ್ಷುಕಂಗೆ ಅಂತ್ಹೇಳಿ ಯಾರ್‍ಯಾರಿಗೋ ಕೈ ಎತ್ತಿ ಕೊಡ್ತಾರಲ್ಲ, ನಮಗ್ ಮಾತ್ರ ಈ ತಾರತಮ್ಯ ಯಾಕೋ. ನಮಗೇನು ಕೈ ಎತ್ತಿ ಕೊಡೋದು ಬೇಡಪ್ಪ. ಹತ್ತಿರ ಹೋಗೋಕೆ ಬಿಟ್ಟರೆ ಸಾಕು. ಸ್ವಪ್ರಯತ್ನದಿಂದ ನಾವೇ ಹೊಟ್ಟೆ ತುಂಬಿಸಿಕೊಳ್ಳುತ್ತೇವೆ. ಅದೂ ನಾವೆಷ್ಟು ರಕ್ತ ಹೀರ್‍ತೀವಿ ಮಹಾ? ಜಿಪುಣಾಗ್ರೇಸರನ್ ತಂದು! ಇರಲಿ ಇರಲಿ.

ನಮ್ ವಿರುದ್ಧ ಇವರಾಡೋ ಸರ್ಕಸ್ಸಿಗೆ ಏನ್ಮಾಡ್ಬೇಕು ಅನ್ನೋದು ನಮಗೂ ಚೆನ್ನಾಗಿ ಗೊತ್ತು. ಆದ್ರೂ ಎಚ್ಚರಿಕೆಯಿಂದಿರೋದು ಒಳ್ಳೇದೇ ಅಲ್ವ. ನಮ್ ಜನಾಂಗಕ್ಕೂ

ಎಚ್ಚರಿಸಬೇಕು. ಈಗಿನವು ಆತುರ ಮುಂಡೇವು. ಎಡವಟ್ಟು ಮಾಡಿಕೊಳ್ಳೋದ್ರಲ್ಲೂ ಆತುರವೇ. ಅವುಗಳಿಗೆ ಬುದ್ಧಿವಾದ ಹೇಳಿ ಎಚ್ಚರಿಸದೇ ಹೋದ್ರೆ ನಮ್‌ಗಳ ವಂಶವೇ ನಿರ್ವಂಶವಾದೀತು. ಮನುಷ್ಯರಿಗೆ ಮಾಡೋಕೆ ಬೇರೆ ಕೆಲ್ಸವೇ ಇಲ್ಲವೇನೋ. ಯಾವಾಗ ನೋಡಿದ್ರೂ ನಮ್ ವಿರುದ್ಧ ಕತ್ತಿ ಮಸೀತಾನೇ ಇರ್ತಾರೆ. ಪರಮ ಲೋಭಿಗಳು!

ನೋಡಿ, ನಾವು ವಾಸವಾಗಿರೋ ಬಡಾವಣೇಲಿ ಬೆರಳೆಣಿಕೆಯಷ್ಟೇ ಮನೆಗಳು ಇರೋದು. ಖಾಲಿಜಾಗ ಜಾಸ್ತಿ ಇದ್ದಿದ್ರಿಂದ ಮುಳ್ಳುಕಡ್ಡಿ ಪೊದೆಗಳು ಹೇರಳವಾಗಿ ಬೆಳೆದಿದ್ವು. ಗಟಾರಗಳಿಲ್ಲದ ಈ ಏರಿಯಾದಲ್ಲಿ ಹೊಂಡಗಳೇ ಗಟಾರ. ನಮ್ ವಾಸಕ್ಕೇನೂ ಕೊರತೆಯಿಲ್ಲ. ಆದರೆ ಆಹಾರ ಗಿಟ್ಟಿಸೋಕೆ ಮಾತ್ರ, ಶತಾಯಗತಾಯ ಪ್ರಯತ್ನಿಸಿದರಷ್ಟೇ 'ಬದುಕಿದೆಯಾ ಬಡಜೀವವೇ'.... ಅನ್ನೋ ಪರಿಸ್ಥಿತಿ. ಇಲ್ಲದಿದ್ದರೆ ಊಟಕ್ಕೂ ತತ್ವಾರ. ಅಲ್ಲ, ವ್ಯಸನಿಗಳು ಇವರು; ಹಾಳು ಮೂಳು ತಿನ್ನೋರು ಇವರು; ಮೈತುಂಬ ರೋಗ ಸಾಕಿರೋರೂ ಇವರೇ. ಇವರುಗಳ ರಕ್ತ ಹೀರಿದ್ರೆ ನಮಗ್ ತಾನೇ ರೋಗ ಬರ್ಬೇಕು... ಅಲ್ವಂತೆ. ಅವರಿಗೇ ರೋಗ ಬರುತ್ತಂತೆ, ಅದೆಂಥದ್ದೋ ಚಿಕೂನ್‌ಗುನ್ಯಾ...... ಮಲೇರಿಯಾ... ಡೆಂಗೇ.... ಹೀಗೇ ಸುಡುಗಾಡು ಹೆಸರುಗಳು ಬೇರೆ ಕೇಡು. ಮೇಲಾಗಿ ಗುಳಿಗೆದಾಸರು! ಮೈಯೆಲ್ಲ ಬರೀ ಔಷಧಿಯದೇ ವಾಸನೆ. ನಮ್ ಆಹಾರಕ್ಕೂ ಅದೇ ಗತಿ.

ನಮ್ ಅಜ್ಜ ಮುತ್ತಜ್ಜಂದಿರು ನಮ್ಮನ್ನೆಲ್ಲ ಕೂರಿಸಿಕೊಂಡು ತಾವು ಸವಿದ ರುಚಿಕಟ್ಟಾದ ಆಹಾರದ ಬಗ್ಗೆ ರಸವತ್ತಾಗಿ ವರ್ಣಿಸುತ್ತಾ ಲೊಟ್ಟೆ ಹೊಡೆಯೋರು. ಕೇಳೇ ಬಾಯಲ್ಲಿ ನೀರೂರುತ್ತಿತ್ತು. ಆದರೆ ನನ್ನ ಬುದ್ಧಿ ತಿಳಿದಾಗ್ಲಿಂದ್ಲೂ ನಾ ಹೀರಿದ ರಕ್ತ ಮಾತ್ರ ರುಚಿಯೇ ಇಲ್ಲದ್ದು. ಅಡ್ಡವಾಸನೆ ಬೇರೆ. ಕಮಕ್ ಕಿಮಕ್ ಅನ್ನದೇ ಅದನ್ನೇ ಮೃಷ್ಟಾನ್ನ ಅನ್ನೋ ರೀತೀಲಿ ಮೆದ್ದು ಸುಮ್ಮನಿರ್ತಿದ್ವಿ. ಅಂತಹ ನಮಗೇ ಚಿರಋಣಿ ಆಗಿರೋದು ಬಿಟ್ಟು ನಮ್‌ಮೇಲೇ ಗೂಬೆ ಕೂರಿಸೋ ಹುನ್ನಾರ! ಚಟಸಾರ್ವಭೌಮರೇ ಸರಿ. ತಾವ್ ಮಾಡೋ ತಪ್ಪಿಗೆ ನಮ್ಕಡೆ ಬೆರಳು ತೋರ್‍ಸಿ ಅವರ ಹತ್ತಿರ ಸುಳಿಯದಂತೆ ಮಾಡ್ತಿದ್ದಾರಲ್ಲ ನ್ಯಾಯನಾ ಇದು? ಮೊದಲಾಗಿದ್ರೆ ಈ ಮನುಷ್ಯರು ರಾತ್ರಿ ಮಲಗೋವಾಗಷ್ಟೇ ಹಾಸಿಗೆಗೆ 'ನಮ್‌ಪರದೆ' ಕಟ್ಟಿಕೊಂಡು ಮಲಗೋರು. ಯಾಕ್ರೀ, ಅರ್ಥಾಗ್ಲಿಲ್ವಾ? ಅದೇರೀ... ನೀವುಗಳು ಹೇಳೋ 'ಸೊಳ್ಳೆಪರದೆ'. ಈಗ ನೋಡಿ, ಇಡೀ ಮನೆಗೂ ನೆಟ್‌ಲಾನ್, ಮೆಶ್ ಅನ್ನೋ ಸೊಳ್ಳೆಪರದೇನ ಹಾಕಿಸಿ ಬಿಡ್ತಾರೆ. ಇಷ್ಟು ಸ್ವಾರ್ಥಿಯಾಗೋದು ಮೈಗೆ ಒಳ್ಳೇದಲ್ಲ. ಯಾರ ಮೈಗೆ ಅಂತ ಕೇಳ್ಬೇಡಿ. ಆಯ್ತುಪ್ಪ, ಕಣ್ಣಲ್ಲಿ ಎಣ್ಣೆ ಬಿಡ್ಕೊಂಡು ಅವಕಾಶ ಸಾಧಿಸಿ ಈ ಭದ್ರಕೋಟೇನ ಭೇದಿಸಿ ಒಂದ್ವೇಳೆ ಒಳಹೊಕ್ಕೆವು ಅಂತ್ಲೇ ಇಟ್ಕೊಳ್ಳಿ, ಅಲ್ಲಿನ ವಿಲಕ್ಷಣ ವಾಸನೆಗೆ ಮೂರ್ಛೆ ಹೋಗೋದೊಂದೇ ಬಾಕಿ! ಅದೆಂಥದ್ದೋ ಲಿಕ್ವಿಡೈಜ಼ರ್ ಅಂತೆ, ಮ್ಯಾಟ್ ಅಂತೆ, ಸೊಳ್ಳೆ ಚಕ್ಕುಲಿ ಅಂತೆಲ್ಲ ಉರಿಸಿ ನಮ್ಮ ಹೊಟ್ಟೆ ಉರಿಸೋರು. ಈ ಎಲ್ಲ ಅಸ್ತ್ರಗಳೂ ಪಾಪದ ನಮ್ಮನ್ನು ದೂರ ಇಡೋಕೆ ಮಾಡೋ ಕಸರತ್ತು! ಬಿಡಿ, ನಾವೇನು ಇದಕ್ಕೆ ಬಗ್ಗೋರಲ್ಲ. ಆ ವಾಸನೆ

ಉಸಿರಾಡಿದ್ರೆ ತಾನೇ ಎಚ್ಚರ ತಪ್ಪೋದು ಅಂತಹ ಮನೇನ ಎಂಟ್ರಿ ಮಾಡ್ತಿದ್ದಂಗೇ ಉಸಿರು ಬಿಗೀಹಿಡಿದು ಮೇಲೆ ಸೀಲಿಂಗ್‌ಗೆ ಅಂಟಿಕೊಂಡು ಕೂತ ನಂತರವೇ ಉಸಿರು ಬಿಡ್ತಿದ್ದದ್ದು. ನಮಗೆ ಹೇಗೆ ಈ ವಿದ್ಯೆ ಕರಗತ ಆಯ್ತು ಅಂತೀರಾ. ಒಂದ್ಸಲ ನಮ್ಮೂರಿಗೆ 'ಬಾಬಾ ರಾಮ್‌ದೇವ್ ಜೀ' ಬ್ರಾಹ್ಮೀ ಮುಹೂರ್ತದಲ್ಲಿ ಪ್ರಾಣಾಯಾಮದ ಕಲಿಕಾ ಶಿಬಿರ ನಡೆಸಿದ್ದರು. ತರಹೇವಾರಿ ಆಹಾರ ಯಥೇಚ್ಛವಾಗಿ ಸೇವಿಸಬಹುದು ಅಂದ್ಕೊಂಡು ಅಲ್ಲಿಗೆ ದಾಳಿ ಇಟ್ಟಿದ್ವು. ಆಗ ಇರಲಿ ಅಂತ ಕಲಿತ ಪ್ರಾಣಾಯಾಮ ಈಗ ಸಹಾಯಕ್ಕೆ ಬಂದಿತ್ತು ನೋಡಿ. ಸೀಲಿಂಗ್‌ಗೆ ಅಂಟಿಕೊಂಡೇ ಕೆಳಗೆ ಸುಖಾಸೀನರಾಗಿ ಮೈಚೆಲ್ಲಿ ಕುಳಿತವರನ್ನು ಗಮನಿಸೋದು. ಅವಕಾಶ ನೋಡಿ ಕಚ್ಚಿ ಚಪ್ಪಾಳೆ ಬಾರಿಸೋದ್ರೊಳಗೇ ಪುನಃ ಮೇಲೆ ಬಂದು ಸೀಲಿಂಗ್‌ಗೆ ಕೂತಾಗಲೇ ಬಿಗೀಹಿಡಿದ ಉಸಿರು ಹೊರಹಾಕ್ತಿದ್ದದ್ದು. ಹೊಟ್ಟೇಪಾಡಲ್ವ ಏನಾದ್ರೂ ಮಾಡ್ಲೇಬೇಕಲ್ವೇ.

ಬೇಸಿಗೆಕಾಲ ಬಂತಂದ್ರೆ ನಮಗೆಲ್ಲ ಮಜವೋ ಮಜ. ಅತ್ತೆಗೊಂದು ಕಾಲ ಸೊಸೆಗೊಂದು ಕಾಲವಂತೆ. ಕೆ.ಇ.ಬಿ.ಯವರ ಕೃಪೆಯಿಂದ ನಮಗೂ ಒಂದ್‌ಕಾಲ. ಬೇಸಿಗೇಲಿ ಪವರ್‌ಕಟ್ ಜಾಸ್ತಿ. ಕರೆಂಟ್ ಹೋದಾಗ ಫ್ಯಾನೂ ಇಲ್ಲದೇ ಬೇಗೆಯಲ್ಲಿ ಬೇಯ್ಕೊಂಡು ಅದ್ವೆಗೆ ಒಳಗೇ ಕೂತಿರ್ತಾರೆ ಹೇಳಿ ಈ ಮನುಷ್ಯರು? ಹೊರಗೆ ಬರ್ಲೇ ಬೇಕಲ್ಲ, ಮೂರ್ಸಂಜೆ ಹೊತ್ತು ಅಥವಾ ಕತ್ತಲಲ್ಲಿ ಕರೆಂಟ್ ತೆಗೆದಾಗ ಅವರ ಪಾಡು ನೋಡೋ ಹಾಗಿರುತ್ತೆ. ಗಂಡಸರಂತೂ ಅರೆನಗ್ನರಾಗೇ ಇರೋದು, ನಮಗೆಲ್ಲ – ಒಂಥರದಲ್ಲಿ ಸುಗ್ಗಿಯೋ ಸುಗ್ಗಿ. ನಮ್ ಮುಂದಿನ ಪೀಳಿಗೆಗೆ ತರಬೇತಿ ಕೊಡೋಕೆ ಇದೇ ಸಕಾಲ. ಟ್ರೇನಿಂಗು – ಗೀನಿಂಗು ಎಂಥದ್ದದು, ಕತ್ತಲಲ್ಲಿ ಮೈಚೆಲ್ಲಿ ಕೂತವರ ರಕ್ತ ಹೀರಿದ್ರಾಯ್ತಪ್ಪ ಅಂದ್ಕೋಬೇಡಿ. ಇಲ್ಲೂ ಅಡಚಣೆಗಳು ಬಹಳ. ನನ್ಕತೆ ಓದಿದ್ರೆ ಕಷ್ಟ ಏನೂ ಅನ್ನೋದು ನಿಮಗೇ ತಿಳಿಯುತ್ತೆ.

ಒಮ್ಮೆ ಇಂತಹದ್ದೇ ಒಂದು ಸಂದರ್ಭ. ಕತ್ತಲಾಗಿತ್ತು. ಜ್ಯೂನಿಯರ್‌ಗಳಿಗೆಲ್ಲ ತರಬೇತಿ ಕೊಡಬೇಕು ಅಂತ ತಯಾರಾಗಿದ್ದೆ. ಏನು? ತಯಾರಿಯಾಕೋ ಅಂತೀರಾ? ಅನ್ಯಲಿಂಗೀ ಸೊಳ್ಳೆಗಳ ಮುಂದೆ ಫೋಸ್ ಕೊಡೋದು ಬೇಡ್ವೆ. ಮುಖಕ್ಕೆ ಪೌಡರ್ ಮೆತ್ತುತ್ತಾ ಇದ್ದೆ. ಅಷ್ಟರಲ್ಲಿ ನಮ್ಮ ಸೈನ್ಯದಲ್ಲಿ ಹೊಸದಾಗಿ ದಾಖಲಾದ ಚಿಲ್ಟಾರಿ ಜೋರಾಗಿ ಅತ್ಕೊಂಡು ರಕ್ತಹೀರೋ ಕೊಳವೇನ ಹಿಡ್ಕೊಂಡು ಬಂತು. ''ಏನಾಯಿತೋ ಪಾಪಿ ಮುಂಡೇದೇ.....'' ಹೆಚ್ಚುಕಮ್ಮಿ ಕಿರುಚಿದೆ.

''ಹಸಿವಾದ್ರಿಂದ ಹೊರಗೆ ಕೂತ ಆ ಮನುಷ್ಯನ್ನ ಕಚ್ಚೋಕೆ ಹೋದೆ. ಕಚ್ಚಿದೆ ಕೂಡ. ನನ್ನ ಸೂಜೀಗೆ ಗಟ್ಟಿಯಾದದ್ದು ತಾಗಿ ನೋವಾಗಿದ್ದು ಬಿಟ್ರೆ ಊಟ ಮಾತ್ರ ಸಿಗಲೇ ಇಲ್ಲ. ಹಸಿವಾಗ್ತಾ ಇದೆ.... ನೋವು ತಡ್ಯಕ್ಕಾಗ್ತಿಲ್ಲ ಊಂಽಽಽ''. ವಸ್ತುಸ್ಥಿತಿ ತಿಳೀತು, ಆ ಒಣಕಾಷ್ಠ ಮನುಷ್ಯ ಪ್ರಾಣೀನ ಕಚ್ಚಿರಬೇಕು. ದೇವ್ರಾಣೆ ರಕ್ತ ಸಿಗೋಕೆ ಮುಂಚೆನೇ ಮೂಳೆ ಅಡ್ಡ ಬಂದು ಗುರಾಣಿ ಕೆಲ್ಸ ಮಾಡಿರುತ್ತೆ. ಗಡಬಡಿಸಿ ನೋಡ್ದೆ. ಸಧ್ಯ ಸೂಜಿ ಮುರ್ದಿಲ್ಲ. ''ಅದಕ್ಕೇ ಕಣೋ

ಹೇಳೋದು, ದೊಡ್ಡೋರು ಹೇಳಿದ್ದಂಗೆ ಕೇಳ್ಬೇಕು ಅಂತ. ಆತುರ ಒಳ್ಳೇದಲ್ವೋ'' ಇನ್ನೂ ಬಲಿಯದ ಆ ಸೂಜೀನ ನೇವರಿಸಿ ತಕ್ಕಮಟ್ಟಿಗೆ ರಿಪೇರಿ ಮಾಡ್ದೆ. ಯಾರಿಗೆ, ಯಾವಾಗ, ಎಲ್ಲಿ ಕಚ್ಚಬೇಕು; ಭದ್ರಕೋಟೇನ ಹೇಗೆ ಭೇದಿಸಬೇಕು; ಒಳಹೊಕ್ಕಾಗ ನಮ್ ಮೇಲೆ ಮೂರ್ಛೆತಪ್ಪಿಸೋ ಔಷಧಿಗಳ ಪ್ರಯೋಗವಾದಾಗ ಪ್ರಾಣಾಯಾಮದ ಉಪಯೋಗ ಹೇಗೆ ಪಡೀಬೇಕು ಇವೇ ಮುಂತಾದ ತರಬೇತಿ ಕೊಡೋಕ್ಕೆಂದೇ ಸಿದ್ಧನಾಗ್ತಿರೋವಾಗ ಈ ಅವಾಂತರ. ಕಡೆಗೂ ನನ್ನ ಮುಂದಾಳತ್ವದಲ್ಲಿ ಸೈನ್ಯ ನಿಗದಿತ ಜಾಗಕ್ಕೆ ದಾಳಿ ಮಾಡಿತು.

ಕತ್ತಲಲ್ಲಿ ಅಂಗಳದಲ್ಲಿ ಕುರ್ಚಿ ಹಾಕ್ಕೊಂಡು ಮೈಚೆಲ್ಲಿ ಕುಳಿತಿರೋ ಆ ಮನೆ ಯಜಮಾನನ ಡೊಳ್ಳು ಹೊಟ್ಟೆಯನ್ನೇ ನಾನ್ಯಾವಾಗ್ಲೂ ಗುರಿಯಾಗಿಸ್ತಿದ್ದೆ. ಆತನ ಮೇಲೆ ವಿಶೇಷ ವೈರತ್ವ. ಆತನೋ ಬಲು ಕಿಲಾಡಿ. ನಗ್ನ ಹೊಟ್ಟೆಮೇಲೆ ದಪ್ಪದ್ದೊಂದು ಬಟ್ಟೆ ಹಾಸಿದ್ದ. ನಾನೇನು ಕಮ್ಮಿ. ಕಸರತ್ತು ಮಾಡಿ ಮಾಡಿ ನನ್ನ ಸೂಜೀನ ಹರಿಗೊಳಿಸಿದ್ದೆನಲ್ಲ ಬಟ್ಟೆ ಮೇಲಿಂದ್ಲೇ ಸೂಜಿ ಬಿಟ್ಟು ಕಚ್ಚಿ ರಕ್ತಹೀರಿ ಪಾರಾಗಿ, ನಮ್ ಸೈನ್ಯದ ಮುಂದೆ ರಕ್ತತುಂಬಿದ ಎದೆಯುಬ್ಬಿಸಿ ಪೋಸ್ ಕೊಟ್ಟೆ 'ಉಘೇ! ಉಘೇ!!' ಹರ್ಷೋದ್ಗಾರ, ಕರತಾಡನದ ಸುರಿಮಳೆ!

ಅಲ್ಲೇ ಇನ್ನೊಂದೆಡೆ ಹರಡಿಕೊಂಡು ಕುಳಿತ ಮನೆಯಜಮಾನಿನೋ, ಆಕೆ ಬೇರೆ ಅಲ್ಲ ಡನ್‌ಲಪ್ ಹಾಸಿಗೆ ಬೇರೆ ಅಲ್ಲ. ನಿಧಾನಸ್ಥೆ ಬೇರೆ. ಆಕೆ ಮೈಮೇಲೆ ಎಲ್ಲಿ ಬೇಕೋ ಅಲ್ಲಿಕೂತು ಅವಸರಿಸದೇ ಆನಂದದಿಂದ ಆಹಾರ ಸೇವಿಸಬಹುದು. ಆದ್ರೆ ನಾಮಾತ್ರ ಆಕೇನ ಗುರಿಯಾಗಿಸ್ತಿರ್ಲಿಲ್ಲ. ಎಲ್ಲಾದ್ರೂ ಉಂಟೇ, ನನ್ನ ಗಂಡಸ್ತನಕ್ಕೇ ಅವಮಾನ. ಚಿಲ್ಟಾರಿಗಳಿಗೆ, ಕೈಲಾಗದ ಮುದುಕರಿಗೆ ಆಕೇನ-ಆಕೆತರಹದ್ದವನ್ನು ಬಿಟ್ಟುಕೊಡ್ತಿದ್ದೆ. ತರಬೇತಿಗೂ ಇಂತಹವ್ರೇ ಯೋಗ್ಯ, ಸರಿ. ಪ್ರಾತ್ಯಕ್ಷಿಕೆನೂ ಯಶಸ್ವಿಯಾಗೇ ನಡೀತು ನಮ್‌ಸೈನ್ಯ ಕಚ್ಚಿದ್ದು ಆಕೆಗೆ ತಿಳಿದು ಕೈತರೋ ಹೊತ್ತಿಗೆ ಇನ್ನೊಂದೆಡೆ ಕೂತು ಕಚ್ಚಿ ಆಹಾರ ಸೇವಿಸಿಯಾಗಿತ್ತು. ಪಾಪ! ನಿರುಪದ್ರವಿ. ಕೊಡುಗೆ (ರಕ್ತ) ದಾನಿ! ದೇವರು ಆಕೇನ ಹೀಗೆ ಸೊಂಪಾಗಿ ಇಟ್ಟಿರ್ಲಿ ತೃಪ್ತರಾಗಿ ಬಾಯ್ತುಂಬ ಹರಸಿದ್ದೆವು.

ಯಾವಾಗ್ಲೂ ಈ ತರಹದ ಕೊಡುಗೈದಾನಿಗಳು ಸಿಗಲ್ವಲ್ಲ. ಮನುಷ್ಯ ಅಂದ್ಮೇಲೆ ರಕ್ತಕ್ಕೇನು ಬರ ಅಂದ್ಕೊಂಡದ್ದು ತಪ್ಪು ಅನ್ನೋದು ಆ ಎಲುಬು ಚರ್ಮದ ಮನುಷ್ಯನ್ನ ಕಚ್ಚಿದ್ಮೇಲೇನೇ ಮನದಟ್ಟಾದದ್ದು. ಹಾಗೇನೇ ವಯಸ್ಸಾದವ್ರಿಗೇನಾದ್ರೂ ಕಚ್ಚಿದ್ವಿ ಅಂತಿಟ್ಕೊಳ್ಳಿ. ಬರೀ ಔಷಧದ ಘಮಲು! ನಮ್ ಆಹಾರ ಪೂರ್ತಿ ಅದೇ ಅಡ್ಡವಾಸನೆ ಮೇಲಾಗಿ ಉಪ್ಪಿಲ್ಲ. ಚೂಟಿಯಾಗಿರೋರನ್ನ ಕಚ್ಚೋಕೆ ಹೋದ್ರೆ ಮೈಯೆಲ್ಲ ಕಣ್ಣಾಗಿರಬೇಕು. ಅದ್ಹೇಗೆ ತಿಳಿಯುತ್ತೋ ಮುಂಡೇವಕ್ಕೆ, ನಾವು ಹತ್ತಿರ ಹೋಗ್ತಿದ್ದಂಗೇ ಪ್ರಹಾರ ನಡೆಸಿ ನಮ್ ಜನ್ರನ್ನ ಹುತಾತ್ಮರನ್ನಾಗಿಸಿಯೇ ಕೈ ತೊಳೀತಿದ್ದದ್ದು. ಸಾಲದ್ದಕ್ಕೆ ಅದ್ಯಾವ ದುರಾತ್ಮ ಕಂಡು ಹಿಡಿದನೋ ಏನೋ..... ಕರೆಂಟ್ ಬ್ಯಾಟಂತೆ ನಾವ್‌ಗಳು ಹಾರಾಡೋದು ನೋಡಿದ್ರೂ ಸಾಕು ಬ್ಯಾಟ್ ಬೀಸೋದೇ ಕೆಲಸ. ಇದ್ರಲ್ಲಿ ಸಿಕ್ಕೊಂಡ್ರೆ ನಾವು ಸುಟ್ಟು ಕರಕಲಾಗೋದು ಗ್ಯಾರಂಟಿ. ನಮ್ಮನ್ನು ಹೀಗೆ ಜೀವಂತ ಸುಡ್ತಾರಲ್ಲ ಇವರುಗಳಿಗೆ ರೌರವ ನರಕವೇ ಸಿಗೋದು.

ನಾವ್‌ಗಳು ಇನ್ನುಂದೆ ಬಹಳ ಹುಷಾರಾಗಿರ್ಬೇಕು. ಮನುಷ್ಯ ಚಾಪೆಕೆಳಗೆ ತೂರಿದ್ರೆ ನಾವು ರಂಗೋಲಿಕೆಳಗೆ ತೂರೋಷ್ಟು ಚಾಣಾಕ್ಷರಾಗ್ಲೇಬೇಕು. ಬೇರೆ ದಾರೀನೇ ಇಲ್ಲ. ಅದೇನೋ ಸರಿ, ಆದ್ರೆ ಈ ಮನುಷ್ಯ ನಮ್ 'ಊಂಂಂಂ' ಶಬ್ದ ಕೇಳಿದ್ದಂಗೇ ಉತ್ತೇಜನಗೊಂಡು ಹಿಜಡಾಗಳಂತೆ ಯಾಕೆ ಚಪ್ಪಾಳೆ ಶುರುಹಚ್ಕೋತಾನೆ? ಅಥವಾ ನಮ್ಮ ಸಂಗೀತ ಅಷ್ಟೊಂದು ಕರ್ಣಾನಂದಕರವೇ? ನೀವುಗಳೂ ಹಾಗೇ ತಾನೇ ಮಾಡೋದು. ಯಾಕೆ ಅಂತ ಹೇಳ್ತೀರಾ? ಉತ್ತರ ಕೊಟ್ಟು ನನ್ನ ತಲೇಲಿ ಕೊರೀತಿರೋ ಹುಳಾನ ಶಮನ ಮಾಡೀಪ್ಪ. ಹಾಗೇನೇ ಸ್ವಲ್ಪ ವಿಶಾಲ ಮನೋಭಾವ ಬೆಳೆಸ್ಕೊಂಡು ಕೊಡುಗೈ ದಾನಿಗಳಾಗ್ತೀರಲ್ವಾ?

---



*ಪಡುಕೋಣೆ ರಮಾನಂದರಾವ್ ಸ್ಮಾರಕ ಹಾಸ್ಯಲೇಖನ ಸ್ಪರ್ಧೆಯಲ್ಲಿ*
***ದ್ವಿತೀಯ ಬಹುಮಾನ** ಪಡೆದ ಲೇಖನ*



# ಭೂತಾವಾಸ್ಯಮಿದಂ ಸವಂ~

**ಎಚ್. ಶಾಂತರಾಜ್ ಐತಾಳ್**

**ಭೂ**ತಗಳ ಮೇಲೆ ನಿಮಗೆ ನಂಬಿಕೆ ಇದೆಯಾ – ಅಂತ ನನ್ನನ್ನು ಕೇಳಿದ್ರೆ. ಹೌದು ಅನ್ನುವವ ನಾನು. ಈ ಭೂತಗಳಿದ್ದದ್ದರಿಂದಲೇ ನಮಗೆ ಬರುವ ತರಹೇವಾರು ಕಷ್ಟ ಕಾರ್ಪಣ್ಯಗಳನ್ನು, ದುಗುಡ ದೌರ್ಜನ್ಯಗಳನ್ನು ಅವುಗಳ ಮೇಲೆ ವರ್ಗಾಯಿಸಿ ನಾವು ತೆಪ್ಪಗಿರಲು ಸಾಧ್ಯ. ವಿಶೇಷವೆಂದರೆ ಹಿಂದಿನ ಕಾಲದಲ್ಲಿ ಬರೇ ಕರಾವಳಿಯಲ್ಲಷ್ಟೇ ಗಿರಕಿ ಹೊಡೆಯುವ ಭೂತಗಳಿದ್ದವು. ಆದರೆ ಈಗ ಹಾಗಲ್ಲ, ಆಧುನಿಕ ಯುಗದಲ್ಲಿ ಅವು ರಾಜ್ಯ ವ್ಯಾಪಿ ಆಗಿವೆ. ದಡ್ಡ ಭೂತಗಳ ಕಾಲ ಇದಲ್ಲ; ಮೊದಲೆಲ್ಲಾ ಅವುಗಳಿಗೆ ಕಟ್ಟುಕಟ್ಟಲೆ ಕೊಟ್ಟು ಬಿಟ್ಟರೆ ಕಷ್ಟ ಕೋಟಲೆ ದೂರವಾಗಿ ಬಿಡ್ತಿದ್ದವು. ಈಗಿನವು ಪ್ರೋಬಿಂಗ್ ಭೂತಗಳು. ಇನ್ನಷ್ಟು ಬೇಕು ಎನ್ನುತ್ತಾ ಕುಣಿಯುತ್ತಿರುತ್ತವೆ ತಮ್ಮನ್ನು ತಣಿಸುವವರೆಗೂ.

**ದೆವ್ವ ಭೂತ ಪ್ರೇತ ಪಿಶಾಚಿಗಳ ಕಾರ್ಯ ವೈಖರಿಯ ಒಂದು ವರ್ಣನೆ ಇಲ್ಲಿದೆ.**

ನಮ್ಮ ಚಿಕ್ಕಮ್ಮನ ಮಗ ಜಗ್ಗ ಮೂರನೇ ಬಾರಿಗೆ ಎಸ್.ಎಸ್.ಎಲ್.ಸಿ. ಫೇಲಾದಾಗ ನಾಗತ್ತೆ ಖಡಾಖಂಡಿತವಾಗಿ ಹೇಳಿದ್ದು ಇನ್ನೂ ನೆನಪಿದೆ – 'ಮಾಣಿ ಅಷ್ಟು ಬೂಸ್ ಅಲ್ಲ, ಇದು ಆ ಪಕ್ಕಿರಾಯ ಭೂತದ್ದೇ ಉಪದ್ರ'– ಅಂತ. ಪರೀಕ್ಷೆಯಲ್ಲಿ ಮಕ್ಕಳು ಎಷ್ಟು ಚಂದ ಮಾಡಿ ಉತ್ತರ ಬರೆದಿದ್ರೂ ಕೊನೆಗೆ ಇನ್ನೇನು ರಿಸಲ್ಟು ಹೊರಬೀಳಬೇಕು ಅಂತ ಇರುವಾಗ ಈ ಪಕ್ಕಿರಾಯ ಭೂತ ಉತ್ತರ ಪತ್ರಿಕೆಗಳನ್ನಿಟ್ಟ ರೂಮಿನೊಳಗೆ ನುಗ್ಗುತ್ತದಂತೆ. ಅಲ್ಲಿ ಹಲವಾರು ಪೇಪರುಗಳನ್ನೆಲ್ಲ ತೆಗೆದು, ಪಾಪದ ಹುಡುಗರು ಬರೆದ ಉತ್ತರಗಳನ್ನೇ ಬದಲಾಯಿಸಿ ಬಿಟ್ಟು, ತಪ್ಪು ಉತ್ತರ ಬರೆದ ಅವರೆಲ್ಲ ಫೈಲ್ ಆಗುವ ಹಾಗೆ ಮಾಡಿದ್ರೆ ಮಾತ್ರ ಅದಕ್ಕೆ ಸಮಾಧಾನವಂತೆ. ಅದಕ್ಕಿದೊಂದು ಆಟವಂತೆ.

ಈ ಪಕ್ಕಿರಾಯ ಭೂತಗಳ ಇನ್ನೊಂದು ಕಾರ್ಯವೈಖರಿಯೂ ಉಂಟು. ಮನೆಯಲ್ಲಿ ಓದಲು ಪುರುಸೊತ್ತಾಗದೆ ಕೊನೇ ಕ್ಷಣದಲ್ಲಿ ಹತ್ತಾರು ಚೀಟಿಗಳಲ್ಲಿ ನೂರಾರು ಪಾಯಿಂಟ್‌ಗಳನ್ನು ಬರಕೊಂಡು ಜೇಬುಗಳಲ್ಲಿ, ಸ್ಲೀವ್‌ಗಳಲ್ಲಿ, ಸಾಕ್ಸ್‌ಗಳಲ್ಲಿ, ಬೌಸ್‌ಗಳಲ್ಲಿ

ಬಚ್ಚಿಟ್ಟುಕೊಂಡು ಯುದ್ಧಕ್ಕೆ ಸಿದ್ಧರಾಗಿ ಹೋಗುವ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಚೀಟಿಗಳ ಮೇಲೆ ಅದಕ್ಕೆ ಕಣ್ಣಂತೆ. ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಯ ಉತ್ತರ ತಮ್ಮ ಶರೀರದ ಯಾವುದೋ ಪಾರ್ಟ್‌ನಲ್ಲಿ ಅಡಕವಾಗಿದೆ ಎಂದು ಅವರಿಗೆ ಖಚಿತವಾಗಿ ಗೊತ್ತಿದ್ದರೂ, ಎಷ್ಟು ಹುಡುಕಿದರೂ ಆ ಕ್ಷಣಕ್ಕೆ ಆ ಚೀಟಿ ಮಾತ್ರ ಸಿಗೋಲ್ಲ. ಕೆಲವೊಮ್ಮೆ ಬೇಕೆಂದೇ ಸಹಕಾರ ನೀಡದ ಗೂಬೆಯೊಂದನ್ನು ಆ ರೂಮಿಗೆ ಸೂಪರ್ ವೈಜರ್ ಆಗಿ ಹಾಕಿ ತೊಂದ್ರೆ ಕೊಡ್ತದಂತೆ ಈ ಭೂತ.

ಪಕ್ಕಿರಾಯ ಭೂತದ ಹಾಗೆಯೇ ಉಪದ್ರ ಕೊಡುವ ಇನ್ನೊಂದು ಭೂತವೆಂದ್ರೆ ಜಕಣಿ ಭೂತ. ತಮ್ಮ ಮಗಳು ಅಪ್ರತಿಮ ಸುಂದರಿಯಲ್ಲದಿದ್ದರೂ ನೋಡೋದಕ್ಕೆ ಬಂದವರು ರಿಜೆಕ್ಟ್ ಮಾಡುವಂತಹ ಕುರೂಪಿ ಏನಲ್ಲ ಎಂದು ಅದೆಷ್ಟು ಜನ ತಾಯ್ತಂದೆಯರು ಎಣಿಸಿರುವುದಿಲ್ಲ? ಆದರೆ ಈ ಜಕಣಿ ಭೂತದ ಕುಚೇಷ್ಟೆ ಏನೆಂದರೆ ರೂಪವತಿಯನ್ನು ಹುಡುಗನ ಕಣ್ಣಲ್ಲಿ ಕುರೂಪಿಯನ್ನಾಗಿ ಮಾಡುವುದು. ಇನ್ನು ಹುಡುಗನನ್ನು ಹುಡುಗಿ ಪಾಸ್ ಮಾಡಬೇಕಾದ ಸಂದರ್ಭದಲ್ಲಿ ಆತನ ತುಸುವೇ ಬೋಳಾದ ತಲೆಯನ್ನು ಪೂರ್ತಿ ಬೋಳಾಗಿ ತೋರಿಸುವುದು – ಇಂತಾದ್ದೇ ಕಿತಾಪತಿ.

ಇದರ ಡ್ಯೂಟಿ ಇಷ್ಟಕ್ಕೆ ಮುಗಿಯುವುದಿಲ್ಲ. ತೆಂಕುಮನೆ ಶೇಷಮ್ಮ ಹೇಳ್ತಿದ್ರು. ಅವರ ಮೊಮ್ಮಗಳು ಬ್ಯೂಟಿ ಪಾರ್ಲರ್ ಬಿಂದಿಯಾ ಮದುವೆಯಾಗಿ ಒಂದೇ ತಿಂಗಳಿಗೆ ಡಿವೋರ್ಸ್ ಆಗಲಿಕ್ಕೆ ಇದೇ ಜಕಣಿ ಭೂತದ ಕರಾಮತ್ತೇ ಕಾರಣವಂತೆ. ಬಿಂದಿಯಾ ಡೈರಿ ಒಳಗೆ ಹಿಂದಿನ ಲವರದ್ದು ಐದಾರು ಲೆಟರ್ರು. ಅವರಿಬ್ರೂ ತಬ್ಬಿಕೊಂಡು ಕೂತ ಫೋಟೋ ಇವನ್ನೆಲ್ಲ ಆ ಭೂತವೇ ತಯಾರು ಮಾಡಿ ತಂದು ಇಟ್ಟಿದ್ದು. ಮಾತ್ರವಲ್ಲ ಗಂಡನ ಕೈಗೆ ತಲುಪಿಸಿದ್ದೂ ಈ ಪಾಪಿ ಭೂತವೇ ಅಂತೆ. ಇವರಿಬ್ಬರ ವಿಚ್ಛೇದನ ಆದ ತಕ್ಷಣ ಅದು ಕೇಕೆ ಹಾಕಿಕೊಂಡು ಪರಾರಿಯಂತೆ – ಇನ್ಯಾರೋ ಹೊಸ ಮದುಮಕ್ಕಳನ್ನು ಅರಸುತ್ತಾ.

ಇನ್ನು ಜೋಬದ್ರ ಕುಟ್ಟಿ ಭೂತದ ಕೀಟಲೆಗಳಿಗೆ ಕಡಿವಾಣವೇ ಇಲ್ಲ. ಇದು ಊರಲ್ಲಿ ಜರುಗುವ ಎಲ್ಲ ಕೆಲಸಗಳ ಪಾರುಪತ್ಯ ಮಾಡುತ್ತದೆ. ತನಗಾಗದವರು ಮಾಡುವ ಕಾಮಗಾರಿಗಳಿಗೆ ವಿಘ್ನ ಒಡ್ಡುವುದು; ಮುಗಿಸಿದ ಕೆಲಸಗಳನ್ನು ಭಗ್ನಗೊಳಿಸುವುದು – ಇವೇ ಈ ಜೋಬದ್ರ ಕುಟ್ಟಿಯ ಪ್ರತಾಪಗಳು. ಇಲ್ದಿದ್ರೆ ತಮಿಳು ನಾಡಿನ ಗುತ್ತಿಗೆದಾರ ವೇಲುಮಣಿ ಒಂದೇ ಗ್ರಾಮದಲ್ಲಿ ಕೊರೆದು ಪೇಮೆಂಟ್ ಸಹ ಪಡಕೊಂಡ, ಹದಿನಾರು ಕೊಳವೆ ಬಾವಿಗಳ ಪೈಕಿ ಹದಿನೈದು ರಾತ್ರೋ ರಾತ್ರಿ ಮಾಯವಾದದ್ದು ಹೇಗೆ? ಇಂತಹ ಕಿತಾಪತಿಗಳು ಒಂದಲ್ಲ ಎರಡಲ್ಲ ಈ ಭೂತದ್ದು. ನೆರೆಪೀಡಿತರಿಗೆ ವಸತಿ ಗೃಹಗಳನ್ನು ನಿರ್ಮಿಸಿಯಾದ ಮೇಲೆ ಕೆಲವು ಮನೆಗಳನ್ನೇ ಬಿಲ್ ಪಾವತಿಯಾದ ತಕ್ಷಣ ಬೀಳಿಸಿ ಬಿಡುವುದು, ರಾತ್ರಿ ಹೊತ್ತು ಛಾವಣಿಗಳ ಮೇಲೆ ಭೂತ ನೃತ್ಯ ಮಾಡಿ, ಮೊದಲ ಮಳೆಗೇ ಅವು ಸೋರುವಂತೆ ಮಾಡುವುದು. ಈ ಜೋಬದ್ರಕುಟ್ಟಿಗೆ ಮೋಜು.

ಹಾಗೆಯೇ ಕಚೇರಿಗಳಲ್ಲಿ ಫೈಲು ಎಗರಿಸುವುದು, ಹೊಸದಾಗಿ ಡಾಮರೀಕರಣ ಮಾಡಲಾದ ರಸ್ತೆಯನ್ನು ಹೊಂಡಮಯವನ್ನಾಗಿ ಮಾಡುವುದು ಇವೆಲ್ಲ ಕುಟ್ಟಿ ಭೂತದ ಕೆಟ್ಟ ಕೃತ್ಯಗಳ ಕೆಲ ಮಾದರಿಗಳು.

ವ್ಯಾಪಾರಿಗಳನ್ನು, ಹೋಟೆಲ್ ಮಾಲಿಕರನ್ನು ಸತಾಯಿಸುವ ಭೂತ ಒಂದಿದೆ. ಇದನ್ನು ಪೇಟೆ ಬದಿಯಲ್ಲಿ ಕೊಳ್ಳಿ ದೆವ್ವ ಅಂತ ಕರೆದು ಜರಿತಾರೆ. ಒಂದು ಹೊಟೇಲಿನಲ್ಲಿ ಚೆನ್ನಾಗಿ ವ್ಯಾಪಾರ ಆಗ್ತಾ ಇದೆ ಎಂದು ಗೊತ್ತಾಗಿ ಬಿಟ್ರೆ ಸಾಕು. ಈ ಕೊಳ್ಳಿದೆವ್ವದ ಹೊಟ್ಟೆ ಒಳಗೆ ಕೊಳ್ಳಿ ಉರಿಯಲಾರಂಭವಾಗುತ್ತದಂತೆ. ತಕ್ಷಣ ಅದು ಕಾರ್ಯಪ್ರವೃತ್ತವಾಗುತ್ತದೆ.

ಮರುದಿನದಿಂದಲೇ ಇದರ ಕಿತಾಪತಿ ಶುರು. ಗಿರಾಕಿಗಳಿಗೆ ನೀಡಿದ ದೋಸೆಯಲ್ಲಿ ಕೂದಲು, ಸಾಂಬಾರಲ್ಲಿ ಜಿರಲೆ, ದೋಸೆ ಹಿಟ್ಟಿನಲ್ಲಿ ಹಲ್ಲಿ, ಕಾಫಿಯಲ್ಲಿ ಸತ್ತ ನೊಣ, ನೀರಿನಲ್ಲಿ ಬೇಸತ್ತ ಜೇಡ ಹೀಗೆ. ಇಂತದ್ದನ್ನೆಲ್ಲ ಯಾವುದೋ ಮಾಯಾ ವಿದ್ಯೆಯಿಂದ ಖಾದ್ಯ ಪದಾರ್ಥಗಳೊಳಗೆ ಸೇರಿಸಿ, ಅಧ್ವಾನವೆಸಗುತ್ತದೆ ಈ ಕೊಳ್ಳಿ ದೆವ್ವ.

ಕಿರಾಣಿ ಅಂಗಡಿಗಳಲ್ಲೂ ಅಷ್ಟೆ. ಅವರೆಲ್ಲ ನಿಷ್ಠೆಯಿಂದ 'ತಾಜಾ' ಎಂದು ತಿಂಗಳ ಹಿಂದೆಯಷ್ಟೆ ತಂದು ಸ್ಟಾಕ್ ಮಾಡಿಟ್ಟ ಪದಾರ್ಥಗಳೆಲ್ಲ ಮುಗ್ಗಲು ವಾಸನೆ ಬರೋ ಹಾಗೆ ಮಾಡೋದು. ಧಾನ್ಯಗಳ ಗೋಣಿ ಒಳಗೆ ಕೆಜಿಗಟ್ಟಲೆ ಹೊಯಿಗೆ, ಅಥವಾ ಕಲ್ಲಿನ ಪುಡಿಗಳನ್ನು ಹಾಕಿ ಮಿಶ್ರ ಮಾಡಿ ಬಿಡೋದು. ಇಂಥಾ ಪೀಕಲಾಟ ಮಾಡುತ್ತಿರುತ್ತದೆ ಈ ಕೊಳ್ಳಿ ದೆವ್ವ.

ಸರಕಾರಿ ಅಧಿಕಾರಿಗಳ, ರಾಜಕಾರಣಿಗಳ, ಚಲನವಲನವನ್ನು ಗಮನಿಸುತ್ತಾ, ಸಮಯ ಸಾಧಿಸಿ ಅವರನ್ನು ಖೆಡ್ಡಾಕ್ಕೆ ಬೀಳಿಸುವ ದೆವ್ವ ಒಂದಿದೆ. ಅದೇ ಕಿಚ್ಚಪ್ಪ ಭೂತ. ತನಗೆ ಕಾಲಕಾಲಕ್ಕೆ ಬೇಕಾದ್ದನ್ನು ಒದಗಿಸದಿದ್ದ ನೌಕರ – ಆತ ಎಷ್ಟೇ ನಿಸ್ಪೃಹನಾಗಿರಲಿ. ಈ ಕಿಚ್ಚಪ್ಪ ಭೂತದ ಅವಕೃಪೆಗೆ ಪಾತ್ರನಾಗಿ ಬಿಟ್ಟರೆ, ಅವನಿಗೆ ಮಹಾಭ್ರಷ್ಟನೆಂಬ ಪ್ರಚಾರ ಕೊಡಿಸಿಬಿಡುತ್ತದೆ. ಅದು ಲೋಕಾಯುಕ್ತರು ದಾಳಿ ನಡೆಸುವಾಗ ಆತನ ಗುಡಿಸಲಿನಂತಹ ಮನೆಯೂ ಅವರಿಗೆ ಅರಮನೆಯಂತೆ ಭಾಸವಾಗುತ್ತದೆ. ಎಲ್ಲಿಂದಲೋ ಕೋಟಿಗಟ್ಟಲೆ ಧನಕನಕಗಳನ್ನು ಆತನ ಲಾಕರ್‌ನೊಳಗೆ ಸೇರಿಸಿಬಿಡುತ್ತದೆ ಈ ಕಿಚ್ಚಪ್ಪ ಭೂತ. ಮನೆ ಎದುರಿಗೆ ಆತ ನಿಲ್ಲಿಸಿದ ರ‍್ಯಾಲಿ ಸೈಕಲ್ ಸಹ ಅವರಿಗೆ ಬೆಂಜ್‌ಕಾರ್‌ನಂತೆ ಭ್ರಮೆಯಾಗುತ್ತದೆ.

ರಾಜಕಾರಣಿಗಳಿಗಂತೂ ಈ ಭೂತದ ದೆಸೆಯಿಂದ ಬೆಡ್ ರೂಮ್ ರೆಡ್ ರೂಮಾಗಬಹುದು. ರಾಜಕೀಯವಾಗಿ ಡೆಡ್‌ರೂಮೂ ಆಗಬಹದು. ಅಲ್ಲಾ, ಒಬ್ಬ ಸಚಿವನಾದವ ತನ್ನ ಖಾಸಾ ದೋಸ್ತ್‌ನ ಸ್ವಂತ ಮಡದಿಯೇ – ಬೇರಾರೂ ಅಲ್ಲ – ಅವಳ ಜತೆ ರಾತ್ರಿ ಕಳೆಯಲು ಯೋಚಿಸಿದರೆ, ಈ ಭೂತದ ಗಂಟೇನು ಹೋಗುತ್ತದೆ? ಅನಾವಶ್ಯಕವಾಗಿ ಆಕೆಯ ಗಂಡನನ್ನು ಅದೇ ರಾತ್ರಿ ಈ ಕ್ರೀಡಾಕೂಟ ವೀಕ್ಷಿಸಲು ಕರೆತರುವ ಅಧಿಕ ಪ್ರಸಂಗ ಈ ಭೂತಕ್ಕೆ ಯಾಕೆ ಬೇಕು?

ಮನೆ, ಮನೆಗಳಲ್ಲಿರುವ ಭೂತಗಳು ಮಾತ್ರ ಹೆಚ್ಚಾಗಿ ಸಾಧು ಭೂತಗಳೆಂದೇ ಹೇಳಬಹುದು. ಅವಕ್ಕೆ ಇಂತದ್ದೇ – ಅಂತ ಹೆಸರಿರುವುದಿಲ್ಲ. ಅವು ಗ್ರಾಹಕ ಸ್ನೇಹಿ.

ಆವತ್ತು ಆಫೀಸಿಗೆ ಹೋಗಲು ಸಿದ್ಧತೆ ನಡೆಸಿ ನನ್ನ ಢಕ್ಲೂ ಸ್ಕೂಟರಿಗೆ ಒದೆ ಕೊಡುತ್ತಾ ಇದ್ದೆ. ಆಗ ಕೇಳಿ ಬಂತು ಅಶರೀರವಾಣಿ ''ಅಲ್ಲಾ ಬೆಳಿಗ್ಗೆ ಹಂಡೆ ಫುಲ್ ಬಿಸಿ ನೀರು ಕಾಯಿಸಿಟ್ಟಿದ್ದೆ. ನೀವು ಒಬ್ರೆ ಸ್ನಾನ ಮಾಡಿದ್ದು. ಅಷ್ಟೂ ನೀರು ಖಾಲಿಯಾಗಿದ್ದು ಹೇಗೆ ಮಾರಾಯ್ರೆ'' ಅಂತ. ಕಿಸೆಗೆ ಕೈ ಹಾಕಿ ಪರ್ಸ್ ಕದಿಯುವವನ ಕೈಯನ್ನೇ ಒತ್ತಿ ಹಿಡಕೊಂಡ ಅನುಭವವಾಗಿತ್ತು ನನಗೆ.

''ಯಾವುದೋ ಭೂತಗೀತದ ಕಾಟ ಇರಬೇಕು ನೋಡು'' ಅಂದೆ. ಅಷ್ಟರಲ್ಲಿ ಅಶರೀರವಾಗಿದ್ದ ಅರ್ಧಾಂಗಿಯ ಸವಾರಿ ಸಶರೀರವಾಗಿಯೇ ಬಾಗಿಲ ಹತ್ತಿರ ಬಂದಾಗಿತ್ತು. ನಾನು ಭೂತ ಅಂತ ಮಾತ್ರ ಹೇಳಿದ್ದರೆ ತೊಂದರೆ ಇರುತ್ತಿರಲಿಲ್ಲ – ಗೀತ ನಮ್ಮಾಫೀಸಿನ ಸ್ಟೆನೋ ಅಂತ ಅವಳಿಗೆ ಗೊತ್ತಿತ್ತಾದ್ದರಿಂದ.

''ಅವಳನ್ನು ನೆನೆಸಿಕೊಂಡೇ ಇರಬೇಕು. ಇಡೀ ಹಂಡೆ ನೀರನ್ನು ಅಭಿಷೇಕ ಮಾಡಿಕೊಂಡು ಹಂಡೆ ಖಾಲಿ ಮಾಡಿದ್ದು ರಾಯ್ರು'' ಎಂದು ಆಕೆಯ ಕಮೆಂಟ್ ಹೊರಬೀಳುವಾಗ, ಭೂತದ ಉಪದ್ರದಿಂದ ಮುಕ್ತವಾಗಿ ಸ್ಕೂಟರ್ ಸಹ ಸ್ಟಾರ್ಟ್ ಆದ್ದರಿಂದ ನಾನು ತಕ್ಷಣ ಸ್ಥಳದಿಂದ ಪರಾರಿಯಾಗಿ ಬಿಟ್ಟೆ.

ಒಮ್ಮೆ ಮಧ್ಯಾಹ್ನ ಊಟದ ಸಮಯ – ಅಡುಗೆಯೆಲ್ಲ ಲವಣ ಮಯವಾಗಿತ್ತಾದರೂ ನಾನು ಸೇಫ್ ಆಗಿರಲಿ ಅಂತ ಭೂತದ ಮೇಲೆ ದೂರು ಹಾಕಿದ್ದೆ. ಆದರೆ ಭೂತ ಅವಳಿಗೆ ಫೇವರೆಟ್ ಅಂತ ಮರೆತು ಹೋಗಿತ್ತು. ಕೂಡ್ಲೇ ಹೇಳಿದ್ಲು– ''ಭೂತವೂ ಅಲ್ಲ ಎಂತದೂ ಅಲ್ಲ. ನೀವೀಸಲ ತಂದ ಉಪ್ಪು ಎಂತಾ ಉಪ್ಪು ಸೀಂಗಿ ಗೊತ್ತುಂಟಾ? ಅಲ್ಲಾ, ತರುವಾಗ ಸ್ವಲ್ಪ ಬಾಯಿಗೆ ಹಾಕಿ ನೋಡುದಲ್ವಾ? ಆಮೇಲೆ ಅಡುಗೆ ಉಪ್ಪಾಯ್ತು. ಭೂತದ ಉಪದ್ರ ಇರಬೇಕು ಅಂತ ಏನೆಲ್ಲ ಹೇಳ್ತೀರಿ. ನಾನು ಹೇಳಿ, ಹೇಳಿ ಹಸಿಮೆಣಸಿನಕಾಯಿ ತರುವಾಗ ಸ್ವಲ್ಪ ಸುಧಾರಿಸಿದ್ದೀರಿ, ನೀವು'' ಅಂತ. ಅರ್ಧ ದೂರು, ಅರ್ಧ ತಾರೀಫು ಎರಡನ್ನೂ ಮಿಶ್ರ ಮಾಡಿದ್ಲು.

ಹೌದು ಒಂದು ಸಲ ಹಸಿಮೆಣಸು ಸಂತೇಲಿ ತೆಕೊಳ್ಳುವಾಗ ಆದದ್ದಾಗಲಿ ಅಂತ ಒಂದು ತುಂಡು ಬಾಯಿಗೆ ಹಾಕಿಕೊಂಡಾಗ ಬಾಯಿಯಲ್ಲಿ ಬೆಂಕಿ ಬಂದಂತಾಗಿ ಅಲ್ಲಿಯೇ ಭೂತ ಹಿಡಿದವರ ಹಾಗೆ ಕುಣಿದ ನೆನಪಾಯ್ತು ನನಗೆ. ಅಂತೂ ಉಪ್ಪುಪ್ಪಿನ ಊಟವನ್ನು ಬೆಪ್ಪನಂತೆ ಮುಗಿಸಿ ಎದ್ದೆ.

ಇನ್ನೂ ಮುಂದೆ ಅಂಗಡಿಯಿಂದ ತರುವ ಉಪ್ಪನ್ನು, ಹುಣಿಸೇ ಹುಳಿಯನ್ನು ಹಾಗೆಯೇ ಸಂತೆಯ ಹಾಗಲಕಾಯಿಯನ್ನು ಸ್ವಲ್ಪ ರುಚಿ ನೋಡಿಯೇ ತರಲು ನಿಶ್ಚಯಿಸಿದ್ದೇನೆ.

ಆದರೆ ಮಾರ್ಕೆಟ್‌ನಲ್ಲಿ ನೊಣ, ನುಸಿ, ಕೀಟಗಳು ರುಚಿ ನೋಡಿ ಸಂಭ್ರಮಿಸುತ್ತಿರುವ ಹಲಸಿನ ಸೊಳೆಗಳನ್ನು ಅಲ್ಲೇ ಸವಿದರೆ ಮತ್ತೆ ಕಾಯಿಲೆ ಬಂದರೆ – ಅದನ್ನು ಮಾತ್ರ ಭೂತದ ಉಪದ್ರವೇ ಅಂತ ಖಂಡಿತ ಒಪ್ಪಿಯಾಳು ಅರ್ಧಾಂಗಿ. ಅದನ್ನು ತೃಪ್ತಿಪಡಿಸಲು ಪರಿಹಾರವನ್ನೂ, ಅವಳೇ ಸೂಚಿಸಿಯಾಳು.

ಈ ದೆವ್ವ, ಭೂತ, ಪ್ರೇತ, ಪಿಶಾಚಿ. ಜಿನ್ನಿ ಇವುಗಳಲ್ಲೆಲ್ಲ ಗಂಡಂದಿರಿಗೆ ಅತ್ಯಂತ ಕಂಟಕ ಪ್ರಾಯವಾದದ್ದು 'ಕುಡುಪಾಲ್ ಭೂತ' ಅಂತೆ. ಅದೊಂದು ಹೆಣ್ಣು ಭೂತ– ತಾನು ಶೋಷಿತ ಮಹಿಳೆಯರ ಪರ ಎಂದು ಬಡಾಯಿ ಕೊಚ್ಚುವ ಈ ಭೂತದ ಮುಖದ ವಿರುದ್ಧ ದಿಕ್ಕಿಗೆ ಪಾದವಂತೆ. ಮೊನ್ನೆ ಎದುರು ಮನೆ ಶಾಮಣ್ಣ ಹೇಳ್ತಿದ್ದು – ಎಷ್ಟೋ ಜನ ಹೆಂಗಸರಿಗೂ ಹೀಗೇ ಇರ್ತದೆ. ಕಾಣುವುದಿಲ್ಲ ಅಷ್ಟೆ. ಗಂಡಂದಿರು ಹಿಂದಿನಿಂದ ಏನೆಲ್ಲ ಕಾರುಬಾರು ಮಾಡ್ತಾರೆ ಅಂತ ವಾಚ್ ಮಾಡೋದಕ್ಕೆ ಕೆಲವರು. ಈ ವಿಶೇಷ ಸವಲತ್ತು ಪಡೆದಿದ್ದಾರೆ – ಅಂತ.

ಕುಡುಪಾಲ್ ಭೂತ ಯಾವ ಮಹಿಳೆಯರಿಗೆಲ್ಲ ಒಲಿದಿರುತ್ತದೋ ಅಂತವರ ಗಂಡಂದಿರು ಮನೆಬಿಟ್ಟು ಆಫೀಸಿಗೆ ಹೋದ ತಕ್ಷಣ ಅಲ್ಲಿ ಸ್ವಾಗತಕಾರಿಣಿ ಶೀಘ್ರಲಿಪಿಕಾರಿಣಿ. ವಿದ್ಯುನ್ಮಾನ ಯಂತ್ರದ ಸೂತ್ರಧಾರಿಣಿ. ಇವರ ಜತೆ ಎಷ್ಟೆಲ್ಲ ಚಕ್ಕಂದವಾಡುತ್ತಾರೆ. ಗಂಡಂದಿರ ಜತೆ ಐಸ್‌ಕ್ರೀಂ ಪಾರ್ಲರ್‌ಗೆ ಹೋಗುವ ನೈಸ್ ಗೆಳತಿಯರು, ಬೀರ್ ಪಬ್‌ಗೆ ಕಂಪೆನಿ ಕೊಡುವ ಡೇರ್ ಡೆವಿಲ್ಸ್ ಎಲ್ಲವನ್ನೂ ನಿಷ್ಠೆಯಿಂದ ಗಮನಿಸಿ, ಎಲ್ಲರ ಜಾತಕಗಳನ್ನು ತಮ್ಮ ಒಡತಿಯರಿಗೆ ಒಪ್ಪಿಸಿ ಅವರೊಳಗೆ ಕ್ರೋಧದ ಕಿಡಿಗಳನ್ನು ಸಿಡಿಸುತ್ತದಂತೆ, ಈ ಭೂತ.

ಶಂಕೆಗೊಳಗಾದ ಗಂಡಂದಿರಿಗೆಲ್ಲ ಈಗ ಮಂಕು ಕವಿದಂತಾಗಿ ಅವರು ಲಂಕೆಗೆ ಹಾರಲೂ ಸಿದ್ಧರಾಗಿದ್ದಾರೆ. ಕುಡುಪಾಲ್ ಭೂತದ ಮೇಲೆ ಯುದ್ಧ ಸಾರಲು ಸನ್ನದ್ಧರಾಗಿದ್ದಾರೆ. ಅಂತಹ ಸಮಾನ ದುಃಖ ಪೀಡಿತರೆಲ್ಲ ಈಗ ಒಂದು ಸಂಘಟನೆಯನ್ನೇ ಸ್ಥಾಪಿಸಿದ್ದಾರೆ. ಅವರ ಧ್ಯೇಯ ವಾಕ್ಯ ಒಂದೇ ಕುಡುಪಾಲ್ ಭೂತಕ್ಕೆ ಗೇಟ್‌ಪಾಸ್ – ಇದು ಶೋಷಿತ ಗಂಡಸರಿಗೆ ಸ್ವೀಟ್ ನ್ಯೂಸ್.

ಈಗ ಕುಡುಪಾಲ್ ಭೂತ ಪ್ರವೇಶ ಮಾಡಿದ ಮನೆಯ ಗಂಡಂದಿರಿಗೆ ಇರೋದು ಎರಡೇ ದಾರಿಗಳು. ಒಂದೋ ಸಮಾನ ಪೀಡಿತರ ಸಂಘಟನೆಯ ಸದಸ್ಯರಾಗೋದು – ಇಲ್ಲವೇ – ಭೂತವಾಸ್ಯಮಿದಂ ಸರ್ವಂ – ಎಂದು ಗೊಣಗುತ್ತಾ ಪಾಮರತ್ವವನ್ನು ಪಡೆಯುವುದು.

## ನಕ್ಕುಬಿಡಿ

ನಗುವುದಾದರೆ ಈಗಲೆ ನಕ್ಕುಬಿಡಿ
ಇಲ್ಲದಿದ್ದರೆ ಇದ್ದಲ್ಲಿಯೇ ಸುಮ್ಮನಿದ್ದುಬಿಡಿ
ನೀವು ನಕ್ಕರೆ ಎಲ್ಲರೂ ನಗುವರು ಜೊತೆಗೂಡಿ
ನೀವು ಅತ್ತರೆ ಯಾರೂ ಅಳುವುದಿಲ್ಲ ನೋಡಿ

**- ಸುಕೇಶವ**



# ಪ್ರಯಾಣದ ಪರದಾಟ

(ವೆಂಕ ಮತ್ತು ಮಂಕ – ಸ್ನೇಹಿತರು)

**❀ ವೈ.ವಿ. ಗುಂಡೂ ರಾವ್ (ಪುನರ್ವಸು)**

ವೆಂಕ : ಬಾ ಬಾರೋ ಬಾರೋ ಮಂಕೇಶಾ! ಏನಪ್ಪಾ ಮಂಕೇಶ್ವರ! ಬಹಳ ಸುಸ್ತಾಗಿರೋ ಹಾಗಿದೀಯಾ? ಬಹಳ ದೂರದ ಪ್ರಯಾಣ ಬರಿಗಾಲಿನಲ್ಲೇ ಮಾಡಿಕೊಂಡು ಬಂದ ಹಾಗಿದೇ?

ಮಂಕ : ವೆಂಕ, ವೆಂಕೇಶ. ವೆಂಕಟೇಶ. ನಮ್ಮ ಬದುಕೇ ಒಂದು ಪ್ರಯಾಣ ಕಣೋ – ದೀರ್ಘ ಪ್ರಯಾಣ. ಆ ರಸ್ತೇಲಿ ಕ್ರಮಿಸಬೇಕಾದ್ದು ನಮ್ಮ ಕರ್ಮ. ಅದಕ್ಕೇ ಹೇಳ್ತಾರೆ ಕರ್ಮಣ್ಯೈವಾಧಿಕಾ–ರಸ್ತೇ ಅಂತ.

ವೆಂಕ : ನಿನಗೆ ವೈಯೆನ್ಕೆ ಗೊತ್ತಾ?

ಮಂಕ : ಗೊತ್ತಿಲ್ಲಾ! ನಮ್ಮ ವೈಯೆನ್ಕೆ. ಈಗ ಅವರ ವಿಷಯ Why? ಏನಕೆ?

ವೆಂಕ : ಅವರ ಸ್ನೇಹಿತನೊಬ್ಬ ನನಗೆ Hernia ಆಗಿದೆ ಅಂದನಂತೆ. ಅದಕ್ಕೆ ಅವರು ತಕ್ಷಣ ಒಂದು ಒಂದೆರಡು ಸಾಲಿನ ಕವನ ಬರೆದರು, ''ಜೀವನದ journeyಯ ತುಂಡರಿಪುದು Hernia, ತುಂಡರಿಸಿ Hernia, ಮುಂದುವರೆಸಿ journeyಯ'' ಅಂತ.

ಮಂಕ : ಸರಿಯಪ್ಪ! ಈ journey ಮುಂದುವರೆಸೋಕೆ ಯಾವ ವಾಹನ ಒಳ್ಳೆಯದು ಅಂತ ಹೇಳ್ತೀಯಾ? ಅಂದರೆ ಎಷ್ಟು ಚಕ್ರದ ವಾಹನ ಒಳ್ಳೇದು?

ವೆಂಕ : ಹೇಳ್ತೀನಿ ಕೇಳು. ಮೊದಲು two-wheeler ತೊಗೋ.

ಮಂಕ : ಏಯ್! ಮೊದಲು ತೊಗೊಂಡಿದ್ದನ್ನೇ ಮೊನ್ನೆ ಮಾರಿಬಿಟ್ಟೆ. ಈಗ ತಿರುಗಾ ತೊಗೋ ಅಂತೀಯಾ?

ವೆಂಕ : ತೊಗೋ ಅಂದರೆ ಬರೀ ಚರ್ಚೆಗೆ ತೊಗೊ ಅಂದೆ. ಅದರ ಅನುಕೂಲ, ಅನಾನುಕೂಲ ಏನು ಗೊತ್ತಾ? ಹೆಲ್ಮೆಟ್ ಹಾಕ್ಕೊಂಡರೆ ತಲೆ ಎಲ್ಲಾ ಬಿಸಿ ಆಗುತ್ತೆ. ಈ ವಾಹನದಲ್ಲಿ ಹೋಗ್ತಿದ್ದಾಗ ಒಳಗೆಲ್ಲಾ ಸೆಕೆ. ಅದಕ್ಕೇ ಹೇಳೋದು ಶಾಲಿ–ವಾಹನ ಸೆಕೆ ಅಂತ. ಆದರೆ ಇದರಲ್ಲಿ ಅನುಕೂಲ ಒಂದಿದೆ. ಏನು

ಗೊತ್ತಾ? ಹೆಲ್ಮೆಟ್ ಹಾಕ್ಕೊಂಡು ಹೋಗ್ತಾ ಇದ್ದರೆ ಸಾಲ ಕೊಟ್ಟೋರು ಗುರುತು ಹಿಡಿಯಲ್ಲ. ಇನ್ನು ಅರ್ಧ ಅನುಕೂಲ, ಅರ್ಧ ಅನಾನುಕೂಲ ಯಾವುದು ಅಂದರೆ, ಈ two-wheelerದು pulling ಚೆನ್ನಾಗಿರಬೇಕಾದರೆ ಅದರ ಹಿಂದೆ ಸ್ತ್ರೀಲಿಂಗ್ ಕೂತಿರಬೇಕು.

ಮಂಕ : ಇದು ಅನುಕೂಲಾನೇ ಅಲ್ಲವೇನೋ?

ವೆಂಕ : ಸ್ತ್ರೀಲಿಂಗ್ ಸಿಕ್ಕಿದಾಗ ಅನುಕೂಲ. ಸಿಗದಿದ್ದಾಗ ಅನಾನುಕೂಲ. ಹಾಗಾಗಿ ಬದು ಕಕುವ ದಾರೀಲಿ ಈ ವಾಹನ ಸುಗಮ ಅಲ್ಲ.

ಮಂಕ : ಸರಿ! ಈಗ auto rickshaw ಕರಿ.

ವೆಂಕ : ಕರೀಬಹುದು. ಆದರೆ ಅವರು ಬರಲ್ಲವಲ್ಲ. ಅಕಸ್ಮಾತ್ ಬಂದರೂ ಒಂದೂವರೆ ಕೇಳ್ತಾರೆ, ಅವರು ಒಂದೂವರೆ ಹಾಕ್ಕೋಬೇಕಲ್ಲ! ಇನ್ನು ಮುದುಕರು, ಹೆಂಗಸರು, ಮಕ್ಕಳು, ಕಾಯಿಲೆಯವರು, ಬಡವರು, ಇವರನ್ನು ಬಿಟ್ಟು ಬಾಕಿ ಎಲ್ಲರಿಗೂ ಉಪಯೋಗ ಅದು.

ಮಂಕ : ಸರಿ. ಇದೂ ನಮ್ಮ ಪ್ರಯಾಣಕ್ಕೆ ಸುಸೂತ್ರ ಅಲ್ಲ. ಇನ್ನು four wheeler book ಮಾಡೋಣ ನಮ್ಮ ಚರ್ಚೆಗೆ?

ವೆಂಕ : ಅಪ್ಪಾ ಮರಿ! ಸಾಮಾನ್ಯರಿಗೆ ಈ four wheeler ಕೊಂಡುಕೊಳ್ಳೋದು ದೂರದ ಮಾತು, ಓಡಿಸೋದು ಇನ್ನೂ ದೂರದ ಮಾತು, maintain ಮಾಡೋದು ಮತ್ತೂ ದೂರದ ಮಾತು.

ಮಂಕ : ತುಂಬಾ ದೂರ ಹೋಗಬೇಡ ಮರೀ.

ವೆಂಕ : ಇಲ್ಲ, ಹತ್ತಿರ ಬಂದು ಒಂದು ಮಾತು ಹೇಳ್ತೀನ ಕೇಳು. ಆ vehicle ಮಾಡೋಷ್ಟು ದುಡ್ಡಿರಲ್ಲ ಕೆಲವರ ಹತ್ತಿರ. ಅದೇನಿದ್ದರೂ ದುಡ್ಡಿರೋ ದೊಡ್ಡಪ್ಪಂದಿರಿಗೆ. ಆದರೆ ಅವರಿಗೂ ಒಂದು ಕಷ್ಟ ಇದೆ ಗೊತ್ತಾ? ಇತ್ತೀಚೆಗೆ ನಮ್ಮ ಸ್ನೇಹಿತ ಒಬ್ಬ ಕಷ್ಟಪಟ್ಟು ಕಾರ್‍ಕೊಂಡ.

ಮಂಕ : ಏನು ಕಾರ್‍ಕೊಂಡ? ವಿಷ ಕಾರ್‍ಕೊಂಡನಾ?

ವೆಂಕ : ಅಲ್ಲವೋ ಕಾರ್‍ಕೊಂಡ ಅಂದರೆ, ಒಂದು car ಕೊಂಡ, ಕೊಂಡುಕೊಂಡ ಅಂತ. ಆದರೆ ಬೆಂಗಳೂರಿನಂಥ ಊರಿನಲ್ಲಿ parkingson disease ಅಂತ ಒಂದಿದೆ. ಅಂದರೆ parking problem.

ಮಂಕ : ಈ parking problemನ ಸುಲಭವಾಗಿ solve ಮಾಡಬಹುದು.

ವೆಂಕ : ಹೌದಾ? ಹೇಗೆ?

ಮಂಕ : Simple, carನ ಮಾರಿಬಿಟ್ಟರೆ ಆಯಿತು. parking problemಏ ಇರಲ್ಲ.

ವೆಂಕ : ಸರಿ. ಇನ್ನು ಉಳಿದಿರೋದು, ಬಸ್. ಆ busನ mis ಮಾಡಿಕೊಳ್ಳೋದು ಬೇಡ. ಬಾ ಹತ್ತೋಣ.

ಮಂಕ : ಹತ್ತೋಕೆ, ಬಸ್‌ಗಳು ಸ್ಟಾಪ್‌ನಲ್ಲಿ ನಂತರ ತಾನೇ? ಅರ್ಧ ಕಿಲೋ ಮೀಟರ್ ಓಡಿ, ಅದನ್ನು ಹಿಡೀಬೇಕು.

ವೆಂಕ : ಹೌದು. ಜೊತೆಗೆ rush ಬೇರೆ. ನೂಕು ನುಗ್ಗಲು. ನುಗ್ಗಲು ನೂಕೋದು. ನೂಕಿದರೇ ನುಗ್ಗಬಹುದು.

ಮಂಕ : ಇಷ್ಟೆಲ್ಲಾ ಕಷ್ಟ ಪಟ್ಟು ಹತ್ತಿದೆ ಅಂತಿಟ್ಕೊ. ಅಲ್ಲಿ ಹಿರಿಯ ನಾಗರಿಕರಿಗೆ ಇರೋ seatನಲ್ಲಿ ಕಿರಿ ಕಿರಿ ನಾಗರಿಕರು ಕೂತಿರ್ತಾರೆ. ಹೆಂಗಸರ seatನಲ್ಲಿ ಗಂಡಸರು, ಅಂಗವಿಕಲರ seatನಲ್ಲಿ ಎಲ್ಲಾ ಅಂಗಾಂಗಗಳೂ ಸರಿಯಾಗಿರೋರು ಕೂತಿರ್ತಾರೆ.

ವೆಂಕ : ಅಷ್ಟೇ ಅಲ್ಲಮ್ಮ. ಹಿಂದೆ ಹತ್ತಿದರೆ (ಹಾಡು) ಮುಂದೆ ಬನ್ನಿ, ಇನ್ನೂ ಮುಂದೆ ಬನ್ನಿ, ಬೇರೆ ಯಾರೂ ಈ ಮಾತನ್ನು ಹೇಳೋದಿಲ್ಲ, ಅಂತ ಹಾಡ್ತಾರೆ. ಇನ್ನು ಮುಂದೆ ಹತ್ತಿದರೆ, ಹಿಂದೆ ಹೋಗಿ ಅಂತಾರೆ, ಯಾವ ಬಸ್‌ನಲ್ಲಿ ಗೊತ್ತಾ?

ಮಂಕ : ಗೊತ್ತಿಲ್ಲ ಹೇಳು.

ವೆಂಕ : ಪುಷ್ಪಕ್‌ನಲ್ಲಿ ಕಣೋ. ಅದು ಪುಷ್ಪಕ್ ಅಲ್ಲ, push back. ಇನ್ನು PHS ಅಂದರೇನು ಗೊತ್ತಾ ನಿನಗೆ?

ಮಂಕ : ಪ್ರತಿ ಸಾರಿನೂ ಗೊತ್ತಾ ಗೊತ್ತಾ ಅಂತ ಕೇಳಬೇಡ. ನಿನಗೇನು ಗೊತ್ತೋ ಅದನ್ನ ಹೇಳಿಬಿಡು.

ವೆಂಕ : pick pocket ಹೆಚ್ಚಾಗುವ ಸಮಯ ಅಂತ. ನೀನು ಯಾರನ್ನೇ ಕೇಳು. purse ಎಲ್ಲಿ ಕಳಕೊಂಡಿರಿ? ಬಸ್‌ನಲ್ಲಿ. ಪಾಸ್ ಎಲ್ಲಿ ಕಳಕೊಂಡಿರಿ? ಬಸ್‌ನಲ್ಲಿ. mobile ಎಲ್ಲಿ ಕಳಕೊಂಡಿರಿ? ಬಸ್‌ನಲ್ಲಿ. bag ಎಲ್ಲಿ ಕಳಕೊಂಡಿರಿ? ಬಸ್‌ನಲ್ಲಿ. ಮಾನ ಎಲ್ಲಿ ಕಳಕೊಂಡಿರಿ? ಬಸ್‌ನಲ್ಲಿ.

ಮಂಕ : ಏಯ್! ಬಸ್ಸಿನಲ್ಲಿ ಮಾನ ಹೇಗೋ ಹೋಗತ್ತೇ? ನೀನೊಬ್ಬ.

ವೆಂಕ : ಹೋಗತ್ತಮ್ಮ, ಹೋಗತ್ತೆ. ಮೊನ್ನೆ ಒಬ್ಬನದು ಹೀಗೇ ಆಯಿತು. conductor ticket ಕೇಳಿದ. ಅಷ್ಟರಲ್ಲಿ checking inspector ಬಂದ. ಇವನ purse pick pocket ಆಗಿದೆ. ಪಾಸೂ ಅದರಲ್ಲೇ. ಏನ್ರೀ! ನೋಡೋಕೆ decent ಆಗಿ ಕಾಣ್ತೀರಾ. ಏಳು ರೂಪಾಯಿ ಟಿಕೆಟ್ ತೊಗೊಳೋಕೆ ಆಗಲ್ಲವಾ ಅಂತ ಮಾನ ಕಳಕೊಂಡ. ನಂತರ ಯಾರೋ ಇವನ ಪರಿಚಯದಲ್ಲೊಬ್ಬರು ಇವನನ್ನ ಗುರುತಿಸಿ ಮಾನ ಕಾಪಾಡಿದರು. ಸರಿ, ಇಷ್ಟೆಲ್ಲಾ ಆಯಿತಾ? ಇನ್ನು roadಗಳೋ rollerಗಳು ಹೋಗೋದೂ ಕಷ್ಟ, ಅಲ್ಲದೆ traffic jam ಬೇರೆ. ಯಾಕ್ರೀ officeಗೆ late? ನಾನಾಗಲೇ ಬಂದೆ ಸಾರ್. road cross ಮಾಡೋದಕ್ಕೆ ಅರ್ಧ ಘಂಟೆ ಆಯಿತು, ಅನ್ನೋದು ಸಾಮಾನ್ಯ.

ಮಂಕ : ಇನ್ನು accidentಗಳ ಬಗ್ಗೆ ಮಾತಾಡಲೇ ಇಲ್ಲವಲ್ಲೋ?

ವೆಂಕ : ಅಪ್ಪಾ ಜ್ಞಾಪಿಸಬೇಡ. ಅದರ ಬಗ್ಗೇನೇ ಒಂದು ಸಿನೆಮಾ ತೆಗೀಬಹುದು. ಬೀchi ಗೊತ್ತಿಲ್ಲ ನಿನಗೆ?


ಮಂಕ : ಗೊತ್ತು ಹೇಳಪ್ಪ.

ವೆಂಕ : ಅವರು ಹೇಳ್ತಾರೆ. ಊರಿಂದ ಊರಿಗೆ ಹೋಗೋಕೆ bus, train, plane, etc. ಹಾಗೆ ಲೋಕದಿಂದ ಲೋಕಕ್ಕೆ ಹೋಗೋಕೆ, AIDS, cancer, heart attack, etc. plus ಈ ನಮ್ಮ ವಾಹನಗಳು.

ಮಂಕ : ಸರಿ, ಕೊನೇಗೆ ಈಗ ಯಾವ transport ಉತ್ತಮ ಅಂತ ಆಯಿತು?

ವೆಂಕ : ಇನ್ನು ಯಾವುದು? ಭಗವಂತ ಕೊಟ್ಟ ವಾಹನ, ಕಾಲು. (ಹಾಡು) ಭಗವಂತ ಕಾಲ್ಕೊಟ್ಟ, ಯಾಕೆ? ಭಗವಂತ ಕಾಲ್ಕೊಟ್ಟ ನಡೆಯೋಕಂತ. ಅದನ್ನು ಯಾಕೆ ಎಳೆಯುವೇ vehicleಗಂತ. ಆದಷ್ಟು ಉಪಯೋಗಿಸಿ, ಅನಿವಾರ್ಯ ಆದಾಗ ಇತರೆ ವಾಹನಗಳನ್ನು ನಮ್ಮ ಹುಷಾರಿಲಿ ಎಷ್ಟು ಬೇಕೋ ಅಷ್ಟು ಉಪಯೋಗಿಸಿ, ಮಿಕ್ಕಿದ್ದಕ್ಕೆ ಆ ದೇವರ ಮೇಲೆ ಭಾರ ಹಾಕೋದು.

ಮಂಕ : ದೇವರ ಮೇಲೆ ಅಷ್ಟೇ ಅಲ್ಲ, ಆ ವಾಹನ ಓಡಿಸ್ತಾರಲ್ಲಾ, ಅವರ ಮೇಲೂ ಭಾರ ಹಾಕಬೇಕು.





# ಸಣ್ಣ ಕಥೆ ~ ಪುಟ್ಟಾ

❁ ಕುಮುದಾ ಪುರುಷೋತ್ತಮ್

''**ತಾತ** ಮದ್ವೆ ಮಾಡ್ಕೊಂಡು ಬಂದ್ಬಿಟ್ಟಿದ್ದಾರೆ. ಎಲ್ಲಾ ಬನ್ನೀ.''

ತಮ್ಮುದ್ದಕ್ಕೂ ಇದ್ದ ಕೆಂಪು ಗುಲಾಬಿ ಮಾಲೆ ಧರಿಸಿ ಆಟೋವಿನಿಂದ ಇಳಿದ ರಾಯರನ್ನು ನೋಡಿದ ಪುಟ್ಟ ಚಪ್ಪಾಳೆ ತಟ್ಟುತ್ತಾ ಕೂಗಿಯೇ ಬಿಟ್ಟ. ರಾಯರ ಮುಖ ಕುತ್ತಿಗೆಯನ್ನು ಆವರಿಸಿದ್ದ ಗುಲಾಬಿ ಮೀರಿಸಿ ಕೆಂಪಾಯಿತು. ಆಟೋದವ ಕೇಳಿದಷ್ಟು ಕೊಟ್ಟು ಮೊಮ್ಮಗನ ಬಳಿ ಬಂದು ಕಿವಿಯಲ್ಲಿ ಉಸುರಿದರು. ''ಹಾಗೆಲ್ಲಾ ಕೂಗಬೇಡ. ಕೇಳಿದವ್ರು ಈ ಮುದುಕನಿಗೆ ಐಲು ಅಂದುಕೊಂಡಾರು. ನಿಮ್ಮಜ್ಜಿ ಕಿವಿಗೇನಾರ ಬಿದ್ರೆ ಒಳಗಿನಿಂದ ಲಟ್ಟಣಿಗೆ ಹಿಡಿದು ಬಂದು ತಲೆ ಮೇಲೆ ಕುಟ್ಟಿಬಿಟ್ಟಾಳು.'' ಅಜ್ಜಿ ತಾತನನ್ನು ಕುಟ್ಟುವ ದೃಶ್ಯ ಊಹಿಸಿಯೇ ಪುಟ್ಟನಿಗೆ ನಗು ತಡೆಯಲಾಗಲಿಲ್ಲ. ''ತಾತಾ, ಹೆದರಬೇಡ. ನಾನು ಅಜ್ಜಿಗೆ ಹೇಳೋದಿಲ್ಲಾ. ಆದ್ರೆ ನಿಂಗೆ ನಿಜ್ವಾಗ್ಲೂ ಮದ್ವೆ ಆಯ್ತಾ?''

''ಇಲ್ಲಪ್ಪ, ಸಧ್ಯ, ಒಂದು ಮಾಡ್ಕೊಂಡು ಏಗೋದೇ ಸಾಕಾಗಿದೆ. ಇನ್ನೊಂದು ಯಾಕೆ ಬೇಕು?''

''ಮತ್ತೆ ಹಾರ ಹಾಕ್ಕೊಂಡು ಬಂದಿದ್ದೀಯ?''

''ಹಾರ ಹಾಕ್ಕೊಂಡು ಬಂದ್ರೆ ಮದ್ವೆ ಆಯ್ತು ಅಂತ ಅರ್ಥವೇನೊ ಮಡೆಯ?'' ರಾಯರು ಕೋಪ ನಟಿಸುತ್ತಾ ಮೊಮ್ಮಗನ ಕಿವಿ ನವಿರಾಗಿ ಹಿಂಡಿದರು.

''ಹೌದು. ರವಿ ಚಿಕ್ಕಪ್ಪ ಮದ್ವೇಲಿ ಹಾರ ಹಾಕಿದ್ದು ನೀನು ನೋಡ್ಲಿಲ್ವಾ?''

''ಹಾರ ಮದ್ವೆ ಒಂದ್ರಲ್ಲೇ ಹಾಕೋದಲ್ಲಪ್ಪ. ಬೇರೆ ಬೇರೆ ಸಂದರ್ಭಗಳಲ್ಲೂ ಹಾಕ್ತಾರೆ. ಇವತ್ತು ನಂಗೆ ರಿಟೈರ್ ಆಯ್ತು. ನಮ್ಮಾಫೀಸಿನವರು ಪಾರ್ಟಿ ಕೊಟ್ಟು ಈ ಶ್ರೀಗಂಧದ ವಿಗ್ರಹ ಕೊಟ್ರು.'' ಕೈಲಿ ಹಿಡಿದಿದ್ದ ವಿಗ್ರಹ ತೋರಿಸಿದರು.

''ತಾತಾ, ತುಂಬಾ ಚೆನ್ನಾಗಿದೆ. ಹತ್ರ ತಂದ್ರೆ 'ಘಂ' ಅಂತ ವಾಸ್ನೆ ಬರತ್ತೆ'' ಎಂದು ದೀರ್ಘಶ್ವಾಸವೆಳೆದ. ಮೊಮ್ಮಗನ ಮಾತು ಕೇಳಿ ಹೊರಬಂದ ರಾಧಮ್ಮ ವಿಗ್ರಹವನ್ನು ಕೈಲಿ ಹಿಡಿದು ಭಕ್ತಿಯಿಂದ ಕಣ್ಣಿಗೊತ್ತಿಕೊಂಡರು.

''ಬಲು ಚೆನ್ನಾಗಿದೇಂದ್ರೆ. ಮುಖದಲ್ಲಿ ಎಂತಹ ಮುಗ್ಧ ಖಳೆ. ನೋಡ್ತಾ ಇದ್ರೆ ಅಂಬೆಗಾಲಿಡುತ್ತಾ ಮುಂದೆ ಬರ್ತಾನೆ ಎನ್ನುವಷ್ಟು ಜೀವಂತಿಕೆ ಇದೆ ಅಲ್ವೇ?''

''ಹೌದು ರಾಧೂ, ಈ ವಿಗ್ರಹದ ಮುಖ ನೋಡಿದ್ರೆ ಸ್ವಲ್ಪ ನಮ್ಮ ಪುಟ್ಟನ ಮುಖದ ಹಾಗೇ ಇದೆ ಅಲ್ವೆ?''

''ಹೌದೌದು. ನಿಮ್ಮ ಮಟ್ಟಿಗೆ ನಿಮ್ಮ ಮೊಮ್ಮಗನ ಸಮಾನ ಯಾರಿಲ್ಲ. ಅವ್ನೇ ಮತ್ತೆ ಹುಟ್ಟಿ ಬಂದಿರೋ ಕೃಷ್ಣ ಪರಮಾತ್ಮ ಅಂತೀರ.''

ರಾಯರು ಕೈಲಿದ್ದ ಹಾರ ತೆಗೆದುಕೊಂಡು ಒಳ ನಡೆಯುತ್ತಿದ್ದಂತೆ ಪುಟ್ಟನಿಗೆ ಹಿಂದೊಮ್ಮೆ ಅಜ್ಜಿ ಗುಲಾಬಿ ರೇಕುಗಳಿಂದ ಮಾಡಿದ್ದ ಗುಲ್ಕನ್ ನೆನಪಾಗಿ ಬಾಯಿ ಚಪ್ಪರಿಸುವಂತಾಯ್ತು. ಅಜ್ಜಿ ಬಾಯಿ ಹುಣ್ಣಾಗಿದೆ. ಈ ಗುಲಾಬೀಲಿ ಗುಲ್ಕನ್ ಮಾಡಿ ಕೊಡ್ತೀಯಾ?

''ಗುಲಾಬಿ ನೋಡಿದ್ಕೂಡ್ಲೆ ಬಾಯಿ ಹುಣ್ಣು ಬಂದು ಬಿಡ್ತಾ? ತುಂಟ್ಮರಿ ನೀನು ಜಾಣ. ಈಗ ಆಡ್ಕೊ ಹೋಗು. ನಾಳೆ ಮಾಡಿ ಕೊಡ್ತೀನಿ.''

ಪುಟ್ಟ ವಿಗ್ರಹವನ್ನು ಹಾಲಿನ ಟೀಪಾಯ್ ಮೇಲಿಟ್ಟು ತಾನೂ ಅಂಬೆಗಾಲಿಡುತ್ತಾ ಅದನ್ನು ಸುತ್ತುತ್ತಾ ಆಟ ಆಡತೊಡಗಿದ.

ರಾತ್ರೆ ಹತ್ತು ಗಂಟೆ ಸಮಯ. ರಾಯರು ದೂರದರ್ಶನದ ಕಾರ್ಯಕ್ರಮ ವೀಕ್ಷಿಸುತ್ತಿದ್ದರು. ಅವರ ಮಡಿಲಲ್ಲಿ ಕುಳಿತು ಏನೋ ಯೋಚಿಸುತ್ತಿದ್ದ ಪುಟ್ಟನಿಗೆ ಸಂಜೆಯ ಘಟನೆ ತಟ್ಟನೆ ನೆನಪಿಗೆ ಬಂತು.

''ತಾತಾ, ರಿಟೈರ್ ಅಂದ್ರೆ ಏನು?''

''ರಿಟೈರ್ ಅಂದ್ರೆ ಆಫೀಸಿನವ್ರು ನೀನು ಇಷ್ಟು ದಿನ ಕಷ್ಟಪಟ್ಟು ದುಡಿದದ್ದು ಸಾಕು. ಇನ್ನು ಮೇಲೆ ಮನೇಲಿದ್ದು ವಿಶ್ರಾಂತಿ ತೊಗೋತಾ ಹಾಯಾಗಿರು ಅಂತ ಹಾರ ಹಾಕಿ ಕಳ್ಸೋದು.''

''ಹಾಗಾದ್ರೆ ನಾಳೆಯಿಂದ ನೀ ಆಫೀಸಿಗೆ ಹೋಗೋಲ್ವಾ?''

ರಾಯರಿಗೆ ದುಗುಡದಿಂದ ಮಾತೇ ಹೊರಡದೆ ಸುಮ್ಮನೆ ತಲೆಯಾಡಿಸಿದರು. ಪುಟ್ಟನಿಗೆ ಶಾಲೆಯ ಮಿಸ್ಸು ಕೊಟ್ಟ ಹೋಂವರ್ಕ್ ಮಾಡದಿದ್ದುದು, ಮರುದಿನ ಸಿಗಲಿರುವ ಪನಿಶ್‌ಮೆಂಟ್ ನೆನಪಿಗೆ ಬಂದು ಮೈ ನಡುಗಿತು.

''ತಾತಾ, ನಾನೂ ಇನ್ಮೇಲೆ ನಿನ್ನ ಹಾಗೆ ರಿಟೈರ್ ಆಗಿ ಬಿಡ್ತೀನಿ'' ಎಂದ ನಿರ್ಧಾರದ ಧ್ವನಿಯಲ್ಲಿ.

''ಇಷ್ಟು ಚಿಕ್ಕ ವಯಸ್ಸಿನಲ್ಲಿ ರಿಟೈರ್ ಆಗೋಕ್ಕೆ ಸಾಧ್ಯ ಇಲ್ಲಪ್ಪ. ನೀನು ತುಂಬಾ ಓದಿ ನೌಕರಿ ಮಾಡಿ ನನ್ನ ಹಾಗೆ ಮಕ್ಕಳು, ಮೊಮ್ಮಕ್ಕಳು ಆದಮೇಲೆ ರಿಟೈರ್ ಆಗುತ್ತೆ. ಅಲ್ಲಿವರ್ಗೂ ಸಾಧ್ಯವಿಲ್ಲ.''

''ಪರ್ವಾಗಿಲ್ಲ, ನಂಗೆ ಈ ಸ್ಕೂಲು, ಹೋಂವರ್ಕೂ, ಮಕ್ಕಳು ಎಲ್ಲ ಬೇಕಿಲ್ಲ, ಈಗ್ಲೇ ರಿಟೈರ್ ಆಗಿ ನಿನ್ನ ಜೊತೆ ಹಾಯಾಗಿ ಮನೇಲಿ ಇದ್‌ಬಿಡ್‌ತೀನಿ.''

ಸೂಕ್ಷ್ಮವಾದ ವಿಷಯವನ್ನು ಬೆಳೆಸಲಿಚ್ಛಿಸದ ರಾಯರು ಮೊಮ್ಮಗನನ್ನು ನವಿರಾಗಿ ತಟ್ಟಿದರು. ''ನಾಳೆ ಈ ವಿಷಯ ಯೋಚನೆ ಮಾಡೋಣ. ಈಗ ನೀನು ನಿದ್ದೆ ಮಾಡು.''

‘‘ತಾತಾ, ನಾನು ನಿನ್ನ ಹತ್ರಾನೇ ಮಲಗ್ತೀನಿ, ಅಮ್ಮ ಬಂದು ಕರೆದ್ರೆ ನೀನು ಕಳಿಸಿಬಿಡ್ಬೇಡ. ಒಬ್ನೇ ಮಲ್ಗೋಕ್ಕೆ ನಂಗೆ ಭಯ.’’ ತಾತನ ಒರಟು ಕೆನ್ನೆಗೆ ತನ್ನ ನುಣುಪಾದ ಕೆನ್ನೆ ಉಜ್ಜುತ್ತಾ ಹಾಗೆಯೇ ನಿದ್ದೆ ಹೋದ.

‘‘ಪುಟ್ಟ ಇನ್‌ಮೇಲೆ ನನ್ನ ಹತ್ರಾನೇ ಮಲಗ್ತಾನಂತೆ. ಇಲ್ಲೇ ಇರ್ಲಿ ಬಿಡು.’’ ಮಗನನ್ನೆತ್ತಿಕೊಂಡು ಹೋಗಲು ಬಂದ ಸೊಸೆಗೆ ರಾಯರೆಂದರು.

‘‘ಬೇಡಿ ಮಾವ. ಅವ್ನು ರಾತ್ರೆ ಎಲ್ಲ ಒದ್ದು ನಿಮ್ಮ ನಿದ್ದೆ ಹಾಳು ಮಾಡ್ತಾನೆ. ಅವನ ಮಂಚದಲ್ಲಿ ಅವ್ನು ಮಲಗ್ಲಿ.’’

‘‘ಅವ್ನು ಒದ್ರೆ ನನಗೇನೂ ತೊಂದ್ರೆ ಆಗೊಲ್ಲಮ್ಮ. ಈಚೀಚೆಗೆ ನನಗೆ ನಿದ್ದೆ ಬರೋದೂ ಅಷ್ಟರಲ್ಲೇ ಇದೆ. ಏನೋ ಮಗು ಆಸೆ ಪಡುತ್ತೆ. ಇರ್ಲಿ ಬಿಡು.’’

‘‘ಒಂದ್ಸಲ ನಿದ್ದೆ ಬಂದ್ಮೇಲೆ ಅವಂಗೆ ಏನು ಗೊತ್ತಾಗುತ್ತೆ? ನಿಮ್ಮ ಹತ್ರಾನೇ ಮಲ್ಗಿದ್ದೀನಿ ಅಂದ್ಕೋತಾನೆ. ಅಲ್ಲೇ ಮಲಗ್ಲೀ ಬಿಡಿ.’’

‘‘ಈಗ ಗೊತ್ತಾಗ್ದಿದ್ರೆ ಏನು? ಬೆಳಿಗ್ಗೆ ಎದ್ದಾಗ ತಿಳಿಯೋದಿಲ್ವೇ? ಮಗೂಗೆ ಮೋಸ ಮಾಡೋಕ್ಕೆ ಮನಸ್ಸು ಒಪ್ಪೋದಿಲ್ಲ.’’

ಮಾವನವರ ಮಾತಿಗೆ ಬದಲಾಡಲಾಗದೆ, ಸರಳ ಹೋದ ಸ್ವಲ್ಪ ಹೊತ್ತಿಗೆ ಮಗ ರಮೇಶ ಬಂದ. ‘‘ಅಣ್ಣಾ, ಈ ಇಕ್ಕಟ್ಟು ಮಂಚದಲ್ಲಿ ಇಬ್ಬರಿಗೆ ಜಾಗ ಸಾಲೋದಿಲ್ಲ, ನಾನು ಪುಟ್ಟನ್ನ ಅವನ ಮಂಚಕ್ಕೆ ಕರೆದುಕೊಂಡು ಹೋಗ್ತೀನಿ.’’

‘‘ಬೇಡಕಣೊ, ಮಗು ಭಯ ಪಡುತ್ತೆ.’’

‘‘ಮಗೂನಂತೆ ಮಗು. ಆಗ್ಲೆ ಐದು ವರ್ಷ ಆಯ್ತು. ನೀನು ಅತೀ ಮುದ್ದು ಮಾಡಿ ಹಾಳು ಮಾಡಿದ್ದೀ. ಶಿಸ್ತು ಇಲ್ಲದೆ ಬೆಳೆಸಿದರೆ ಮುಂದೆ ಹಾಳಾಗ್ತಾನೆ.’’ ಪುಟ್ಟನನ್ನು ಭುಜದಮೇಲೆ ಒರಗಿಸಿಕೊಂಡು ತನ್ನ ರೂಮಿನತ್ತ ಹೊರಟ. ಇದನ್ನೆಲ್ಲಾ ನೋಡುತ್ತಿದ್ದ ರಾಧಮ್ಮನ ಮನಸ್ಸು ಉಳುಕಿತು. ‘‘ಅವರವರ ಮಕ್ಕಳನ್ನು ಅವರಿಗೆ ಬೇಕಾದಂತೆ ಬೆಳೆಸ್ಲೀ ಬಿಡಿ. ನೀವ್ಯಾಕೆ ಮಧ್ಯ ಹೋಗ್ತೀರ? ಇಬ್ಬರೂ ವಿದ್ಯಾವಂತರು, ಬುದ್ಧಿವಂತರು. ನಮ್ಮಂತೆ ಮಡ್ಡಿಸಾಂಬ್ರಾಣಿಗಳು ಅಲ್ಲಾ. ಇನ್ನುಮೇಲೆ ಪುಟ್ಟನ ತಂಟೆಗೆ ಹೋಗ್ಬೇಡಿ. ನಿಮ್ಮ ಪಾಡಿಗೆ ನೀವಿದ್ದುಬಿಡಿ,’’ ಎಲ್ಲರಿಗೂ ಕೇಳುವಂತೆಯೇ ಹೇಳಿದರು.

‘‘ಏನ್ಮಾತೂಂತ ಆಡ್ತೀಯಾ ರಾಧೂ? ರಮೇಶ, ಸರಳಾ ಹೊರಗಿನೋರೇ? ಅವರೇನೂ ಆಡ್ಬಾರ್ದು ಆಡಿಲ್ಲ, ನಿಂಗೆ ನೆನಪಿದ್ಯಾ? ರಮೇಶ ಚಿಕ್ಕೋನಿದ್ದಾಗ ನಮ್ಮಮ್ಮ ಅತೀ ಮುದ್ದು ಮಾಡಿ ತಲೆ ಮೇಲೆ ಕೂರಿಸಿಕೊಂಡಿದ್ದಾಗ ನೀನೂ ಅಂಕೆಶಂಕೆ, ಶಿಸ್ತು ಅಂತೆಲ್ಲಾ ಹಾರಾಡಿದ್ದೆ? ಇದೆಲ್ಲ ಚರಿತ್ರೆಯ ಪುನರಾವರ್ತನೆ ಅಷ್ಟೇ. ನೀನಿದಕ್ಕೆಲ್ಲಾ ಬೇಜಾರು ಮಾಡ್ಕೊಬೇಡ.’’ ರಾಯರು ಮುನಿಸಿಕೊಂಡು ಕುಳಿತ ಪತ್ನಿಯನ್ನು ಸಮಾಧಾನ ಮಾಡಿದರು.

★★★★★

ರಾಯರು ಪೂಜೆಯ ಹೂವಿಗಾಗಿ ಜಾಜಿ ಬಳ್ಳಿ ಬಳಿ ನಿಂತಾಗ ಒಳಗೆ ಪುಟ್ಟನ ವಾಲಗ ಅವ್ಯಾಹತವಾಗಿ ನಡೆದಿತ್ತು.

''ನಾನು ಸ್ಕೂಲಿಗೆ ಹೋಗೊಲ್ಲ. ತಾತ ಮಾತ್ರ ಮನೇಲೇ ಇರ್ತಾರೆ. ನಾನ್ಯಾಕೆ ಹೋಗ್ಬೇಕು? ಆ ಸ್ಕೂಲಿನ ಮಿಸ್ಸು ಹೋಂವರ್ಕು, ಹೋಂವರ್ಕೂಂತ ಪ್ರಾಣ ತಿಂತಾರೆ. ಕ್ಲಾಸಿನಲ್ಲಿ ಮಾತಾಡೋಕ್ಕೂ ಬಿಡೊಲ್ಲ. ಕೈಕಟ್ ಬಾಯ್ ಮುಚ್ಚ್ ಅಂತ ಕೂಗಿಕೋತಾರೆ. ನಾನು ಹೋಗೊಲ್ಲ.'' ಸರಳಳ ಒಳ್ಳೆಯ ಮಾತು, ರಮಿಸುವಿಕೆ ಯಾವುದೂ ಕೆಲಸಕ್ಕೆ ಬಂದಿರಲಿಲ್ಲ. ಸಾಮ, ದಾನ, ಭೇದದ ಹಂತ ದಾಟಿ ದಂಡಕ್ಕೆ ಬರಲಿದ್ದಾಗ ರಾಯರು ಮಧ್ಯೆ ಪ್ರವೇಶಿಸಿದರು.

''ನಾನೂ ನಿಂಜೊತೆ ಬಂದ್ರೆ ಗಲಾಟೆ ಮಾಡ್ದೆ ಸ್ಕೂಲಿಗೆ ಹೋಗ್ತೀಯಾ?''

''ನೀ ಬಾ ಮೊದ್ಲು. ಆಮೇಲೆ ನೋಡೋಣ.'' ತಾತ ಖಂಡಿತ ಬರಲಾರರು ಎಂಬ ವಿಶ್ವಾಸದಿಂದ ಸವಾಲೆಸೆದ. ರಾಯರು ಮರು ಮಾತನಾಡದೆ ಅವನ ಜೊತೆ ರಿಕ್ಷಾ ಏರಿ ಹೊರಟರು. ಶಾಲೆ ತಲುಪಿದೊಡನೆ ಪುಟ್ಟನ ರಾಮಾಯಣ ಪುನರಾವರ್ತನೆಯಾಯಿತು. ''ತಾತಾ, ನೀನೂ ನನ್ನಪಕ್ಕ ಕೂತ್ಕೊ. ನನ್ನ ಇಲ್ಲಿ ಬಿಟ್ಟು ಹೋಗ್ಬೇಡ.''

''ನಾನು ಒಳಗೆ ಬಂದ್ರೆ ನಿಮ್ಮ ಹೆಡ್ ಮೇಡಮ್ ಬೈತಾರಪ್ಪ. ನಾನೀ ಮರದ ಕೆಳ್ಗೆ ಕೂತಿರ್ತೇನೆ. ನೀನು ಬಂದ್ಮೇಕ್ಡೆ ಇಬ್ರೂ ಮನೇಗೆ ಹೋಗೋಣ.''

ಸದಾ ಸಿಡಿಗುಟ್ಟುತ್ತಾ ಸ್ಕೇಲ್ ಝುಳಪಿಸುತ್ತ ಸುತ್ತುವ ಹೆಡ್ಮೇಡಮ್ಮಿನ ಚಿತ್ರಣ ಸುಳಿದು ಪುಟ್ಟ ಒಳಗೋಡಿದ. ಮೊಮ್ಮಗನಿಗೆ ಕೊಟ್ಟ ಮಾತನ್ನು ಮುರಿಯಲಾರದೆ ಮರದ ಕೆಳಗೆ ಕುಳಿತು ತೂಕಡಿಸುತ್ತಿದ್ದ ರಾಯರನ್ನು ಆಯಾ ಬಂದು ಎಬ್ಬಿಸಿದಳು. ''ಬುದ್ಧ್ಯೋರಾ, ನಿಮ್ಮಗೀನ ಜ್ವಾಪಾನ್ವಾಗಿ ನಾವು ನೋಡ್ಕಂತೀವಿ. ನೀವಿಲ್ಲಿ ಕೂತ್ಕಂಡ್ರೆ ಹೆಡ್ ಮೇಡಂನವ್ರು ನಮ್ಮ್ಯಾಗೆ ಕೂಗಾಡ್ತಾರೆ. ತೆಪ್ಪು ತಿಳೀಬ್ಯಾಡಿ. ಬೇರೆ ಏನಾರಾ ಕೆಲ್ಸ ಇದ್ರೆ ಮುಗಸ್ಕಂಡು ಇಸ್ಕೂಲು ಮುಗ್ಯಕ್ಕೆ ಹತ್ತು ನಿಮಿಷ ಮುಂಚೆ ಬನ್ನಿ. ನಿಮ್ಮಗಿ ನೀವಿಲ್ಲೆ ಕುಂತಿದ್ರಿ ಅಂದ್ಕಳತ್ತೆ.'' ಆಯಾ ಸಲಹೆಯೂ ಸರಿ ಎನಿಸಿತು. ಅಲ್ಲಿಂದ ಹೊರಟು ಮಾರುತಿ ಆಲಯದಲ್ಲಿ ಪ್ರದಕ್ಷಿಣೆ ನಮಸ್ಕಾರ ಮುಗಿಸಿ ಮಾರುಕಟ್ಟೆಯಲ್ಲಿ ಹಣ್ಣು ತರಕಾರಿ ಖರೀದಿಸಿ ಸಿಕ್ಕ ಪರಿಚಿತರ ಬಳಿ ಉಭಯಕುಶಲೋಪರಿ ಮುಗಿಸಿ ಬರುವುದರಲ್ಲಿ ಸ್ಕೂಲ್ ಬೆಲ್ಲಿಗೆ ಕೇವಲ ಇಪ್ಪತ್ತು ನಿಮಿಷವಿದ್ದಿತು. ಕುಣಿಯುತ್ತಾ ಹೊರಬಂದ ಪುಟ್ಟನೊಡನೆ ರಿಕ್ಷಾದಲ್ಲಿ ಕುಳಿತಾಗ ಇಬ್ಬರಿಗೂ ತೃಪ್ತಿ. ಮರುದಿನ ಪುಟ್ಟನೊಡನೆ ಆಫೀಸಿಗೆ ಹೋಗುವಷ್ಟೇ ಉತ್ಸಾಹದಿಂದ ಹೊರಟ ರಾಯರ ಕೈಲಿ ತರಕಾರಿ ಚೀಲವಿತ್ತು. ಅಂದಿನಿಂದ ಆಲಯದ ಮಾರುತಿಗೆ ಒಬ್ಬ ಖಾಯಂ ಭಕ್ತದೊರಕಿದ್ದ!

ಅಂದು ಪುಟ್ಟನ ಹುಟ್ಟಿದ ದಿನ. ಮುಂಜಾನೆ ಎದ್ದೊಡನೆ ತೈಲಾಭ್ಯಂಜನ ಮುಗಿಸಿ ಹೊಸ ಬಟ್ಟೆ ಧರಿಸಿ ಸಹಪಾಠಿಗಳಿಗೆ ಹಂಚಲು ಚಾಕಲೇಟ್ ಡಬ್ಬ ಹಿಡಿದು ತಾತನೊಡನೆ ರಿಕ್ಷಾ ಏರಿದ. ಎಂದಿನಂತೆ ಶಾಲೆಯೊಳಕ್ಕೆ ಹೋಗದೆ ತಾತನ ಕೈ ಹಿಡಿದು ನಿಂತೇ ಇದ್ದ!

''ತಾತ, ಇವತ್ತು ನೀನೂ ಕ್ಲಾಸಿಗೆ ಬಾ. ನಮ್ಮ ಮಿಸ್ಸು ನಿನ್ನನ್ನೂ ಕರ್‍ಕೊಂಡು ಬರಲು ಹೇಳಿದ್ದಾರೆ.''

''ಯಾಕೋ ಮರಿ? ಏನಾದ್ರೂ ತುಂಟತನ ಮಾಡಿದ್ಯಾ? ದೂರು ಕೊಡಕ್ಕೆ ಹೇಳಿ ಕಳ್ಸಿರ್ಬೇಕು.''

''ಇಲ್ಲ ತಾತ. ನಾನು ತುಂಬಾ ಗುಡ್ ಬಾಯ್ ಅಂತ ಮಿಸ್ಸೇ ಎಷ್ಟೋಸಲ ಹೇಳಿದಾರೆ. ಬೇಕಾದ್ರೆ ನೀನೇ ಬಂದು ಕೇಳು.''

''ಮಿಸ್, ಇವ್ರು ನನ್ನ ತಾತ.'' ಪರಿಚಯ ಮಾಡಿಸಿದ.

ನಮಸ್ಕಾರ ಸಾರ್. ಏನು ಬೇಕಾಗಿತ್ತು?

''ನನಗೇನೂ ಬೇಕಿರ್ಲಿಲಾಮ್ಮ. ಇವ್ನು ಮಿಸ್ಸು ಬರೋಕ್ಕೆ ಹೇಳಿದಾರೆ ಅಂದ. ಅದಕ್ಕೇ ಬಂದೆ.''

''ನಾನೇನೂ ಹೇಳಿರ್ಲಿಲ್ವೇ?'' ಇಬ್ಬರೂ ಪುಟ್ಟನತ್ತ ನೋಡಿದರು. ಪುಟ್ಟ ಸಂದೇಹ ಬಗೆಹರಿಸಿದ.

''ಇವತ್ತು ನನ್ನ ಬರ್ತಡೇ. ಇವತ್ತು ಮಾತ್ರ ನಮಗಿಷ್ಟವಾದ ವಸ್ತು ತಂದು ಎಲ್ರಿಗೂ ತೋರಿಸ್ಬಹುದು ಅಂತ ಮಿಸ್ಸೇ ಹೇಳಿದ್ರಲ್ಲಾ. ನನಗೆ ಎಲ್ಲದಕ್ಕಿಂತ ತಾತನೇ ಇಷ್ಟ ಅದಕ್ಕೇ ಕರ್‍ಕೊಂಡು ಬಂದೆ.''

★★★★★

ರಾಯರ ಮನೆಯಲ್ಲಿ ಮಂಗಳ ಗೌರಿಯ ವ್ರತ ಬಲು ವಿಜೃಂಭಣೆಯ ಹಬ್ಬ. ರಾಧಮ್ಮನಿಗೆ ಒಂದು ವಾರದಿಂದಲೇ ಸಡಗರ. ಜೊತೆಗೆ ಮಡಿಹುಡಿಗಳ ಅವಾಂತರ ಬೇರೆ. ಅತ್ತೆಸೊಸೆ ಮಡಿಯುಟ್ಟು ಅಡುಗೆ ಕೋಣೆ ಸೇರಿದರೆ ರಾಯರೂ ಸೇರಿದಂತೆ ಎಲ್ಲರಿಗೂ ಅಲ್ಲಿ ಪ್ರವೇಶ ನಿಷಿದ್ಧ. ಪುಟ್ಟನಿಗಂತೂ ಬಲು ಮುಜುಗರ. ಅಮ್ಮ ಅಜ್ಜಿಯರ ಹಿಂದೆ ಓಡಾಡುವಂತಿಲ್ಲ, ಮುಟ್ಟುವಂತಿಲ್ಲ, ತಯಾರಾಗುತ್ತಿದ್ದ ಬಿಸಿಬಿಸಿ ಹೋಳಿಗೆಯ ರುಚಿ ನೋಡುವಂತಿಲ್ಲ.

''ನಾನೂ ನಿಮ್ಮ ಜೊತೆ ಗೌರಿ ಪೂಜೆ ಮಾಡ್ತೀನಿ'' ಎಂದವನನ್ನು ಅಜ್ಜಿ ಗದರಿದ್ದರು. ''ಗಂಡಸಿಗ್ಯಾಕೋ ಗೌರಿ ಪೂಜೆ?''

''ನಿಮ್ಮ ತಾತ ಹೇಗಿದ್ರೂ ಕೆಲಸವಿಲ್ದೆ ಕೂತಿದ್ದಾರೆ. ಅಲ್ಲಿ ಹೋಗಿ ಆಡಿಕೋ'' ಎಂದು ಗದರಿದ್ದರು. ಪುಟ್ಟ ಸಂದೇಹದ ಮೂರ್ತಿಯಾದ. ''ತಾತ, ಹೆಂಗಸರು ಮಾತ್ರ ಗೌರಿ ಪೂಜೆ ಯಾಕೆ ಮಾಡ್ತಾರೆ?''

''ಬೇಗ ಮದ್ವೆಯಾಗಿ ಒಳ್ಳೆ ಗಂಡ ಸಿಗಲಿ'' ಅಂತ ಮಾಡ್ತಾರೆ.

''ಒಳ್ಳೆ ಹೆಂಡ್ತೀ ಸಿಗಲಿ ಅಂತ ಗಂಡಸರು ಯಾತಕ್ಕೆ ಪೂಜೆ ಮಾಡೋದಿಲ್ಲ?''

ಇದಕ್ಕೆ ರಾಯರು ಏನು ಉತ್ತರ ಕೊಡುತ್ತಿದ್ದರೋ. ಹೂವಿನ ಕುಚ್ಚು ತುಂಡು ಮಾಡಲು ಕತ್ತರಿಗಾಗಿ ಅತ್ತ ಬಂದ ರಾಧಮ್ಮ ತಾವೇ ಉತ್ತರಿಸಿದರು. ''ಹೆಂಗಸರೆಲ್ಲಾ ಒಳ್ಳೆಯವರೇ. ಗಂಡಸರು ಅದಕ್ಕಾಗಿ ಪೂಜೆ ಮಾಡ್ಬೇಕಾಗಿಲ್ಲ'' ಎಂದು ಅಜ್ಜಿ ಒಳಹೋದರೆ ಅವನು ಬಿಡಬೇಕಲ್ಲಾ! ''ಅಜ್ಜಿ , ನಿಂಗೂ ಅಮ್ಮನಿಗೂ ಆಗ್ಲೆ ಮದ್ವೆ ಆಗಿದೇಂತೀರಿ. ಮತ್ಯಾಕೆ ಒಳ್ಳೆ ಗಂಡ ಬೇಕೂಂತ ಪೂಜೆ ಮಾಡ್ತೀರ?''

''ಪುಟ್ಟ, ಸಿಕ್ಕಿರೋ ಗಂಡ ಒಳ್ಳೆಯವನಾಗಿಯೇ ಇರಲಿ ಅಂತ ಪೂಜೆ ಮಾಡ್ತೀವಿ.'' ಅಜ್ಜಿ ಕತ್ತರಿ ಹಿಡಿದು ಒಳಹೋದರು.

ಪುಟ್ಟ ತಾತನ ತೊಡೆ ಏರಿ ಜೋರು ಮಾಡಿದ. ''ಅಜ್ಜಿ ಹೇಳಿದ್ದು ಕೇಳಿಸ್ತಾ? ನೀನು ಒಳ್ಳೆವನಾಗಿರ್ಲಿ ಅಂತ ಅಜ್ಜಿ ಗೌರಿ ಪೂಜೆ ಮಾಡ್ತಿದ್ದಾರೆ. ಅದಕ್ಕೆ ಜಾಣಮರಿ ಥರ ನಂಗೊಂದು ಕಥೆ ಹೇಳು ನೋಡೋಣ.''

ವಾದದಲ್ಲಿ ಸೋತ ರಾಯರು ಕಥೆ ಆರಂಭಿಸಲೇಬೇಕಾಯಿತು.

''ಒಂದು ಊರಿನಲ್ಲಿ ಒಬ್ಬ ರಾಜ ಇದ್ನಂತೆ..............''

---

## ವಿಚಿತ್ರ ಕಾಯಿಲೆ

ಮಹಿಳೆಯೊಬ್ಬಳು ಒಳಗೆ ಬಂದು ಡಾಕ್ಟ್ರೆ ನನ್ನ ಗಂಡ ಒಂದು ಥರ ವಿಚಿತ್ರ ಕಾಯಿಲೆಯಿಂದ ಬಳಲ್ತಿದ್ದಾರೆ. ಮಾರ್ಕೆಟ್‌ಗೆ ಹೋಗಿ ಅಂದ್ರೆ ದೇವಸ್ಥಾನಕ್ಕೆ ಹೋಗ್ತಾರೆ. ಟೈಲರ್ ಅಂಗಡಿಗೆ ಹೋಗಿ ಅಂದ್ರೆ ರೇಷನ್ ಅಂಗಡಿಗೆ ಹೋಗ್ತಾರೆ. ಬಟ್ಟೆ ಅಂಗಡಿಗೆ ಹೋಗಿ ಅಂದ್ರೆ ತಟ್ಟೆ ಅಂಗಡಿಗೆ ಹೋಗ್ತಾರೆ ಅಂತ ಒಂದೇ ಸಮನೆ ಹೇಳ್ತಿದ್ದಾಗ ಎದುರಿಗೆ ಕೂತಿದ್ದವರು ಸ್ವಲ್ಪ ಇರಿ ತಾಯಿ ಇದನ್ನು ಹೇಳೋಕೆ ನೀವು ಡಾಕ್ಟರ್ ಷಾಪಿಗೆ ಹೋಗೋದು ಬಿಟ್ಟು ಲಾಯರ್ ಆಫೀಸಿಗೆ ಯಾಕೆ ಬಂದ್ರಿ ಅಂತ ಕೇಳಿದರು.

**- ಸುಕೇಶವ**



# ಹಾಲು ಮಾರಲು ಎಂ.ಬಿ.ಎ. ಬೇಕೆ?

**✿ ಸಿ.ಆರ್. ಸತ್ಯ**

**ಕ**ಲ್ಮಶ ಇರೋ ಗಂಗಣ್ಣನ ಈ ಹಾಲು

ಕಲ್ಪತ್ರಮ್ಮನಿಗೂ ಇಷ್ಟವಂತೆ!

ತಮ್ಮ ಶ್ರೀಮತಿ ವಿಶಾಲಾಕ್ಷಮ್ಮನವರನ್ನು ಚುಡಾಯಿಸೋಕ್ಕೆ ನಮ್ಮ ಶ್ರೀಪಾದರಾಯರು ಆಗೊಮ್ಮೆ ಈಗೊಮ್ಮೆ ಅವರನ್ನು 'ಹಾಲಮ್ಮ' ಅಂತ ಕರೀತಾರೆ. ಆಗ ಅಮ್ಮಾವರ ಸಿಟ್ಟು ಗಗನ ಮಟ್ಟಕ್ಕೆ ಏರಿ ಮನೆಯೊಳಗೇನೇ ಗುಡುಗು ಮಿಂಚು ಬಡಿಯೋದೇನೋ ನಿಜ. ಆದರೂ ರಾಯರಿಗೆ ಹಾಗೆ ಮಾಡೋದ್ರಲ್ಲಿ ಖುಷಿ ಇದೆ. ಕಾರಣ ಇಷ್ಟೇ:

ರಾಯರು ವಿಶಾಲಾಕ್ಷಮ್ಮನವರು ಮಾತ್ರ ಸದ್ಯಕ್ಕೆ ಮನೇಲಿ ಇರೋರು. ದಿನಕ್ಕೆ ಒಂದು ಲೀಟರ್ ಹಾಲು ಕಾಫಿ ಮೊಸರಿಗೆಲ್ಲಾ ಸಾಕು. ಹಾಗಾಗಿ ಸರ್ಕಾರದ ಪ್ಯಾಕೇಟ್ ಹಾಲು ತೊಗೊಂಡು ಅಮ್ಮಾವರು ಸಂಸಾರ ನಿಭಾಯಿಸ್ತಿದ್ದರು. ಈ ಒಂದು ಲೀಟರನ್ನು ಅರ್ಧ ಲೀಟರ್ಗೆ ಇಳಿಸೋದಕ್ಕೆ ಸಾಧ್ಯವೆ ಅಂತಲೂ ಯೋಚಿಸುತ್ತಿದ್ದರು. ಕೊಲೆಸ್ಟ್ರಾಲ್ ಕಮ್ಮಿ ಆಗುತ್ತೆ ಹಾಗೂ ದುಡ್ಡು ಉಳಿಯುತ್ತೆ ಅಂತ ಅವರ ಚಿಂತನೆಯಾಗಿತ್ತು.

ಈ ಸಮಯಕ್ಕೆ ಅವರ ರೋಡಿನಲ್ಲೇ ಇದ್ದ ಗಂಗಣ್ಣ ಅವರ ಮನೆಗೆ ಬಂದ.

''ಅಮ್ಮಾ, ಇನ್ಮೇಲೆ ನಿಮ್ಮ ಮನೆಗೆ ನಾನೇ ಹಾಲು ಕೊಡ್ತೀನಿ. ನನ್ನ ಎರಡು ಹಸಗಳೂ ಕರು ಹಾಕಿವೆ. ಒಳ್ಳೇ ಹಾಲು ಸಿಕ್ತಾ ಇದೆ. ಪ್ಯಾಕೇಟ್ ಹಾಲು ಬದಲು ಈ ಹಾಲೇ ತೊಗೊಳ್ಳಿ'' ಅಂತ ಬಾಣ ಬಿಟ್ಟ.

''ಅಲ್ಲಪ್ಪ, ಈಗ ತಾನೇ ತೊಗೋತಿರೋ ಹಾಲನ್ನೇ ಅರ್ಧಕ್ಕೆ ಇಳಿಸೋಣ ಅಂತ ಇದ್ದೆ. ಒಳ್ಳೆ ಸಮಯಕ್ಕೆ ಬಂದೆ ನೀನು!'' ಅಂತ ಅಮ್ಮಾವರು ನಕ್ಕಿದ್ರು.

''ಹಾಲು ಬಗ್ಗೆ ಹೀಗೆ ಯೋಚನೆ ಮಾಡಿದ್ರೆ ಹೇಗಮ್ಮಾ? ನೀವೂ, ನಿಮ್ಮ ಯಜಮಾನ್ರೂ ದಿನಕ್ಕೆ ಒಂದು ದೊಡ್ಡ ಲೋಟದಲ್ಲಿ ಕುಡಿದರೆ, ಕಲ್ಗುಂಡು ತರಹಾ ಆಗ್ತೀರಿ. ಗ್ಯಾರಂಟಿ'' ಅಂತ ಅಂದ ಗಂಗಣ್ಣ.

ಇದನ್ನು ಕೇಳಿಸಿಕೊಂಡ ಶ್ರೀಪಾದರಾಯರು ಗಾಭರಿಯಿಂದ ಕುರ್ಚಿಯಿಂದ ಬಿದ್ದೇ ಬಿಟ್ಟರು. ''ದೇವರೇ, ಈಗ ಈ ವಿಶಾಲೂ ಗುಂಡ್ಕಲ್ ಅಲ್ಲದೆ ಇನ್ನ್ಹೇಗಿದಾಳಪ್ಪಾ?'' ಅಂತ ಯೋಚನೆಗೆ ಇಳಿದ್ರು.

''ಗಂಡ ಹೆಂಡ್ತಿ ಆರೋಗ್ಯವಾಗಿ ನೋಡೋಕ್ಕೆ ಲಕ್ಷಣವಾಗಿ ಕಾಣಿಸ್ತೀರಮ್ಮಾ. ನೀವಿಬ್ಬರೂ ಹಾಲು ಕುಡಿಲೇಬೇಕು'' ಅಂತ ಗಂಗಣ್ಣ ಮುಂದುವರಿಸಿದ.

''ಅಯ್ಯೋ, ನಾನ್ಹೇಗೆ ಕಾಣಿಸಿದ್ರೂ ನನ್ನನ್ನ ಈ ವಯಸ್ಸಿನಲ್ಲಿ ಮೆಚ್ಚಿಕೊಳ್ಳೋರು ಯಾರಿದಾರೆ ಗಂಗಣ್ಣ?'' ಅಂತ ರಾಯರ ಕಡೆ ನೋಡುತ್ತಾ ಅಮ್ಮಾವರು ಹೇಳಿದರು.

''ಏ! ನಿಮ್ಮ ಯಜಮಾನ್ರಿಗೆ ಸಂತೋಷ ಆಗಲ್ವಾ ಅಮ್ಮಾ? ನಮ್ಮನೇಲಿ ಹಸು ಹಾಲು ಕುಡಿದೂ ಕುಡಿದೂ ನನ್ನ ಹೆಂಡ್ತೀನೂ ಈಚೀಚೆಗೆ ಬೆಳ್ಳಗೆ ಕಾಣ್ತಾ ಇದಾಳೆ'' ಅಂತ ನಕ್ಕ ಗಂಗಣ್ಣ.

ರಾಯರು ಗಂಗಣ್ಣನ ಹೆಂಡ್ತೀನಾ ನೋಡಿದ್ರು. ಹಾಗಾಗಿ ಅವಳ ಬಣ್ಣದ ಬಗ್ಗೆ ಸ್ವಂತ ಅರಿವಿತ್ತು. ಇವಳಿಗೂ ಹಾಲು ಕುಡಿದು ಬೆಳ್ಳಗಾಗೋ ಸೈಂಟಿಫಿಕ್ ಪಾಸಿಬಿಲಿಟಿ ನಿಜವಾಗ್ಲೂ ಇದ್ಯೆ? ಅಂತ ಆಶ್ಚರ್ಯಪಟ್ಕೊಂಡ್ರು.

''ಅಷ್ಟೇ ಅಲ್ರಮ್ಮ, ನಮ್ಮ ಹಸು ಹಾಲಿನಲ್ಲಿ ಸಿಗೋ ಕಲ್ಮಶ ಸರ್ಕಾರಿ ಹಾಲಿನಲ್ಲಿ ಸಿಕ್ಕೋಲ್ಲ!'' ಅಂತ ಗಂಗಣ್ಣ ಇನ್ನೊಂದು ಅಸ್ತ್ರ ಒಗೆದ.

''ಕಲ್ಮಶ! ಏನ್ ಹೇಳ್ತಿದೀ ನೀನೂ..?'' ಅಂತ ಅಮ್ಮಾವ್ರು ಬೆಚ್ಚಿ ಬಿದ್ರು.

ರಾಯರು ಕೆಲವು ವಿಷಯಗಳಲ್ಲಿ ಸ್ಮಾರ್ಟು. ''ಅಯ್ಯೋ, ಅದು ಕಲ್ಮಶ ಅಲ್ವೆ. ಅವನು ಹೇಳೋದು ಕ್ಯಾಲ್ಷಿಯಂ ಇರಬೇಕು'' ಅಂತ ವಿವರಣೆ ಕೊಟ್ಟರು.

''ಓ ಅದೇ? ಅದಕ್ಕೆ ನಾನೂ ದಿನಾನೂ ಒಂದೊಂದು ಮಾತ್ರೆ ತೊಗೋತೀನಿ ಗಂಗಣ್ಣ'' ಅಂತ ಅಮ್ಮಾವರು ವಾದ ಇಟ್ರು. ಗಂಗಣ್ಣ ಒಳ್ಳೇ ಹೋಂ ವರ್ಕ್ ಮಾಡಿದ್ದ. ''ಏನಮ್ಮಾ ನೀವು ಹೇಳೋದು? ಪಾತ್ರೇಲಿ ಸಿಗೋದು ಮಾತ್ರೇಲಿ ಸಿಗುತ್ತೆ? ಕುಡಿದು ನೋಡಿ. ಹದಿನೈದು ದಿನಗಳಲ್ಲಿ ನಿಮ್ಮ ಮೂಳೆಗಳು ಹೇಗೆ ಗಟ್ಟಿ ಆಗುತ್ವೆ ನೋಡಿ'' ಅಂತ ಅಂದ.

ರಾಯರಿಗೆ ಯಾವ ಹಾರ್ಟ್ ಪ್ರಾಬ್ಲಮ್ ಇಲ್ಲದಿದ್ದರೂ ಯಾಕೋ ಎದೆ ಧಸಕ್ಕೆಂತು. ಈಗ ಇರೋದಿಕ್ಕಿಂತಲೂ ಇನ್ನೂ ಗಟ್ಟಿಮುಟ್ಟಾಗಿರೋ ವಿಶಾಲು ಭಾವಚಿತ್ರವನ್ನು ಅವರು ಊಹಿಸಿಕೊಂಡು ನಡುಗಿದರು.

''ಅಷ್ಟೇ ಅಲ್ಲಮ್ಮಾ, ಪ್ಯಾಕೇಟ್‌ಗಳಲ್ಲಿ ಅಳತೆ ಸರಿಯಾಗಿದೆಯಾ ಅಂತ ನೀವು ಯಾವತ್ತಾದರೂ ನೋಡಿದೀರಾ? ನೋಡೋಕ್ಕಾಗುತ್ಯೆ? ಅದೇ ನೋಡಿ, ನಾನಾದ್ರೆ ನಿಮಗೆ ಅಳತೆ ಮೇಲೆ ಕೊಸರೂ ಹಾಕಲ್ವಾ?'' ಅಂತ ಇನ್ನೊಂದು ಬಾಂಬ್ ಸ್ಫೋಟಿಸಿದ.

ರಾಯರು ಸ್ವಗತದಲ್ಲಿ ''ಕೋಸೆರೋ, ಪಸರೋ, ಒಟ್ಟಿನಲ್ಲಿ ಇವತ್ತು ಇವನು ನಮ್ಮ ತಲೆಯ ಮೇಲೆ ಕೆಸರು ಹಾಕೊಕ್ಕೆ ಬಂದೀದಾನೆ'' ಅಂತ ಹೇಳ್ಕೊಂಡ್ರು.

ಅಷ್ಟರಲ್ಲಿ ಅಮ್ಮಾವ್ರ ಎಕ್ಸೈಟ್‌ಮೆಂಟ್ ಲೆವೆಲ್ ಮೇಲಕ್ಕೇರಿತ್ತು. ''ನೋಡ್ರೀ, ಗಂಗಣ್ಣ ಹೇಳಿದ್ದು ಕೇಳಿಸ್ತೇ? ಅಳತೆ ಮೇಲೆ ಕೊಸರೂ ಹಾಕ್ತಾನಂತೆ! ಈಗಿನ ಕಾಲದಲ್ಲಿ ಇದೂ ಉಂಟೆ?'' ಅಂತ ಆಶ್ಚರ್ಯದಿಂದ ರಾಯರನ್ನು ಕೇಳಿದರು. ರಾಯರು ಮತ್ತೊಮ್ಮೆ

ಸ್ವಗತದಲ್ಲಿ ''ಹಾಕ್ತಾನೆ ಕೊಸರು. ನಲ್ಲೀಲಿ ನೀರು ಬರೋತನಕ!'' ಅಂತ ಅಂದ್ಕೊಂಡ್ರು. ನ್ಯಾಚುರಲಿ, ಇದು ಅಮ್ಮಾವರಿಗೆ ಕೇಳಿಸದಿದ್ರೂ ಗಂಗಣ್ಣನಿಗೆ ಟೆಲಿಪತಿ ಮೂಲಕ ಅರ್ಥವಾಯ್ತು.

''ನಾವು ಹಾಲಿಗೆ ನೀರೋ ಗೀರೋ ಸೇರಿಸೋದಿಲ್ಲಮ್ಮಾ. ಈಚೀಚೆಗೆ ಟ್ಯಾಂಕರ್ ನೀರೂ ಹಾಲಿಗಿಂತ ಬೆಲೆ ಜಾಸ್ತಿ. ನಮ್ಮಂತಹ ಬಡವರಿಗೆ ನೀರು ಎಲ್ಲಿ ಸಿಗುತ್ತೆ ಹೇಳಿ?'' ಅಂತ ಕ್ಷಿಪಣಿ ಹಾರಿಸ್ದ.

''ಆದರೂ ಗಂಗಣ್ಣ, ಸರ್ಕಾರಿ ಹಾಲೇ ಅಭ್ಯಾಸ ಆಗ್ಬಿಟ್ಟಿದೆ. ಬದಲಾಯಿಸೋದಕ್ಕೆ ಯಾಕೋ ಬೇಜಾರಾಗುತ್ತಪ್ಪ'' ಅಂತ ವಿಶಾಲಾಕ್ಷಮ್ಮ ಸಂಕಟದಲ್ಲೇ ಹೇಳಿದರು. ''ಅಯ್ಯೋ, ಹಾಗೆ ಹೇಳಿದ್ರೆ ಹೇಗಮ್ಮಾ? ಜೀವನದಲ್ಲಿ ಬದಲಾವಣೆ ಬೇಡವಾ? ಅದ್ಕೇ ನಾನು ಎಮ್ಮೆ ಬದಲು ಹಸು ಕಟ್ಕೊಂಡೆ. ಎರಡನೇ ಮದುವೇನೂ ಮಾಡ್ಕೊಂಡೆ!'' ಅಂತ ಅಂದ ಗಂಗಣ್ಣ.

ಮತ್ತೊಮ್ಮೆ ರಾಯರ ಹಾರ್ಟು ದಬ್ ದಬ್ ಅನ್ನೋ ಬದಲು ದಭಾ ದಭ್ ಅಂತ ಹೊಡೀತು. ವಿಶಾಲಾಕ್ಷಿ ಈ ಲೇಟೆಸ್ಟ್ ಐಡಿಯಾನ ಸೀರಿಯಸ್ಸಾಗಿ ತೊಗೊಳಲ್ಲ; ಅವಳನ್ನ ಎರಡನೇ ಮದುವೆ ಆಗೋಕ್ಕೆ ದೇವರಿಗೆ ಯಾರನ್ನೂ ಸೃಷ್ಟಿಸೋದು ಸಾಧ್ಯವಿಲ್ಲ ಅಂತ ತಕ್ಷಣ ಸಮಾಧಾನ ಪಟ್ಕೊಂಡ್ರು.

''ಹಾಗಾದ್ರೆ ಏನಂತೀರಮ್ಮಾ? ನಾಳೆಯಿಂದ ಹಸು ಹಾಲು ವರ್ತನೆ ಶುರುಮಾಡಲೇ?'' ಅಂತ ಕೇಳಿದ ಗಂಗಣ್ಣ.

''ನೀವೇನಂತೀರಿ?'' ಅಂತ ಅಮ್ಮಾವರು ರಾಯರ ಕಡೆ ತಿರುಗಿ ಕೇಳಿದರು.

''ನಾನೇನು ಅನ್ನೋದು? ನೀನುಂಟು, ನಿನ್ನ ಕಲ್ಮಶ ಉಂಟು. ಏನಾದರೂ ಮಾಡ್ಕೋ. ಅಂದ್ಹಾಗೆ ಬೆಲೆ ಏನು ಕೇಳು'' ಅಂತ ರಾಯರು ಪ್ರತಿಕ್ರಿಯಿಸಿದರು.

''ನೀರಿನ ಬೆಲೆ ಎಲ್ಲಾ ಜಾಸ್ತಿಯಾಗಿದೆಯಮ್ಮ. ಸರ್ಕಾರಿ ಬೆಲೆಗಿಂತ ಲೀಟರ್‌ಗೆ ಒಂದು ರೂಪಾಯಿ ಜಾಸ್ತಿ'' ಅಂತ ರಾಗ ಎಳೆದ ಗಂಗಣ್ಣ.

''ಅಲ್ಲ ಗಂಗಣ್ಣ, ಈಗ ತಾನೇ ಹಾಲಿಗೆ ನೀರು ಬೆರಸಲ್ಲಾ ಅಂದೆ?'' ಅಂತ ಅಮ್ಮಾವರು ಎಚ್ಚೆತ್ಕೊಂಡು ಕೇಳಿದ್ರು.

''ಅಯ್ಯೋ ಅದು ನಿಜಾಮ್ಮ. ಆದರೆ ಹಸೂಗೆ ನೀರು ಕುಡಿಸದೇ ಹಾಲು ಕೊಡುತ್ವೇ?'' ಅಂತ ಕೇಳಿದ ಭೂಪ.

''ಸರಿ, ದಿನಕ್ಕೊಂಡು ಲೀಟರ್ ಕೊಟ್ಟು ಹೋಗು'' ಅಂತ ಅಮ್ಮಾವರು ಒಪ್ಪಿಬಿಟ್ರು.

''ಎರಡೆರಡು ಲೀಟರ್ ಮಾಡ್ಕೊಳ್ಳಿಮ್ಮ. ಆರೋಗ್ಯ ಮುಖ್ಯ. ಅದೆಲ್ಲೋ ಹೊರದೇಶದಲ್ಲಿ ಕಲ್ಪತ್ರಮ್ಮನವರು ಹಾಲಿನಲ್ಲೇ ಸ್ನಾನ ಮಾಡ್ತಿದ್ರಂತೆ. ಪ್ರಪಂಚದಲ್ಲಿ ಅವರಿಗಿಂತ ಹೆಚ್ಚು ಸುಂದರೀನೇ ಇರಲಿಲ್ಲವಂತೆ'' ಅಂತ ಇನ್ನೊಂದು ವರಸೆ ಹಾಕಿದ ಗಂಗಣ್ಣ.

''ಅವಳ್ಯಾರ್ರೀ ಕಲ್ಪತ್ರಮ್ಮ?'' ಅಂತ ಅಮ್ಮಾವ್ರು, ರಾಯರ ಕಡೆ ತಿರುಗಿ ಕೇಳಿದ್ರು.

''ಕ್ಲಿಯೋಪಾತ್ರ ಇರ್ಬೇಕು ಕಣೆ'' ಅಂತ ರಾಯರು ಹೇಳಿದರು. ಕ್ಲಿಯೋಪಾತ್ರ ಸೌಂದರ್ಯವನ್ನು ಯಾವುದೋ ತಮಿಳುನಾಡಿನ ತೆಂಕಾಶಿ ಕ್ಯಾಲೆಂಡರ್‌ನಲ್ಲಿ ನೋಡಿದ್ದ ವಿಶಾಲಾಕ್ಷಮ್ಮನವರು ಖುಷಿಯಾಗಿ ''ಸರಿ, ಹಾಗೇ ಮಾಡಪ್ಪಾ, ದಿನಕ್ಕೆ ಎರಡು ಲೀಟರ್ ಕೊಟ್ಟು ಹೋಗು'' ಅಂತ ಗಂಗಣ್ಣನಿಗೆ ಕೊನೇದಾಗಿ ಹೇಳೇಬಿಟ್ರು. ಗಂಗಣ್ಣ ತನಗೆ ಮೂರನೇ ಮದುವೆ ಇತ್ಯರ್ಥವಾಯ್ತೇನೋ ಅನ್ನೋ ಅಷ್ಟು ಸಂತೋಷದಿಂದ ಅಲ್ಲಿಂದ ತಟ್ಟನೇ ಮಾಯವಾದ.

ಈಗ ಆರು ತಿಂಗಳುಗಳಿಂದ ಗಂಗಣ್ಣನ ಮನೆಯ ಹಸು ಹಾಲನ್ನೇ ಅಮ್ಮಾವ್ರು ಉಪಯೋಗಿಸ್ತಿರೋದು. ಆದರೆ ಇದರಿಂದಾಗಿ ವಿಶಾಲಾಕ್ಷಮ್ಮನವರ ಬಣ್ಣ ಇನ್ನಷ್ಟು ಬೆಳ್ಳಗಾಗಿದ್ಯೋ ಅಥವಾ ಅವರ ಮೂಳೆಗಳು ಇನ್ನಷ್ಟು ಗಟ್ಟಿಯಾಗಿದ್ಯೋ ಎಂಬ ಪ್ರಶ್ನೆಗಳಿಗೆ ಉತ್ತರಗಳಂತು ಮಾತ್ರ ಫ್ಯಾಮಿಲಿ ಸೀಕ್ರೇಟ್ ಆಗಿ ಉಳಿದಿವೆ. ರಾಯರ ಮುಖದಲ್ಲಿ ಮಾತ್ರ ಮುಂಚೆ ಇದ್ದ ಕಳೆ ಸ್ವಲ್ಪ ಕಮ್ಮಿಯಾಗಿದೆ ಅಂತ ಅಂದರೆ ಉತ್ಪ್ರೇಕ್ಷೆಯಾಗಲಾರದು. ಆದರೂ ಒಂದೊಂದು ಸಲ, ಮೂಡಿನಲ್ಲಿದ್ದಾಗ, ತಮ್ಮ ಹೆಂಡತಿಯನ್ನು ''ಹಾಲಮ್ಮ'' ಅಂತ ಕರೀತಾರೆ. ಇದು ಮೆಚ್ಚುಗೆ ಇಂದಲೋ ರೊಚ್ಚಿಂದಲೋ ಯಾರಿಗೂ ಗೊತ್ತಿಲ್ಲ.

ಕಮಿಂಗ್ ಟು ದಿ ಪಾಯಿಂಟ್, ಹಾಲ್ಮಾರೋಕ್ಕೆ ಎಂ.ಬಿ.ಎ. ಬೇಕೆ?

---

## ಯಾರು ಸುಳ್ಳರು

ಕಳ್ಳನೊಬ್ಬನನ್ನ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದರು.

ಮನೇಲಿ ಇರೋದು ನಾನು ನನ್ನ ಹೆಂಡ್ತಿ, ಒಂದು ಸಣ್ಣ ಮಗು. ನಾನಿಲ್ದೇ ಇದ್ರೆ ಅವಳಿಗೆ ತಾಪತ್ರಯ ನನ್ನನ್ನ ಬಿಟ್ಬಿಡಿ ಇನ್ನೊಂದ್ಸಾರಿ ಕಳ್ಳತನ ಮಾಡಲ್ಲ ಅಂತ ಬೇಡಿದ.

ಅದಕ್ಕೆ ನ್ಯಾಯಾಧೀಶರು ನೀನು ನಿನ್ನ ಹೆಂಡ್ತಿನ ಸಿಕ್ಕಾಪಟ್ಟೆ ಹೊಡೀತೀಯಂತೆ, ಗೋಳು ಹುಯ್ಕೊಳ್ತೀಯಂತೆ ಅದಕ್ಕೆ ನಿನಗೆ ಒಂದು ವರ್ಷ ಜೈಲು ಶಿಕ್ಷೆ ಕೊಡಿ ಅಂತ ನಿನ್ನ ಹೆಂಡ್ತಿನೇ ಹೇಳಿದಾಳೆ ಅಂದರು.

ಅದಕ್ಕೆ ಕಳ್ಳ ಸಿಕ್ಕಾಪಟ್ಟೆ ನಕ್ಕ. ಯಾಕಯ್ಯ ನಗ್ತೀಯ ಅಂದ್ರೆ, ನಾನು ಸುಳ್ಳು ಹೇಳ್ತಿನಿ ಅಂದ್ರೆ ನೀವು ನಮ್ಮಪ್ಪನಂಗೆ ಸುಳ್ಳು ಹೇಳ್ತೀರ ಅಂದ.

ನಾನೆಲ್ಲಯ್ಯ ಸುಳ್ಳು ಹೇಳ್ದೆ ಅಂತ ನ್ಯಾಯಾಧೀಶರು ಕೇಳಿದರೆ ಕಳ್ಳ ಹೇಳಿದ ನನಗೆ ಮದುವೆನೇ ಆಗಿಲ್ಲ ಅಂತ.

**- ಸುಕೇಶವ**



# ಸಿದ್ಧತೆ

✿ ಸೂರಿ ಹಾರ್ದಳ್ಳಿ

**ಖಂ**ಡಿತಾ ನೀವು ನನ್ನನ್ನು ಮರೆತಿರುತ್ತೀರಿ. ಅದಕ್ಕೇ ಹೇಳುವುದು, ಮರೆವು ವರ ಅಂತ. ಆಗಾಗ ನನ್ನ ಹೆಸರು ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರೆ ನೀವು ನನ್ನ ಮೇಲಿನ ದ್ವೇಷವನ್ನು ಮರೆಯುವುದಿಲ್ಲ ಎಂದುಕೊಂಡು ನಾನು ತುಂಬಾ ಕಾಲ ಭೂಗತನಾಗಿಯೇ ಉಳಿದಿದ್ದು. ಆದರೆ ಈ ಪ್ರಚಾರದ ಗೀಳಿಗೆ ಅಂಟಿಕೊಳ್ಳುವುದಿದೆಯಲ್ಲ, ಅದರಿಂದ ಹೊರಬರುವುದು ಸಾಧ್ಯವಿಲ್ಲ ಎಂಬುದು ನನಗೆ ಈಗ ತಿಳಿವಾಗಿದೆ. ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ ಎಂಬ ಮಾತಿನಂತೆ ಕೆಟ್ಟವನಾದರೂ ಪರವಾಗಿಲ್ಲ, ಹೆಸರು ಪಡೆಯಬೇಕು, ಎಲ್ಲರೆದುರು ಕಾಣಿಸಿಕೊಳ್ಳಬೇಕು ಎಂದುಕೊಂಡಿದ್ದೇನೆ.

ಹಾಗಂತ ನಾನು ಐದು ವರ್ಷಗಳಿಗೊಮ್ಮೆ ನಿಮಗೆ ವದನಾರವಿಂದ ದರ್ಶನ ಮಾಡಿಸುವ ರಾಜಕಾರಣಿಗಳ ಹಾಗೆ ಎಂದುಕೊಳ್ಳಬೇಡಿ. ಅರವಿಂದ ಬೆಳೆಯುವುದು ಕೆಸರಿನಲ್ಲಿ. ರಾಜಕೀಯ ಎಂಬುದು ಒಂದು ಕೆಸರು, ಕೊಚ್ಚೆ. ರಾಜಕಾರಣಿಗಳು ಅಲ್ಲಿಯೇ ಇದ್ದುದರಿಂದ ತಮ್ಮ ಮುಖವು ಕಮಲ ಎಂದುಕೊಂಡಿದ್ದಾರೆ. ಆದರೆ ನಾನು ಅವರ ಹಾಗಲ್ಲ, ಮರ್ಯಾದಸ್ತ, ಸಿಕ್ಕಾಪಟ್ಟೆ.

ಮರ್ಯಾದೆಯನ್ನು ಅಳೆಯಲು ಸಾಧ್ಯವಿಲ್ಲ. ನಮ್ಮ ಮೀಟರ್ ಪಟ್ಟಿಗಳು, ಲೀಟರ್ ಪಾತ್ರೆಗಳು, ತಕ್ಕಡಿ ತೂಗುಕಲ್ಲುಗಳು ಮರ್ಯಾದೆಯನ್ನು ಅಳೆಯಲಾರವು. ನೀವು ರಸ್ತೆಯಲ್ಲಿ ಹೋಗುತ್ತಿದ್ದರೆ ಕೆಲವರು ಮುಗುಳ್ನಗೆ ವಿನಿಮಯ ಮಾಡಿದರೆ, ನಮಸ್ಕರಿಸಿದರೆ, ಹಲೋ ಎಂದರೆ ನಿಮಗೊಂದಿಷ್ಟು ಮರ್ಯಾದೆ ಇದೆ ಎಂದು ತಿಳಿದುಕೊಳ್ಳಬೇಕು. ಕಂಡರೂ ಕಾಣದವರಂತೆ ಹೋದರೆ ಅದು 'ಇಲ್ಲ' ಎಂಬರ್ಥ. ಹಾಗಾಗಿ ಈ ಮರ್ಯಾದೆ, ಮಾನ, ಗೌರವಗಳು ಸ್ಕೇಲಿನಿಂದ ಹೊರಕ್ಕೆ.

ಇನ್ನೂ ನಾನು ಯಾರೆಂದು ತಿಳಿಯಲಿಲ್ಲವೇ? ನನ್ನ ಪರಿಚಯ ವಿಷದವಾಗಿ ಮಾಡಬೇಕೆಂದರೆ ನಾನು ಕಾಶೀಪತಿಯ ಗೆಳೆಯ. ಕಾಶೀಪತಿ ಯಾರು ಎನ್ನುವಿರಾ? ನಿಮ್ಮ ನೆನಪಿಗಷ್ಟು ಬೆಂಕಿಹಾಕ... ಕಾಶೀಪತಿ ಮಾದೇವಿಯ ಪತಿ. ಮಾದೇವಿ ಚೆನ್ನಾಗಿ ನಗುತ್ತಾಳೆ, ನಕ್ಕಾಗೆಲ್ಲಾ ಮಲ್ಲಿಗೆ ಅರಳಿದಂತಾಗುತ್ತದೆ ಮತ್ತು ಅವಳು ರುಚಿಕಟ್ಟಾದ ಕಾಫಿ ಮಾಡುತ್ತಾಳೆ. ಸುಂದರವಾಗಿ ಬಟ್ಟೆ ತೊಡುತ್ತಾಳೆ. ಅವಳೆಂದರೆ ನನ್ನಾಕೆಗೆ ಅಷ್ಟಕ್ಕಷ್ಟೆ

ನನ್ನ ವಿಷಯ ಈಗ ಆಮೂಲಾಗ್ರವಾಗಿ ತಿಳಿಯಿತಲ್ಲ? ಇದಕ್ಕಿಂತ ಹೆಚ್ಚಿಗೆ ಹೇಳಲು ಏನೂ ಇಲ್ಲ.

ನಮ್ಮ ಹೊಸ ಬಾಸು, ಅಂದರೆ ಕಚೇರಿಯ ಬಾಸು, ಮಾತಾಡುವಾಗೆಲ್ಲ ನಿಮಿಷಕ್ಕೆ ಹತ್ತು ಬಾರಿ ಸ್ಟ್ರಾಟೆಜಿ ಎಂಬ ಪದ ಬಳಸುತ್ತಾನೆ. ನಮ್ಮ ಕೌಶಲ್ಯಗಳನ್ನು, ದೃಷ್ಟಿಕೋನಗಳನ್ನು (ಕೋಣಗಳನ್ನು) ಬದಲಾಯಿಸಿಕೊಳ್ಳಬೇಕೆಂಬುದು ಅವನ ವಾದ. ಹಾಗಾಗಿ ನಾನೂ ನನ್ನ ಅಭಿಪ್ರಾಯಗಳನ್ನು ಮಾರ್ಪಡಿಸಿಕೊಳ್ಳುತ್ತಿದ್ದೇನೆ. ಉದಾಹರಣೆಗೆ ನಮ್ಮ ಮನೆಯೆದುರು ಒಣ ಹಾಕಿದ ಹಳೆಯ, ಹರಿದ ಬನಿಯನ್ನೊಂದು ಮೊನ್ನೆ ಕಳವಾಯಿತು. ನಾನು ಬನಿಯನ್ ಕಳೆದದ್ದಕ್ಕಾಗಿ ಶೋಕಿಸಲಿಲ್ಲ; ಬದಲಿಗೆ 'ಎಂತಹ ಬಡತನ ದೇಶದಲ್ಲಿದೆ. ಹರಿದ ಬನಿಯನ್ನುಗಳನ್ನೂ ಕದಿಯುವ ದುರ್ದೆಶೆ ನಮ್ಮ ದೇಶದ ನಾಗರಿಕರಿಗೆ ಬಂದಿದೆ ಎಂದರೆ ಶೋಚನೀಯ' ಎಂದೇ ವಾದಿಸಿ ಹೆಂಡತಿಯಿಂದ ಬೈಸಿಕೊಂಡಿದ್ದೆ. ನನಗೆ ಬನಿಯನ್ ಕಳೆದುದರ ಬಗ್ಗೆ ಇರುವ ಬೇಸರಕ್ಕಿಂತ ಅದನ್ನು ಕಷ್ಟಪಟ್ಟು ಒಗೆದ ನಂತರ ಆದ ಕಳ್ಳತನದ ಬಗ್ಗೆ ಹೆಂಡತಿಗೆ ಸಿಟ್ಟಿತ್ತು. ಅದು ಅವಳ ಸ್ಟ್ರಾಟೆಜಿ.

ಕಾರಿನ ಬೆಲೆ ಕಡಿಮೆಯಾಗಿದೆ, ಕಂಪ್ಯೂಟರ್, ಟಿವಿ, ಫ್ರಿಜ್‌ಗಳ ದರ ದಿನೇ ದಿನೇ ಇಳಿಯುತ್ತಿದೆ. ಬೆಂಗಳೂರಿನಲ್ಲಿ ಹೊಸ ವಿಮಾನ ನಿಲ್ದಾಣ ಆಗುತ್ತಿದೆ. ಬೆಂಗಳೂರಿನ ರಸ್ತೆಗಳಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಆಗುತ್ತಿದೆ. ಮಂತ್ರಿಗಳು, ಐ.ಎ.ಎಸ್. ಅಧಿಕಾರಿಗಳು ಕೋಟಿಗಟ್ಟಲೆ ಹಣ ಸಂಪಾದಿಸುತ್ತಿದ್ದಾರೆ. ಹಾಗಿದ್ದೂ ಹರಿದ ಬನಿಯನ್, ಅದೂ ನನ್ನದು, ಕದಿಯುವ ಪರಿಸ್ಥಿತಿಯ ಜನ ಇಲ್ಲಿ ಇದ್ದಾರೆ ಎಂದರೆ ಅದು ದೇಶಕ್ಕೆ ಒಳ್ಳೆಯದನ್ನು ತರುವ ಸೂಚನೆಯಲ್ಲ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಶೋಭೆ ತರುವಂತಹದ್ದೂ ಅಲ್ಲ.

ನನಗೆ ಸಮಾಜವಾದದ ಗುಂಗು ತಲೆಗೇರಿದೆ. ತಿಂಡಿ ತಿನ್ನಲು ಹೋಟೆಲಿಗೆ ಹೋದರೆ ಒಂದೇ ಹೋಟೆಲಿನಲ್ಲಿ ತಿನ್ನುವುದಿಲ್ಲ. ಒಂದರಲ್ಲಿ ಇಡ್ಲಿ, ಇನ್ನೊಂದರಲ್ಲಿ ವಡೆ ತಿನ್ನುತ್ತೇನೆ ಮತ್ತು ಮತ್ತೊಂದು ಹೋಟೆಲಿನಲ್ಲಿ ಕಾಫಿ ಕುಡಿಯುತ್ತೇನೆ. ಪಾಪ, ಆ ಹೋಟೆಲಿಗರು ಎಷ್ಟೊಂದು ಖರ್ಚು ಮಾಡಿ ಹೋಟೆಲ್ ತೆರೆದಿದ್ದಾರೆ. ಒಂದರಲ್ಲಿಯೇ ವ್ಯಾಪಾರ ಮಾಡಿದರೆ ಇತರ ಹೋಟೆಲಿನವರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ ಎಂಬುದು ನನ್ನ ಸ್ಟ್ರಾಟೆಜಿ, ಇರಲಿ. ಹಾಗೆಯೇ ಟಿವಿಗಳಲ್ಲಿ ಬರುವ ಜಾಹೀರಾತುಗಳನ್ನು ನೋಡುವುದರಲ್ಲಿ ಕೂಡಾ. ಯಾರಿಗೂ ಅನ್ಯಾಯವಾಗದಂತೆ, ಪೂರ್ವಾಗ್ರಹ ಪೀಡಿತನಾಗದೇ ಆದಷ್ಟು ಹೆಚ್ಚು ಜಾಹೀರಾತುಗಳನ್ನು ನೋಡಲು ಪ್ರಯತ್ನಿಸುತ್ತೇನೆ. ನಾವು ನೋಡಬೇಕೆಂದೇ ತಾನೇ ಅವರು ಅಷ್ಟೊಂದು ಹಣ ಖರ್ಚು ಮಾಡಿ ಜಾಹೀರಾತು ಪ್ರಸಾರಿಸೋದು? ಪ್ರತೀ ಬಾರಿಯೂ ಹೆಂಡತಿಯ ಮುಖ ನೋಡುತ್ತಲೇ ಇರೋಲ್ಲ, ರಸ್ತೆಯಲ್ಲಿ ಹೋಗುವವರ ಸೌಂದರ್ಯ ಆಸ್ವಾದಿಸುತ್ತೇನೆ. ಆ ಹೆಣ್ಣುಗಳು ದುಬಾರಿ ಬೆಲೆಯ ದಿರಿಸು ತೊಟ್ಟು ಹೋಗುವುದು ಎಲ್ಲರೂ ಕಾಣಲಿ ಎಂದು ತಾನೇ?

ಈಗ ನಮ್ಮ ಕಾಶೀಪತಿಯ ಬಗ್ಗೆ ಬರೋಣ. ಅಂದು ಸಂಜೆ ಅವನ ಮನೆಗೆ ಹೋಗಿದ್ದೆ. ಕತ್ತೆ ತಪ್ಪಿಸಿಕೊಂಡರೆ ಹಾಳುಗೋಡೆಯ ಹಿಂದೆ ಇರುತ್ತದೆ ಎಂದು ನನ್ನ ಹೆಂಡತಿ ಆಗಾಗ

ಹೇಳುತ್ತಾಳೆ. ಅಂದರೆ ನಾನು ಮನೆಯಲ್ಲಿ, ಕಚೇರಿಯಲ್ಲಿ ಇಲ್ಲ ಎಂದರೆ ಕಾಶೀಪತಿಯ ಮನೆಯಲ್ಲಿ ಇದ್ದೇನೆ ಎಂದೇ ಅವಳ ಅಂಬೋಣ. ನನಗೂ ಒಂದು ಥರ ಒಳ್ಳೆಯದೇ ಇದರಿಂದ. ಅವಳನ್ನು ಸುಲಭವಾಗಿ ಮೋಸಗೊಳಿಸಬಹುದು!

ಕಾಶಿ, ಅವನ ಹೆಂಡತಿ ಇಬ್ಬರೂ ಸೇರಿಕೊಂಡು ಅವರ ಮಗ ರಾಜುವನ್ನು ತಯಾರು ಮಾಡುತ್ತಿದ್ದರು ಪುಸ್ತಕಗಳಿರುವ ಚೀಲ ಹೆಗಲಿಗೇರಿಸಿದರು, ಪೆನ್ನು ಸರಿಯಾಗಿ ಬರೆಯುತ್ತಿದೆ ಎಂದು ಖಾತರಿ ಪಡಿಸಿಕೊಂಡರು. ಪರೀಕ್ಷೆಯಲ್ಲಿ ಹೇಗೆ ಹೇಗೆ ಬರೆಯಬೇಕು ಎಂಬುದನ್ನು ವಿವರಿಸಿದರು. ಅಪ್ಪ ಅಮ್ಮರಾಗಿ ಹುಟ್ಟಿದ ಮೇಲೆ ಇದನ್ನೆಲ್ಲಾ ಮಾಡಬೇಕಾದುದು ಅವರ ಕರ್ಮ ಎನ್ನುವವನಂತೆ ನಿರ್ಲಿಪ್ತನಾಗಿ ನಿಂತಿದ್ದ ರಾಜು.

ಈಗಿನ ಮಕ್ಕಳಿಗೆ ಹೆತ್ತವರ ಬಗ್ಗೆ ಗೌರವವಿರೋಲ್ಲ, ನನ್ನ ಕುಟುಂಬದಲ್ಲಿ ಇವರು ಯಾಕೆ ಹುಟ್ಟಿದರೋ, ಎಂದು ಕರುಬುತ್ತಾರೆ. ರಾಜುವುದು ಕೂಡಾ ಹಾಗೇ ಯೋಚಿಸುವ ವಯಸ್ಸು.

ಮಾದೇವಿ ಒಂದು ಬೆಡ್‌ಶೀಟನ್ನು ಚೀಲಕ್ಕೆ ತುಂಬಿದಳು. ಕುಟ್ಟವಲಕ್ಕಿಯ ಪ್ಯಾಕೆಟ್ ಒಂದನ್ನು ಅದರ ಜೊತೆಗೇ ತುರುಕಿದಳು. ಇದನ್ನೆಲ್ಲ ಕಂಡ ನನಗೆ ಇವರು ಮಗನನ್ನು ಪರೀಕ್ಷೆಗೆ ಕರೆದುಕೊಂಡು ಹೋಗುತ್ತಿದ್ದಾರೊ, ಪಿಕ್‌ನಿಕ್‌ಗೋ ತಿಳಿಯಲಿಲ್ಲ.

'ಏನೋ ಕಾಶಿ, ಎಲ್ಲಿಗೋ ಹೊರಟ ಹಾಗಿದೆ?' ಕೇಳಿದೆ.

'ಪರೀಕ್ಷೆಗೆ ರಾಜುನ ಕರೆದುಕೊಂಡು ಹೋಗಬೇಕಿದೆ' ಎಂದ.

ನಾನು ಕೇಳಿದೆ, 'ಏನೋ ಕಾಶಿ? ನಾಳೆ ಪರೀಕ್ಷೆ ಅಲ್ಲವೇನೋ? ಈಗಲೇ ಹೊರಡೋ ಸಿದ್ಧತೆ ಮಾಡಿದ ಹಾಗಿದೆ?' ಎಂದು.

'ಏಯ್, ನಿನಗೆ ಗೊತ್ತಾಗೋಲ್ಲ ಕಣೋ. ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಎಷ್ಟು ಆಗ್ತಿದೆ ಎಂದರೆ ಕೇವಲ ಎರಡು ಕಿಲೋಮೀಟರ್ ದೂರ ಇರೋ ಶಾಲೆ ಸೇರಲು ನಾಲ್ಕು-ಐದು ಗಂಟೆ ರಸ್ತೆಲೇ ಕಾದಿರಬೇಕಾದ ಸಂದರ್ಭ ಬಂದಿದೆ. ನಾಳೆ ಪರೀಕ್ಷೆ ನೋಡು, ತಡವಾದರೆ ಕಷ್ಟ, ಹಾಗಾಗಿ ತೊಂದರೆ ಆಗದಿರಲಿ ಎಂದು ಹನ್ನೆರಡು ಗಂಟೆಗಳ ಮೊದಲೇ ಹೊರಡುತ್ತಿದ್ದೇವೆ, ಎಂದ.

ಬೆಂಗಳೂರಿನ ರಸ್ತೆಗಳಲ್ಲಿ ಎಲ್ಲಿ ನೋಡಿದರಲ್ಲಿ ವಾಹನಗಳ ಸಾಲು, ಸಾಲು. ಏಕ ಮುಖ ಅಥವಾ ರಸ್ತೆ ವಿಭಜಕಗಳಿರುವಲ್ಲಿ ಒಂದು ವಾಹನ ಕೆಟ್ಟರೆ ಅಥವಾ ಅಪಘಾತವಾದರೆ ಅಥವಾ ರಸ್ತೆ ಹಾಳಾದರೆ ಅಥವಾ ಮರ-ಗಿಡ ಬಿದ್ದರೆ ಅಲ್ಲಿ ದಿನಗಟ್ಟಲೆ ಕಾಯೋ ಪರಿಸ್ಥಿತಿ ಈಗಾಗಲೇ ಬಂದಿದೆ. ಹೀಗಿರುವಾಗ, ಮುಂದೊಂದು ದಿನ ಎರಡು ದಿನಗಳ ಮೊದಲೇ ಹೊರಡಬೇಕಾಗಬಹುದು. ಎಲ್ಲಾ ಮುನ್ನೆಚ್ಚರಿಕೆ, ಎಂದ.

ಕಾಶೀಪತಿಯೂ ಸ್ಟ್ರಾಟೆಜಿ ಪದದ ಅರ್ಥ ತಿಳಿದುಕೊಂಡಿದ್ದಾನೆ.


ಮಳೆ ಸಂತ್ರಸ್ತ ಪ್ರದೇಶದಲ್ಲಿ ಸಚಿವರು
– ಭರವಸೆಗಳ ಸುರಿ'ಮಳೆ'
"ಮೊದ್ಲು ನೀರಿನ ಮಟ್ಟ
ಈ ಪ್ರಮಾಣದಲ್ಲಿ ಇರ್ಲಿಲ್ಲ..
ಈಗ ಜಾಸ್ತಿ ಆಗ್ತಿದೆ..!!"
!?



# ದೇವರು ಪ್ರತ್ಯಕ್ಷನಾದಾಗ

**ಕುಮುದಾ ದೇಶಪಾಂಡೆ**

**ನ**ನ್ನೆದುರು ಅದಾರೋ ಪ್ರತ್ಯಕ್ಷರಾದರು. ಯಾರೆಂದು ತಿಳಿಯದು. ಎಲ್ಲ ಜನರಂತೆ ಇರಲಿಲ್ಲವಾದ್ದರಿಂದ ಕೊರಳನ್ನೇ ನೋಡತೊಡಗಿದೆ. ಕಾರಣ ಈಗ ಎಲ್ಲ ಆಫೀಸಿನಲ್ಲಿ ಗುರುತಿನ ಚೀಟಿ ಕೊಟ್ಟಿರುತ್ತಾರೆ. ಅವರು ತಾವು ಯಾರೆಂದು ತಿಳಿಸಲು ಸದಾ ಕೊರಳಲ್ಲಿ ಧರಿಸಿರುತ್ತಾರೆ. ಏನೂ ಕಾಣದೆ ಕೊರಳು ಬಂಗಾರದ ಸರಗಳಿಂದ ತುಂಬಿತ್ತು. ಆಚೀಚೆ ನೋಡಿದರೆ ಎರಡು ಹೆಚ್ಚು ಕೈಗಳು. ಹಾಂ! ದೇವರೇ ಇರಬಹುದೇನೋ ಎನಿಸಿ ಕುತೂಹಲ ತಾಳಿ ತಾವು ದೇವರಲ್ಲವೆ? ಎಂದೆ. ಮುಖದಲ್ಲಿ ನಗುವರಳಿಸಿದರು. ಎಲ್ಲರೂ ನನಗಾಗಿ ಹಂಬಲಿಸುತ್ತಾರೆ. ಅಂಜುತ್ತಾರೆ. ನೀನು ಹಾಗೇ ಇರುವಿಯಲ್ಲ ಎಂದ ದೇವ. ಹೌದು ದೇವರೇ. ನೀವು ನಮ್ಮ ಈ ಜಗತ್ತನ್ನು ಹಾಗೇ ನಿರ್ಮಿಸಿರುವಿರಲ್ಲ, ಎಲ್ಲ ಅನುಭವವಿದೆ. ''ಸಂಕಟ ಬಂದಾಗ ವೆಂಕಟರಮಣ'' ಎಂದೆ. ಮತ್ತೆ ನೀನೇಕೆ ದೇವಸ್ಥಾನಕ್ಕೆ ಭೇಟಿ ಕೊಡುವುದು ನಿಲ್ಲಿಸಿದ್ದೀ ಎಂದು ದೇವ ಕೇಳಿದ. ಅದಕ್ಕೆ ನಾನು ಹೌದು ದೇವರುಗಳೆ! ನೀವು ನಮ್ಮ ಮುಖ್ಯ ಮಂತ್ರಿಗಳನ್ನೇ ಕೈಬಿಟ್ಟಿರಿ. ಇನ್ನು ನನ್ನಂಥವಳಿಗೆ ಏನು ಮಾಡುವಿರೋ ಎಂದು ನಿಲ್ಲಿಸಿದೆ. ಏ, ನಾನಿಲ್ಲಿ ಇರುವುದು ಒಬ್ಬನೆ. ನೀನು ಮಾತಿಗೊಮ್ಮೆ ದೇವರುಗಳೇ ಎನ್ನುವಿಯಲ್ಲ ಅದಕ್ಕೆ ನಾನು ಎಲ್ಲ ದೇವರುಗಳನ್ನೂ ಉದ್ದೇಶಿಸಿ ಹೇಳುತ್ತಿರುವೆ. ಅವರು ಕರ್ನಾಟಕವಷ್ಟೇ ಅಲ್ಲ ಇತರ ರಾಜ್ಯಗಳ ದೇವಸ್ಥಾನಗಳಿಗೂ ಪ್ರತಿನಿತ್ಯ ತಪ್ಪದೇ ಹೋಗಿ ಕಾಯಿ ಒಡೆಸಿ ಪೂಜೆ, ಹೋಮ, ಹವನ ಮಾಡಿಸುತ್ತಿದ್ದರು. ಇನ್ನು ನಾನು ನೆನಪಾದಾಗ, ಅನುಕೂಲವಿದ್ದಾಗ ದಾರಿಯಲ್ಲಿ ಸಿಗುವ ದೇವಸ್ಥಾನಕ್ಕೆ ಮಾತ್ರ ಹೋಗಿ ಚಿಲ್ಲರೆ ಅಭಾವವಿರುವದರಿಂದ ಹತ್ತು ರೂಪಾಯಿ ಹಾಕಿ ಕೈ ಮುಗಿದರೆ ನನ್ನ ಭಕ್ತಿ ಎಲ್ಲಿ ಮುಟ್ಟಬೇಕು. ಅನುಗ್ರಹವಾದೀತೆ ಎನಿಸಿ ಬಿಟ್ಟುಬಿಟ್ಟೆ.

ಹಾಗೇನಿಲ್ಲ, ತುಂಬಾ ಚೆನ್ನಾಗಿ ಮಾತಾಡ್ತೀಯಾ ಅಂತ ನಿಂತೀನಿ. ದೇವಲೋಕಕ್ಕೆ ಬರ್ತೀಯಾ? ದೇವ ಕೇಳಿದ. ಧೈರ್ಯ ಬಂದು ನಾನೂ ನಗುತ್ತ ಉತ್ತರಿಸಿದೆ – ಚಿಕ್ಕವಳಿದ್ದಾಗ ನೀರಿನಲ್ಲಿ ಮುಳುಗುತ್ತಿದ್ದರೂ ಉಳಿಸಿದೆ, ಮಾಳಿಗೆಯ ಮೇಲಿಂದ ಬಿದ್ದಾಗಲೂ ಏನಾಗಲಿಲ್ಲ, ಆಫೀಸಿನಲ್ಲಿ ಶೆಟರ್ಸ ಜರಿದು ಕುತ್ತಿಗೆಗೆ ಅಪ್ಪಳಿಸಲಿದ್ದರೂ ಸ್ವಲ್ಪದರಲ್ಲೇ ಪಾರಾದೆ. ಕಳೆದ ವರ್ಷ

ಜೋರಾದ ಜ್ವರ ಬಂದು ಚಿಕುನ್‌ಗುನ್ಯಾ ಆಗಿ ನರಳಿ ಉಳಿದೆ. ಮನೆಯಲ್ಲಿ ಮಳೆ ನೀರು ನಿಂತಲ್ಲಿ ಜರಿದು ಬಿದ್ದರೂ ತಲೆಗೆ ಸ್ವಲ್ಪ ಗುಮಟೆ ಅಷ್ಟೆ ಇಷ್ಟೆಲ್ಲ ಆದಾಗ ಸುಮ್ಮನಿದ್ದು ಈಗ ಗಟ್ಟಿಯಾಗಿ ಕುಳಿತವಳಿಗೆ ಸ್ವರ್ಗಕ್ಕೆ ಕರೆದರೆ ಹೇಗೆ? ಅಲ್ಲೇನಿದೆ? ಎಂದೆ. ಆಗೆಲ್ಲ ನಿನ್ನ ಪಾಳಿ ತಪ್ಪಿವೆ. ಬೇರೆಯವರು ಬರುತ್ತೇವೆಂದು ಧ್ಯಾನಿಸಿದ್ದಕ್ಕೆ ನಿನ್ನ ಬಿಟ್ಟೆವು. ಅಲ್ಲಿ ಯಾವ ತೊಂದರೆಯೂ ಇಲ್ಲ. ಬೇಕಾದ್ದು ಕೈಗೆ ಸಿಗುತ್ತದೆ. ನೀನು ಏನೂ ಮಾಡಬೇಕಿಲ್ಲ. ರಂಭೆ, ಊರ್ವಶಿ, ಮೇನಕೆ ಮೊದಲಾದವರು ದೇವಾಂಗಣದಲ್ಲಿ ನಾಟ್ಯ, ಹಾಡುಗಳಲ್ಲಿ ಎಲ್ಲರಿಗೂ ಸಂತೋಷ ನೀಡುತ್ತಾರೆ. ಆರಾಮವಾಗಿ ಕಾಲ ಕಳೆಯಬಹುದು. ದೇವರೆ ಅವರೆಲ್ಲ ಅಷ್ಟು ಸುಂದರರಾಗಿರುವಾಗ ನನ್ನಂಥ ಸಾಧಾರಣ ವ್ಯಕ್ತಿತ್ವದವಳನ್ನು, ಗಿಡ್ಡವಾಗಿರುವವಳನ್ನು ನೋಡಿ ಅವರೆಲ್ಲ ನಗಲಿಕ್ಕಿಲ್ಲವೆ? ಮಾತಾಡಿಸುವರೆ? ನನ್ನೊಡನೆ ಜಗಳವಾಡಲಿಕ್ಕಿಲ್ಲವೆ? ಸಿಟ್ಟಿನಿಂದ ಜೋರಾಗಿ ತಳ್ಳಿ ಮತ್ತೇನಾದರೂ ಮಾಡಿಕೊಂಡು ನಾನಿಲ್ಲಿಗೆ ಮರಳಲಿಕ್ಕಿಲ್ಲವೆ? ಹಾಂ! ಹಾಂ! ತಡೆ. ನೀನೇ ಎಲ್ಲ ಕಲ್ಪಿಸಿಕೊಂಡು ನಿನ್ನ ಸಾಹಿತ್ಯ ಮೆರೆಯುವಿಯಲ್ಲ. ನಿನಗೇನು ಗೊತ್ತಿದೆ. ಇಲ್ಲಿಯ ಮೊದಲಿನ ಎಲ್ಲ ಜನರೂ ಅಲ್ಲಿದ್ದಾರೆ. ಅವರಲ್ಲಿ ನೀನೂ ಒಬ್ಬಳಾಗುವೆ. ಚಿಂತಿಸುವ ಪ್ರಶ್ನೆಯೇ ಇಲ್ಲ. ನನ್ನ ಮುಖದ ನಗುವನ್ನು ಕಂಡು ಕೇಳು, ಕೇಳು ಇನ್ನೂ ಏನೋ ಕೇಳುವ ತವಕದಲ್ಲಿದ್ದೀಯಾ ಎಂದ ದೇವ. ಆಗ ಕೇಳಿದೆ – ಮತ್ತೆ ಎಲ್ಲರನ್ನೂ ಹೇಗೆ ಗುರುತು ಹಿಡಿಯುವಿರಿ. ಇಲ್ಲಿಯ ''ಆಧಾರ'' ಗುರುತಿನ ಚೀಟಿಯಂತೆ ಏನಾದರೂ ಚೀಟಿ ನಮಗೆ ಕಟ್ಟಿರ್ತೀರಾ? ಕೇಳಿದೆ. ಇಲ್ಲ, ಇಲ್ಲ, ನಮ್ಮ ಯಮಭಟರೆ ಲೆಕ್ಕ ಇಡುತ್ತಾರೆ. ಈ ಭೂಮಿಯ ಮೇಲಿನ ಜನರ ಲೆಕ್ಕ ಇಡಲು ನಿಮ್ಮ ಸಿಸಿಟಿವಿ ತರಹ ನಮಗೆ ಅಂತರ್‌ದೃಷ್ಟಿ ಇರುತ್ತದೆ. ಯಾರೇನು ಮಾಡುತ್ತಿರುತ್ತಾರೆ ನಾವೂ ನೋಡುತ್ತಿರುತ್ತೇವೆ.

ನರಕಕ್ಕೆ ಹೇಗೆ ಕಳಿಸುತ್ತೀರಿ ಜನರನ್ನು ಎಂದೆ. ಇಲ್ಲಿಯಂತೆ ನಮ್ಮಲ್ಲಿಯೂ ಗಲಾಟೆ ಮಾಡಿ ಕೆಟ್ಟದಾಗಿ ವರ್ತಿಸಿದರೆ ನರಕವೇ ಗತಿ ಎಂದುತ್ತರಿಸಿದ. ಮತ್ತೆ ಎಲ್ಲರನ್ನೂ ಒಮ್ಮೆಲೇ ಯಾಕೆ ಕರೆಸುವುದಿಲ್ಲ ಎಂದೆ. ಅಲ್ಲಿ ಇಲ್ಲಿಯ ಭಾರತವೊಂದನ್ನೇ ಒಯ್ದರೂ ಜಾಗ ಸಾಲದು. ನೀವು ಅಧಿಕಾರ, ಹುದ್ದೆ ಒಮ್ಮೆಲೇ ಎಲ್ಲರಿಗೂ ಕೊಡ್ತೀರಾ? ಯಾರಾದ್ರೂ ಕೊಟ್ರೂ ಸಹಿಸತೀರಾ? ಹಾಗೇ ನಾವೂ ಸಹ. ಅರ್ಹತೆ ನೋಡಿ ಕರೆದೊಯ್ಯುತ್ತೇವೆ. ಚಿಂತಿತಳಾಗಿ ನುಡಿದೆ – ಇಲ್ಲಿಯ ಹಾಗೆ ಏನೂ ಇಲ್ಲ. ಅಡಿಗೆ, ಊಟದ ಚಿಂತೆ ಇಲ್ಲ. ನಿಸರ್ಗ, ಪ್ರಾಣಿ, ಪಕ್ಷಿಗಳು, ಸಭೆ, ಸಮಾರಂಭಗಳು, ಕತೆ, ಕವನ, ಹಾಸ್ಯ ಲೇಖನಗಳು, ಏನೂ ಇಲ್ಲ. ನಾ ಬರೆದು ಓದಿದರೂ ಅಲ್ಲಿ ಕೇಳುವರೂ ಇಲ್ಲವೊ. ನಾನಿನ್ನೂ ಪುಸ್ತಕ ಪ್ರಕಟಿಸುವ ಯೋಚನೆಯಲ್ಲಿದ್ದೇನೆ. ಅವನ್ನೆಲ್ಲ ಮುಗಿಸುತ್ತೇನೆ. ಇಲ್ಲಿಯೇ ಇದ್ದು ಬರೆಬರೆದು ಕೈ ಸೋತಾಗ ಕಣ್ಣು ಕಾಣದಾದಾಗ ಕೊನೆಗೊಮ್ಮೆ ಬರುತ್ತೇನೆ ಕ್ಷಮಿಸಿರಿ ದೇವರೆ ಎಂದು ಸಾಷ್ಟಾಂಗ ನಮಸ್ಕಾರ ಮಾಡಿದೆ.

ನೀನು ಎಲ್ಲ ಪ್ರಕಾರಗಳಲ್ಲೂ ಬರೆಯಬೇಕೆನ್ನುತ್ತೀಯಾ? ಹೌದು, ದೇವರೆ ಆದರೆ ಎಲ್ಲದರಲ್ಲೂ ಹಿಂದುಳಿದಿದ್ದೀನಿ. ಯಾವೂ ಎಲ್ಲೂ ಪ್ರಕಟವಾಗುತ್ತಿಲ್ಲ. ಯಾಕೋ ತಿಳಿಯದು.

ನಕ್ಕ ದೇವರು ಹೇಳಿದರು – ನಾನು ಸ್ವತಃ ಬಂದು ದೇವಲೋಕಕ್ಕೇ ಕರೆದರೂ ಒಲ್ಲೆ ಎನ್ನುತ್ತಿರುವೆ. ಇನ್ನು ಇಲ್ಲಿ ಸ್ವತಃ ಹೋಗಿ, ಮಾತಾಡಿಸಿ ಕೊಟ್ಟವರ, ಮುಂದುವರೆಯುವವರ ಕೆಲಸ ಆಗುತ್ತವೆ. ನೀನೋ ದಾರಿಯಲ್ಲಿ ಬರುವಾಗ ಕೆಂಪು ಡಬ್ಬಿಗೆ ಹಾಕಿ ಮನೆ ದಾರಿ ಹಿಡಿಯುತ್ತೀಯಾ. ಅವು ಏಕೆ ಪ್ರಕಟವಾಗುತ್ತವೆ. ಅಲ್ಲಿಂದ ಕಸದ ಡಬ್ಬಿಗೆ ಸೇರುತ್ತವೆ ಎಂದಾಗ ಹೌದಾ? ಹಾಗಿದ್ದರೆ ನೀವು ನನ್ನನ್ನು ಪರೀಕ್ಷಿಸಿ ನೋಡುತ್ತಿರುವಿರಾ? ಹಾಗೇನಿಲ್ಲ, ಆಗೊಮ್ಮೆ ಈಗೊಮ್ಮೆ ಲಾಟರಿ ಹತ್ತಿದಂತೆ ಪ್ರಕಟವಾದರೂ ಆಗಬಹುದು. ಸ್ವಂತ ಪುಸ್ತಕ ಮಾಡುತ್ತಿರುವೆಯಲ್ಲ ಅಷ್ಟೆ ಮಾಡಿಕೊ! ಆಯ್ತು ದೇವರೆ, ಅದಕ್ಕಾದರೂ ಶಕ್ತಿ ನೀಡಿರಿ. ಅನುಗ್ರಹಿಸಿರಿ ಎಂದಾಗ ಆಯ್ತು ಇಷ್ಟೆಲ್ಲ ಮಾತಾಡುವ ನಿನಗೆ ಏನಾದರೂ ಬೇಕಿದ್ದರೆ ಕೇಳು ಎಂದ ದೇವ. ನನಗೆ ಸರಸ್ವತಿ, ಗಣಪತಿ, ಲಕ್ಷ್ಮಿಯರನ್ನು ತೋರಿಸು. ಅವರಿಂದ ನಾನೇನೂ ಬೇಡುವುದಿಲ್ಲ, ಎಂದೆ.

ಇಷ್ಟೆಲ್ಲ ಮಾತಾಡುವ ನಿನ್ನ ನಾಲಿಗೆಯ ಮೇಲೆ ಸರಸ್ವತಿ ಇದ್ದಾಳಲ್ಲ ಎಂದಾಗ, ದೇವರೆಲ್ಲಿ ಮರೆಯಾಗುವನೋ ಎಂದು ಗಡಬಡಿಸಿ ಇನ್ನಿಬ್ಬರು? ಎಂದೆ. ತಡೆ, ತಡೆ, ನೀನು ದಿನವೂ ಹಣವನ್ನು ಎಣಿಸ್ತೀಯಲ್ಲ ಎಂದಾಗ ತಟ್ಟನೇ ನಾನೆಲ್ಲಿ ಎಂದೆ. ಸುಳ್ಳು ಹೇಳಬೇಡ. ಬ್ಯಾಂಕಿನ ಕ್ಯಾಶ್ ಕ್ಯಾಬಿನ್ನಿನಲ್ಲಿ ಕುಳಿತು ದಿನವೂ ಲಕ್ಷಗಟ್ಟಲೆ ಬೆಳಿಗ್ಗೆಯಿಂದ ಸಂಜೆಯವರೆಗೂ ಅಷ್ಟೇ ಏಕೆ ಒಮ್ಮೊಮ್ಮೆ ತಡವಾಗಿ ಬರುವವರಿಗೂ ರಾತ್ರಿವರೆಗೂ ಎಣಿಸುತ್ತಿರುತ್ತೀಯಾ. ಕ್ಯಾಶಿನ ಸಮಯ ಹೆಚ್ಚಾಗಿದೆ. ನೀನೂ ಅದೇ ಕೆಲಸವನ್ನು ವರ್ಷಗಟ್ಟಲೆ ಮಾಡುವಂತೆ ಮಾಡಿದ್ದೇನೆ. ಲಕ್ಷ್ಮಿಯನ್ನು ನೋಡುತ್ತಲೇ ಇದ್ದೀಯಾ. ಇನ್ನು ಗಣಪತಿ ಗಣಕ ರೂಪದಲ್ಲಿ ಮೌಸನೊಂದಿಗೆ ಸದಾ ನಿಮ್ಮೆಲ್ಲರ ಕೈಯಲ್ಲಿ ಇದ್ದಾನೆ. ಗಣಪತಿ ಅಡೆತಡೆ ತರುವಂತೆ ಗಣಕವೂ ಒಮ್ಮೊಮ್ಮೆ ಕೆಟ್ಟು ಅಡೆತಡೆ ಮಾಡಿ ವ್ಯಾಕುಲವಾಗುವಂತೆ ಮಾಡುತ್ತದೆ. ಎಲ್ಲವನ್ನೂ ಕೈಯಲ್ಲೇ ಇರಿಸಿದ್ದೇನೆ. ಇನ್ನೇನಾದರೂ ಇದೆಯೆ? ಸೌಜನ್ಯವನ್ನೂ ದೇವರು ತೋರಿದ. ನನಗೆ ಆಗಾಗ ಬೇಸರಕ್ಕೋ ಖುಷಿಗೊ ಹಾಡಿಕೊಳ್ಳಲು ಬಾರದಲ್ಲ ಎಂದೆ. ನೀನೇ ಏಕೆ ಹಾಡಬೇಕು, ರೇಡಿಯೊ, ಟಿ.ವಿ., ಕಂಪ್ಯೂಟರ್, ಐಪ್ಯಾಡ್ ಒಂದೊಂದೇ ಹೊಸವನ್ನು ಕೊಡ್ತಾ ಇದ್ದೀನಲ್ಲ, ಅವನ್ನೇ ನೋಡು. ಅದೆಲ್ಲ ಸರಿ ಆದ್ರೂ ಮತ್ತೇನು ನಿನ್ನದು ಎಂದಾಗ ನನ್ನ ಗಂಟಲಿಗೊ ತಲೆಗೊ ಹೊಸ ಸಾಫ್ಟ್‌ವೇರ್, ಚಿಪ್ ಏನಾದರೂ ಈಗ ಕೂಡಿಸಲು ಸಾಧ್ಯವಿಲ್ಲವೆ? ಎಂದು ಗೋಗರೆದೆ. ಅದೆಲ್ಲ ಈಗ ಬರುವುದಿಲ್ಲ, ದೇಹದ ಮಸಿನ್ ಹಳೆಯದಾಗಿದೆ. ನೀನು ಬರೆಯುತ್ತಿರು. ಮುಂದೆ ಯಾರಾದರೂ ನಿನ್ನವನ್ನು ಹಾಡಬಹುದು. ಆಯ್ತು. ಕೊನೆಯದು ಕೇಳು, ಕೇಳು. ಇಷ್ಟೊತ್ತೇ ನಿಂತಿದ್ದೇನೆ ಇನ್ನು ಕೆಲ ನಿಮಿಷ. ದೇವರೆ ತಾವು ಯಾವ ದೇವರೆಂದು ಭಾವಿಸಲಿ, ನಮಗಿಲ್ಲಿ ಹಲವಾರು ದೇವರುಗಳು, ದೇವಸ್ಥಾನಗಳು ಸಂಕೋಚಿಸಿದೆ. ನಿನ್ನ ಮನದಲ್ಲಿ ಯಾವ ದೇವರು ಇರುವನೋ ಅವನೇ ನಾನು. ನೀನೇ ತಂದು ಇಟ್ಟುಕೊಂಡಿರುವೆಯಲ್ಲ – ಒಂದೇ ಫೋಟೋ ಕಟ್ಟಿನಲ್ಲಿ ಮೂರು ದೇವರು – ಹನುಮಂತ, ದುರ್ಗೆ, ಶಿವ, ''ಥ್ರಿಡಿ''

ಚಿತ್ರಗಳನ್ನು. ಹಾಗೇ ನಾನೂ ಸಹ. ನೀನೇ ಹೇಳಿದಂತೆ ನನಗಲ್ಲಿ ಬೇಸರವಾಗಿತ್ತು. ಸಂಚಾರ ಹೊರಟಿದ್ದೆ. ನಿನ್ನ ಮನೆಯಲ್ಲಿ ಈ ಅಪರಾತ್ರಿಯಲ್ಲಿ ದೀಪ ಉರಿಯುತ್ತಿತ್ತು. ಅದೇನೋ ಗೀಚುತ್ತ ಓದುತ್ತ ಕುಳಿತದ್ದು ನೋಡಿ ಬಂದೆ. ಮೋಜಿಗಾಗಿ ನಾನೇ ಮಾತಾಡುತ್ತ ನಿಂತೆ. ಸಮಯವಾಯ್ತು. ತಥಾಸ್ತು ಎಂದವನೇ ಮೆಲ್ಲಗೆ ಹಿಂದೆ ಸರಿಯುತ್ತ ಮಾಯವಾಗತೊಡಗಿದ. ದೀರ್ಘ ಸಮಯದ ಭೇಟಿಗೆ ನಾನು ರೋಮಾಂಚಿತಳಾಗಿ ಮತ್ತೆ ಪಾದಕ್ಕೆರಗಿ ನಮಸ್ಕರಿಸುತ್ತಿದ್ದಂತೆಯೇ ಜಗಮಗಿಸುವ ಬೆಳಕಿನೊಂದಿಗೆ ರಾಮ, ಕೃಷ್ಣ, ಶಿವ, ಹನುಮಂತ, ವಿಷ್ಣು ಇನ್ನೂ ಅನೇಕ ಅವತಾರಗಳನ್ನು ತೋರಿಸಿ ನಾನು ತೆರೆದ ಕಣ್ಣುಗಳನ್ನು ಮುಚ್ಚದೇ ನೋಡುತ್ತಿರುವಾಗ ಅಂತರ್ಧಾನನಾದ.

ರಾತ್ರಿಯೆಲ್ಲ ಬರೆದು ನಸುಕಿನಲ್ಲಿ ನಿದ್ದೆಗೆ ಜಾರಿದ್ದ ನನಗೆ ಸೂರ್ಯದೇವನೂ ತನ್ನ ದರ್ಶನ ನೀಡಿ ಎಚ್ಚರಿಸಿದ. ನನ್ನಕ್ಕ ನಾಗರಪಂಚಮಿಯೆಂದು ತಂದ ನಾಗಪ್ಪನೂ ಹೆಡೆಯೆತ್ತಿ ಒಳಬಂದಿದ್ದ.

---

## ಒಳ್ಳೆಯ ಸಬೂಬು

**ಒಬ್ಬ ಹೊಸ ಕಾರು ಕೊಂಡ ಉಮೇದಿನಲ್ಲಿ ಅದನ್ನು ಜೋರಾಗಿ ಓಡಿಸಿಕೊಂಡು ಒಂದು ಲಾಂಗ್ ಡ್ರೈವ್ ಹೋಗುವಾ ಎಂದು ಹೊರಟ. ಕಾರಿನಲ್ಲಿ ಅವನೊಬ್ಬನೇ. ಸಲ್ಮಾನ್ ಖಾನ್ ಅವತ್ತು ಜೋರಾಗಿ ಓಡಿಸಿಕೊಂಡು ಹೋಗಿ ಫುಟ್ ಪಾತ್ ಮೇಲೆ ಹತ್ತಿಸಿ ಅನಾಹುತಮಾಡಿ (ಕೊಂಡಿ)ದ್ದನಲ್ಲ ಅದರಗಿಂತ ವೇಗವಾಗಿ ಓಡಿಸುತ್ತಿದ್ದ. ಖುಷಿಯೋ ಖುಷಿ. ಆದರೆ ಇವನಿಗೆ ರಸಭಂಗ ಮಾಡಲು ಟ್ರಾಫಿಕ್ ಪೇದೆ ಅವನನ್ನು ಅಟ್ಟಿಸಿಕೊಂಡು ಹೋದ. ತಪ್ಪಿಸಿಕೊಳ್ಳಲು ಅವನು ವೇಗ ಇನ್ನಷ್ಟು ಹೆಚ್ಚಿಸಿದ. ಆದರೆ ಪೇದೆ ಅವನನ್ನು ಕೊನೆಗೂ ತಡೆದು ನಿಲ್ಲಿಸಿದ. ಆದರೆ ಮಾಮೂಲಿನಂತೆ ಚಲನ್ ಪುಸ್ತಕ ಹೊರತೆಗೆಯದೆ ''ನೋಡು. ನನಗೆ ಬೆಳಗಿನಿಂದ ಕೆಲಸ ಮಾಡಿ ಸುಸ್ತಾಗಿದೆ. ಮನೆಗೆ ಹೋಗುವ ಸಮಯ ಈಗ. ಆದುದರಿಂದ ನಾನು ನಿಲ್ಲಿಸು ಎಂದರೂ ಕೇಳದೆ ನೀನು ಏಕೆ ಸ್ಪೀಡ್ ಹೆಚ್ಚಿಸಿದೆ? ಒಂದು ಒಳ್ಳೆಯ ಸಬೂಬು ಹೇಳು. ಬಿಟ್ಟುಬಿಡ್ತೀನಿ'' ಎಂದ.**

**ತುಸು ಯೋಚಿಸಿದ ಅವನು ಉತ್ತರಿಸಿದ: ಸಾರ್, ಕಳೆದ ವಾರ ನನ್ನ ಹೆಂಡತಿ ನಿಮ್ಮಂತಹ ಪೊಲೀಸ್ ಅಧಿಕಾರಿ ಜತೆ ಓಡಿ ಹೋದಳು. ಅವಳನ್ನು ವಾಪಸ್ ಮಾಡಲು ನೀವು ನನ್ನನ್ನು ಹಿಂಬಾಲಿಸುತ್ತಿದ್ದೀರಿ ಎಂದುಕೊಂಡು ವೇಗ ಹೆಚ್ಚಿಸಿದೆ.**

**ಪೊಲೀಸ್ ಅಧಿಕಾರಿ ಅವನಿಗೆ ಚಲನ್ ನೀಡಲಿಲ್ಲ.**



# ಹೆಬ್ಬಂಡಿ ರಾಮದಾಸಪ್ಪ

**ಎನ್. ಪ್ರಕಾಶ್**

**ನ**ಮ್ಮ ಹುಚ್ಚುಹುಚ್ಚು ಸ್ವಚ್ಛಂದ ಫುಟ್‌ಬಾಲ್ ಆಟಕ್ಕೆ ಕಡಿವಾಣ ಹಾಕಿ, ಶಿಸ್ತನ್ನು ತಂದು, ನಿಯಮಗಳನ್ನು ತಿಳಿಸಿ, ಫುಟ್‌ಬಾಲನ್ನು ಸರಿಯಾಗಿ ಆಡಲು ಕಲಿಸಿದವರು ನಮ್ಮ ಸ್ಪೋರ್ಟ್ಸ್ ಟೀಚರ್ ಶ್ರೀ ಎನ್. ಕಪಿನೀಪತಯ್ಯನವರು. ಅವರು ನಮಗೆ ಐದನೆಯ ಕ್ಲಾಸಿನಲ್ಲಿ ಇಂಗ್ಲೀಷ್ ಟೀಚರ್ ಆಗಿದ್ದರು. ಅವರ ನೆನಪಿರಲು ಇನ್ನೊಂದು ಕಾರಣವೆಂದರೆ, ಅವರು ಇಂಗ್ಲೀಷಿನಲ್ಲಿ ರುಜು ಮಾಡುವಾಗ, 'ಎನ್', 'ಕೆ' ಎರಡೂ ಅಕ್ಷರಗಳನ್ನು ಸಣ್ಣ ಅಕ್ಷರಗಳಲ್ಲೇ ಬರೆಯುತ್ತಿದ್ದರು. ಅಲ್ಲಿಯವರೆಗೆ ರುಜು ಎಂದರೆ ಕೇವಲ ಹೆಸರನ್ನು ಬರೆಯುವುದು ಎಂದಷ್ಟೇ ತಿಳಿದಿದ್ದ ನಾನು, ಒಂದು ಸಲ, ಆ ಬಗ್ಗೆ ಅವರನ್ನೇ ನೇರವಾಗಿ ಪ್ರಶ್ನೆ ಮಾಡಿದ್ದೆ. ಅವರು ಸಿಟ್ಟು ಮಾಡಿಕೊಳ್ಳದೆ ಹೆಸರಿಗೂ, ರುಜುವಿಗೂ ಇರುವ ವ್ಯತ್ಯಾಸವನ್ನಷ್ಟೇ ಅಲ್ಲದೆ, ದೊಡ್ಡ ಅಕ್ಷರಗಳನ್ನು ಯಾವಾಗ ಬರೆಯಬೇಕು, ಸಣ್ಣ ಅಕ್ಷರಗಳನ್ನು ಯಾವಾಗ ಬರೆಯಬೇಕು ಎಂದು ಹೇಳಿಕೊಟ್ಟಿದ್ದರು. ಅದಲ್ಲದೆ, ಅದೇ ಸಂದರ್ಭದಲ್ಲೇ ಅಲ್ಪವಿರಾಮ, ಪೂರ್ಣವಿರಾಮ, ಆಶ್ಚರ್ಯ ಸೂಚಕ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ ಇತ್ಯಾದಿಗಳ ಬಗ್ಗೆ ಕೂಡಾ ಸಾಕಷ್ಟು ತಿಳುವಳಿಕೆ ನೀಡಿದ್ದರು. ಈ ಮೇಷ್ಟ್ರು ನಮ್ಮ ಆಟ ಮುಗಿಯುವವರೆಗೂ ನಮ್ಮೊಂದಿಗೇ ಇದ್ದು ಸರಿಯಾಗಿ ಆಟ ಆಡುವ ರೀತಿಯನ್ನು ನಾವು ಎಂದೂ ಮರೆಯದಂತೆ ಹೇಳಿಕೊಟ್ಟರು. ನಾನು ಯಾವಾಗಲೂ ಎಡದಿಕ್ಕಿನಲ್ಲೇ ಬಾಲನ್ನು ಒಯ್ಯುತ್ತಿದ್ದುದರಿಂದ, ನನಗೆ ರೈಟ್ ಔಟ್ ಪೊಸಿಷನ್ ಫಿಕ್ಸ್ ಮಾಡಿದವರೂ ಅವರೇ. ನಂತರದ ವರ್ಷಗಳಲ್ಲಿ ನಾನು ರೈಟ್ ಇನ್, ಆ ನಂತರ ಸೆಂಟರ್ ಫಾರ್ವರ್ಡ್ ಆದೆ. ಮುಂದೆ ಹೈಸ್ಕೂಲಿಗೆ ಹೋದಾಗ, ಲೆಫ್ಟ್ ಔಟ್ ಪೊಸಿಷನ್‌ಗೆ ಹೋಗಿ, ಕೊನೆಗೆ ಟೀಮಿನಿಂದಲೇ ಲೆಫ್ಟ್ ಔಟ್ ಆದೆ.

ನಾವು ಮಿಡ್ಲ್ ಸ್ಕೂಲಿನಲ್ಲಿದ್ದಾಗ, ನಮ್ಮ ಮೇಷ್ಟ್ರು ಒಳ್ಳೆಯ ಆಟ ಆಡಲು, ಒಳ್ಳೆಯ ಆಟಗಳನ್ನು ನೋಡಬೇಕು ಎಂಬ ಉಪದೇಶ ನೀಡಿದ್ದರು. ಅದರಂತೆ ನಾವು ಸಾಕಷ್ಟು ಸಲ ದೊಡ್ಡವರ ಫುಟ್‌ಬಾಲ್ ಆಟಗಳನ್ನು ನೋಡಿದ್ದೆವು. ಒಂದು ಸಲ ಗುಬ್ಬಿಯ ಟೀಮಿಗೂ, ತುಮಕೂರಿನ ಒಂದು ಹೆಸರಾಂತ ಟೀಮಿಗೂ, ಗುಬ್ಬಿಯಲ್ಲೇ ಒಂದು ಮ್ಯಾಚ್ ನಡೆಯಿತು. ನಮಗೆಲ್ಲಾ ಆಗ ತುಮಕೂರೆಂದರೆ ಬಹಳ ಮುಂದುವರೆದ ತುಂಬಾ ದೊಡ್ಡ ಊರು. 'ತುಮ್ಕೊ ಊರ್ ಹಮ್ಕೊ ಗಾಂವ್' ಎನ್ನುವುದು ಆವಾಗ ಗೊತ್ತಿರಲಿಲ್ಲ. ಅಲ್ಲಿ ದೊಡ್ಡ ದೊಡ್ಡ

ಹೈಸ್ಕೂಲು, ಕಾಲೇಜುಗಳಿವೆ. ಅಲ್ಲಿಯ ಒಂದು ಪ್ರಸಿದ್ಧ ಹೈಸ್ಕೂಲಿನಲ್ಲಿ ಬುದ್ಧಿವಂತರಿಗೆ, ತುಂಬಾ ಚೆನ್ನಾಗಿ ನಂಬರು ತೆಗೆದವರಿಗೆ ಮಾತ್ರ ಸೀಟು ಎಂದೆಲ್ಲಾ ಕೇಳಿದ್ದೆವು. ಆ ಹೈಸ್ಕೂಲಿನಲ್ಲಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಯಾರಾದರೂ ಹುಡುಗರಿಗೆ ಶೇಕಡಾ ಅರವತ್ತಕ್ಕಿಂತ ಕಡಿಮೆ ನಂಬರ್ ಬಂದರೆ, ಅಂಥವರ ಮಾರ್ಕ್ಸ್ ಕಾರ್ಡುಗಳನ್ನು ಮುದುರಿ ಅವರುಗಳ ಮುಖಕ್ಕೇ ಅಲ್ಲಿನ ಮೇಷ್ಟ್ರುಗಳು ಎಸೆಯುತ್ತಾರೆ ಎಂಬಂತಹ ವಿಚಿತ್ರ, ಭೀಕರ ಸುದ್ದಿಗಳೆಲ್ಲಾ ನಮಗೆ ಬಿತ್ತರವಾಗಿದ್ದವು. ತುಮಕೂರಿನ ಥಿಯಟರ್‌ಗಳಲ್ಲಿ ಇಂಗ್ಲೀಷ್ ಸಿನಿಮಾಗಳು, ಅವುಗಳಲ್ಲಿ ಎಲ್ಲರೂ ಇಂಗ್ಲೀಷಿನಲ್ಲೇ ಮಾತಾಡುವಂತಹವು ಬರುತ್ತವೆ. ಅಲ್ಲಿಗೆ ದೇಶವಿದೇಶಗಳಲ್ಲಿ ಪ್ರಸಿದ್ಧಿ ಪಡೆದ ಕಮಲಾ ತ್ರೀರಿಂಗ್ ಸರ್ಕಸ್ ಬಂದಿತ್ತು ಎಂಬ ಅತ್ಯಂತ ವರ್ಣಮಯ ಸೊಬಗಿನ ಸುದ್ದಿಗಳೂ ನಮಗೆ ತಲುಪಿದ್ದವು. ಕಮಲಾ ತ್ರೀರಿಂಗ್ ಸರ್ಕಸ್‌ನ ಸರ್ಚ್‌ಲೈಟ್ ಗುಬ್ಬಿಯ ಆಕಾಶದಲ್ಲೂ ಕಾಣಿಸಿಕೊಂಡಿತ್ತು. ಅಂದ ಮೇಲೆ ತುಮಕೂರೆಂದರೆ ಒಂದು ಅದ್ಭುತ ದೊಡ್ಡ ಊರು, ಬೆರಗಿನ ಬೀಡೆಂದೇ ನಮಗೆ ಆಗೆಲ್ಲಾ ತೋರಿತ್ತು. ಅದರ ಬಗ್ಗೆ ನಮಗೆ ಭಯಮಿಶ್ರಿತ ಗೌರವ. ಅಲ್ಲಿಯ ಒಂದು ಟೀಮು ಗುಬ್ಬಿಗೆ ಮ್ಯಾಚ್ ಆಡಲು ಬರುವುದೆಂದರೆ, ಅದೇನು ಸಾಮಾನ್ಯ ಸಂಗತಿಯೆ?

ಆ ಪಂದ್ಯ ನೋಡಲು, ಮೈದಾನದ ಹೊರಗೆ, ನಾವೆಲ್ಲ ಜಾತ್ರೆ ಸೇರಿದ್ದೆವು. ಊರ ಜನವೆಲ್ಲಾ ಸೇರಿದ್ದರಿಂದ. ನಾವು ಮುಂದೆ ನಿಂತ ಹುಡುಗರನ್ನು, ಬೈದು ಕೂಡಿಸಿದರು. ನಾವು ಕುಕ್ಕರಗಾಲಿನಲ್ಲೇ ಕುಳಿತು ಇಡೀ ಪಂದ್ಯ ನೋಡಿದೆವು. ನಮಗೆಲ್ಲಾ ಒಂದೇ ಆಸೆ, ಬಾಲ್ ಏನಾದರೂ ಮೈದಾನದ ಹೊರಗೆ ನಮ್ಮತ್ತ ಬಂದರೆ, ಅದನ್ನು ಆಟಗಾರರತ್ತ ಎಸೆಯೋಣ, ಗುಂಗುರು ಕೂದಲಿನ, ಬಣ್ಣಬಣ್ಣದ ಜರ್ಸಿ ಹಾಕಿದ್ದ ಆಟಗಾರರಿದ್ದರು. ಕಾಲಿಗೆ ಆಟದ ಬೂಟುಗಳನ್ನು ಹಾಕಿಕೊಂಡಿದ್ದರು. ಗಂಭೀರ ಮುಖದ ಅವರು ಆ ಟೀಮಿನ ಸೆಂಟರ್ ಫಾರ್ವರ್ಡ್, ಅವರು ಹೊಡೆಯುವ ಶಾಟ್‌ಗಳು, ನೀಡುವ ಪಾಸ್‌ಗಳು, ಓಡುವ ರಭಸಗಳ ಎದುರಿಗೆ, ಗುಬ್ಬಿಯ ಟೀಮು ತತ್ತರಿಸಿ ಹೋದಂತೆ ತೋರುತ್ತಿತ್ತು. 'ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೆ?' ಅಂದಂತೆ ಪ್ರಸಿದ್ಧ ತುಮಕೂರಿನ ಆ ಹೆಸರಾಂತ ಟೀಮು ನಮ್ಮ ಬಡಪಾಯಿ ಗುಬ್ಬಿಯ ಮೇಲೆ ಮ್ಯಾಚಿಗೆ ಬರಬೇಕಿತ್ತೆ ಅಂತ ಕೂಡಾ ಅನ್ನಿಸಿತು.

ಆದರೆ ಆಟ ನಡೆದಂತೆ ಗುಬ್ಬಿಯ ಬಲ ಇದ್ದುದೆಲ್ಲಿ ಅಂತ ಗೊತ್ತಾಗುತ್ತಾ ಹೋಯಿತು. ಗುಬ್ಬಿಯ ಕಡೆ ಒಬ್ಬರು ಫುಲ್‌ಬ್ಯಾಕ್, ರಾಮದಾಸಪ್ಪ ಅಂತ. ಅಷ್ಟೇನೂ ಎತ್ತರವಿಲ್ಲದ, ಬೋಳು ತಲೆಯ ಹೊಟ್ಟೆ ಡುಮ್ಮಣ್ಣ ತೋಳಿರುವ ಬನಿಯನ್, ಬಿಳಿಯಚಡ್ಡಿ, ಬರಿಗಾಲು. ಆದರೆ ಎಂಥ ಅದ್ಭುತ ಚಲಿಸುವ ಹೆಬ್ಬಂಡೆ ಆ ಆಟಗಾರ! ತುಮಕೂರಿನವರು ಶತಪ್ರಯತ್ನ ಮಾಡಿದರೂ ರಾಮದಾಸಪ್ಪನವರನ್ನು ತಪ್ಪಿಸಿ ಒಂದು ಗೋಲೂ ಹೊಡೆಯುವುದಾಗಲಿಲ್ಲ. ತಮ್ಮ ತಂಡದ ಆಟಗಾರರ ದೌರ್ಬಲ್ಯವನ್ನು ಅರಿತಿದ್ದ ಆ ರಾಮದಾಸಪ್ಪ ಒಂದು ಶಾಟ್ ಹೊಡೆದರೆ, ಅದು ನೇರ ಎದುರು ತಂಡದ ಗೋಲಿಗೆ ಹೋಗುತ್ತಿತ್ತು. ಶಾಟ್ ಹೊಡೆದರೆ ನೇರವಾಗಿ ಗುರಿ ತಲುಪುವ ಶಾಟೇ ಹೊಡೆಯಬೇಕು. ರಾಮದಾಸಪ್ಪನವರಂತೆ, ಎಂದು

ಇಂದಿಗೂ ಅನ್ನಿಸುತ್ತದೆ. ಮ್ಯಾಚ್ ಡ್ರಾ ಆಯಿತು. ಎರಡೂ ತಂಡದವರಿಗೆ ಒಂದು ಸೊಗಸಾದ ಆಟವನ್ನು ಆಡಿದ ಸಂತೋಷ. ಮ್ಯಾಚ್ ಮುಗಿದ ಮೇಲೆ ತುಮಕೂರಿನ ರಾಮನ್, ಗುಬ್ಬಿಯ ರಾಮದಾಸಪ್ಪನವರನ್ನು ಅಪ್ಪಿಕೊಂಡು, ನೀವೇ ಒಂದು ಅದ್ಭುತ, ರಾಮದಾಸಪ್ಪ ನೀವೊಂದು ಸ್ಫೂರ್ತಿ ನೀಡುವ ಹೆಬ್ಬಂಡೆ ಎಂದರು. ರಾಮದಾಸಪ್ಪ 'ನಾವು ಯಾರೂ ಗೆಲ್ಲಲಿಲ್ಲ, ಗೆಲ್ಲಬೇಕಾಗಿದ್ದು ಆಟ ಕೊನೆಗೂ ಅದೇ ಗೆದ್ದಿತು ನೋಡಿ ರಾಮನ್ ಎಂದು ಉತ್ತರಿಸಿದರು.

ಆ ರಾತ್ರಿಯೆಲ್ಲಾ ಕನಸು, ವೀರಸೈನಿಕನಂತೆ ರಾಮನ್ ಕೋಟೆಯನ್ನು ಭೇದಿಸಿ ಒಳನುಗ್ಗುತ್ತಿರುವಂತೆ, ಅಸೀಮ ಧೈರ್ಯದಿಂದ ಅವರನ್ನು ಎದುರಿಸಿ ಭೇದಿಸಲಾಗದ ಭದ್ರ ಕೋಟೆಬಾಗಿಲಿನಂತೆ ರಾಮದಾಸಪ್ಪ ನಿಂತಿರುವಂತೆ, ಚಿತ್ರಗಳೋ ಚಿತ್ರಗಳು, ಕನಸಿನ ತುಂಬ.

ನಗರದ ಆಕ್ರಮಣವನ್ನು ಎಲ್ಲವನ್ನೂ ನುಂಗಬೇಕೆನ್ನುವ ಹಪಹಪಿತನವನ್ನು ಹೊಟ್ಟೆಬಾಕತನವನ್ನು ತಡೆಯಲು, ರಾಮದಾಸಪ್ಪನವರಂಹ ಶಕ್ತಿ, ನಮ್ಮ ಹಳ್ಳಿಗಳಿಗೆ, ಸಣ್ಣ ಊರುಗಳಿಗೆ ಇದ್ದಿದ್ದರೆ? ಎಂದು ಇಂದು ತೋರುತ್ತದೆ.

**ಶಾಟ್ ಹೊಡೆದರೆ ಇದರಂತೆ ಹೊಡೆಯಬೇಕು ಎಂದು ಇಂದಿಗೂ ಅನಿಸುತ್ತದೆ.**

## ಯಾರು ಮೂರನೆಯವರು

ಹೆಂಡ್ತಿಗೆ ಯಾಕೋ ಹುಷಾರಿಲ್ಲ ಅಂತ ಸೋಮು ಅವಳನ್ನು ಡಾಕ್ಟರ ಬಳಿ ಕರ್ಕೊಂಡು ಹೋಗಿದ್ದ.

ಡಾಕ್ಟರು ಇವರಿಬ್ಬರನ್ನೂ ತಮಾಷೆ ಮಾಡೋಣ ಅಂತ ಹೆಂಡ್ತಿನ ಪರೀಕ್ಷೆ ಮಾಡೋಕೆ ಮುಂಚೇನೇ ನಿಮ್ಮನೆಗೆ ಇನ್ನೊಬ್ಬರ ಸೇರ್ಪಡೆ ಆಗೋ ಸುದ್ದಿ ಇದು ಅಂತ ಚೋಡು ಬಿಟ್ಟರು.

ಸೋಮು ಹೌಹಾರಿ ಅರೆ ನಾವು ಯಾರಿಗೂ ಹೇಳಿರಲೇ ಇಲ್ಲ ನಿಮಗೆ ಹೇಗೆ ಗೊತ್ತಾಯ್ತು ಅಂತ ಕೇಳಿದ.

ಅದಕ್ಕೆ ಡಾಕ್ಟರು ನೋಡಪ್ಪ ಡಾಕ್ಟರ ಹತ್ರ ಏನೂ ಮುಚ್ಚಿಡೋ ಹಾಗಿಲ್ಲ ಎಲ್ಲ ನಮಗೆ ಗೊತ್ತಾಗಿ ಹೋಗುತ್ತೆ ಅಂದು ಸೋಮು ಮುಖ ನೋಡಿ ಯಾಕೆ ಆಶ್ಚರ್ಯನಾ ಅಂತ ಕೇಳಿದ್ದಕ್ಕೆ ಸೋಮು ಹೇಳಿದ.

ಅಲ್ಲ ನಾವು ಇವತ್ತು ಬೆಳಗ್ಗೆ ತಾನೇ ಒಂದು ಪಾಮೆರಿನ್ ನಾಯಿ ಮರಿ ತಂದಿದ್ದು ನಿಮಗೆ ಹೇಗೆ ಗೊತ್ತಾಯ್ತು ಅಂತ ಆಶ್ಚರ್ಯ ಆಗ್ತಿದೆ ನನಗೆ ಅಂದಾಗ ಡಾಕ್ಟರೇ ಸುಸ್ತು.

**- ಸುಕೇಶವ**



# ಡ್ರೀಮ್ ವೈಫ್

**ಆನಂದ**

**ಕ**ನಸು ಕಾಣಬೇಕು ಎನ್ನುತ್ತಾರೆ ಕಲಾಂ ಸಾಹೇಬರು. ಅಂದರೆ ಮೊದಲು ನಿದ್ದೆ ಮಾಡಬೇಕು ಎಂದಾಯಿತು. ನಿದ್ದೆ ಮಾಡದೆ ಕನಸು ಕಾಣತೊಡಗಿದರೆ ಅದು ಹಗಲುಗನಸು ಆಗುತ್ತದೆ. ಅದು ಬರೀ ಥಿಯರಿ. ಆದರೆ ನಿದ್ದೆ ಮಾಡುತ್ತಾ ಕನಸು ಕಂಡರೆ ಅದು ಪ್ರಾಕ್ಟಿಕಲ್ ಇದ್ದ ಹಾಗೆ.

ನಿದ್ದೆ ಹೋಗುತ್ತಾ ಹೋಗುತ್ತಾ ಅಥವಾ ನಿದ್ದೆಗೆ ಜಾರುತ್ತಾ ಜಾರುತ್ತಾ ಇದ್ದಾಗ ನೀವು - ನಾನೂ ಸಹ - ತರಾವರಿ ಕನಸುಗಳನ್ನು ಕಾಣಬಹುದು. ಬಿಪಾಷಾ ಬಾಸು ಜತೆ ವಾಕಿಂಗ್ ಹೋಗಬಹುದು ಅವಳು ಒಪ್ಪದಿದ್ದರೂ ಸಹ, ರಾಕಿ ಸಾವಂತ್ ಜತೆ ಚಾ ಸೇವಿಸಬಹುದು ಒಂದು ಫೈವ್ ಅಥವಾ ಸೆವೆನ್ ಸ್ಟಾರ್ ಹೊಟೇಲಿನಲ್ಲಿ, ಮಾಧುರಿ ದೀಕ್ಷಿತ್ ಜತೆ ಲೋಕಾಭಿರಾಮವಾಗಿ ಹರಟಬಹುದು - ಅವಳ ಗಂಡನನ್ನು ದೂರವಿಟ್ಟು, ಎಸ್ ಆರ್ ಖಾನ್ ಅದೇ ಷಾ ರುಖ್ - ಜತೆ ಒಂದು ಔಟಿಂಗ್... ವ್ಹಾ! ಎಂತಹ ಕಲರ್‌ಫುಲ್ ಕನಸುಗಳು. ರೋಮಾಂಚನ ನೀಡುವಂತಹ ಸೀನರಿಗಳು. ಸಿನಿಮಾ ಈಸ್ ಅ ಬ್ಯೂಟಿಫುಲ್ ಫ್ರಾಡ್ ಎಂದಿದ್ದಾನೆ ಒಬ್ಬ ಮಹಾಶಯ. ಹಾಗೆಯೇ, ಕನಸುಗಳು ಸಹ, ಫ್ರಾಯ್ಡ್ ಏನಾದರೂ ಹೇಳಿರಲಿ.

ಆದರೆ ಕೆಲವು ನತದೃಷ್ಟರೂ ಇರುತ್ತಾರೆ. ನಿದ್ದೆಯೇ ಮಾಡದವರ ಬಗ್ಗೆ ನಾನು ಹೇಳುತ್ತಿಲ್ಲ, ನಿದ್ದೆ ಮಾಡಿಯೂ ಬಿ ಆಂಡ್ ಡಬ್ಲ್ಯೂ ಕನಸು ಕಾಣುವ ನತದೃಷ್ಟ ಮಂದಿಯ ಬಗ್ಗೆ ನಾನು ಹೇಳಬೇಕಾಗಿದೆ. ಇಂತಹ ಪ್ಯೂರ್ ನತದೃಷ್ಟರ ಕನಸಿನಲ್ಲಿ ಬಿಪಾಷಾ ಬಾಸು, ರಾಕಿ ಸಾವಂತ್, ಮಾಧುರಿ ದೀಕ್ಷಿತ್, ಷಾ ರುಖ್ ಮುಂತಾದ ಮುದ ನೀಡುವವರ ಬದಲು ರೇವಣ್ಣ, ವರ್ತೂರು ಪ್ರಕಾಶ್, ರೇಣುಕಾಚಾರ್ಯ, ಹಾಲಪ್ಪ, ಮೋಟಮ್ಮ ಮುಂತಾದವರು ಬಂದು ಹೋಗುತ್ತಾರೆ. ಮೌಲ್ಯಗಳನ್ನು ಎತ್ತಿ ಹಿಡಿಯುವ ಬಗ್ಗೆ ಈ ಮಂದಿ ಮಾಡುವ ಭಾಷಣಗಳನ್ನು ಅವರು ಕನಸಿನಲ್ಲಿ ಕೇಳಿಸಿಕೊಳ್ಳಬೇಕಾದ ಅನಿವಾರ್ಯತೆ ಒದಗಿ ಬಂದಿರುತ್ತದೆ. ಮರುದಿನ ಪೇಪರ್‌ನಲ್ಲೂ ಇದನ್ನೇ ಓದಬೇಕಾದ ಅಸಹಾಯಕ ಸ್ಥಿತಿ ಅವರದ್ದು ಪಾಪ.

ಆದರೆ ನನ್ನ ಸ್ನೇಹಿತನದು ಒಂದು ವಿಚಿತ್ರ ಕೇಸ್.

'ನಿನ್ನೆ ರಾತ್ರಿ ನನಗೊಂದು ಕನಸು ಬಿದ್ದಿತ್ತು, ಗಾಬರಿ ಆಗಿ ಎದ್ದು ಕುಳಿತುಕೊಂಡೆ' ಎಂದ.

'ಹೆದರಿಕೆ ಆಯಿತೇನು?' ಎಂದು ನಾನು ಕಳವಳದಿಂದ ಕೇಳಿದೆ.

'ಹೆದರಿಕೆ ಅಲ್ಲ ಗಾಬರಿ' ಎಂದು ಅವನು ಹೇಳಿದಾಗ ಹೆದರಿಕೆಯೇ ಆಗದೆ ಗಾಬರಿ ಆಗಲು ಸಾಧ್ಯವೆ ಎಂದು ನನಗೆ ಗೊಂದಲ ಆಯಿತು.

'ಗಾಬರಿ ಏಕಾಯಿತು?' ಎಂದು ಕೇಳಿದೆ.

ಅವನ ಉವಾಚ: ''ಕನಸಿನಲ್ಲಿ ನಾನು ಮಾಮೂಲಿನಂತೆ ಅಂದು ರಾತ್ರಿ ತಡವಾಗಿ ಬಂದಿದ್ದೆ. ಲೆಕ್ಚರ್ ಕೇಳಲಿಕ್ಕೆ ಮಾನಸಿಕವಾಗಿ ತಯಾರಾಗಿಯೇ ಬೆಲ್ ಮಾಡಿದೆ. ಹೆಂಡತಿ ಬಾಗಿಲು ತೆಗೆದಳು. 'ಬನ್ನಿ ಬನ್ನಿ' ಎಂದು ಒಳಗೆ ಕರೆದಳು. 'ಇಷ್ಟು ಹೊತ್ತಿನಲ್ಲಿ ಓಡಾಡೋದು ಸರಿ ಅಲ್ಲ. ಸ್ವಲ್ಪ ಬೇಗ ಬರೋದಿಕ್ಕೆ ಟ್ರೈ ಮಾಡಿ' ಎಂದು ಸಮಾಧಾನವಾಗಿಯೇ ಹೇಳಿದಳು.

'ಹೌದೆ?' ಎಂದು ನಾನು ಆಶ್ಚರ್ಯದಿಂದ ಕೇಳಿದೆ.''

ಅವನು ಮುಂದುವರೆಸಿದ: ''ಹೌದು. ಅಷ್ಟೇ ಅಲ್ಲ, 'ಊಟ ಆಯಿತೇನು?' ಎಂದು ಕೇಳಿದಳು. ನಾನು 'ಇಲ್ಲ' ಎಂದೆ. ಅದಕ್ಕೆ ಅವಳು 'ಛೆ! ಛೆ! ಹಸಿದುಕೊಂಡೇ ಇದ್ದೀರ. ಹೆಲ್ತ್ ಕೆಡುತ್ತೆ. ತಾಳಿ ಅಡುಗೆ ಬಿಸಿ ಮಾಡ್ತೇನೆ?' ಎಂದು ಹೇಳಿ ಅಡುಗೆ ಮನೆಗೆ ಧಾವಿಸಿದಳು.''

'!' ನಾನು. ಅವನು '!!' ಆಗಿದ್ದನಂತೆ.

''ನಂತರ ಬಿಸಿ ಮಾಡಿದ ಅಡಿಗೆಯನ್ನು ಬಡಿಸಿದಳು. 'ಲೇಟ್ ಆಗಿದೆ. ಆದರೂ ನಿಧಾನವಾಗಿ ತಿನ್ನಿ' ಎಂದು ಹೇಳಿದಳು. 'ಇಷ್ಟು ಹೊತ್ತಿನಲ್ಲಿ ತಿಂದರೆ ಮೈಗೆ ಹತ್ತಲ್ಲ' ಎಂದು ಸಮಾಧಾನವಾಗಿಯೇ ಹೇಳಿದಳು.''

ಈಗ '!!' ನಾನು.

''ಊಟ ಆಯಿತು. 'ತಾಳಿ ಒಂದು ಲೋಟ ಬಿಸಿ ಬಿಸಿ ಹಾಲು ಕೊಡ್ತೇನೆ. ಕುಡಿದು ಮಲಗಿ. ಚೆನ್ನಾಗಿ ನಿದ್ದೆ ಬರುತ್ತೆ' ಅಂದಳು.''

'ಹೌದೆ!' ನಾನು.

''ಹೌದು. ಆ ಮೇಲೆ ಹಾಲು ತಂದುಕೊಟ್ಟಳು. 'ಸ್ವೆಟರ್ ಹಾಕಿಕೊಂಡು ಮಲಗಿ. ಚಳಿ ಇದೆ' ಎಂದು ಹೇಳಿ ರಗ್ ಹೊದೆಸಿ, ಲೈಟ್ ಆರಿಸಿ, 'ನಾನು ಡೈನಿಂಗ್ ಟೇಬಲ್ ಕ್ಲೀನ್ ಮಾಡಿ ಬರ್ತೀನಿ' ಅಂತ ಹೋದಳು.''

'ಆಮೇಲೆ?' ನಾನು ಕೇಳಿದೆ.

'ಆಗಲೇ ನಾನು ಗಾಬರಿ ಆಗಿ ಎದ್ದು ಕುಳಿತಿದ್ದು' ಎಂದು ಹೇಳಿದ.

'ಗಾಬರಿ ಆಗದೇ ಇರುತ್ಯೆ?' ಎಂದು ನಾನು ಕೇಳಿದೆ.

'ಸರಿ ಅಲ್ಲವಾ?' ಎಂದು ಕೇಳಿದ.

'ನಿನಗೇ ಬರೇ ಗಾಬರಿ ಆಯಿತು. ನನಗಾಗಿದ್ದರೆ ಮೈಯೆಲ್ಲಾ ಬೆವತೇ ಹೋಗ್ತಿತ್ತು' ಎಂದು ನನಗಾಗಬಹುದಾಗಿದ್ದ ಅನುಭವವನ್ನು ಪ್ರಾಮಾಣಿಕವಾಗಿ ಹೇಳಿಕೊಂಡೆ. ನಿಮ್ಮ ಅನುಭವ?

**ನೀತಿ: ಇಂತಹ ಹೆಂಡತಿಯರು ಕನಸಿನಲ್ಲಿ ಮಾತ್ರ ಸಿಗಲು ಸಾಧ್ಯ.**



# ಚುಟುಕು ಚಟಾಕಿ

**ಬೇಲೂರು ರಾಮಮೂರ್ತಿ**

## ಯಾರು ಶ್ರೀಮಂತರು

ಎದುರಿಗೆ ಬಂದ ಶಂಕರನನ್ನು ಬಹಳ ಶ್ರೀಮಂತ ಇರಬೇಕು ಅಂದ್ಕೊಂಡು ರಾಜು ವಿಚಾರಿಸಿದಾಗ, ಶಂಕರ ಹೇಳಿದ ನಾನು ಹುಟ್ಟಿದ್ದು ಸದಾಶಿವನಗರದಲ್ಲಿ, ಬೆಳೆದಿದ್ದು ಕೋರಮಂಗಲ, ಇಂದಿರಾ ನಗರ, ಹೆಚ್.ಎಸ್.ಆರ್. ಲೇಔಟ್‌ಗಳಲ್ಲಿ ಅಂದ. ಈಗೆಲ್ಲಿರೋದು ಅಂತ ಕೇಳಿದ್ರೆ ಕಲಾಸಿಪಾಳ್ಯದಲ್ಲಿ ಅಂದ. ಅಷ್ಟೆಲ್ಲ ಪಾಷ್ ಲೊಕಾಲಿಟಿನಲ್ಲಿದ್ದು ಈಗ ಕಲಾಸಿಪಾಳ್ಯದಂತ ಏರಿಯಾದಲ್ಲಿರೋದು ಕಷ್ಟ ಅಲ್ವ ಅಂತ ಕೇಳಿದ್ರೆ ಏನಿಲ್ಲ ನಮ್ಮ ತಂದೆ ತಾಯಿ ಇಬ್ಬರದೂ ಟ್ರಾನ್ಸ್‌ಫರಬಲ್ ಜಾಬ್, ಅವರು ಎಲ್ಲಿರ್ತಾರೋ ಅಲ್ಲಿಗೆ ನಾವು ಹೋಗಲೇಬೇಕಲ್ಲ ಅಂದ. ನಿಮ್ಮ ತಂದೆ ತಾಯಿ ಯಾವ ಕಂಪನೀಲಿ ಕೆಲಸ ಮಾಡೋದು ಅಂತ ರಾಜು ಕೇಳಿದ್ರೆ ಶಂಕರ ಅವರಿಬ್ಬರೂ ಕೂಲಿ ಕಾರ್ಮಿಕರು ಅಂದ.

★★★★★

## ಸುಖ ಎಲ್ಲಿದೆ

ಸಂತೋಷವಾಗಿರುವ ರಾಮಯ್ಯನನ್ನು ನಿಮ್ಮ ಸಂತೋಷದ ಗುಟ್ಟೇನು ಅಂತ ಬಾಬು ಕೇಳಿದರೆ ಆಗಿರೋ ಮೂರು ಮದುವೆ ಅಂದ. ಅಲ್ಲ ಒಂದು ಮದುವೆಗೇ ನಾನು ಸುಸ್ತು ಹೊಡೆದಿರುವಾಗ ಅದ್ಹೇಗೆ ಮೂರು ಮೂರು ಮದುವೆಯಾಗಿ ನೀವು ಸುಖವಾಗಿದೀರ ಅಂತ ಬಾಬು ಕೇಳಿದರೆ, ರಾಮಯ್ಯ ಹೇಳಿದ್ದು ಮೊದಲ ಹೆಂಡ್ತಿ ಸತ್ತಳು, ಎರಡನೇ ಮದುವೆಯಾದೆ, ಎರಡನೆ ಹೆಂಡತಿ ಸತ್ತಳು, ಮೂರನೇ ಮದುವೆಯಾದೆ ಈಗ ಸುಖವಾಗಿದೀನಿ ಅಂದ. ಹೋಗ್ಲಿ ಬಿಡಿ ಮೂರನೇ ಹೆಂಡ್ತಿ ಜೊತೆನಾದ್ರೂ ಸುಖವಾಗಿದೀರಲ್ಲ ಅಂದ್ರೆ, ಅದು ಹಾಗಲ್ಲ, ಈಗೊಂದು ತಿಂಗಳ ಹಿಂದೆ ಮೂರನೇ ಹೆಂಡತಿಯೂ ಸತ್ತಳು. ಹೀಗಾಗಿ ನಾನು ಈಗ ಸುಖವಾಗಿದೀನಿ ಅಂದ.

★★★★★

## ಹಾಡಿನ ಶಕ್ತಿ

ನಾಗರಾಜನ ಮಗಳು ಹಾಡ್ತಾಳೆ. ಹಾಡಿ ಹಾಡಿ ಜನರನ್ನ ಸಾಯಿಸ್ತಾಳೆ. ಅವಳು ಹಾಡಿದಾಗ ಅವರ ಮನೆ ಮುಂದೆ ಕತ್ತೆಯೊಂದು ಸತ್ತುಬಿತ್ತು. ಮನೆ ಬಾಡಿಗೆ ಕೇಳಲು ಬಂದ ಮಾಲೀಕ ಮನೆ ಮುಂದೇ ಸತ್ತ. ಭಿಕ್ಷೆ ಕೇಳಲು ಬಂದ ಭಿಕ್ಷುಕ ಅವಳ ಹಾಡು ಕೇಳಿ ಸತ್ತ. ಆದರೆ ನಾಗರಾಜ ಇವ್ಯಾವುದನ್ನೂ ಒಪ್ಪದೇ ಇವೆಲ್ಲ ಕೇವಲ ಕಾಕತಾಳೀಯ ಅಂದ. ಶ್ರೀಧರ ಒಂದು ಛಾನ್ಸ್ ತಗೊಂಡೇಬಿಡೋಣ ಅಂತ ನಮ್ಮ ಅತ್ತೆನ ನಿಮ್ಮ ಮನೆಗೆ ಕಳಿಸ್ತೀನಿ ಅವಳ ಮುಂದೆ ನಿಮ್ಮ ಮಗಳಿಗೆ ಹಾಡಲು ಹೇಳಿ ಅಂದು ಹೊರಟ. ಎಲ್ಲಿಗೆ ಹೊರಟಿರಿ ಅಂತ ಕೇಳಿದ್ರೆ ಹೇಗಾದ್ರೂ ಆಗ್ಲಿ ನಾಲ್ಕು ಜನ ಬ್ರಾಹ್ಮಣರಿಗೆ ಒಬ್ಬರು ಪುರೋಹಿತರಿಗೆ ಹೇಳಿಬರ್ತಿನಿ ಅಂದು ಶ್ರೀಧರ ಹೊರಟೇಬಿಟ್ಟ.

★★★★★

## ಕಳ್ಳನ ಹೆಂಡತಿ

ಕಳ್ಳತನ ಮಾಡ್ತಿದ್ದ ನಾಗಣ್ಣನಿಗೆ ಆ ಕೆಲಸ ಬಹಳ ಸಲೀಸಾಗಿತ್ತು. ಅವನಿಗೆ ಜೈಲಲ್ಲಿರೋದೇ ಒಂದು ರೀತಿ ಸಂತೋಷ. ಜೈಲಲ್ಲಿದ್ರೆ ಖುಷಿಯಾಗಿರ್ತಾನೆ, ಅದೇ ಜೈಲಿನ ಹೊರಗೆ ಇದ್ರೆ ಚಡಪಡಿಸುತ್ತಿರುತ್ತಾನೆ. ಇದನ್ನು ಕೇಳಿದ ಸುರೇಶ, ಹುಷಾರಪ್ಪ, ಗಾದೆನೇ ಕೇಳಿಲ್ವಾ ಕಳ್ಳನ ಹೆಂಡತಿ ಎಂದಿದ್ರೂ ಮುಂಡೆ ಅಂತ. ನಿನ್ನ ಹೆಂಡ್ತಿಗೋಸ್ಕರನಾದ್ರೂ ನೀನು ಹುಷಾರಾಗಿರಬೇಕು ಅಂದ್ರೆ, ನಾಗಣ್ಣ ನಮ್ಮಿಬ್ರದ್ದೂ ಒಂಥರಾ ಅಡ್ಜಸ್ಟ್‌ಮೆಂಟು ಇದ್ರೆ ಇಬ್ಬರೂ ಜೈಲಿನ ಒಳಗೇ ಇರ್ತೀವಿ ಇಲ್ಲದಿದ್ರೆ ಇಬ್ಬರೂ ಹೊರಗೇ ಇರ್ತೀವಿ ಅಂದ.

★★★★★

## ಹೆಂಡ್ತಿ ಅಂದ್ರೆ ಹೇಗಿರಬೇಕು

ಹೆಂಗಸರ ವಿಚಾರದಲ್ಲಿ ಬಹಳ ಗೊಂದಲದಲ್ಲಿದ್ದ ಶ್ರೀಪತಿ ಇಂಥಾ ಹೆಂಗಸರ ಜೊತೆ ಸಂಸಾರ ಮಾಡೋದು ಹೇಗೆ ಅಂತ ತಲೆ ಕೆಡಿಸಿಕೊಂಡಿದ್ದ. ಸುಬ್ರಾಮು ಅವನಿಗೆ ಸಮಾಧಾನ ಹೇಳಿದ. ಶ್ರೀಪತಿ ಕೇಳಿದ ಎಲ್ಲ ಅನುಮಾನಗಳಿಗೂ ಪರಿಹಾರ ಹೇಳಿದ ನಂತರ ಸುಬ್ರಾಮು, ಯಾಕೆ ನಿನ್ನ ಹೆಂಡ್ತಿ ನಿನ್ನನ್ನ ತುಂಬಾ ಗೋಳು ಹುಯ್ಕೊತಾಳಾ, ಹೇಳಿದ ಮಾತು ಕೇಳಲ್ವಾ ಅಂತ ಕೇಳಿದ್ರೆ, ಇಲ್ಲ ನನಗಿನ್ನೂ ಮದುವೆನೇ ಆಗಿಲ್ಲ, ಎಂಥಾ ಹೆಂಗಸನ್ನ ಮದುವೆಯಾಗಬೇಕು ಅಂತ ಯೋಚಿಸಿ ಯೋಚಿಸಿ ಜೊತೆಗೆ ಅವರಿವರ ಮಾತು ಕೇಳಿ ತಲೆ ಕೆಟ್ಟುಹೋಯ್ತು ಅಂದ ಶ್ರೀಪತಿ.

★★★★★

## ಚಿಕಿತ್ಸೆ ಯಾರಿಗೆ

ನಾಗ ಮತ್ತು ಚಂದ್ರ ಮಾತಾಡ್ತಾ ನಿಂತಿದ್ದಾಗ ನಾಗನ ಮೊಬೈಲ್ ಹೊಡ್ಕೊಂಡ್ತು ಹೆಂಡ್ತಿ ಮಾತಾಡ್ತಿದ್ದುದನ್ನು ಕೇಳಿಸಿಕೊಂಡ ನಾಗನ ಪ್ರತಿಕ್ರಿಯೆ ಹೀಗಿತ್ತು. ಏನಂದೇ, ರಾಜುಗೆ ಅಪಘಾತನಾ, ಅವನನ್ನು ಮನೆಯಿಂದ ಹೊರಗಡೆ ಬಿಡಬೇಡ ಅಂತ ಹೇಳಿರ್ಲಿಲ್ವ. ಏನಾಗಿದೆ. ಸ್ಕೂಟರ್ ಬಂದು ಹೊಡೀತಾ, ಕಾಲಿಗೆ ಸ್ವಲ್ಪ ಏಟಾಗಿದ್ಯಾ. ಬೇಗ ಡಾಕ್ಟರ್ ಹತ್ರ ಕರ್‍ಕೊಂಡು ಹೋಗು. ಅವನಿಗೆ ತಿನ್ನೋಕೆ ಕುಡಿಯೋಕೆ ಅದೂ ಇದೂ ಕೊಡಬೇಡ. ಡಾಕ್ಟರು ಏನು ಹೇಳ್ತಾರೋ ಅದನ್ನೇ ಕೊಡು. ನಾ ಬೇಗ ಬರ್ತೀನಿ. ಅಂದು ಮೊಬೈಲ್ ಆಫ್ ಮಾಡಿದ. ಚಂದ್ರನೂ ಬೇಜಾರಿಂದ ಏನಂತೆ, ರಾಜುಗೆ ಅಪಘಾತವಂತಾ. ರಾಜು ನಿನ್ನ ದೊಡ್ಡ ಮಗನೋ ಇಲ್ಲಾ ಚಿಕ್ಕ ಮಗನೋ ಅಂತ ಕೇಳಿದರೆ ನಾಗ ಎರಡೂ ಅಲ್ಲ ರಾಜು ನಮ್ಮನೆ ನಾಯಿ ಅಂದು ದಾರೀಲಿ ಹೋಗ್ತಾ ಇದ್ದ ಖಾಲೀ ಆಟೋ ನೋಡಿ ಆಟೋ ಅಂತ ಕೂಗಿ ಅತ್ತ ಓಡಿದ.

★★★★★

## ಯಾರ ಮನೆ?

ಸೋಮು ವರಾಂಡದಲ್ಲಿ ಪೇಪರ್ ಓದ್ತಾ ಕೂತಿದ್ದಾಗ ನಾಲ್ಕು ಜನ ಒಳಗೆ ಬಂದ್ರು. ಅವರಲ್ಲೊಬ್ಬ ನಾವು ಆದಾಯ ತೆರಿಗೆ ಇಲಾಖೆಯವರು. ನಿಮ್ಮನೆ ರೈಡ್ ಮಾಡೋಕೆ ಬಂದಿದೀವಿ. ನೀವು ಅಲ್ಲಾಡಬಾರದು. ಬೀರು ಬೀಗದ ಕೈ ಕೊಡಿ. ಅಂತ ಒಬ್ಬ ಕೈ ಒಡ್ಡಿದ. ಸೋಮು ಅವರ ಮುಖ ನೋಡಿ ಎದ್ದ. ಅಲ್ಲಾಡಬಾರದು ಅಂತ ಹೇಳಿರಲಿಲ್ವ. ಕೂತ್ಕೊಳ್ರೀ ಅಂತ ಇನ್ನೊಬ್ಬ ರೇಗಿದ. ಬೀಗದ ಕೀ ಕೇಳಿದರೆ ಸೋಮು ರೀ ನಾನು ಬೀಗದ ಕೀನೂ ಕೊಡೋಲ್ಲ, ಯಾವ ದಾಖಲೆನೂ ಕೊಡೋಲ್ಲ, ನೀವು ಕೇಳಿದ್ದಕ್ಕೆ ಏನೂ ಉತ್ತರನೂ ಕೊಡಲ್ಲ. ಯಾಕೇಂದ್ರೆ ಇದು ನನ್ನ ಮನೆ ಅಲ್ಲ, ಈ ಮನೆ ಓನರ್ರು ಶಂಕರ, ಅಲ್ನೋಡಿ ಶಂಕರ ಬಂದ ಅವನನ್ನ ಹಿಡ್ಕೊಳ್ಳಿ ಅಂದು ಜಂಬದಿಂದ ತನ್ನ ಮನೆಗೆ ಬಂದ.

★★★★★

## ನಾಯಿ ಮುಖ

ಸೋಮು ಹುಡುಗಿನ ನೋಡೋಕೆ ಹೋಗಿದ್ದ. ಸೋಮುನ ನೋಡಿದವರೇ ಎಲ್ಲರೂ ಒಂದೇ ಮನಸ್ಸಿನಿಂದ ಅವನನ್ನು ಒಪ್ಪಿಕೊಂಡರು. ಸೋಮುಗೆ ಆಶ್ಚರ್ಯ, ಕುತೂಹಲ ಹಿಡಿದಿಟ್ಟುಕೊಂಡಿದ್ದು ಪ್ರಥಮ ರಾತ್ರಿ ಹೆಂಡತಿ ರೂಮೊಳಗೆ ಬಂದಾಗ ನಿಮ್ಮನೆಯವರೆಲ್ಲ, ನಿನ್ನನ್ನೂ ಸೇರಿಸಿ, ನೋಡಿದ ಮೊದಲನೇ ದಿನಾನೇ ನನ್ನಲ್ಲಿ ಏನು ಕಂಡು ಅಷ್ಟೊಂದು ಸಂತೋಷದಿಂದ ಮದುವೆಗೆ ಒಪ್ಕೊಂಡ್ರಿ ಅಂತ ಕೇಳಿದ್ದಕ್ಕೆ ನವವಧು ನಳಿನ ನಾಚಿ ಹೇಳಿದಳು, ಓ ಅದಾ, ನಮ್ಮನ್ಲಿ ಒಂದು ನಾಯಿ ಇತ್ತು. ಎಲ್ಲರಿಗೂ ಪ್ರಿಯವಾಗಿತ್ತು. ಈಗೊಂದೆರಡು ತಿಂಗಳ ಹಿಂದೆ ಅದು ಸತ್ತು ಹೋಯ್ತು. ಅದನ್ನು ನಮಗ್ಯಾರಿಗೂ ಮರೆಯೋಕೇ ಆಗ್ತಿಲ್ಲ. ನಿಮ್ಮ ಮುಖ ಥೇಟ್ ಸತ್ತುಹೋದ ನಮ್ಮನೆ ನಾಯಿ ತರ ಇದೆ ಅಂದಾಗ ಸೋಮು ಬೆಚ್ಚಿಬಿದ್ದ.

"ನಾನು ನನ್ನ ರಾಜಕೀಯ ಜೀವನದಲ್ಲಿ
'ಪೀಠ'ಕ್ಕಾಗಿ ಎಸ್ಟೊಂದ್ ಕಷ್ಟ ಪಟ್ಟಿದೀನಿ...
ಅಂದ್ರೂ...ಈ ಬಾರಿಯ 'ಜ್ಞಾನಪೀಠ' ಹೋಗ್ಲೀ
'ರಾಜ್ಯೋಸ್ತವ' ಪ್ರಶಸ್ತಿಯಾದ್ರೂ ಸಿಗ್ಬೇಕಿತ್ತು...!"



**SIEMENS**

Authorised
Hearing Care
Centre

**Do you need the best
sound technology?**

**Serving you with quality &
trust for more than a decade.**




**Whisper Hearing Aids**
Pvt. Ltd.

ವಿಸ್ಪರ್

1030/13, 25 main, 39 cross, 4th 'T' block,
**Jayanagara**, Bengaluru - 560041

**ph:** 080-26640571, 9741765454
www.hearingaidindia.in

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**

**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**



# ಗರುಡ ಪುರಾಣ

## ❁ ನೀರಗುಂದ ಕೇಶವ ಮೂರ್ತಿ ರಾವ್

**ಮೊ**ದಲು ಗರುಡ ಪುರಾಣವನ್ನು ಪರಿಚಯಿಸಿ ನಂತರ ಪುಸ್ತಕದ ಪ್ರಸಂಗವನ್ನು ತಿಳಿಸುತ್ತೇನೆ.

ಗರುಡ ಪುರಾಣವು ಸಂಕಟ ಪರಿಹಾರಕ್ಕಾಗಿ ಓದುವ ಪುರಾಣ ಗ್ರಂಥವೆಂದು ನಿಘಂಟುಕಾರರ ಅಂಬೋಣ. ಇದರಲ್ಲಿ ಮರಣಾ ನಂತರ ಜೀವಿಗಳ ಗತಿ ಏನಾಗುವುದು ಮತ್ತು ನರಕದ ಭಯಂಕರ ವರ್ಣನೆ ಇರುವುದಂತೆ!

ಹದಿನೆಂಟು ಮಹಾಪುರಾಣಗಳಲ್ಲಿ ಗರುಡ ಪುರಾಣವೂ ಒಂದು ಇದರಲ್ಲಿ ಹತ್ತೊಂಭತ್ತು ಸಾವಿರ ಶ್ಲೋಕಗಳಿವೆಯಂತೆ. ಇದನ್ನು ವ್ಯಾಸರೇ ಬರೆದರೆಂದು ಪ್ರತೀತಿ.

ಗರುಡ ಪುರಾಣವನ್ನು ಮನೆಯ ಹಿರಿಯರು ನಿಧನರಾದಾಗ ಮನಸ್ಸಿನ ಶಾಂತಿಗಾಗಿ ಪಠಣ ಮಾಡುವುದು ಸಾಮಾನ್ಯವಾಡಿಕೆಯಂತೆ.

ನಮ್ಮೂರಿನಲ್ಲಿ ಅಂದರೆ ಬೇಗೂರಿನಲ್ಲಿ ಶಾಸನದ ಶ್ರೀರಂಗರಾಯರ ತಂದೆ ನಿಧನರಾದಾಗ ಗರುಡ ಪುರಾಣವನ್ನು ಓದಿಸಿದ್ದರೆಂದು ಬೇಗೂರಿನ ಹಿಂದಿನ ಹಿರಿಯರು ಹೇಳುತ್ತಿದ್ದರು. ಗರುಡಪುರಾಣವು ಮನೆಗಳಲ್ಲಿರುವುದು ನಿಷಿದ್ಧವೆಂಬ ಪ್ರತೀತಿಯೂ ಇದೆ. ಅಂದ ಮೇಲೆ ಪುಸ್ತಕ ಓದಿ ಖುಷಿ ಪಡುವ ನನ್ನಂತಹ ಓದುಗರಿಗೆ ಅದು ಹೇಗೆ ಸಿಗಬೇಕು. ಗರುಡ ಪುರಾಣ ಪುಸ್ತಕ ನನ್ನ ಕೈಗೆ ಸಿಕ್ಕಾಗಿನ ಪ್ರಸಂಗ ಮುಂದೆ ಹೇಳುವವನಿದ್ದೇನೆ. ಯಾವುದೇ ಗ್ರಂಥ ಭಂಡಾರದಲ್ಲೂ ಇದು ನನ್ನ ಕಣ್ಣಿಗೆ ಇದುವರೆಗೂ ಬಿದ್ದಿಲ್ಲ.

ಗರುಡ ಪುರಾಣದ ಕೆಲವು ಸಂಗತಿಗಳು ಶ್ರೀ ಎಸ್.ಎಲ್ ಭೈರಪ್ಪನವರ 'ನೆಲೆ' ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಕಾದಂಬರಿಯ ನಾಯಕ ನಿಧನ ಹೊಂದಿದಾಗ ಮನೆಯಲ್ಲಿ ಗರುಡ ಪುರಾಣ ಓದಿದಾಗ '...... ಎರಡನೆ ಅಧ್ಯಾಯ ಯಮಲೋಕದ ಮಾರ್ಗ ಮತ್ತು ಪಯಣದ ಬವಣೆ....''

ಅತಿ ದುಃಖದಾಯಕವಾದ ಯಮಲೋಕದ ಮಾರ್ಗವನ್ನು ನಾನು ನಿನಗೆ ವಿವರಿಸುತ್ತೇನೆ. ನೀನು ನನ್ನ ಭಕ್ತನಾದರೂ ಸಹ ಅದನ್ನು ಕೇಳಿದಾಗ ನಡುಗಿ ಹೋಗುವೆ. ಮನುಷ್ಯನು ವಿಶ್ರಮಿಸಿಕೊಳ್ಳಲು ಬೇಕಾದ ನೆರಳು ಅಲ್ಲಿಲ್ಲ. ಪ್ರಾಣ ರಕ್ಷಣೆಗೆ ಬೇಕಾದ

ಆಹಾರಾದಿಗಳೂ ಇಲ್ಲ. ಬಾಯಾರಿಕೆಯಾದರೆ ಕುಡಿಯುವ ನೀರಿಲ್ಲ ಹನ್ನೆರಡು ಸೂರ್ಯರು ಪ್ರಳಯದ ಅಂತ್ಯದಲ್ಲಿ ತಪಿಸುವಂತೆ ಪ್ರಜ್ವಲಿಸುತ್ತಾರೆ.....''

ಗರುಡ ಪುರಾಣದಲ್ಲಿಯ ವರ್ಣನೆಯನ್ನು ಲೇಖಕರು ಮುಂದಿನ ಪುಟಗಳಲ್ಲಿ ಈ ರೀತಿ ವರ್ಣಿಸುತ್ತಾರೆ.

''ಎಲೈ ಗರುಡ ಇಂದ್ರಿಯಗಳನ್ನು ಜಯಿಸದೆ ಇರುವವನು ಬಂಧುಗಳು ರೋಧಿಸುತ್ತಿರಲು ತೀವ್ರವಾದ ವೇದನೆಯಿಂದ ಮೂರ್ಛಿತನಾಗುತ್ತಾನೆ. ಇಂದ್ರಿಯ ಸಮೂಹದ ವಿಕಲತೆಯಿಂದ ಚೈತನ್ಯವು ಜಡವಾಗುತ್ತದೆ. ಯಮದೂತರು ಹತ್ತಿರ ಬರುತ್ತಾರೆ. ಆಗ ಪ್ರಾಣವು ಹೊರಡುತ್ತದೆ. ಸ್ವಸ್ಥಾನದಿಂದ ಶ್ವಾಸವು ಹೊರಡುವಾಗ ಮರಣ ಕಾಲದ ಒಂದು ಕ್ಷಣವೂ ಒಂದು ಕಲ್ಪದಂತೆ ಭಾಸವಾಗುತ್ತದೆ. ಆಗ ನೂರು ಚೇಳುಗಳು ಕಚ್ಚಿದರೆ ಆಗುವಷ್ಟು ನೋವಾಗುತ್ತದೆ. ನೊರೆ ಉಕ್ಕಿ ಬಂದು ಮುಖವೆಲ್ಲಾ ಜೊಲ್ಲಿನಿಂದ ತುಂಬಿರುತ್ತದೆ. ಕೂದಲನ್ನು ಮೇಲಕ್ಕೆ ಕಟ್ಟಿರುವ ಕಾಗೆಯಂತೆ ಕಪ್ಪು ಬಣ್ಣದವರಾದ, ವಕ್ರಮುಖದ ಉಗುರುಗಳೇ ಆಯುಧವಾಗಿರುವ ಯಮದೂತರನ್ನು ನೋಡಿ ಅವನು ಕಂಪಿತ ಹೃದಯದವನಾಗಿ ಮಲ ಮೂತ್ರಮಾಡಿಕೊಳ್ಳುತ್ತಾನೆ. ಇದೆಲ್ಲಾ ಪಾಪ ಮಾಡಿದವರಿಗೆ ಆಗೋದು.... ಕಾದಂಬರಿಯಲ್ಲಿ ಓದಿದ ಈ ಗರುಡ ಪುರಾಣದ ಪ್ರಸಂಗ ನನ್ನಲ್ಲಿ ಏನಾದರೂ ಆಗಲಿ ಇದನ್ನು ಪೂರ್ಣವಾಗಿ ಓದಲೇ ಬೇಕೆಂಬ ಕುತೂಹಲ ಹೆಚ್ಚಾಯ್ತು.

ಇದುವರೆಗೂ ಹೇಳಿದ ಪುರಾಣದ ಪುಣ್ಯ ಕಥೆ ಓದುಗರಿಗೆ (ಕೆಲ) ತಲೆನೋವನ್ನು ತಂದಿರಬಹುದು. ಏನೋ ಬೊಕಳೆ ಬಿಡ್ತಿದಾನೇಂತ ಅನ್ನ ಬೇಡಿ. ಪುರಾಣದ ಕುರಿತ ಹೇಳಿಕೆಗಳನ್ನು ನೋಡಿ –

- ಎಲ್ಲರೂ ಒಪ್ಪಿಕೊಂಡರೂ ಯಾರೂ ನಂಬದ ಕಥೆ.
- ವಿಪರೀತ ಮೆಚ್ಚಿಕೆಯಿಂದ ಕಡೆಗಣಿಸಿರುವ ಒಂದು ಒಳ್ಳೆಯ ಪುಸ್ತಕ.
- ಅಗ್ಗದ ಪುಸ್ತಕಗಳಿಗೆ ವಿಪರೀತ ಬೆಲೆ ಹಾಕುವ ಒಂದು ಕೂಟದಲ್ಲಿ ಸೇರಲು ನಿಮಗೆ ಪುಕ್ಕಟೆ ಸಿಗುವ ಒಂದು ದೊಡ್ಡ ಪುಸ್ತಕ ಪುರಾಣಗಳೆಲ್ಲ ಸುಳ್ಳಿನ ಕಂತೆಯೆಂದು ಖಚಿತವಾಗಿ ಬಿಟ್ಟರೆ, ಈ ಪ್ರಪಂಚದಲ್ಲಿ ಬದುಕುವುದೇ ಕಷ್ಟ

ನುಡಿ–ಕಿಡಿ (ಡಿ.ಎಸ್.ಶಿವಪ್ಪ)

ಪುರಾಣದ ಕುರಿತು ಮಾರ್ಕ್‌ಟ್ವಯ್ನ್ ''ಎಲ್ಲರೂ ಓದಿರಬೇಕೆಂದು ಕೋರಿದರೂ ಯಾರೂ ಓದಲು ಇಷ್ಟ ಪಡಿದಿರುವಂತಹುದು'' (A classic is some thing that every body wants to have read and nobody wants to read) ಎನ್ನುತ್ತಾನೆ.

ಯಾರು ಏನೇ ಹೇಳಿದರೂ ನನಗೆ ಮಾತ್ರ ಗರುಡ ಪುರಾಣ ಓದುವ ಹುಚ್ಚು ಹೋಗಲಿಲ್ಲ. ಈಗಾಗಲೇ ನಾನು ನನ್ನ ಇಷ್ಟದ ಪುಸ್ತಕ, ಮೆಚ್ಚಿನ ಪುಸ್ತಕ, ಪ್ರಭಾವ ಬೀರಿದ ಪುಸ್ತಕ ಪುಸ್ತಕಗಳ ಹುಡುಕಾಟದಲ್ಲಿ, ನೋಡಿದರೆ ಬಿಡದೆ ಇರುವ ಪುಸ್ತಕಗಳ ಕುರಿತು ಕೊರೆದದ್ದೂ ಉಂಟು. ಗರುಡ ಪುರಾಣ ಗ್ರಂಥಕ್ಕೆ ಸಂಬಂಧ ಪಟ್ಟದ್ದು, ಬಹಳ ವರ್ಷಗಳ

ಹಿಂದಿನ ಮಾತು. ಮಾಮೂಲಿನಂತೆ ಪ್ರತಿ ಭಾನುವಾರ ವಿದ್ಯಾರ್ಥಿ ಭವನದ ದೋಸೆ ತಿಂದು ಮೆಜೆಸ್ಟಿಕ್, ಬಳೆಪೇಟೆಯ 'ಸೆಕೆಂಡ್ ಹ್ಯಾಂಡ್' ಪುಸ್ತಕಗಳನ್ನರಸುತ್ತ ಹೋಗುತ್ತಿದ್ದ ಸತ್ ಸಂಪ್ರದಾಯ. ಇಂದಿಗೂ ನನ್ನಲ್ಲಿರುವ ಪುಸ್ತಕದ ಬೀರುವಿನಲ್ಲಿಯ ಕೆಲವು ಅಪರೂಪದ ಪುಸ್ತಕಗಳು ಇಲ್ಲಿಯೇ ದೊರೆತದ್ದು. ಒಂದು ಭಾನುವಾರ ಪುಸ್ತಕದಂಗಡಿಯ ಮುಂದೆ ನಿಂತಿದ್ದೇನೆ. ವಿವಿಧ ವಿಶೇಷ ಪುಸ್ತಕಗಳ (ಬೆಲೆಗಳನ್ನು ತಿದ್ದಿ, ಬರೆದು, ಚೀಟಿ ಅಂಟಿಸಿ, ಮುಖಪಟಗಳನ್ನು ಹರಿದು ಕಟ್ಟು ಹಾಕಿದ) ಗುಂಪಿನಲ್ಲಿದ್ದ ಪುಸ್ತಕವೊಂದಕ್ಕೆ ಕೈಹಾಕಿದೆ. ಪುಟತಿರುವಿದಾಗ ಕನ್ನಡಕದ ಕಣ್ಣಿಗೆ ಕಂಡದ್ದು ಕಪ್ಪು ಶಾಯಿಯಲ್ಲಿ ಓರೆ ಕೋರೆಯಾಗಿ ''ಗರುಡ ಪುರಾಣ'' ಎಂದು ಬರೆದ ಪುಸ್ತಕವಾಗಿತ್ತು! ಆಗ ನನಗೆ ''ನರಕಕ್ಕೆ ಮೂರೆಗೇಣು''! ಬಹಳಕಾಲದಿಂದ ಹಂಬಲಿಸುತ್ತಿದ್ದ ಪುಸ್ತಕ. ಅಲಕ್ಷ್ಯದಿಂದ ಬೆಲೆಯನ್ನು ವಿಚಾರಿಸಿದೆ. ಮಾಲೀಕ ಅದರ ಬೆಲೆ ತಿಳಿಸಿದಾಗ ಅದು ಅಂದಿಗೆ ನಿಜಕ್ಕೂ ದುಬಾರಿ ಬೆಲೆಯಾಗಿತ್ತು. ಚೌಕಾಶಿ ಮಾಡದೆ ಹೇಳಿದಷ್ಟು ಕೊಡಲು ಮುಂದಾದಾಗ ಮಾಲೀಕ ಗಭಕ್ಕನೆ ಪುಸ್ತಕವನ್ನು ಕಸಿದುಕೊಂಡು.

''ಈ ಪುಸ್ತಕ ಕೊಡಾಕಿಲ್ಲ ಸಾರ್''

''ಯಾಕೆ? ಮಾರಾಟಕ್ಕಿಲ್ವ''?

''ನಿಮಗಲ್ಲ''

''ನನಗ್ಯಾಕಲ್ಲ?''

''ಎಲ್ಲಾರೂ ಓದೋ ಪುಸ್ತಕ ಇದಲ್ಲ''


''ಅಂದರೆ''?

''ಇದು ಮನೇಲಿ ಮಡೀಕ್ಕಳೋ ಪುಸ್ತಕ ಅಲ್ಲ''

ನಮ್ಮಿಬ್ಬರ ಮಾತಿನ ಚಕಮಕಿ ನಡೆಯುತ್ತಿದ್ದ ಸಮಯದಲ್ಲಿ ಅಲ್ಲಿಗೆ ವಯಸ್ಸಾದ ವ್ಯಕ್ತಿಯೊಂದು ಆಗಮಿಸಿತು. ಪುಸ್ತಕದ ಮಾಲೀಕ ''ಗುರುಗಳೆ, ಸರಿಯಾದ ಸಮಯಕ್ಕೆ ಬಂದ್ರಿ. ಈ 'ಗಲ್ಡಪುರಾಣ'ದ ಪುಸ್ತಕ ಈ ರಾಯ್ರಿಗೆ ಬೇಕಂತೆ. ಇದರ ಬಗ್ಗೆ ವಸಿ ಹೇಳಿ. ಹೋದ್ವಾರ ಬಂದಾಗ ನೀವು ''ಇದನ್ನು ಯಾರ್ಗೂಕೊಡ್ಬೇಡ ನನಗೆ ಬೇಕು. ಮುಂದಿನವಾರ ಬರ್ತೀನಿ'' ಅಂದಿದ್ರಿ ಎಂದ ಪುಸ್ತಕದ ಮಾಲೀಕ.

ಈಗ ನನಗೆ ಅವನ ಗುರುಗಳಿಂದ 'ಗರುಡ ಪುರಾಣ'ದ (ಈಗಾಗಲೇ ತಿಳಿಸಿದಂತೆ) ಉಪನ್ಯಾಸ!

ಹೀಗೆ ಕೊನೆಗೂ 'ಗರುಡ ಪುರಾಣ'ದ ಪುಸ್ತಕ ಓದಲು ಸಿಗಲೇ ಇಲ್ಲ. ನಿಮ್ಮಲ್ಲೇನಾದರೂ ಇದ್ದರೆ ಕೊಡಿ. ಖಂಡಿತಾ ಓದಿ ವಾಪಸ್ ಕೊಡುತ್ತೇನೆ.


ಆಧುನಿಕ ಮಂಥನ!
LEAKS
2G
ONION
CWG
ADARSH



# ಬಸ್ ಪ್ರಯಾಣದ ಅನುಭವಗಳು

## ❁ ಅಡ್ಡೂರು ಕೃಷ್ಣರಾವ್

**ನ**ಮ್ಮ ಬಸ್ ಮಾಡಿಗೆರೆಯಲ್ಲಿ ನಿಂತಿತು. ಕೆಲವರು ಬಸ್ಸಿನಿಂದ ಇಳಿದರು. ಹಲವರು ಬಸ್ ಹತ್ತಿದರು. ಒಂದು ಕಾಲಿನ ವ್ಯಕ್ತಿಯೊಬ್ಬ ಮುಂಭಾಗದ ಬಾಗಿಲಿನಿಂದ ಬಸ್ಸೇರತೊಡಗಿದ. ತನ್ನ ಊರುಗೋಲುಗಳನ್ನು ಬಸ್ಸಿನೊಳಗಿಟ್ಟ, ಜೊತೆಗಿದ್ದ ಮಗಳ ಸಹಾಯದಿಂದ ನಿಧಾನವಾಗಿ ಬಸ್ಸೇರಿದ. ಮಗಳು ಅತ್ತಿತ್ತ ನೋಡಿ ''ಸೀಟು ಯಾವುದೂ ಖಾಲಿ ಇಲ್ಲ, ಅಪ್ಪಾ'' ಅಂದಳು. ಆತ ಸೀಟಿನಲ್ಲಿ ಕೂತಿದ್ದವರ ಕಡೆಗೊಮ್ಮೆ ನೋಡಿದ. ಕೂತಿದ್ದವರು ಯಾರೂ ಎದ್ದು ಆತನಿಗೆ ಸೀಟು ಬಿಟ್ಟು ಕೊಡಲಿಲ್ಲ. ''ಇಲ್ಲೇ ಕೂರ್ತಿನಿ ಬಿಡು'' ಎಂದು ಆತ ಕೈಗಳನ್ನೂರಿ ಚಾಲಕನ ಕ್ಯಾಬಿನ್‌ನೊಳಗೆ ಸಾಗಿ, ಅಲ್ಲಿದ್ದ ಕಂಡಕ್ಟರರ ಸೀಟಿನ ಬುಡದಲ್ಲಿ ಕೂತು ಬಿಟ್ಟ. ಆಗ ಇಳಿದು ಹೋಗಿದ್ದ ಚಾಲಕ ಮತ್ತು ಕಂಡಕ್ಟರ್ ಬಂದು ಬಸ್ಸೇರಿದರು. ಚಾಲಕ ತನ್ನ ಸೀಟಿನಲ್ಲಿ ಕೂತು, ಪಕ್ಕದಲ್ಲಿದ್ದ ಒಂದೇ ಕಾಲಿನ ವ್ಯಕ್ತಿಯ ನೋಡಿದ. ಅವನ ತುಂಡಾದ ಕಾಲನ್ನೂ ನೋಡಿದ. ''ನಿಮಗೆ ಇದೇನಾಯಿತು?'' ಎಂದು ಕೇಳಿದ. ಅವನು ನಿಧಾನವಾಗಿ ಉತ್ತರಿಸಿದ, ''ಏನ್ ಹೇಳೋದ್ರಿ, ಕಳೆದ ವರುಷ ಇಲ್ಲೇ ಆಕ್ಸಿಡೆಂಟ್ ಆಗಿತ್ತು ನೋಡಿ. ಒಂದು ಟ್ಯಾಂಕರ್ ಬಸ್ಸಿಗೆ ಬಡಿದಿತ್ತು. ನನ್ನ ಕಾಲು ತುಂಡಾಗಿ ಹೋಯ್ತು.'' ಅಲ್ಲೇ ನಿಂತು ಇದನ್ನೆಲ್ಲ ಕೇಳುತ್ತಿದ್ದ ಕಂಡಕ್ಟರ್‌ಗೆ ಏನೆನ್ನಿಸಿತೋ...... ''ಏಳಿ ನೀವು, ಈ ಸೀಟಲ್ಲಿ ಕೂರಿ'' ಎಂದು ತನ್ನ ಸೀಟನ್ನೇ ತೋರಿಸಿದರು. ಅವನು ಕುಳಿತಲ್ಲಿಂದ ಕೈಯೂರಿ ಎದ್ದು, ಆ ಸೀಟಿನಲ್ಲಿ ಕೂತ. ಕಂಡಕ್ಟರತ್ತ ಭಾವ ತುಂಬಿದ ಕಣ್ಣುಗಳಿಂದ ನೋಡಿದ. ಆ ಕಂಡಕ್ಟರ್ ಹೊಸ ಪ್ರಯಾಣಿಕರಿಗೆ ಟಿಕೇಟ್ ಕೊಡಲು ಶುರು ಮಾಡಿದರು. ಇಂತಹ ಕಂಡಕ್ಟರರೂ ಇರುತ್ತಾರೆ.

**ಬಸ್ ತಡವಾಗಿ ಹೋಗಲು ಕಾರಣ**

ಚಿಕ್ಕಮಂಗಳೂರಿನಿಂದ ಹೊರಡುವ ಬಸ್ಸೇರಿ ಕೂತಿದ್ದೆ. ಚಾಲಕ ತನ್ನ ಸೀಟಿನಲ್ಲಿ ಕೂತರು. ಆದರೆ ಬಸ್ ಹೊರಡುವ ಹೊತ್ತಾದರೂ ಎಂಜಿನ್ ಚಾಲೂ ಮಾಡಲಿಲ್ಲ. ಬಸ್ಸಿನೊಳಗೆ ಕುಳಿತಿದ್ದ ಪ್ರಯಾಣಿಕರಿಗೆಲ್ಲ ಅಸಹನೆ. ಚಾಲಕ ಆಗಾಗ ಹಿಂತಿರುಗಿ ನೋಡುತ್ತಿದ್ದರು ಖಾಲಿಯಾಗಿದ್ದ ಎರಡು ಸೀಟುಗಳ ಕಡೆಗೆ. ಹೀಗೇ ಸರಿದವು. ಐದು ನಿಮಿಷಗಳು. 'ಡ್ರೈವರ್ರೇ, ಟೈಂ ಆಯಿತಲ್ವಾ? ಇನ್ನೂ ಯಾಕೆ ಹೊರಟಿಲ್ಲ? 'ಎಂದೊಬ್ಬರು ಕೇಳಿದಾಗ ಚಾಲಕ ಸ್ವರ ಏರಿಸಿ ಉತ್ತರಿಸಿದರು. 'ಇಬ್ರು ಪುಣ್ಯಾತ್ಮರು ರಿಸರ್ವ್ ಮಾಡಿಸಿ ಇನ್ನೂ ಬಂದಿಲ್ಲ, ಅವ್ರಿಗಾಗಿ

ಕಾಯ್ತಾ ಇದೀನ್ರೀ. ಅವ್ರನ್ನ ಬಿಟ್ಟು ಹೊರಟರೆ, ಆ ಮೇಲೆ ಅವ್ರು ಕನ್ ಸ್ಯೂಮರ್ ಕೋರ್ಟಿಗೆ ಹೋದರೆ, ಯಾರಿಗೆ ಬೇಕು ಆ ತಾಪತ್ರಯ?'

ಅಷ್ಟರಲ್ಲಿ ರಿಕ್ಷಾದಿಂದಿಳಿದ ಇಬ್ಬರು ಓಡೋಡಿ ಬಂದು ಬಸ್ಸೇರಿದರು. ತಕ್ಷಣ ಎಂಜಿನ್ ಚಾಲೂ ಮಾಡಿದ ಡ್ರೈವರ್, ಬಸ್ ಓಡಿಸುತ್ತಾ ಪಕ್ಕದಲ್ಲಿದ್ದ ಪ್ರಯಾಣಿಕರೊಂದಿಗೆ ಮಾತು ಶುರು ಮಾಡಿದರು. ಮುಂದಿನ ಅರ್ಧ ತಾಸು ಬಳಕೆದಾರರ ಕೋರ್ಟಿನಲ್ಲಿ ಅವರು ಎದುರಿಸಬೇಕಾದ ಒಂದು ವ್ಯಾಜ್ಯದ ರಂಗುರಂಗಾದ ವಿವರಣೆ. ಕೊನೆಗೆ ಕೋರ್ಟ್ ರೂಪಾಯಿ 500 ದಂಡ ವಿಧಿಸಿದಾಗ ಅದನ್ನು ಅವರ ಸಂಬಳದಿಂದಲೇ ವಸೂಲಿ ಮಾಡಲಾಯಿತಂತೆ. 'ಅಂಥ ಒಂದು ಕೋರ್ಟ್ ಇದೆ ಅಂತಾನೇ ನಂಗೆ ಗೊತ್ತಿರಲಿಲ್ಲ. ಹೀಗೆ ಆದರೇನು ಇದೆಲ್ಲ ಗೊತ್ತಾಗೋದು ನೋಡಿ' ಎಂದು ಸ್ವಾನುಭವದ ಕತೆ ಮುಗಿಸಿದರು ಡ್ರೈವರ್.

**ಕಿಸೆಗಳ್ಳನ ಚಾಕಚಕ್ಯ**

ಧರ್ಮಸ್ಥಳದಿಂದ ಹೊರಟ ಬಸ್ ಚಾರ್ಮಾಡಿ ಘಾಟಿ ಏರಿ, ಕೊಟ್ಟಿಗೆಹಾರ ದಾಟಿ, ಮೂಡಿಗೆರೆಗೆ ಬಂದು ನಿಂತಿತು. ಬಸ್ಸಿನಿಂದ ಇಳಿಯುವವರ. ಬಸ್ ಹತ್ತುವವರ ಗಡಿಬಿಡಿ, ಗದ್ದಲ. ಹಿಂಭಾಗದ ಬಾಗಿಲಿನ ಬಳಿ ಜೋರುಜೋರು ಮಾತು. ಮುಂಭಾಗದಲ್ಲಿ ಕೂತಿದ್ದ ನಾನು ಅದೇನೆಂದು ನೋಡಿದೆ. ವ್ಯಕ್ತಿಯೊಬ್ಬನನ್ನು ಮೂವರು ಹಿಡಿದುಕೊಂಡು ಗದರಿಸುತ್ತಿದ್ದರು. ಇವರು 'ಯಾವೂರು ನಿಂದು? ಹೆಸರೇನು?' ಎಂದು ಕೇಳುತ್ತಿದ್ದರೆ ಅವನು ತಲೆ ಕೆಳಗೆ ಹಾಕಿ ನಿಂತಿದ್ದ. 'ಇದೇ ಕೆಲಸ ಏನು ನಿನಗೆ? ಎಷ್ಟು ಕಳ್ಳತನ ಮಾಡಿದ್ದಿ ಹೇಳು?' ಎಂದು ದಬಾಯಿಸಿದರು.

ಅಷ್ಟರಲ್ಲಿ ಬಂದ ಕಂಡಕ್ಟರ್ ಕೇಳಿದರು. 'ಏನ್ರೀ ಅದು ನಿಮ್ಮದು ಗಲಾಟೆ?' ಆ ವ್ಯಕ್ತಿಯ ಕತ್ತು ಪಟ್ಟಿ ಹಿಡಿದಿದ್ದವರು ಉದ್ವೇಗದಿಂದ ಉತ್ತರಿಸಿದರು. 'ನೋಡ್ರೀ ಇವನು, ನನ್ನ ಪ್ಯಾಂಟ್ ಜೇಬಿಗೆ ಕೈ ಹಾಕಿ ಪರ್ಸ್ ಎಳೆದಿದ್ದ. ನಾನು ಅವನ ಕೈ ಹಿಡ್ಕೊಂಡ್ ಬಿಟ್ಟೆ. ಈಗ ಇಲ್ಲ ಅಂತಾನೆ. ಒದೀಬೇಕು ಇವ್ನಿಗೆ' ಆಗ 'ಹೋಗ್ಲಿ ಬಿಡ್ರೀ, ಪರ್ಸ್ ಹೋಗಿಲ್ಲ ತಾನೇ' ಎಂದು ಸಮಾಧಾನ ಪಡಿಸಲು ಕಂಡಕ್ಟರರ ಯತ್ನ. ಅವನನ್ನ ಎಳ್ಕೊಂಡ್ ಹೋಗಿ ಪೊಲೀಸರಿಗೆ ಕೊಡ್ರೀ' ಎಂದೊಬ್ಬರ ಸಲಹೆ. ಏನಾಗುತ್ತೇರಿ ಪೊಲೀಸರಿಗೆ ಕೊಟ್ರೆ? ಕೊನೆಗೆ ಸಾಕ್ಷಿ ಇಲ್ಲ ಅಂತ ಕೇಸ್ ಬಿದ್ದು ಹೋಗ್ತದೆ' ಮತ್ತೊಬ್ಬರ ಅನುಭವ ವಾಣಿ. 'ತಡ ಆಯ್ತು ಕಣ್ರೀ. ಬಸ್ ಹೊರಡ್ತದೆ. ಅವನನ್ನ ಬಿಡ್ರೀ' ಎನ್ನುತ್ತಾ ಸೀಟಿ ಊದಿದರು ಕಂಡಕ್ಟರ್. ಇವರು ಕತ್ತಿನ ಪಟ್ಟಿ ಬಿಟ್ಟಿದ್ದೇ ತಡ. ಅವನು ಬಸ್ಸಿನಿಂದ ಇಳಿದು ಓಡಿ ಹೋದ.

ಇಷ್ಟು ಹೊತ್ತು ಸುಮ್ಮನೆ ಕೂತಿದ್ದ ಪ್ರಯಾಣಿಕರೊಬ್ಬರು ಸೀಟಿನಿಂದ ಜಿಗಿದು ನಿಂತು ಕೂಗಿಕೊಂಡರು. 'ಹಿಡೀರಿ ಅವನನ್ನ, ಬಿಡಬೇಡಿ,' ತನ್ನ ಪ್ಯಾಂಟಿನ ಜೇಬು ಮುಟ್ಟಿಕೊಳ್ತಾ ಅವರು ಕೂಗಾಡಿದರು. 'ನನ್ನ ಪರ್ಸ್ ಕದ್ದಿದ್ದಾನೆ ನೋಡಿ. ನಂಗೆ ಈಗ ಗೊತ್ತಾಗಿದ್ದು. ನನ್ನ ಪರ್ಸ್ ಇಲ್ಲ, ಅವನೇ ಕದ್ದಿದ್ದಾನೆ. ಯಾಕಂದ್ರೆ ಅವನು ಕೊಟ್ಟಿಗೆಹಾರದಲ್ಲಿ ನನ್ ಹಿಂದೇನೇ

ನಿಂತಿದ್ದ.’ ಈಗ ಎಲ್ಲರೂ ಮಾತಿಗೆ ಶುರುವಿಟ್ಟರು. ‘ಅದಕ್ಕೇ ನೋಡಿ, ಇವರನ್ನೆಲ್ಲ ಪೊಲೀಸ್ ಸ್ಟೇಷನಿಗೆ ಎಳ್ಕೊಂಡ್ ಹೋಗಬೇಕು ಅನ್ನೋದು. ಇವರನ್ನೆಲ್ಲ ಹೀಗೆ ಬಿಡೋದ್ರಿಂದಲೇ ಇವರು ಸೊಕ್ಕಿರೋದು.’ ಅಲ್ಲಿಂದ ಚಿಕ್ಕಮಂಗಳೂರಿನವರೆಗೂ ಬಸ್ ಪ್ರಯಾಣಿಕರ ಬಾಯಿತುಂಬ ಜೇಬುಗಳ್ಳರ ಕತೆಗಳೇ.

**ಅರ್ಧ ಟಿಕೇಟಿನ ಚೌಕಾಶಿ**

ನಮ್ಮ ಬಸ್ ಬಿ.ಸಿ. ರೋಡಿನಿಂದ ಉಜಿರೆಯತ್ತ ಹೊರಟಿತ್ತು. ನನ್ನ ಪಕ್ಕದಲ್ಲೇ ನಿಂತಿದ್ದರು ಒಬ್ಬ ವಯಸ್ಸಾದ ಮಹಿಳೆ ಮತ್ತು ಅವಳ ಸುಮಾರು 14 ವರುಷ ವಯಸ್ಸಿನ ಮಗ. ಕಂಡಕ್ಟರ್ ಬಂದು ಟಿಕೆಟ್ ಕೇಳಿದಾಗ, ಹರಿದಿದ್ದ ಸೀರೆ ತೊಟ್ಟಿದ್ದ ಈ ತಾಯಿ ಒಂದೂವರೆ ಟಿಕೇಟಿನ ಹಣ ಕೊಟ್ಟು ಹೇಳಿದಳು. ‘ಇವನಿಗೆ ಅರ್ಧ ಟಿಕೇಟ್.’ ಕಂಡಕ್ಟರ್ ಖಡಾಖಂಡಿತ ಧ್ವನಿಯಲ್ಲಿ, ‘ಅದಾಗೋಲ್ಲ. ಇಷ್ಟ್ ದೊಡ್ಡೋನಿದಾನೆ. ಅವ್ನಿಗೆ ಫುಲ್ ಟಿಕೇಟ್ ತಗೋಬೇಕು’. ಎಂದರು. ‘ಇಲ್ಲಾರೀ. ಅವಂಗೆ ಫುಲ್ ಟಿಕೇಟ್ ತೆಗೀಲೇ ಬೇಕು. ಐವತ್ತೊಂದು ರೂಪಾಯಿ ಕೊಡು. ಇಲ್ಲಾಂದ್ರೆ ಬಸ್ ನಿಲ್ಲಿಸ್ ಬಿಡ್ತಿನಿ’ ಎನ್ನುತ್ತಾ ಸೀಟಿ ಊದಿಯೇ ಬಿಟ್ಟರು.

ಬಸ್ ನಿಂತಿತು. ಕಂಡಕ್ಟರ್ ಸ್ವರವೇರಿಸಿ ಹೇಳಿದರು. ‘ಐವತ್ತೊಂದು ರೂಪಾಯಿ ತೆಗಿ, ಇಲ್ಲಾಂದ್ರೆ ಇಲ್ಲೇ ಇಳ್ಕೋ. ನಮಗೂ ಕೇಳೋರಿದಾರೆ. ಏನ್ ಮಾಡ್ತೀ ಹೇಳು. ‘ಆ ತಾಯಿ ತಗ್ಗಿದ ಸ್ವರದಲ್ಲಿ ಉತ್ತರಿಸಿದಳು. ‘ಹೂಂ, ಕೊಡ್ತಿನಿ.’ ಅನಂತರ ಬಸ್ ಹೊರಟಿತು.

ಆ ತಾಯಿ ನಿಂತಿದ್ದಲ್ಲೇ ಕುಕ್ಕರಗಾಲಿನಲ್ಲಿ ಕೂತಳು. ತನ್ನ ಚೀಲದೊಳಗಿಂದ ಹಳೆಯ ಸಂಚಿಯೊಂದನ್ನು ತೆಗೆದಳು. ಅದರಲ್ಲಿದ್ದ ಮಡಚಿದ್ದ ನೋಟುಗಳನ್ನು ಹೊರತೆಗೆದು ಎಣಿಸಿದಳು. ಅನಂತರ ಎದ್ದು ನಿಂತು, ದೈನ್ಯಭಾವದಿಂದ ಕಂಡಕ್ಟರನ್ನು ನೋಡುತ್ತಾ. ‘ಅವನಿಗೆ ಅರ್ಧ ಟಿಕೆಟ್. ಬರುವಾಗ್ಲೂನೂ ಅರ್ಧ ಟಿಕೆಟ್ಟೇ ಮಾಡ್ಸಿದ್ದು. ನಾನು ಇಷ್ಟು ಹೇಳಿದ್ರೂನೂ ನೀವು ಕೇಳಲ್ಲ. ನಿಮ್ಮ ಹೆಣ್ಣು ಕರುಳೇನಲ್ವಾ?’ ಎಂದು ನೋಟುಗಳನ್ನಿತ್ತಳು.

ಆಕೆ ಮಹಿಳಾ ಕಂಡಕ್ಟರ್. ಅವಳಿಗೆ ಏನೆನ್ನಿಸಿತೋ..... ‘ಸರಿ ಬಿಡು, ಅವ್ನಿಗೆ ಅರ್ಧ ಟಿಕೆಟ್ಟೇ ಕೊಡ್ತಿನಿ. ಚೆಕ್ಕಿಂಗ್‌ನವರು ಬಂದ್ರೆ ಅವ್ರಿಗೆ ನೀವೇ ಹೇಳ್ಬೇಕು’ ಎಂದು ಒಂದೂವರೆ ಟಿಕೆಟಿನ ಹಣ ತಗೊಂಡು, ಟಿಕೆಟ್ ಕೊಟ್ಟು ಮುಂದೆ ಸಾಗಿದಳು.

**ನಗೆಸಂಜೀವಿನಿ**

ನಗು ಅಂದರೆ ಮೊಗ ಹತ್ತಾಗಬೇಕು ರಾವಣನಂತೆ
ಸದಾ ಸುಪ್ರಸನ್ನವದನರಾಗಿರಬೇಕು ಶ್ರೀರಾಮನಂತೆ
ಹಾಸ್ಯಚಟಾಕಿ ಕೇಳಿ ಮೊಗವಾಗಲಿ ಹನುಮಂತನಂತೆ
ಇಡೀ ಬದುಕಾಗಬೇಕು ಹಾಸ್ಯ ಸಂಜೀವಿನಿಯಂತೆ

- ಸುಶೀಲಾ



# ರಂಗ ಸ್ವಾರಸ್ಯ

**❁ ಡಾ|| ನಿರುಪಮಾ**

**ಬ**ಳ್ಳಾರಿ ರಾಘವಾಚಾರ್ಯರ ನಾಟಕಗಳೆಂದರೇ ಆ ಕಾಲದಲ್ಲಿ ಜನರು ಜಾತ್ರೆಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಿದ್ದರು. ಸುತ್ತಮುತ್ತಲ ಊರುಗಳಿಂದ ಗಾಡಿ ಕಟ್ಟಿಸಿಕೊಂಡು ಬಂದು ನಾಟಕವನ್ನು ನೋಡಿಕೊಂಡು ಹೋಗುತ್ತಿದ್ದರು. ರಾಘವಾಚಾರ್ಯರು ಆಡುತ್ತಿದ್ದುದು ಹೆಚ್ಚಾಗಿ ತೆಲುಗು ನಾಟಕಗಳನ್ನೇ. ಆ ಕಾಲದಲ್ಲೇ ಮಹದೇವಪ್ಪನವರು ಕನ್ನಡದ ಜನಕ್ಕಾಗಿ ಒಂದು ನಾಟಕದ ಕಂಪೆನಿ ಕಟ್ಟಿ ನಮ್ಮಂತಹ ಪಡ್ಡೆ ಹುಡುಗರನ್ನು ಸೇರಿಸಿ, ತರಬೇತಿ ಕೊಟ್ಟು, ಆಗಾಗ್ಗೆ ಕನ್ನಡದ ನಾಟಕಗಳನ್ನಾಡಿಸುತ್ತಿದ್ದರು.

ಒಮ್ಮೆ ರಾಘವರ ನಾಟಕದ ಕಂಪೆನಿ ನಮ್ಮೂರಿನಲ್ಲಿ ಒಂದು ಕನ್ನಡದ ನಾಟಕವನ್ನಾಡುವ ವ್ಯವಸ್ಥೆ ಮಾಡಿತ್ತು. ರಂಭೆ-ಊರ್ವಶಿಯರ ವೇಷಕ್ಕೆ ಸುಮಾರಾಗಿ ನೃತ್ಯ ಕಲಿತಿರುವ ಇಬ್ಬರು ಹುಡುಗರನ್ನು ಕಳುಹಿಸಲು ರಾಘವರು ಮಹದೇವಪ್ಪನವರನ್ನು ಕೇಳಿಕೊಂಡಿದ್ದರು. ಆ ಕಾಲದಲ್ಲಿ ಸ್ತ್ರೀಯರು ಹೆಚ್ಚಾಗಿ ನಾಟಕಗಳಲ್ಲಿ ವೇಷ ಧರಿಸುತ್ತಿರಲಿಲ್ಲ. ನಾನು ಆಗಾಗ ಹೆಣ್ಣು ಪಾತ್ರಗಳನ್ನು ಮಾಡುತ್ತಿದ್ದೆ. ಆಗತಾನೇ ತಿರುಪತಿಗೆ ಹೋಗಿ ಮುಡಿಕೊಟ್ಟು ಬಂದಿದ್ದ ತೆಳ್ಳಗೆ-ಬೆಳ್ಳಗೆ ಇದ್ದ ಉಡುಪಿ ಮಾಣಿ ಗಣೇಶನನ್ನೂ, ನನ್ನನ್ನೂ ಜೊತೆಮಾಡಿ ಕಳಿಸಿಕೊಟ್ಟರು ಮಹದೇವಪ್ಪನವರು.

ನಾಟಕದ ಸೆಟ್ಟು ವೇದಿಕೆಯ ಮೇಲೆ ಭರ್ಜರಿಯಾಗಿ ಕಣ್ಣು ಕೋರೈಸುವಂತಿತ್ತು. ಕಣ್ಣು ಹಾಯಿಸುವಷ್ಟು ದೂರದವರೆಗೂ ಜನಸಮೂಹ. ರಂಗದ ಮೇಲೆ ವೈಭವಯುತ ಇಂದ್ರಸಭೆ. ಅವರೆದುರಿಗೆ ರಂಭೆ-ಊರ್ವಶಿಯರ ನೃತ್ಯ ಕಾರ್ಯಕ್ರಮದಿಂದ ನಾಟಕದ ಆರಂಭ. ಅಗಲವಾದ ಜರಿಯಂಚಿನ ಜರಿಯ ಸೀರೆಗಳನ್ನುಟ್ಟು ಸರ್ವಾಭರಣಭೂಷಿತರಾಗಿ ನಾನು, ಗಣೇಶ ನೃತ್ಯಗಾತಿಯರ ವೇಷದಲ್ಲಿ ಪರದೆಯೊಳಗೆ ನಿಂತಿದ್ದೆವು. ಇನ್ನೂ ಪರದೆ ಮೇಲಕ್ಕೆತ್ತಿರಲಿಲ್ಲ. ಸ್ಟೇಜಿನ ಮುಂದಿದ್ದ ಹಾರ್ಮೋನಿಯಂ ತಂಡ ಸಿದ್ಧರಾಗಿ ಕುಳಿತಿತ್ತು. ನಮ್ಮ ಮುಂದಿದ್ದ ಪರದೆ ನಿಧಾನವಾಗಿ ಮೇಲಕ್ಕೇಳಲಾರಂಭಿಸಿದೊಡನೆ ಹಾರ್ಮೋನಿಯಂ, ತಬಲಗಳು ಸಂಗೀತವನ್ನಾರಂಭಿಸಿದವು. ಸಂಗೀತ ಕೇಳಿಸಿದೊಡನೆ ನಮ್ಮ ಎಂದಿನ ಅಭ್ಯಾಸದಂತೆ ನರ್ತಿಸತೊಡಗಿದೆವು. ಪರದೆ ಪೂರ್ತಿಯಾಗಿ ಎತ್ತಿದೊಡನೆ ಮುಂದಿದ್ದ ಜನರೆಲ್ಲ ''ಹೋ! ಹೋ!'' ಎಂದು ನಗಲಾರಂಭಿಸಿದರು. ನಾವು ಏಕೆ ಹೀಗೆ

ನಗುತ್ತಿರುವರೆಂದು ತಿಳಿಯಲು ಹಿಂದಿರುಗಿ ನೋಡಿದೆವು. ಇಂದ್ರನ ಸಭೆಯ ವೇಷಧಾರಿಗಳೂ ನಮ್ಮತ್ತಲೇ ನೋಡುತ್ತ ನಗೆ ತಡೆದುಕೊಳ್ಳಲಾರದೇ ನಗುತ್ತಿದ್ದರು. ಒಂದು ಘಳಿಗೆ ನಮ್ಮಿಬ್ಬರಿಗೂ ಏಕೆಂದು ತೋಚದಾಯಿತು. ಹಾರ್ಮೋನಿಯಂ ಬಾರಿಸುವಾತ ಹಾಡು ನಿಲ್ಲಿಸಿ ''ಟೋಪನ್! ಟೋಪನ್'' ಎಂದು ಕೂಗಿಕೊಂಡ. ನಾವಿಬ್ಬರೂ ತಲೆ ಮುಟ್ಟಿಕೊಂಡೆವು. ಮಾರುದ್ದ ಜಡೆ ಹೆಣೆದು, ಹೂ ಮುಡಿದು ಅಲಂಕಾರ ಮಾಡಿಸಿಕೊಂಡಿದ್ದ ಟೋಪನ್ ನಮ್ಮಿಬ್ಬರ ತಲೆಯ ಮೇಲೂ ಇರಲಿಲ್ಲ. ನಾವು ಒಂದು ಘಳಿಗೆ ಗರಬಡಿದವರಂತೆ ನಿಂತೆವು. ನಾವು ಮೊದಲು ಪರದೆಗೆ ತಾಗಿಕೊಂಡಂತೆ ನಿಂತಿದ್ದರಿಂದ ನಮ್ಮಿಬ್ಬರ ಟೋಪನ್‌ಗಳೂ ಎತ್ತುತ್ತಿದ್ದ ಪರದೆಯ ಹುಕ್‌ಗೆ ಸಿಕ್ಕಿಹಾಕಿಕೊಂಡು ಮೇಲಕ್ಕೆ ಹೋಗಿಬಿಟ್ಟಿದ್ದವು. ತಲೆ ಸವರಿಕೊಂಡೆ. ಬೋಳುತಲೆ! ನಮ್ಮಿಬ್ಬರಿಗೂ ನಾಚಿಕೆಯಾಗಿ ಒಳಕ್ಕೆ ಓಡಿದೆವು.

ಇನ್ನೊಮ್ಮೆ ನಮ್ಮೂರಿಗೆ ಬಂದಿದ್ದ ನಾಟಕದ ಕಂಪೆನಿಯವರು 'ಸತ್ಯಹರಿಶ್ಚಂದ್ರ' ನಾಟಕ ಆಡುತ್ತಿದ್ದರು. ಆದಿನ ನಕ್ಷತ್ರಿಕನ ಪಾರ್ಟು ಮಾಡುವವನಿಗೆ ಜ್ವರ ಬಂದಿದ್ದರಿಂದ ಆ ಪಾರ್ಟು ಮಾಡಲು ಅಗಸರ ಅಂಜನಪ್ಪನನ್ನು ಕರೆತಂದು ವೇಷಹಾಕಿ ನಾಟಕ ಆರಂಭಿಸಿದರು. ಅಭ್ಯಾಸ ಸಾಲದ ನಕ್ಷತ್ರಿಕನ ಪಾರ್ಟಿನ ಅಂಜನಪ್ಪ ಹರಿಶ್ಚಂದ್ರನನ್ನು ತನ್ನ ಗುರು ವಿಶ್ವಾಮಿತ್ರನ ಸಾಲ ತೀರಿಸುವಂತೆ ಕಾಡುತ್ತ ಅವನ ಹಿಂದೆಮುಂದೆ ಹೋಗಿ ಅವನ ಪಂಚೆ ಜಗುತ್ತ ಹಿಗ್ಗಾಮುಗ್ಗಾ ಎಳೆದಾಡುತ್ತಿದ್ದ. ಹರಿಶ್ಚಂದ್ರನಿಗೆ ಕೋಪಬಂದು ಅವನೊಬ್ಬನಿಗೇ ಕೇಳಿಸುವಂತೆ ''ಏಯ್ ಯಾಕೋ ಹಂಗೆಳೆದಾಡ್ತೀಯಾ, ಬಿಡೋ ಸಾಕು!'' ಎಂದು ಗದರಿದ. ಅಂಜನಪ್ಪನೂ ಏನು ಕಡಿಮೆಯೇ! ಅದರಪ್ಪನಂಥಾ ಕೋಪ ಅವನಿಗೂ ಬಂದೇಬಿಡ್ತು. ಅವನು ಎಲ್ಲರಿಗೂ ಕೇಳಿಸುವಂತೆ ಗಟ್ಟಿಯಾಗಿಯೇ ಹೇಳಿದ. ''ಏಯ್ ಅರಿಚ್ಚಂದ್ರಯ್ಯಾ! ಆ ಇಸ್ವಾಮಿತ್ರನ ಸಾಲಾನ ಕೊಟ್ಟಾರಕೊಟ್ಕೋ ಬುಟ್ಟಾರ ಬುಟ್ಕೋ. ನೀನು ಈ ಊರಿಗೆ ಬಂದ ತಾನ್ನಿಂದ ನನ್ಹತ್ರ ಬಟ್ಟೆ ಒಗಸ್ಕಂಡೆಯಲ್ಲ, ಅದರ ಬಾಬ್ತು ಇಪ್ಪತ್ತು ರೂಪಾಯಿ ತತ್ತಾ!'' ಎಂದು ರೇಗಿದ.

ಒಮ್ಮೆ ನಮ್ಮ ಊರಿನಲ್ಲಿ ಬಯಲು ನಾಟಕ. ಸತ್ಯವಾನ್-ಸಾವಿತ್ರಿ ನಾಟಕ ಏರ್ಪಾಟಾಗಿತ್ತು. ವಿಪರೀತ ಜನ ಸೇರಿದ್ದರು. ನಾಟಕದಲ್ಲಿ ಯಮಧರ್ಮರಾಜ ಸತ್ಯವಾನನ ಪ್ರಾಣ ತೆಗೆದುಕೊಂಡು ಹೋಗುತ್ತಿರುವಾಗ ಸಾವಿತ್ರಿ ಅವನನ್ನು ಹಿಂಬಾಲಿಸುತ್ತಿರುವ ದೃಶ್ಯ. ಬಳ್ಳಾರಿಯ ಗಗ್ಗಯ್ಯ ಯಮನ ಪಾರ್ಟು ಹಾಕಿದ್ದರು. ರಾಕ್ಷಸ ವೇಷಗಳಿಗೆ ಹೆಸರಾಗಿದ್ದ ಗಗ್ಗಯ್ಯ ಒಳ್ಳೆಯ ಹಾಡುಗಾರರೂ ಆಗಿದ್ದರು.

ದೃಶ್ಯದಲ್ಲಿ ಯಮಧರ್ಮ ''ಸಾವಿತ್ರಿ! ನಿನಗೇನು ವರ ಬೇಕೋ ಕೇಳಿಕೋ. ನಿನ್ನ ಗಂಡನ ಪ್ರಾಣದ ವಿನಾ'' ಎಂದು ಹೇಳಲು ಒಂದು ದೊಡ್ಡ ಸೀಸ ಪದ್ಯದ ಜೊತೆಗೆ ಒಂದು ಕಂದ ಪದ್ಯವನ್ನೂ ವಿವಿಧ ರಾಗಗಳಲ್ಲಿ ಆಲಾಪನೆ ಮಾಡಿ ನಿಲ್ಲಿಸುತ್ತಾನೆ. ಸಾವಿತ್ರಿ ಒಂದು ವರ ಕೇಳಿದೊಡನೆ ಪುನಃ ಒಂದು ದೀರ್ಘಪದ್ಯ ಎತ್ತಿಕೊಂಡು ದೀರ್ಘಕಾಲ ಹಾಡಿ ಒಂದು ಮಾತನಾಡುವುದು, ಹೀಗೇ ನಡೆದಿತ್ತು.

ಇದನ್ನು ಪ್ರೇಕ್ಷಕರಿಗೆ ಕೇಳಿ ಕೇಳಿ ಸಾಕಾಯಿತು. ಒಮ್ಮೆ ಯಮಧರ್ಮರಾಯ ಎರಡು ಪದ್ಯಗಳನ್ನು ಎರಡು ಮೂರು ರಾಗಗಳಲ್ಲಿ ಹಾಡಿ ಆಲಾಪನೆ ಮಾಡಿ ಬಹು ದೀರ್ಘ ಕಾಲದ ನಂತರ ನಿಲ್ಲಿಸಿ –

ಸಾವಿತ್ರೀ! ನಿನ್ನ ಪತಿಯ ಪ್ರಾಣವೊಂದನ್ನು ಬಿಟ್ಟು ಬೇರೆ ಏನು ವರ ಬೇಕೋ ಕೇಳಿಕೋ'' ಎಂದ.

ಕೂಡಲೇ ಪ್ರೇಕ್ಷಕರ ಕಡೆಯಿಂದ ಒಟ್ಟಾಗಿ ಕೇಳಿಸಿತು ''ಅವ್ವಾ! ಸಾವಿಂತ್ರವ್ವಾ! ಆ ಯಮರಾಯನ್ನ ಪದಾ ಏಳ್ಬೇಡಾಂತ ಕೇಳ್ಕಳ್ಳವ್ವಾ!''

ಇನ್ನೊಮ್ಮೆ ಒಂದು ನಾಟಕದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಭಗವದ್ಗೀತೆ ಉಪದೇಶ ಮಾಡುವ ಸಂದರ್ಭ. ಅರ್ಜುನನ ವೇಷಧಾರಿ ಚಕ್ಕರ್ ಹಾಕಿದ್ದರಿಂದ ಹೋಟೆಲ್ ಮಾಣಿಯೊಬ್ಬನನ್ನು ಹುಡುಕಿ ತಂದು ಇಡೀ ರಾತ್ರಿ ರಿಹರ್ಸಲ್ ಮಾಡಿಸಿದರು. ಹಗಲು ಹೊತ್ತಿನಲ್ಲಿ ಇಡೀದಿನ ಹೋಟೆಲಿನಲ್ಲಿ ಅವನಿಗೆ ಮೈಮುರಿಯುವಷ್ಟು ಕೆಲಸ. ರಾತ್ರಿ ಅವನೇ ಅರ್ಜುನನ ವೇಷಧಾರಿ. ರಾತ್ರಿ ನಾಟಕದಲ್ಲಿ ಶ್ರೀಕೃಷ್ಣ ಬಹು ದೀರ್ಘವಾದ ಉಪದೇಶ ಮಾಡಿ

''ಅರ್ಜುನಾ ಈಗೇನು ಹೇಳುತ್ತೀಯಾ?'' ಎಂದು ಗಟ್ಟಿಯಾಗಿ ಕೇಳಿದ. ಅದುವರೆಗೂ ಕುಳಿತ ಭಂಗಿಯಲ್ಲೇ ಅರ್ಜುನ ವೇಷಧಾರಿ ಮಾಣಿ ಆ ಕೂಗಿಗೆ ಎಚ್ಚೆತ್ತು ತಟ್ಟನೆ –

''ಇಡ್ಲಿ, ದೋಸೆ, ಪೂರಿ ... '' ಅಂತ ತಿಂಡಿಲಿಸ್ಟ್ ಹೇಳೋಕೆ ಆರಂಭಿಸಿದ.

ಒಮ್ಮೆ ಒಂದು ಹಳ್ಳಿಯಲ್ಲಿ ಒಂದು ನಾಟಕಕ್ಕೆ ಸರಿಯಾದ ಸ್ಟೇಜಿಗೆ ಜಾಗ ಸಿಗದೇ ಊರನಡುವೆ ಇದ್ದ ಒಂದು ಅಗಲವಾದ ಬಾವಿಯ ಮೇಲೆ ಮಣೆಗಳನ್ನು ಜೋಡಿಸಿ ಸ್ಟೇಜ್ ಮಾಡಿದ್ದರು. ಪ್ರಹ್ಲಾದ–ಹಿರಣ್ಯಕಶಿಪುವಿನ ನಾಟಕ ಜೋರಾಗಿ ನಡೆಯುತ್ತಿತ್ತು. ಹಿರಣ್ಯಕಶಿಪನ ಅಪ್ಪಣೆಯಂತೆ ಅವನ ಸೇವಕರು ಪ್ರಹ್ಲಾದನಿಗೆ ಹಿಂಸೆ ಕೊಡುವ ದೃಶ್ಯ. ಪ್ರಹ್ಲಾದನ ಪಾತ್ರ ಧರಿಸಿದ ಹುಡುಗ ಎಡೆಬಿಡದೇ 'ಹರಿ' ಸ್ಮರಣೆ ಮಾಡುತ್ತಿದ್ದ. ದೈತ್ಯರಂತಹ ಹಿರಣ್ಯಕಶಿಪುವಿನ ಸೇವಕರು ಅವನನ್ನು ಹೆಡೆಮುರಿಗೆ ಕಟ್ಟಿ ಅತ್ತಿಂದಿತ್ತ ಧಂ ಧಂ ಎಂದು ಜೋರಾಗಿ ಓಡಾಡುವುದರೊಳಗೆ ಆ ಜೋಡಿಸಿದ್ದ ಹಲಗೆಗಳು ಸಡಿಲಗೊಂಡು ಸಂದಿ ಬಿಡಲಾರಂಭಿಸಿದವು. ಪ್ರಹ್ಲಾದ ವೇಷಧಾರಿ ಹುಡುಗನಿಗೆ ತಾನೆಲ್ಲಿ ಆ ಸಂದಿಯೊಳಗೆ ತೂರಿ ಬಾವಿಗೆ ಬಿದ್ದು ಬಿಡುತ್ತೇನೋ ಎಂಬ ಭಯ. ಆ ಹೆದರಿಕೆಯಿಂದಾಗಿ ಅವನು ''ಹರಿ! ಹರಿ!'' ಎಂದು ಪಠಿಸುವ ಬದಲಾಗಿ ''ಬಾವಿ! ಬಾವಿ!'' ಎಂದು ಕೂಗತೊಡಗಿದ. ಸ್ಟೇಜಿನ ಮೇಲಿದ್ದವರಿಗೆ ಅರ್ಥವಾಗಲಿಲ್ಲ. ಸದ್ಯ, ಪ್ರಾಂಪ್ಟರ್ ಓಡಿಬಂದು ಆ ಹುಡುಗನನ್ನು ಹಿಡಿದೆಳೆದದ್ದರಿಂದ ಹುಡುಗ ಬಾವಿಗೆ ಬೀಳಲಿಲ್ಲ. ಹಾಗೆ ಎಳೆದದ್ದೂ ಒಂದು ನಾಟಕದ ದೃಶ್ಯವೆಂದು ಭಾವಿಸಿ ಪ್ರೇಕ್ಷಕರು ಆನಂದಿಸಿದರು.

ಒಮ್ಮೆ ಹೀಗೆ ನಡೆಯಿತು. ಸತ್ಯಹರಿಶ್ಚಂದ್ರ ನಾಟಕ ಒಂದು ಹಳ್ಳಿಯಲ್ಲಿ ನಡೆಯಿತು. ಅಲ್ಲಿಯ ರಂಗಸಜ್ಜಿಕೆ, ಪ್ರೇಕ್ಷಕಗೃಹ ಅಷ್ಟೇನೂ ಚೆನ್ನಾಗಿರಲಿಲ್ಲ. ಹರಿಶ್ಚಂದ್ರ ನಾಟಕದ ಕೊನೆಯ ಹಂತ. ಹರಿಶ್ಚಂದ್ರ ಸ್ಮಶಾನದ ಕಾವಲು ಕಾಯುತ್ತಿದ್ದಾನೆ. ಈ ಪಾತ್ರವನ್ನು ಸಾಕ್ಷಾತ್


ರಾಘವಾಚಾರ್ಯರೇ ಮಾಡಿದ್ದರು. ಅವರು ಗೋಳಾಡುತ್ತ ಒಂದು ಹಾಡು ಹೇಳುತ್ತಿರುವಾಗ ಸ್ಟೇಜಿನ ಮೇಲೆ ಇದ್ದಕ್ಕಿದ್ದ ಹಾಗೆ ಒಂದು ನಾಯಿ ನುಗ್ಗಿತು. ಅದನ್ನು ಕಂಡು ಪ್ರೇಕ್ಷಕರು ''ಹೋ! ಹೋ!'' ಎಂದು ಕೂಗತೊಡಗಿದರು. ಹರಿಶ್ಚಂದ್ರನ ವೇಷದಲ್ಲಿದ್ದ ರಾಘವರು ತಮ್ಮ ಎರಡೂ ಕೈಗಳನ್ನೆತ್ತಿ ಪ್ರೇಕ್ಷಕರಿಗೆ ''ಸುಮ್ಮನಾಗಿ, ಸುಮ್ಮನಾಗಿ'' ಎಂದು ಸನ್ನೆ ಮಾಡಿದರು. ಸದ್ದು ಅಡಗಿದ ಮೇಲೆ ಆ ನಾಯಿ ರಾಘವರ ಬಳಿ ಸ್ವಲ್ಪ ಹೊತ್ತು ನಿಂತು ನಂತರ ಪಕ್ಕದಲ್ಲಿ ಹೊರಟುಹೋಯಿತು. ರಾಘವರು ''ಎಲೆ ಶುನಕವೇ! ಗಜಾಶ್ವ ಪದಾತಿಗಳಿಂದ ಮೆರೆಯುತ್ತಿದ್ದ ನಾನು ನಿನಗೂ ಹಗುರವಾದೆನೇ! ಅಯ್ಯೋ ಎಂತಹ ವಿಧಿ'' ಎಂದು ಡೈಲಾಗ್ ಹೇಳಿದಾಗ ಪ್ರೇಕ್ಷಕರಿಂದ ಚಪ್ಪಾಳೆಯೋ ಚಪ್ಪಾಳೆ. ರಾಘವರ ಸಮಯಸ್ಫೂರ್ತಿ ಅಪರೂಪದ್ದಾಗಿತ್ತು.

ಇನ್ನೊಮ್ಮೆ ಬಳ್ಳಾರಿಯಲ್ಲಿ ಒಂದು ವಾರ ನಾಟಕೋತ್ಸವವನ್ನು ಏರ್ಪಡಿಸಿದ್ದರು. ಆಗ್ಗೆ ಮದರಾಸಿನ ಗವರ್ನರರಾಗಿದ್ದ ''ಸರ್ ಹೆನ್ರಿ ಕ್ಯಾಂಪ್ ಬೆಲ್' (Sir Henry Camp Bell) ರನ್ನು ಆ ಸಮಾರಂಭದ ಉದ್ಘಾಟನೆಗೆಂದು ಆಹ್ವಾನಿಸಿದ್ದರು. (ಇದು ನಡೆದದ್ದು 1946ರಲ್ಲಿ. ನಾನು ಬಳ್ಳಾರಿಯಲ್ಲಿ S.S.L.C. ಓದುತ್ತಿದ್ದೆ. ಆ ಸಮಾರಂಭದಲ್ಲಿ ಉಪಸ್ಥಿತಳಿದ್ದೆ). ಗವರ್ನರರ ಭಾಷಣವನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಬಳ್ಳಾರಿಯ ವಾಪ್ಲರ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದ ಶರಣಪ್ಪನವರನ್ನು ಕರೆದಿದ್ದರು. ಶರಣಪ್ಪನವರು ತಾವು ಮಾತಾಡುವಾಗ ಇಂಗ್ಲೀಷಿನ ಒಂದೇ ಒಂದು ಪದವನ್ನೂ ಹೇಳಲು ಇಷ್ಟಪಡುತ್ತಿರಲಿಲ್ಲ. ತಾವು ಉಚ್ಚರಿಸುವ ಪ್ರತಿಯೊಂದು ಪದವೂ ಕನ್ನಡದ್ದೇ ಆಗಿರಬೇಕೆಂಬ ಹಠ ಅವರದ್ದು. ಮೊಟ್ಟಮೊದಲಿಗೆ ಸ್ವಾಗತ ಭಾಷಣ ಮಾಡುವಾಗ ಶರಣಪ್ಪನವರು ಗವರ್ನರನ್ನುದ್ದೇಶಿಸಿ –

''ಕೋಳಿ ಗುಡಾರದ ಗಂಟೆಯ ಅಯ್ಯನವರೇ! (Sir Henry Camp Bell) ಎಂದಾಗ ಪ್ರೇಕ್ಷಕರು ಮೊದಲು ಕಕ್ಕಾಬಿಕ್ಕಿಯಾಗಿ ನಂತರ ಕಿಸಕ್ಕೆಂದು ನಕ್ಕರು. ಮೊನ್ನೆ ನಮ್ಮ ಪರಿಚಿತರೊಬ್ಬರು ಒಂದು ನಾಟಕ ತಂಡ ಕಟ್ಟಿ, ನಾಟಕ ಆಡಿಸಿದರು ರವೀಂದ್ರ ಕಲಾಕ್ಷೇತ್ರದಲ್ಲಿ. ನನಗೂ ಪಾಸ್ ಕೊಟ್ಟು ಖಂಡಿತ ಬರಲು ಹೇಳಿದ್ದರು. ಆ ಸಂಜೆ ತುಂಬ ಜೋರಾಗಿ ಮಳೆ ಬಂದಿದ್ದರಿಂದ ನಾನು ಆ ನಾಟಕಕ್ಕೆ ಹೋಗಲಾಗಲಿಲ್ಲ. ಪುನಃ ಅವರು ಸಿಕ್ಕಾಗ ಕೇಳಿದೆ 'ನಾಟಕ ಹೇಗಾಯಿತು?' ಎಂದು. ಆತ ಹೇಳಿದರು ''ಹಿ! ಹಿ! ಹಿ! ಅದನ್ನು ಹೇಗೆ ಹೇಳೋದು ಮೇಡಂ. ಬಂದ ಜನ ಎಲ್ಲಾ ತುಂಬ ಸಂತೋಷಪಟ್ಟುಬಿಟ್ಟರು ಮೇಡಂ!'' ಎಂದರು.

''ಹೌದಾ ಪರವಾಗಿಲ್ಲ'' ಅಂದೆ. ಅದಕ್ಕೆ ಆತ ''ಎಲ್ರೂ ಸ್ಟೇಜ್ ಮೇಲೆ ತಂಡತಂಡವಾಗಿ ಬಂದು ಹೇಳಿದ್ರು''. ''ಏನಂತ?'' ಎಂದು ಕೇಳಿದ್ದಕ್ಕೆ ಆತ –

''ನಿಮ್ಮ ನಾಟಕ ಬೇಗ್ನೆ ಮುಗಿದಿದ್ದಕ್ಕೆ ತುಂಬಾ ಸಂತೋಷ ಆಯ್ತು ಸಾರ್! ಅಂದರು'' ಎಂದರಾತ.


“ ಅದು ಬೇರೆಯವ್ರಿಗೆ ‘ಡಿನೋಟಿಫಿಕೇಷನ್’ ಆಗೋಕೂ ಮೊದ್ಲು ನಮ್ಮ ಹೆಸರಿಗೆ ಮಾಡ್ಕೋಬೇಕು...!”
ಭೂಮಿ ಹೋಲುವ ಇನ್ನೊಂದು ‘ಗ್ರಹ’ ಪತ್ತೆ

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

– ದಂನಳ

- ಬೆಂಗಳೂರಿನದು ಟ್ರಾಫಿಕ್ ಸಮಸ್ಯೆ ಅಲ್ಲ. ಟ್ರಾಫಿಕ್ ಸೆನ್ಸ್ ಸಮಸ್ಯೆ.
- ಬಾಸ್‌ಗೂ ಮತ್ತು ನಾಯಕನಿಗೂ ಇರುವ ವ್ಯತ್ಯಾಸ – ಬಾಸ್ 'ಹೋಗು' ಎಂದರೆ ನಾಯಕ 'ಹೋಗೋಣ' ಎನ್ನುತ್ತಾನೆ.
- ಬದುಕುವ ಸೂತ್ರ ತುಂಬಾ ಸರಳ: ಬೆಳಿಗ್ಗೆ ಏಳುವುದು. ರಾತ್ರಿ ಮಲಗುವುದು. ಉಳಿದ ಸಮಯದಲ್ಲಿ ಇಷ್ಟವಾದ ಕೆಲಸಗಳಲ್ಲಿ ತೊಡಗುವುದು.
- ನೀವು ಮೌನವಾಗಿದ್ದಷ್ಟು ಹೆಚ್ಚು ಕೇಳಿಸಿಕೊಳ್ಳುತ್ತೀರಿ.
- The only reason people get lost in their thoughts is because it is an unfamiliar territory.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಪ್ರತಿ ಸುರಂಗದ ಅಂಚಿನಲ್ಲೂ ಬೆಳಕಿರುತ್ತದೆ. ಅದು ಇನ್ನೊಂದು ರೈಲಿನದಾಗಿಲ್ಲದಿದ್ದರೆ ಸಾಕು.
- ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರಗಳಲ್ಲಿ 'ಫೇಸ್‌ಬುಕ್' ಸಹ ಒಂದು.
- Meditation helps in quietening your mind not the environment you live in.
- ಗಂಗೆ – ನಂಬಿದವರಿಗೆ ಪವಿತ್ರ, ಉಳಿದವರಿಗೆ ಹರಿಯುವ ಇನ್ನೊಂದು ನದಿ.
- ತಾವು ಯಾರು ಎಂಬುದನ್ನರಿಯದೆ ತಾವು ಯಾರೋ ಆಗಲು ಅನೇಕರು ಪ್ರಯತ್ನಿಸುತ್ತಾರೆ.
- If you want to be what you want to be, be what you want to be and to be what you want to be believe in what you want to be.
- ಸನಾತನ ಧರ್ಮ ಎಂದರೆ ಎಲ್ಲರೂ ಒಂದೇ ಧರ್ಮವನ್ನು ಪಾಲಿಸುವುದು ಅಲ್ಲ, ಎಲ್ಲರೂ ಅವರವರ ಧರ್ಮವನ್ನು ಪಾಲಿಸುವುದು.
- ನಿಮ್ಮ ಉಪಸ್ಥಿತಿಯೇ ನೀವು ಯಾರು ಎಂದು ಹೇಳುತ್ತದೆ.
- ನೀವು ಯಾವುದಕ್ಕೂ ಇಲ್ಲ ಎಂದು ಹೇಳುವುದೇ ಇಲ್ಲವೆ? ಈ ಪ್ರಶ್ನೆಗೆ ಮಾತ್ರ.
- Success comes in cans; failure in cant's.

*



# ಆನಂದ ವಿಹಾರ ಕ್ಲಬ್

ಎಚ್.ಆರ್. ಹನುಮಂತ ರಾವ್

**ಗು**ರುಗೋವಿಂದನಗರದ ರಾಮಮಂದಿರ ರಸ್ತೆಯನ್ನು ದಾಟಿ, ಸ್ವಲ್ಪ ದೂರ ಎಡಕ್ಕೆ ನಡೆದು, ಮತ್ತೆ ಬಲಕ್ಕೆ ತಿರುಗಿದರೆ ಕಾಣಸಿಗುವ ಏಕೈಕ ಬಹು ಮಹಡಿ ಕಟ್ಟಡವೇ ಆನಂದ ವಿಹಾರ ಕ್ಲಬ್ಬಿನ ಆಶ್ರಯಧಾಮ. ಶನಿವಾರದ ಸಂಜೆಯಾಗುತ್ತಲೇ ಅಲ್ಲಿಯ ಕುರ್ಚಿ, ಮೇಜುಗಳಿಗೆ ಎಲ್ಲಿಲ್ಲದ ಕಳೆ ಬರುತ್ತದೆ. ಬೇರರ್ ರಾಜೀವನ ಕಣ್ಣುಗಳು ಮಿಂಚುತ್ತವೆ. ಅವನು ಒದಗಿಸುವ ವಿವಿಧ ಪಾನೀಯಗಳು ದೇಹಕ್ಕೆ ಹೇಗೆ ತಂಪೊ, ಸಿದ್ಧಾಂತಿಗಳ ಮಾತೂ ಹಾಗೆಯೇ ಮನಸ್ಸಿಗೆ ಇಂಪು! ಮಧ್ಯೆ, ಮಧ್ಯೆ, ಸದಸ್ಯರ ಒಗ್ಗರಣೆಯ ಸಂಭಾಷಣೆ ಮತ್ತಷ್ಟು ಮನರಂಜನೆಯನ್ನು ಒದಗಿಸುತ್ತದೆ ಹುರಿಗಾಳಿನಂತೆ. ಸಿದ್ಧಾಂತಿಗಳು ಎಂದಿನಂತೆ, ಆ ಶನಿವಾರದ ಸಂಜೆಯೂ ಸಭೆ ಸೇರಿತ್ತು. ವೈಶಾಖದ ಹುಣ್ಣಿಮೆಯ ರಾತ್ರಿ. ಕಿಟಕಿಯಾಚೆಗಿನ ಬೆಳ್ಳಂಬೆಳದಿಂಗಳು ಅಲ್ಲಲ್ಲಿ ಹರಡಿ ಒಂದು ರೀತಿಯ ಆಹ್ಲಾದಕರ ವಾತಾವರಣ ಮೂಡಿಸಿತ್ತು. ಸ್ವಲ್ಪ ತಡವಾಗಿ ಬಂದ ಸಿದ್ಧಾಂತಿಗಳನ್ನು ನೋಡುತ್ತಲೆ ರಾಜೀವ, ಮೇಜಿನ ಮೇಲೆ ಅವರ ಇಷ್ಟಾರ್ಥಗಳನ್ನು ಮಿಂಚಿನ ವೇಗದಲ್ಲಿ ತಂದಿಟ್ಟ, ಸಣ್ಣದಾಗಿ ಕೆಮ್ಮುತ್ತಾ ಡಾ. ಚಿ. ಮೂ. (ಡಾಕ್ಟರ್ ಚಿದಂಬರ ಮೂರ್ತಿ) ಕೇಳಿಯೆಬಿಟ್ಟರು. ''ಮುಖ್ಯವಾದ ಗೃಹಕೃತ್ಯವಿರಬೇಕು ರಾಯರು ಲೇಟಾಗಲಿಕ್ಕೆ''. ಸಿದ್ಧಾಂತಿಗಳು ಗ್ಲಾಸನ್ನೆತ್ತಿ, ಗುಟುಕರಿಸುತ್ತಾ, ಎಲ್ಲರ ಕಡೆಯೂ ನೋಡಿ, ನಸುನಗುತ್ತಾ ಪ್ರಶ್ನೆಯೊಂದನ್ನು ಎಸೆದರು. ''ಅದು ಹಾಗಿರಲಿ, ನೀವುಗಳು ದೆವ್ವ, ಭೂತ ಮತ್ತು ಅವುಗಳ ಚೇಷ್ಟೆಯ ಬಗ್ಗೆ ಏನೆನ್ನುವಿರಿ? ಯಾರಿಗಾದರೂ ಅನುಭವವುಂಟೋ?''

''ನನ್ನ ಹೆಂಡತಿ ಚಿಕ್ಕಪ್ಪನ, ಷಡ್ಡಕನ ತಾತನವರನ್ನು ಮಾವಿನ ತೋಪಿನಲ್ಲಿ ದೆವ್ವವೊಂದು ರಾತ್ರಿ ಅಟ್ಟಿಸಿಕೊಂಡು ಬಂದಿತ್ತೆಂದು ಹೇಳುತ್ತಿದ್ದುದನ್ನು ಕೇಳಿದ್ದೇನೆ'' – ತಕ್ಷಣವೇ ಸಣ್ಣಗೆ ಉಲಿದರು ಎ.ಎನ್. ಕಪ್ಪಣ (ನಮ್ಮ ಆಡು ಭಾಷೆಯಲ್ಲಿ ಎಳೆ ನಿಂಬೆಕಾಯಿ). ರೇವಣ್ಣಪ್ಪ ಅಸಹನೆಯಿಂದ, ''ಅಲ್ರೀ, ಅವರು ಕೇಳಿದ್ದು ನಿಮಗೇನು ಗೊತ್ತು ಎಂದಷ್ಟೇ, ಯಾರ ತಾತನವರ ಬಗ್ಗೆಯೂ ಅಲ್ಲ!''

ರೇವಣ್ಣಪ್ಪ ಮಂಡಿಪೇಟೆ ಶೇಂಗ ದೊರೆ. ಅಲ್ಲದೆ ಷೇರುಪೇಟೆ ವ್ಯವಹಾರದಲ್ಲಿ ಎತ್ತಿದ ಕೈ. ವಿನಾಕಾರಣ ಹಣ, ಸಮಯ ಪೋಲಾಗುವುದನ್ನು ಸಹಿಸುವವರೇ ಅಲ್ಲ! ''ಅಷ್ಟಕ್ಕೂ,

ಷಹರ್ಮೆ ಹುಟ್ಟೀ, ಬೆಳೆದೀ, ಈ ಕಪ್ಪಣ್ಣಾಗೆ ದೆವ್ವಗಳ ಬಗ್ಗೆ ಕ್ಯಾ ಮಾಲೂಮ್? ಬಿಡಿ! ಎಂದು ಸಣ್ಣಗೆ ಮೀಸೆಯಂಚಿನಲ್ಲೇ ನಗುತ್ತಾ, ಮೂದಲಿಸಿದರು ಗರಡಿ ಸಾಬು.

ಬದುಕಿರುವಾಗಲೇ ಭೂತ, ಪಿಶಾಚಿಗಳಂತೆ ಕಾಡಿಸುವ ಅತ್ತೆಯಂದಿರ ಬಗ್ಗೆ ನಾನು ಕರಾರುವಾಕ್ಕಾಗಿ ಹೇಳಬಲ್ಲೆ!'' ಎಂದು ಪಲುಕುತ್ತ ಅತ್ತಿತ್ತ ನೋಡಿದರು ಪಿಲ್ಟು.

''ಇದೀಗ, ನಮ್ಮ ಲಕ್ಷ್ಮಣಪ್ಪನವರಿಗೆ ಅತ್ತೆಯ ಕಾಟ ಇದೆ ಎಂತ ಒಪ್ಪಿಕೊಂಡ ಹಾಗಾಯಿತು ಪಾಪ! ಯಾರಾದರೂ ಮಾಂತ್ರಿಕರನ್ನು ಕರೆಸಿ ನೋಡಿ!'' ಎಂದು ನಗೆಯಾಡಿ, ಎಲ್ಲರನ್ನೂ ನಗೆಯಲ್ಲಿ ತೇಲಿಸಿದರು ಭೀಮಣ್ಣ. ''ವಿಧಾನಸೌಧ ಸುತ್ತಲೂ ಮಾಟಮಾಡಿ ಏನೆಲ್ಲಾ ಹಾಕಿದ್ದರೂಂತ ಪೇಪರು, ಟೀವಿಗಳಲ್ಲಿ ಫೋಟೋ ಸಮೇತ ಸುದ್ದಿ ಪ್ರಚಾರ ಆಗಿದೆಯಲ್ಲ? ನಮ್ ಪರ್ಮೇಶಿ ಹೇಳ್ದಂಗ ಯಾರಾದರೂ ಎಮ್ಮೆಲೆಗಳನ್ನ ಕೇಳಿ ನೋಡ್ರಲ್ಲಾ?!'' ಎಂದು ಒಗ್ಗರಣೆಯನ್ನು ಸೇರಿಸಿದರು ಭೀಮಣ್ಣ. ಮಾತು ಎಲ್ಲೆಲ್ಲೋ ಹೊರಳುತ್ತಿದ್ದುದನ್ನ ಕಂಡ ಸಿದ್ಧಾಂತಿಗಳು ಮತ್ತೊಂದು ಗುಟುಕು ಹೀರಿ, ನವಿರಾಗಿ ಕೆಮ್ಮುತ್ತಾ, ''ಈ ದಿನ ತಡವೇಕೆಂದು ಕೇಳಿದಿರಲ್ಲವೆ ಡಾಕ್ಟ್ರೇ? ನೀವುಗಳೆಲ್ಲಾ ಏನು ಹೇಳುತ್ತೀರೊ ಈ ಅನುಭವ ಕೇಳಿದ್ದೇ ಆದರೆ'' ಎಂದು, ಎಲ್ಲರ ಕಡೆಯೂ ದೃಷ್ಟಿ ಹಾಯಿಸಿದರು ದೇಶಾವರಿ ನಗೆ ಬೀರಿ.

ಆ ಕೂಡಲೇ ಎಲ್ಲೆಲ್ಲೂ ನಿಶ್ಯಬ್ದ.... ನೀರಸ ಮೌನ. ಸಿದ್ಧಾಂತಿಗಳ ಮಾತು. ಎಲ್ಲರಿಗೂ ಪ್ರಚಂಡ ಕುತೂಹಲ, ಆಸಕ್ತಿ. ಸಿದ್ಧಾಂತಿಗಳು ಮುಂದುವರಿಸಿದರು, ''ಹಾಸನ ಸಕಲೇಶಪುರ ಮಾರ್ಗದಲ್ಲಿ 17ನೇ ಮೈಲಿ ಕಲ್ಲು ದಾಟುತ್ತಲೇ ಎಡ ಬದಿಗೆ ಒಂದು ಕೂಡು ರಸ್ತೆ ಇದೆ. ಆ ಮಾರ್ಗದಲ್ಲಿ ಒಂದು ಮೈಲಿಯಷ್ಟು ಸವಿಸಿದರೆ ನಿಮಗೆ ನಮ್ಮ ಬಿದರಿ ಮಾವನ ಗ್ರಾಮ ಓಬಲೇಶಪುರ ಸಿಗುತ್ತದೆ. ಅಲ್ಲಿ ಪೂರ್ವೀಕರಿಂದ ಬಂದ ಎಸ್ಟೇಟೊಂದರ ಒಡೆಯರಾದ ಈ ಮಾವ, ಪರಂಧಾಮಯ್ಯನವರ ವಾಸ''. ಓ, ಅವರೇ ಸಾರ್? ಹೆಂಡತೀನ ಮನೇಲೆ ಬಿಟ್ಟು, ಮೈಲಾರೇಶ್ವರ ಜಾತ್ರೇಲಿ, ಕುಡಿದ ಮತ್ತಿನಲ್ಲಿ ಹೆಂಡತಿ ತಪ್ಪಿಸ್ಕೊಂಡಿದ್ದಾಳಂತ ಪೋಲಿಸರಿಗೆ ದೂರು ಕೊಟ್ಟಿದ್ರಲ್ಲಾ''? ಎಂದರು ಭೀಮಣ್ಣ. ''ಅಲ್ಲ, ಅವನು ಬೇರೆ, ಆತ ಪರಂದಾಮಯ್ಯ'' ಎಂದರು ಸಿದ್ಧಾಂತಿಗಳು. ಎಲ್ಲರ ಮುಖದಲ್ಲೂ ಪ್ರಶ್ನಾರ್ಥಕ ಚಿನ್ಹೆ.

''ನಮ್ಮ ಮಾವ ಪರಂಧಾಮಯ್ಯ, .....ಈತ ಪರಂದಾಮಯ್ಯ. ನನ್ನ ದೂರದ ಬಂಧು ಹಾಗು ಆಪ್ತ ಮಿತ್ರರಾದ ಜಾನಕೀರಾಮಪ್ಪನವರು ಭಾವ ಮೈದುನ ಎಂದು ಸ್ಪಷ್ಟೀಕರಿಸಿದರು. –''ಮೈಲಾರೇಶ್ವರ ಜಾತ್ರೆ ಪರಂದಾಮ ಪ್ರಸಂಗ''ದಲ್ಲಿ ಈ ವೃತ್ತಾಂತವನ್ನು ವಾಚಕರು (ಅಥವಾ, ಬಿ. ವೆಂಕಟಾಚಾರ್ಯರ 'ನಮ್ಮ ಪ್ರಿಯ ಪಾಠಕ ಮಹಾಶಯ'!) ಓದಿರಬಹುದು–

ಅವರ ಮೂರನೇ ಮಗಳ ಮದುವೆ ನಿಶ್ಚಿತಾರ್ಥ ಈ ಬೆಳಿಗ್ಗೆ. ಆ ಕಾರಣ ನಿನ್ನೆ ನಾನು ಅಲ್ಲಿಗೆ ಹೊರಟು, ಕೂಡು ರಸ್ತೆ ಸೇರುವ ಮುಂಚೆ – ಸುಮಾರು ಮೂರು, ನಾಲ್ಕು ಮೈಲಿಗಳಿರಬಹುದು – ಕಾರು ಕೆಟ್ಟು ನಿಂತಿತು. ಏನು ಕಸರತ್ತು ಮಾಡಿದರೂ ಹರತಾಳ ಶುರು ಮಾಡಿತ್ತು. ಸುಸ್ತಾದೆ.

''ಅದೇ – 'ಹುಂಡೈ ವೆರ್ನ' ಸಾರ್'' – ಪಿಲ್ಟು ಅತಿಮೆಲು ಧ್ವನಿಯಲ್ಲಿ ಕೊಶ್ಚನಿಸಿದರು. ಅವರಿಗೆ ದೇಶೀ ಕಾರುಗಳೆಂದರೆ ಅಷ್ಟಕ್ಕಷ್ಟೆ ವಿದೇಶಕ್ಕೆ ಹೋಗಿ ಬಂದವರು. ''ಅಲ್ಲ, ಅದು ನನ್ನ ಹಿರೇಮಗನದು, ಮಾರುತಿ ಸೆಡಾನ್ ನನ್ನ ಉಪಯೋಗಕ್ಕೆ'' – ಶಂಕರ ಸಿದ್ಧಾಂತಿಗಳು ಮುಂದುವರೆಸಿದರು – 'ಆಗಲೇ ರಾತ್ರಿ ಎಂಟು ಗಂಟೆ ಸಮಯ. ಆಗಾಗ್ಗೆ ಸರಕು ಲಾರಿಗಳು, ಅಪರೂಪಕ್ಕೆಂಬಂತೆ ಬಸ್ಸು, ಕಾರು, ಹಾಗು ಬೈಕುಗಳನ್ನು ಬಿಟ್ಟರೆ ಬಿಕೊ ಎನ್ನುವ ಹೆದ್ದಾರಿ, ತುಂಬು ಕತ್ತಲೆ, ಹುಣ್ಣಿಮೆಯ ಚಂದ್ರ ಮೋಡಗಳು ಹಿಂದೆ ತಲೆ ಮರೆಸಿಕೊಂಡಿದ್ದ. ಸಾಲದ್ದಕ್ಕೆ ಸಣ್ಣದಾಗಿ ಮಳೆಯ ಹನಿ ಬೀಳಲು ಪ್ರಾರಂಭ. ಇದೀಗ ನನ್ನ ಕಾರನ್ನು ಬಿಟ್ಟು ಎಲ್ಲೂ ಹೋಗಲಾರೆ, ಅಲ್ಲಿಯೇ ಇರಲಾರೆ – ಎಂಬ ಇಕ್ಕಟ್ಟಿಗೆ ಬಿದ್ದೆ. ''To leave or not to leave?" ಎಂದು ಹ್ಯಾಮ್ಲೆಟ್‌ಗೇ ಮೌನವಾಗಿ ಸವಾಲೆಸೆದೆ. 'ಕಾರಿದ್ದವರಿಗೆ ಆಗಾಗ್ಗೆ ಹಿಡಿಯುವ ಭೂತ ಎಂದರೆ ಇದೇ' ಎಂದು ನಗೆಯಾಡಿಕೊಂಡೆ! ಕಾರಂತೂ 'ಅಯ್ಯೋ' ಅನ್ನಲಿಲ್ಲ, ಸೊಪ್ಪೂ ಹಾಕಲಿಲ್ಲ! ಕಾರಿಂದ ಇಳಿದು, ಹೆದ್ದಾರಿಯಲ್ಲಿ ಬರುವ ವಾಹನಗಳಿಗೆ ಕೈ ತೋರಿಸುತ್ತಾ ಅಡ್ಡ ಹಾಕಿ ಪ್ರಯತ್ನ ಪಟ್ಟೆ ಸಹಾಯಕ್ಕಾಗಿ. ಯಾರೂ ನಿಲ್ಲಿಸಿ, ವಿಚಾರಿಸುವ ಔದಾರ್ಯ ತೋರಲಿಲ್ಲ. ಕಾಡಿನಿಂದ ಹುಲಿ, ಚಿರತೆಗಳೇನಾದರು ಬಂದರೆ? ಮಳೆಯ ಮಧ್ಯೆಯೂ, ಆ ರಾತ್ರಿ ಮೈಯೆಲ್ಲಾ ಬೆವರಿದೆ! 'ಆಪತ್ತಿಗೆ ಆದವನೇ ನೆಂಟ' ಎಂಬ ಗಾದೆಗೆ ಅರ್ಥವೇ ಇಲ್ಲ ಎಂದು ತರ್ಕಿಸಿದೆ.

ಅಷ್ಟು ಹೊತ್ತು ಮಾತಾಡಿದ್ದಕ್ಕೆ, ಮತ್ತೊಂದು ಸಾರಿ ಗ್ಲಾಸನ್ನು ತುಟಿಗೆ ತಂದರು. ಖಾಲಿಯಾದ ಗ್ಲಾಸನ್ನು ಮಿಂಚಿನಂತೆ ರಾಜೀವ ತೆಗೆದು ಮತ್ತೆ ತುಂಬಿಸಿಟ್ಟ. ಕ್ಲಬ್ಬಿನ ಅಂಗಳದಲ್ಲಿ ಮೌನವೋ ಮೌನ, 'ಪಿನ್ ಡ್ರಾಪ್ ಸೈಲೆನ್ಸ್' ಎಂದು ಅಂಗ್ರೇಜ಼ಿಯಲ್ಲಿ ಹೇಳುವಂತೆ. ''ಮತ್ತೆ ಅದು ಹೇಗೆ ಎಲ್ಲ ಮುಗಿಸಿ ವಾಪಸ್ಸುಬಂದ್ರಿ?'' – ಎಂದರು ಎ.ಎನ್.ಕೆ. – ಮೌನವನ್ನು ಭೇದಿಸುತ್ತಾ – ತಡೆಯಲಾರದ ಕುತೂಹಲ ಅವರಿಗೆ.

''ನೋಡಿ, ಹೇಳೋದೇ ಮರೆತಿದ್ದೆ, ಹೊರಡುವಾಗ ಮೊಬೈಲ್ ಫೋನನ್ನೂ ಮನೇಲಿ ಬಿಟ್ಟು ಬಂದಿದ್ದೆ. ಅದು ಇದ್ದಿದ್ದರೆ, ಮಾವನಿಗೆ ತಿಳಿಸಿ ಇಕ್ಕಟ್ಟಿನಿಂದ ಪಾರಾಗಬಹುದಿತ್ತು.''

When troubles come, they come not in singles but in battalions" ಅಂತ ಬೈಬಲ್‌ನಲ್ಲಿ ಹೇಳಿದ್ದು ಜ್ಞಾಪಕಕ್ಕೆ ಬರುತ್ತೆ, ಅಲ್ವಾ ಸಾರ್? ಎಂದರು ಎಳೆನಿಂಬೆ ತೊದಲುತ್ತಾ. ಮೂರು ರೌಂಡ್ ಮುಗಿಸಿದ್ದರ ಪರಿಣಾಮ ಅವರಿಂದ ಶೇಕ್ಸ್‌ಪಿಯರ್‌ನ ಕೊಲ್ಲಿಸಿತ್ತು.

''ಬೈಬಲ್ ಅಲ್ಲಾರೀ, 'ಶೆಲ್ಲೀ' ನೋ 'ಡ್ರೈಡನ್ನೊ' ಹಾಂಗತ ಹೇಳಿರೋದು ಗೊತ್ತಾ'' ಎಂದು ಚಂದ್ರು ತಮ್ಮ ಸಾಹಿತ್ಯ (ಅ) ಜ್ಞಾನವನ್ನು ಪ್ರದರ್ಶಿಸಿದರು. ಹೆಚ್ಚು ಕಮ್ಮಿ ಇಬ್ಬರ ಸ್ಥಿತಿಯೂ ಒಂದೇ ಆಗಿತ್ತು!

ಸಿದ್ಧಾಂತಿಗಳು ಮುಂದುವರಿಸಿದರು. ''ಹಲವಾರು ನಿಮಿಷಗಳ ತರುವಾಯ, ಹಲವಾರು ಗಂಟೆಗಳೆಂದೇ ಅನಿಸಿತ್ತು ನನಗೆ ಆಗ – ರಸ್ತೆಯಲ್ಲಿ ಎದುರು ಬದಿಯಿಂದ ಸಣ್ಣಗೆ

ಮಿನುಗುವ ಬೆಳಕಿನ ಜೊತೆ ವ್ಯಕ್ತಿಯೊಬ್ಬ ನನ್ನ ಬಳಿಗೇ ಬಂದ. ಸುಮಾರು ವಯಸ್ಸಿನ ಈ ವ್ಯಕ್ತಿ 'ಯಾಕೆ ಇಲ್ಲಿದ್ದೀರಿ ಸ್ವಾಮಿ?' ಯಾರಿಗಾದರೂ ಎದುರು ನೋಡುತ್ತಿರುವಿರಾ? ಎಂದ. ಮಂದವಾದ ಬೆಳಕಲ್ಲಿ ಆತನ ಚಹರೆ, ಕೈ, ಕಾಲುಗಳೂ ಕಾಣುವಂತಿರಲಿಲ್ಲ. ಜೀನ್ಸ್ ಪ್ಯಾಂಟನ್ನು ಧರಿಸಿದಂತೆ ಭಾಸವಾಯಿತಷ್ಟೇ. ಹತ್ತಿರದ ಹಳ್ಳಿಗನಿರಬೇಕು. ನನ್ನ ಕಾರು ಕೆಟ್ಟು ನಿಂತಿದೆ, ಫೋನು ಮಾಡೋಣವೆಂದರೆ, ಮರೆತು ಬಂದಿದ್ದೇನೆ. ಕಾರಲ್ಲಿ ಹಾದು ಹೋಗುವವರನ್ನ ನಿಲ್ಲಿಸಿ ಪ್ರಯತ್ನ ಮಾಡಬೇಕಾಗಿದೆ. ಈ ಹೊತ್ತಿನಲ್ಲಿ ಯಾವ ಗ್ಯಾರೇಜು ತೆರೆದಿರುವುದಿಲ್ಲವಲ್ಲ'' ಎಂದೆ. ನಾನು ಎಲ್ಲಿಂದ ಬಂದೆ, ಎಲ್ಲಿಗೆ ಹೋಗುವೆನೆಂಬುದನ್ನು ಕೇಳಿ ತಿಳಿದುಕೊಂಡು 'ಸ್ವಾಮಿ, ಈಗ ಜಾಗ ಒಳ್ಳೆಯದೂ ಅಲ್ಲ. ನಿಮ್ಮ ಮಾತು, ನಿಮ್ಮನ್ನು ನೋಡಿದ ಮೇಲೆ ಎಲ್ಲೋ ಮುಂಚೆ ನೋಡಿರಬೇಕಂತ ಅನಿಸುತ್ತದೆ, ಇರಲಿ ಬಿಡಿ, ಇಲ್ಲೊಬ್ಬ – ಅವನ ಹೆಸರು ಇಮ್ತಿಯಾಜ್ ಅಹ್ಮದ್ ಅಂತ – ಕೆಲವು ಸಮಯದ ಹಿಂದೆ ಈ ದಾರಿಯಲ್ಲಿ ಒಂದೆರಡು ಮೈಲಿ ದೂರದಲ್ಲಿ ಗ್ಯಾರೇಜನ್ನು ಇಟ್ಟಿದ್ದ ನೆನಪು. ಮನೆಯೂ ಪಕ್ಕದಲ್ಲೇ ಇತ್ತು. ಹೇಗಿದ್ದರೂ ಅದೇ ದಾರಿಯಲ್ಲಿ ಹೋಗುತ್ತಿದ್ದೇನೆ. ನಿಮ್ಮನ್ನು ನೋಡುವಂತೆ ಹೇಳುತ್ತೇನೆ. ಕಷ್ಟಕ್ಕಾಗುವವ'.

ನಾ ಏನೂ ಹೇಳಲಿಲ್ಲ. ನನ್ನ ಅನುಮಾನವನ್ನು ಗುರ್ತಿಸಿದ ಅವನು 'ಆತ ಖಂಡಿತ ಸಿಗೇ ಸಿಗುತ್ತಾನೆ. ಧೈರ್ಯವಾಗಿರಿ' ಎಂದು ಹೇಳಿ ನಿಲ್ಲದೆ ಮುಂದೆ ಹೋಗಿಯೇಬಿಟ್ಟ. ನನ್ನ ವಿಧಿ ಹಳಿದುಕೊಂಡು ಮತ್ತೆ ಕಾರುಗಳಿಗೆ ಅಡ್ಡಹಾಕುವ ಕಾರ್ಯ ಮುಂದುವರೆಸಿದೆ. ಮಾತು ನಿಲ್ಲಿಸಿ, ಕರವಸ್ತ್ರದಿಂದ ಮುಖವನ್ನು ಹಾಗು ಮೇಜಿನ ಮೇಲಿದ್ದ ಕನ್ನಡಕವನ್ನು ಒರೆಸಿಕೊಂಡರು. – ''ಆಮೇಲೆ ಸಾರ್''? – ಎಲ್ಲರ ಕೌತುಕ ತಾರಕಕ್ಕೇರಿತ್ತು!

ಅವನು ಹೋದ ಕೆಲವೇ ನಿಮಿಷಗಳಾಗಿರಬೇಕು. ಯಾರೋ ನನ್ನ ಹಿಂದಿನಿಂದ 'ಶಂಕ್ರೂ ದೋಸ್ತ್' ಎಂದು ಕೂಗಿದಂತೆ ಭಾಸವಾಯಿತು, ಕ್ಷಣ ಕಾಲ ಉಸಿರೇ ನಿಂತು ಹೋದಂತಾಗಿ, ಭಯದಿಂದ ಹಿಂತಿರುಗಿದೆ. 'ಯಾರದು?' ಎಂದು ಕೂಗಿಕೊಂಡೆ. ಬಿಳಿಯ ವಸ್ತ್ರಧಾರಿಯಂತೆ ಕಂಡ. ಗಹಗಹಿಸಿ ನಕ್ಕ ನಾನ್ಯಾರು ಗೊತ್ತಿಲ್ಲವಾ? ಸರಿಯಾಗಿ ನೋಡು ಎನ್ನುತ್ತಾ ಮುಖವನ್ನು ಹತ್ತಿರ ತಂದ. ಮಂದ ಬೆಳಕಲ್ಲೂ ಅವನನ್ನು ನನ್ನ ಬಾಲ್ಯ ಸ್ನೇಹಿತ 'ಇಮ್ತಿಯಾಜ್' ಎಂದು ಗುರುತು ಹಿಡಿದೆ. ಅರವತ್ತರ ಆಜೂ ಬಾಜೂ ವಯಸ್ಸಿನವನಂತೆ ಕಂಡ. ನಾನು ಕಾಲೇಜು ಮೆಟ್ಟಿಲು ಹತ್ತಲು ದೂರದ ಸ್ಥಳಕ್ಕೆ ಹೋಗುವ ತನಕ ಯಾವಾಗಲೂ ಒಟ್ಟೊಟ್ಟಿಗೆ ಇರುತ್ತಿದ್ದವರು. ನಂತರ ಸಂಪರ್ಕವೇ ಇರಲಿಲ್ಲ. ಮತ್ತೆ ಸರಾಗವಾಗಿ ಉಸಿರಾಡುವಂತಾಯಿತು. ಸಂತೋಷದಿಂದ ಅವನ ಕೈ ಕುಲುಕಲು ಹೋದೆ. ದೂರ ಸರಿದ. ನಾನು ಮತ್ತಷ್ಟು ಹತ್ತಿರ ಹೋದೆ. ಆಶ್ಚರ್ಯ! ಅವನು ಇನ್ನಷ್ಟು ದೂರ ಹೋದ. ಮೊದಲಿಗೆ ಹುಡುಗತನ ಅವನಲ್ಲಿ ಕಾಣಲಿಲ್ಲ. ಬಿಳಿಯ ಗಡ್ಡ ಬಿಟ್ಟಿದ್ದ. ಎಣ್ಣೆ ಕಾಣದ, ಬಾಚದ, ತಲೆಕೂದಲು. ಕಣ್ಣುಗಳು ತೀವ್ರವಾಗಿ ಹೊಳೆಯುತ್ತಿದ್ದವು. ಅವನು ನಗುತ್ತಿದ್ದರೂ, ಮುಖದಲ್ಲಿ ಯಾವುದೋ ವಿಷಾದದ ಛಾಯೆ ಆವರಿಸಿತ್ತು. ನನಗೆ 'ಏನಿಲ್ಲಿ?' ಎಂದ. ಹೇಳಿದೆ, ನನ್ನ ಉದ್ದೇಶ ಹಾಗು ಕೆಟ್ಟು ನಿಂತಿದ್ದ ಕಾರನ್ನು ತೋರಿಸಿದೆ. 'ಅದು ಹಾಗಿರಲಿ, ನೀ

ಇಲ್ಲಿ?' ಎಂದು ಕೇಳಿದೆ. 'ಮೊದಲು ನಿನ್ನ ಕಾರಿಗೇನಾಗಿದೆಯೋ ನೋಡೋಣ 'ಬಾ' ಎಂದು ಹೇಳಿ ಕಾರಿನ ಸುತ್ತಾ ಹೋಗಿ ಬಂದ. ನಾನು ನಿನಗೇನು ಗೊತ್ತು ರೀಪೇರಿ ಬಗ್ಗೆ' ಎಂದೆ. ಅವನು ಉತ್ತರಿಸುವ ಬದಲು 'ಕಾರಿನ ಬೀಗದ ಕೈ ಎಲ್ಲಿದೆ?' ಎಂದ. 'ಕಾರಿನ ಸ್ಟೀರಿಂಗೇ ಇದೆ', 'ಸರಿ, ಉಧರ್ ಭೀ ಛೋಡೋ, ನಿನ್ನ ಊರಿಗೆ ಬಿಟ್ಟು ವಾಪಸ್ ಬಂದು ಆ ಕಾರನ್ನ ರಿಪೇರಿ ಮಾಡ್ಸಿ, ಬೆಳಿಗ್ಗೆ ನಿಮ್ಮ ಮಾವನ ಮನೆ ಮುಂದೆ ಬಿಟ್ಟು ಹೋಗ್ತೀನಿ. ಕಾರಿನ ಯೋಚ್ನೆ ಬಿಡು. ಈಗ ನಡಿ ನನ್ನ ಕಾರಿನಲ್ಲಿ' ಎಂದು ಹೇಳುತ್ತಾ ನನ್ನ ಉತ್ತರಕ್ಕೂ ಕಾಯದೆ ಮುಂದೆ ಹೋಗಿ ದೂರದಲ್ಲಿ ಎಲ್ಲೋ ನಿಂತಿದ್ದ ಹಳೇ 'ಫಿಯಟ್' ಕಾರನ್ನು ತಂದು ನಿಲ್ಲಿಸಿದ. ಕಾರಿನ ಬಾಗಿಲು ತೆರೆದು ಬೇಡವೆಂದರೂ ನನ್ನ ಹತ್ತಿಸಿಕೊಂಡ. 'ಅಲ್ಲಾ, ನೀನಿರೋದು ಎಲ್ಲಿ? ಇಲ್ಲಿ ಹೇಗೆ ಬಂದೆ? ಕಾರಿನ ರಿಪೇರಿ ನಿನ್ಗೇನು ಗೊತ್ತು? ನಿನ್ನಕಥೆ ಏನು? ಎಂದೆಲ್ಲ ಕೇಳಿದೆ, 'ನೋಡು ಬ್ರದರ್, ಸುಮಾರು ನಲ್ವತ್ತು ವರ್ಷಗಳು ಆಗಿರಬೇಕು ನಾವು ಒಬ್ಬರೊನ್ನೊಬ್ಬರು ನೋಡಿ. ಅಲ್ಲವಾ?' ಎಂದು ಕೇಳಿದ ಕಾರನ್ನು ಓಡಿಸುತ್ತಾ. 'ಅಲ್ಲವೆ ಮತ್ತೆ? ನೀನು, ನಾನು ಯಾವಾಗಲೂ ಒಟ್ಟಿಗೇ ಇರುತ್ತಿದ್ದೆವಲ್ಲಾ ಆಗೆಲ್ಲಾ? ಆ ಬಚಪನ್ಕೇದಿನ್ ಹೇಗಾದರೂ ಮರೆಯಲಿಕ್ಕೆ ಆಗುತ್ತೆ?', 'ನೀನು ಶಹರ್‌ಗೆ ಹೋದಮೇಲೆ, ಇಲ್ಲಿ ನಮ್ಮಪ್ಪಗೆ ಜಾಸ್ತಿ ಓದ್ಸಿಲಿಕ್ಕೆ ಆಗಲಿಲ್ಲ. ದುಬೈಗೆ ಕಳಿಸಿಬಿಟ್ಟ. ಮಾಬಾಪ್ ಇಬ್ಬರೂ ಹೋದಮೇಲೆ ಮತ್ತೆ ಇಲ್ಲಿಗೆ ಬಂದು, ಈ ಹೈವೇನಲ್ಲಿ ಗ್ಯಾರೇಜ್ ಇಟ್ಟಿದ್ದ 'ಸ್ಟೀಫನ್' ಅನ್ನೋವ್ನ ಹತ್ತಿರ ಕೆಲ್ಸಕ್ಕೆ ಸೇರಿದೆ. ಅವ್ನ ಹತ್ತಿರ ದುಡಿದೂ ದುಡಿದೂ, ಮದುವೆನೂ ಮಕ್ಕಳೂ ಆಗಿ, ಹೀಗೆ ವಯಸ್ಸಾಗೋಯ್ತು. ನಾನು, ನೀನು ಇದ್ದ ಊರ್ಗೂ ಈ ಗ್ಯಾರೇಜ್ಗೂ ಬಹ್ಳ ದೂರಾನೆ, ಅಲ್ವಾ ಗುರು? ಅದ್ಕೆ, ನಾನು ವಾರಕ್ಕೊಂದ್ಸಲ, ಹಬ್ಬಕ್ಕೆ ಹೋಗಿಬರ್ತಾ ಇದ್ದೆ, ನಮ್ಮಪ್ಪ, ಅಮ್ಮ ಹೋದ್ಮೈದ್ ವರ್ಷಕ್ಕೆ, ನನ್ನ ಹೆಂಡ್ತೀಗೆ ಹಾವು ಕಚ್ಚಿ ಇಬ್ಬರು ಮಕ್ಕಳ್ನ ಬಿಟ್ಟು, ಅವಳೂ ಹೋಗ್ಬಿಟ್ಳು ಬ್ರದರ್. ಆ ವೇಳೆಗಾಗಲೇ, ನಾನು ಸ್ವಲ್ಪ ದುಡ್ಡು ಮಾಡ್ಕೊಂಡಿದ್ದೆ. ಸ್ಟೀಫನ್ ನನಗೇ ಗ್ಯಾರೇಜ್ ಮಾರ್ಬಿಟ್ಟು ಬೇರೆಲ್ಲೋ ಹೋಗ್ಬಿಟ್ಟಾ. ಪಕ್ಕದಲ್ಲೇ ಮನೆ ಮಾಡಿ, ಮಕ್ಕಳ್ನ ನೋಡ್ಕೊಳ್ತಾ ಇದ್ದೆ ಗುರು. ಅದಿರಲಿ, ನಿನ್ನ ಕಥೆ ಏನು? ದೇವರು ಚೆನ್ನಾಗಿಟ್ಟಿದ್ದಾನೆ ಅಂತ ನಿನ್ನ ಕಾರು, ಡ್ರೆಸ್ಸು ಎಲ್ಲ ನೋಡಿದರೆ ಅನ್ಸುತ್ತೆ. ಅಲ್ವಾ? ಇದೇನಾ ನಿಮ್ಮಾವ್ನ ಮನೆ?'

'ಆ ವೇಳೆಗೆ, ಎಸ್ಟೇಟ್ ಮನೆಯ ಹತ್ತಿರ ಬಂದಿದ್ದು, ಕಾರನ್ನು ನಿಲ್ಲಿಸಿದ. ನಾನು ಕೆಳಗೆ ಇಳಿಯುತ್ತಾ, ನನ್ನ ಜೊತೆ ಮನೆಯೊಳಗೆ ಬರಹೇಳಿದೆ. 'ಸಾರಿ ಬ್ರದರ್, ಈಗಾಗಲೇ ಬಹಳ ಹೊತ್ತಾಗಿದೆ. ನಿನ್ನ ಕಾರು ಬೆಳಿಗ್ಗೆ ಮನೆಮುಂದೆ ರಿಪೇರಿಯಾಗಿ ಬಂದಿರುತ್ತದೆ. ನಾನು ಇನ್ನೂ ಯಾರಿಗೋ ಈಗಲೇ ಬರುತ್ತೇನೆಂದು ಹೇಳಿ ಬಂದಿದ್ದೇನೆ. 'ಬೈ', ಹೇಳುತ್ತಾ ಕಾರನ್ನು ಓಡಿಸಿಕೊಂಡು ಹೋಗಿಯೇಬಿಟ್ಟ. ಮಾರನೇ ದಿನ ಬೆಳಿಗ್ಗೆ, ನಿಶ್ಚಿತಾರ್ಥ ಕಾರ್ಯದಲ್ಲಿ ಎಲ್ಲರೂ ಮಗ್ನರಾಗಿದ್ದು, ಕಾರಿನ ವಿಷಯ ಯಾರ ಗಮನಕ್ಕೂ ಹೆಚ್ಚು ಬರಲಿಲ್ಲ. ನನಗೆ ಮಾತ್ರ, ಒಳಗೊಳಗೇ ಭಯ ಕಾತರವಿತ್ತು. ಆದರೆ ಗಳಸ್ಯ, ಕಂಠಸ್ಯ ಮಿತ್ರನ ಬಗ್ಗೆ ಅನುಮಾನ ಯಾತರದು? ಬೀಗರನ್ನೆಲ್ಲಾ ಕಳುಹಿಸಿಕೊಟ್ಟ ನಂತರ, ನಮಗೊಂದು ಸುದ್ದಿ ಬಂತು, ನನ್ನ

ಮಾರುತೀ ಕಾರು ಎಸ್ಟೇಟ್‌ನ ಆಚೆ ಬದಿ, ಮುಳ್ಳುಪೊದೆಯ ಹತ್ತಿರ ನಿಲ್ಲಿಸಿರೋದನ್ನ ಕಂಡು ವಿಷಯ ರವಾನಿಸಿದ್ದರು. ನಾವು ಹಲವರು ಹೋಗಿ ನೋಡಿದಾಗ, ನನ್ನದೇ ಆಗಿತ್ತು ಆ ಕಾರು. ಬೀಗದ ಕೈ ಕೂಡ ಅದರಲ್ಲೇ ಇದ್ದು, ಅಲ್ಲಿ ಯಾರು ಕಾಣಿಸಲಿಲ್ಲ. ಓಡಿಸಿ ನೋಡಿದೆ, ಪೆಟ್ರೋಲ್ ಸಾಕಷ್ಟು ಇತ್ತು. ಇಮ್ತಿಯಾಜ್ ಇಲ್ಲಿ ಬಿಟ್ಟು ಎಲ್ಲಿಗೆ ಹೋದನೊ. ಸ್ವಲ್ಪ ಹೊತ್ತುನೋಡಿ, ಕಾರನ್ನ ಮನೆಗೆ ತಂದೆವು. ನಾನು ಊರಿಗೆ ಹೊರಡುವ ವೇಳೆ ಬಂತು. ಎಲ್ಲರಿಗೂ ವಂದಿಸಿ ಕಾರನ್ನು ಸ್ಟಾರ್ಟ್ ಮಾಡಿದೆ. ಅದೇ ಪೊದೆಯ ಬಳಿ ಸ್ವಲ್ಪ ಹೊತ್ತು ನಿಲ್ಲಿಸಿ ನೋಡಿದೆ. ಅವನ ಸುಳಿವೇ ಇಲ್ಲ. ಮತ್ತೆ ಸುಮಾರು ದೂರ ಸವೆಸಿದ ಮೇಲೆ, ಗ್ಯಾರೇಜೊಂದನ್ನ ನೋಡಿ, ಅಲ್ಲಿ ಕಾರನ್ನು ಪರೀಕ್ಷಿಸಿದಾಗ, ಎಲ್ಲ ಸರಿಯಾಗಿಯೆ ಇತ್ತು. ಮತ್ತೆ ಹೊರಟು ಊರನ್ನು ಸೇರುವ ಮುಂಚೆ, ಹೆದ್ದಾರಿಯ ಬಳಿ ಮನೆ ಮಾಡಿ ವಾಸಿಸುತ್ತಿದ್ದ, ನಮ್ಮಿಬ್ಬರಿಗೂ ಸ್ನೇಹಿತನಾಗಿದ್ದವನ ಮನೆ ಇದ್ದದ್ದು ಜ್ಞಾಪಕಕ್ಕೆ ಬಂತು. ಅಲ್ಲಿಗೆ ಕಾರು ತಿರುಗಿಸಿದೆ. ಹೋಗಿ 'ಇಮ್ತಿಯಾಜ್' ಬಗ್ಗೆ ವಿಚಾರಿಸಿದೆ. ಅವನು ಕೊಟ್ಟ ವಿವರ ನನ್ನನ್ನು ದಂಗು ಬಡಿಸಿತು. ನನಗೆ ನಂಬಲಸಾಧ್ಯವಾಗಿತ್ತು. ನನ್ನ ವಿವರ ಅವನೂ ನಂಬಲಾರದಂತಾಗಿತ್ತು. ಅವನು ಎಲ್ಲ ದೇವರ ಮೇಲೂ ಆಣೆ ಮಾಡಿ ಹೇಳಿದ. ಇಮ್ತಿಯಾಜ್ ಕೊಲೆಯಾಗಿ ಇವತ್ತಿಗೆ ಅಂದರೆ – ಇದೇ ವೈಶಾಖ ಹುಣ್ಣಿಮೆಯ ದಿನ – ಮೂರು ವರುಷಗಳು ಸಂದುಹೋಗಿದ್ದವು. ಮಾತು ಕೇಳುತ್ತಲೇ ನಾನು ಅಲ್ಲೇ ಕುರ್ಚಿಯಲ್ಲಿ ಕುಸಿದು ಕುಳಿತೆ. ಸುಧಾರಿಸಿಕೊಂಡು ಮತ್ತೆ ಹೊರಟು ಇಲ್ಲಿ ನಿಮ್ಮೊಡನೆ ಸೇರುವ ವೇಳೆಗೆ ಸ್ವಲ್ಪ ತಡವಾಯಿತು.

''ಇದೀಗ ನೀವೇನು ಹೇಳುವಿರಿ?''. ಹೆದ್ದಾರಿಯಲ್ಲಿ ವಿಚಾರಿಸಬಂದವನು ಯಾರು? ಸತ್ತವನು ಎದ್ದುಬಂದನೇನು? ಸಹಾಯ ಮಾಡಿ, ಮಾಯವಾದನೇಕೆ?'' ಮತ್ತೆ ಗಾಢಮೌನ. ಯಾರಿಂದಲೂ ಮಾರುತ್ತರ ಬರಲಿಲ್ಲ! ಸಭೆ ಬರಖಾಸ್ತ್!

## ನಗುವಿಗೇಕೆ ಕಾರಣ

ಸುಮ್ಮನೆ ಒಂದಿಷ್ಟು ನಗಲು ಕಾರಣ ಬೇಡ ಬಿಡಿ
ನಗು ಬಂದರೆ ನಕ್ಕುಬಿಡಿ ಅದನ್ನು ತಡೀಬೇಡಿ
ನಗಲೇಬೇಕು ಆಗಾಗ ಹೃದಯ ಹಗುರವಾಗಲು
ಜೀವನದಲ್ಲಿ ಎಲ್ಲರೊಂದಿಗೂ ಸ್ನೇಹದಿಂದಿರಲು

**- ಸುಕೇಶವ**





# ವೀಜಿ ಮೇಷ್ಟರು.....

ಎಚ್. ಗೋಪಾಲಕೃಷ್ಣ

**ಮೊ**ನ್ನೆ ನನ್ನ ಸಹೋದ್ಯೋಗಿಯೊಬ್ಬರು ಸಿಕ್ಕಿದ್ದರು. ನಾನೂ ಅವರೂ ಸುಮಾರು ಎರಡೂವರೆ ದಶಕಗಳ ಕಾಲ ಒಟ್ಟಿಗೇ ಕೆಲಸ ಮಾಡಿದ್ದೆವು.ಬಹು ಸೌಮ್ಯ ಸ್ವಭಾವದ ಅವರು ಅವತ್ತು ಏನೋ ಕೊಂಚ ಎಲೈಟ್ ಮೂಡಿನಲ್ಲಿದ್ದರು.

ಏನು ಅಪರೂಪಕ್ಕೆ ಸಂತೋಷ ಕಾಣಿಸ್ತಿದೆ ನಿಮ್ಮಲ್ಲಿ ಅಂದೆ....

ಅವರ ಸಂತೋಷದ ಕಾರಣ ಅವರು ವಿವರಿಸಿದರು.

ಶಾಲೆ ಕಾಲೇಜಿನ ದಿವಸಗಳಲ್ಲಿ ನಾನೇನೂ ಅಂತಹ ಬುದ್ಧಿವಂತನೇ ಅಲ್ಲ. ಹಾಗೆ ನೋಡಿದರೆ ದಡ್ಡರಲ್ಲಿ ದಡ್ಡ ಅಂತಲೇ ಹೇಳಬಹುದು. ಅದರಿಂದ ಯಾರ ಕಣ್ಣಿಗೂ ಬೀಳದೆ ನನ್ನ ಪಾಡಿಗೆ ನಾನಿದ್ದವನು. ಯಾರನ್ನಾದರೂ ಮಾತನಾಡಿಸಲೂ ಒಂದು ರೀತಿ ಮುಜುಗರ ಪಡುತ್ತಿದ್ದುದರಿಂದ ಅಂತಹ ಹೆಚ್ಚಿನ ಸ್ನೇಹಿತರೂ ಆಗ ಇರಲಿಲ್ಲ. ಹಾಗೆ ನೋಡಿದರೆ ನನಗೆ ಸ್ನೇಹಿತರು ಅಂತ ಆಗಿದ್ದೇ ನಾನು ಕೆಲಸಕ್ಕೆ ಸೇರಿದ ಮೇಲೆ. ಮೊನ್ನೆ ಏನಾಯಿತು ಗೊತ್ತಾ?......

ಸುಮಾರು ನಾಲ್ಕು ದಶಕಗಳೂ ಮೀರಿದ ನಂತರ ಕಳೆದ ವಾರ ನನ್ನ ಹೈಸ್ಕೂಲು ದಿನಗಳ ಮೇಷ್ಟರು ತುಂಬಾ ಅಚಾನಕ್ ಆಗಿ ಭೇಟಿಯಾದರು. ದೊಡ್ಡ ಆಸ್ಪತ್ರೆ ರಿಸೆಪ್ಷನ್ ಜಾಗದಲ್ಲಿ ಅವರು ಕೂತಿದ್ದರು. ನಾನು ಯಾವುದೋ ಕೆಲಸದ ಮೇಲೆ ಅದೇ ಆಸ್ಪತ್ರೆಗೆ ಹೋಗಿದ್ದೆ. ಇವರನ್ನ ನಾನು ನೋಡಿರಲಿಲ್ಲ, ಅವರೂ ನನ್ನನ್ನು ನೋಡಿದವರು ಹಾಗೇ ಕೂತಿದ್ದರು, ಎರಡು ಮೂರು ಸಲ ಅವರು ನನ್ನ ಕಡೆ ತಿರುಗಿ ಮತ್ತೆ ಮತ್ತೆ ನೋಡಿದಾಗ ಯಾರೋ ನನ್ನ ಪರಿಚಯದವರು ಇರಬೇಕು ಮಾತನಾಡಿಸೋಣ ಎಂದು ಎದ್ದೆ, ಅವರಬಳಿ ಸರಿದೆ. ಅವರ ಹತ್ತಿರಕ್ಕೆ ನಾನು ಬರುತ್ತಿರುವುದನ್ನು ಗಮನಿಸಿದ ಅವರು ನಿಂತರು – ನನ್ನ ಹೆಸರು ಹೇಳಿ ಅಲ್ಲವೇನಯ್ಯಾ? ಅಂದರು.

ನಮಸ್ಕಾರ ಸಾರ್ ನೀವು ವೀಜಿ ಅಲ್ಲವೇ? ಅಂದೆ. ಪರವಾಗಿಲ್ಲವಯ್ಯಾ ಹೆಸರೂ ನೆನಪಿದೆಯಲ್ಲಾ ಅಂತ ಸಂತೋಷಿಸಿದರು.

ಸಾರ್ ನೀವು ಸಾವಿರಾರು ಜನ ಹುಡುಗರಲ್ಲಿ ನನ್ನಂಥಹವನ – ನನ್ನ ಹೆಸರು ನೆನಪಿನಲ್ಲಿ ಇಟ್ಟುಕೊಂಡಿದೀರಲ್ಲಾ ಅದು ವಿಶೇಷ...... ಅಂದೆ.

ನಲವತ್ತು ವರ್ಷಗಳ ಹಿಂದೆ ಅವರ ಸಾವಿರಾರು ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದ ನನ್ನನ್ನು ಅವರು ಹೆಸರು ಸಮೇತ ನೆನಪಿನಲ್ಲಿ ಇಟ್ಟುಕೊಳ್ಳುವುದು ಅಂದರೆ ಅದು ದೊಡ್ಡದಲ್ಲವೇ? ನನಗೆ ಹೆಮ್ಮೆ ಅಂತ ಅನಿಸಿತು ಇವರೇ.

ಮೇಷ್ಟರಿಗೆ ಈಗ ಎಂಬತ್ತೆರಡು ವರ್ಷ. ನೆನಪು ಇನ್ನೂ ಅಸಾಧಾರಣವಾಗಿದೆ. ಅವರ ಕಾಲೇಜಿನ ದಿವಸಗಳ ನೆನಪು ಹಾಗೂ ಅವರು ಮೇಷ್ಟರಾಗಿ ವೃತ್ತಿ ಆರಂಭಿಸಿದ ದಿನದಿಂದಲೂ ಹಲವು ಹಳೆಯ ನೆನಪುಗಳು ಅವರಿಗಿನ್ನೂ ಇದೆ. ಅವರ ಕ್ಲಾಸ್‌ಮೇಟುಗಳು – ಇವರಲ್ಲಿ ಹಲವರು ವಿಖ್ಯಾತರು, ಕೆಲವರು ರಾಜಕೀಯದಲ್ಲಿ ಹೆಸರು ಮಾಡಿದವರು, ಮತ್ತೆ ಕೆಲವರು ಸಮಾಜದ ಹಿತಕ್ಕಾಗಿ ತಮ್ಮನ್ನೇ ಮುಡುಪಾಗಿರಿಸಿಕೊಂಡವರು..... ಇವರುಗಳ ಬಗ್ಗೆ ಅವರು ನೆನಪನ್ನು ಹರಿದು ಬಿಡುತ್ತಾ ಹೋದರೆ ಅದನ್ನು ಕೇಳುವುದೇ ಒಂದು ಸೊಗಸು. ಅದಕ್ಕಿಂತಲೂ ಆಶ್ಚರ್ಯವೆಂದರೆ ನಮ್ಮ ಕೆಲವು ವೈಶಿಷ್ಟ್ಯಗಳನ್ನು ಅವರು ಈಗಲೂ ಹಸಿರಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವುದು.

ಇದು ಭಾರೀ ವಿಶೇಷವಾದ ಸಂಗತಿ ಸಾರ್ ನನಗೆ ಅಂದ – ಅವರು ನಾನೇ ಮರೆತಿದ್ದ ಒಂದು ನೆನಪನ್ನು ಹೇಳಿದಾಗ. ಇಲ್ಲವಯ್ಯಾ ನನಗೆ ಹಾಗೆ ಅನಿಸುವುದೇ ಇಲ್ಲ. ಹುಡುಗರಲ್ಲಿ ಯಾವುದೋ ಒಂದು ಪ್ರತಿಭೆ ಇರುತ್ತೆ. ಅದನ್ನು ನಾವು ಮೇಷ್ಟರಾಗಿರುವವರು ಗಮನಿಸಲಿಲ್ಲ ಅಂದರೆ ಮತ್ತೆ ಯಾರು ಗಮನಿಸುತ್ತಾರೆ ನೀನೇ ಹೇಳು...

ಮಹತ್ವವಾದ ಯಾವುದೇ ಆಕಾಂಕ್ಷೆ, ಪ್ರಲೋಭನೆ ಇಲ್ಲದೆ ಅವರ ಜೀವನ ಹಸನು ಮಾಡಿಕೊಂಡಿದ್ದರು ಅವರು. ರಾಜಕೀಯದಲ್ಲಿ ಅವರ ಜತೆಗಾರರೇ ಮುಖ್ಯಮಂತ್ರಿ ಸ್ಥಾನದಲ್ಲಿದ್ದರೂ ಯಾವುದೇ ಯಾಚನೆಗೆ ಇವರು ಹೋಗಲಿಲ್ಲ, ಅದಕ್ಕಿಂತಲೂ ಹೆಚ್ಚಾಗಿ ಅವರ ಹತ್ತಿರ ಯಾವುದೇ ಕೆಲಸ ಮಾಡಿಸಿಕೊಳ್ಳಲು ಹೋಗಬೇಕು ಅಂತ ಇವರಿಗೆ ಅನಿಸಲೇ ಇಲ್ಲವಂತೆ! ಇವರಿಗೆ ತಿಳಿದವರು ಸರ್ಕಾರದ ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದರೂ ಇವರು ಅವರ ಬಳಿ ಸುಳಿದವರಲ್ಲ.

ಅವರ ನೆನಪು ಗರಿಬಿಚ್ಚಿದ ಹಾಗೆ ಎಷ್ಟು ಜನ ಪ್ರಖ್ಯಾತರು ನಮ್ಮ ಕಣ್ಣ ಮುಂದೆ ಸುಳಿಯಬಹುದು ಅಂತ ಸೋಜಿಗವಾಯಿತು.

ನೋಡಪ್ಪಾ ನಾನು ಉಪಾಧ್ಯಾಯ ವೃತ್ತಿಯನ್ನು ಹುಡುಕಿ ಬಂದವನು, ನಮಗೆ ನಮ್ಮದೇ ಆದ ಕಮಿಟ್‌ಮೆಂಟುಗಳು ಇರುತ್ತವೆ, ನಮ್ಮದೇ ಆದ ಬದ್ಧತೆಗಳೂ ಇರುತ್ತವೆ. ಅದರ ಜತೆಗೆ ಸಾರ್ವಜನಿಕವಾಗಿ ನಮ್ಮನ್ನು ಹಿಂಬಾಲಿಸುತ್ತಿರುವ ಸಾವಿರಾರು ಕಣ್ಣುಗಳೂ ಇರುತ್ತವೆ. ವಿದ್ಯಾರ್ಥಿಗಳಿಗೆ ನಾವು ಒಂದು ರೀತಿಯಲ್ಲಿ ರೋಲ್ ಮಾಡಲ್‌ಗಳು. ನಾವೇನಾದರೂ ಒಂದು ಚೂರು ಹಾದಿ ತಪ್ಪಿದೆವೋ ಅದು ಅವರಿಗೆ ಸಿಗ್ನಲ್ಲು, ನಾವೂ ಅವರ ಹಾದಿಯಲ್ಲೇ ನಡೀಬಹುದು ಅಂತ. ಅದರಿಂದ ನನ್ನ ಜೀವನವನ್ನ ನಾನು ಆವಾಗಲೇ ಒಂದು ಶಿಸ್ತಿಗೆ ಒಳಪಡಿಸಿಕೊಂಡು ಬಿಟ್ಟೆ. ಯಾವುದೇ ವಶೀಲಿ ಬಾಜಿ ಮಾಡಬಾರದು, ಹೆಚ್ಚಿನ ಸವಲತ್ತಿಗೋ ಅಥವಾ ಬೇರೆಯವರಿಗಿಂತಲೂ ಮೇಲೆ ಬರಲು ಅಡ್ಡಹಾದಿಗಳನ್ನೋ ಹುಡುಕಲೇ ಬಾರದು.

ಅಂತ ಚಟಗಳನ್ನು ದೂರವಿಡಬೇಕು ಅನ್ನುವುದೂ ಒಂದು ಅದರಲ್ಲಿ. ಈಗ ನೋಡು ನನಗೆ ರಿಟೈರ್ ಆಗೇ ಇಪ್ಪತ್ಮೂರು ವರ್ಷ – ನನಗೆ ಏನೂ ರೆಪೆಂಟೆನ್ಸ್ ಇಲ್ಲ – ಇಂಥಹ ವೃತ್ತಿ ಆಯ್ಕೆ ಮಾಡಿಕೊಂಡೆ, ದುಡ್ಡು ಸಂಪಾದನೆ ಆಗಲಿಲ್ಲ ಅನ್ನುವ ದುಃಖವಂತೂ ಮೊದಲೇ ಇಲ್ಲ.. ಈಗಲೂ ಹಾಯಾಗಿದೀನಿ. ರಾತ್ರಿ ನಿದ್ದೆ ಸರಿಯಾಗಿ ಮಾಡ್ತೀನಿ, ದಿವಸಕ್ಕೆ ಎರಡು ಗಂಟೆ ಪುಸ್ತಕ ಓದ್ತೀನಿ, ಬಿ.ಪಿ. ಇಲ್ಲ, ಶುಗರೂ ಇಲ್ಲ, ಹೃದಯ ಚೆನ್ನಾಗೇ ಇದೆಯಂತೆ...

ಯಾರಾದರೂ ಬಂದರೆ ಅವರಿಗೆ ಅರ್ಥವಾಗದೇ ಇರೋ ಪಾಠವನ್ನೂ ಹೇಳಿಕೊಡ್ತೀನಿ, ಜನ ಈಗಲೂ ಮೇಷ್ಟ್ರೇ ಮೇಷ್ಟ್ರೇ ಅಂತ ಪ್ರೀತಿಯಿಂದ ಮಾತು ಆಡಿಸ್ತಾರೆ. ಊರಿನಲ್ಲಿ ಸಭೆ ಸಮಾರಂಭವಾದರೆ ಕರೀತಾರೆ, ಮೊದಲ ಬೆಂಚಿನಲ್ಲಿ ಕೂಡಿಸ್ತಾರೆ, ತುಂಬಾ ಗೌರವ ತೋರಿಸ್ತಾರೆ.... ಹೀಗೆ ಬದುಕು ನಡೆದುಕೊಂಡು ಹೋಗುತ್ತಿದೆ. ಅಕಸ್ಮಾತ್ ನಾನು ಈ ವೃತ್ತಿ ಬಿಟ್ಟು ಬೇರೆ ವೃತ್ತಿ ಹಿಡಿದಿದ್ದರೆ ಬದುಕು ಇನ್ನೂ ಹೆಚ್ಚಿನ ಸವಲತ್ತು ಕೊಡುತ್ತಾ ಇತ್ತೇನೋ – ಆದರೆ ಅದರ ಬಗ್ಗೆ ನನಗೆ ಚಿಂತೆ ಅನ್ನೋದು ಇಲ್ಲ. ತೃಪ್ತಿ ಅನ್ನೋದು ಗೊತ್ತಾ? ಅದೂ ಸಹ ಸಂತೋಷದ ಹಾಗೆ – ಒಂದು ಸ್ಟೇಟ್ ಆಫ್ ಮೈಂಡ್. ದುಡ್ಡಿದ್ದವನು ಸಂತೋಷವಾಗಿರ್ತಾನೆ ಅನ್ನೋದೇ ಮಿಥ್ ಕಣಯ್ಯಾ... ಇವಾಗ ನನಗೆ ದುಡ್ಡಿಲ್ಲ ಅಂತ ನನ್ನ ಸಂತೋಷ ಹಾಳಾಗಿದೆಯೇ? ನೋಡಪ್ಪಾ ಈಗ ನನಗೆ ಎಂಬತ್ತೆರಡು ವರ್ಷ – ಹಾಯಾಗಿ ಬಸ್ಸಿನಲ್ಲಿ ಓಡಾಡುತ್ತೇನೆ, ಬೇಕಾದ್ದು ಇತಿಮಿತಿನಲ್ಲಿ ಹೊಟ್ಟೆಗೆ ಹಾಕಿಕೊಳ್ತೀನಿ, ನಂಟರು ಇಷ್ಟರು ಸೇರಿದಾಗ ಅವರ ಜತೆ ಸರಸವಾಡ್ತೀನಿ... ಇದೆಲ್ಲಾ ಹೇಗೆ ಸಾಧ್ಯ ಅಂತ ಕೆಲವರು ನನಗೆ ಕೇಳ್ತಾರೆ. ಸಜ್ಜನವಾಗಿ ಸಭ್ಯವಾಗಿ ಲಂಚ ಪಂಚ ಹೊಡೀದೆ ಯಾರಿಗೂ ಮೋಸ ಮಾಡದೇ ಸಮಾಜಕ್ಕೆ ಕೆಟ್ಟದನ್ನ ಮಾಡದೇ ಬದುಕಿದವರಿಗೆ ಇದು ಸಾಧ್ಯ ಅಂತ ನನ್ನ ಉತ್ತರ... ನೀನೇನು ಹೇಳ್ತೀಯಾ?....

ಸ್ನೇಹಿತನ ಮಾತಿಗೆ ತಡೆ ಹಾಕಿದೆ.

ನೀನೇನು ಹೇಳಿದೆ? ಅಂದೆ.

ಏನು ಹೇಳಲಿ ನಾನು, ನಿಮ್ಮ ತರಹ ಬದುಕು ಕಷ್ಟ ಅಂದೆ ಅಂದ!

ಹೌದಲ್ಲವೇ ನಾವಾದರೂ ಅದನ್ನೇ ಹೇಳಬೇಕಿತ್ತು ಅನಿಸಿತು!

---

**ಓಟಿನ ನಗು**

ನಿಜಕ್ಕೂ ರಾಜಕಾರಣಿಗಳಷ್ಟು ನಗಬೇಕು
ಬಿಡಬೇಕು ಅವರು ಆಸೆ 'ನಗ'ಬೇಕು ಎನ್ನುವುದನ್ನು
ನಕ್ಕು ನಗಿಸುವವರಿಗಷ್ಟೆ ಜನ ಓಟು ಕೊಟ್ಟರೆ
ಸಮಾಜವೇ ನಗುವಿನಿಂದಿರುವುದು ಒಟ್ಟಾರೆ

– ಸುಶೀಲಾ



# ವೈಟ್ ದೇವೇಂದ್ರ.....!

**ಗೋಪಾಲಿ**

*(ಎಮ್.ಎನ್.ಸಿ. ಕಂಪನಿಯ ಹಾಸ್ಟಲಿನಲ್ಲಿ ನನ್ನ ಖಾಸಾ ದೋಸ್ತು ಕೆಲಸ ಮಾಡ್ತಾನೆ. ಇದು ಅವನ ಅನುಭವ)*

**ಫಾ**ರಿನ್‌ಗೆಲ್ಲಾ ಹೋಗಿ ನೋಡ್ಕೊಂಡು ಬಂದಿದೀವಿ.. ಅಲ್ಲಿ ಹೆಂಗದೆ ಗೊತ್ತಾ? ಎಲ್ಲಾ ಬೋ ಪಸಂದು.. ಇಲ್ಲೂ ಎಲ್ಲವೂನೂ ಫಾರಿನ್ನೇ ಆಗಬಕು...

ಸರಿ ಸಾರ್ ಹಾಗೇ ಮಾಡೋಣು... ಫಾರಿನ್‌ನಲ್ಲಿ ಹೆಂಗದೆ ಸಿಸ್ಟಮ್ಮು ಅಂತ ಹೇಳ್ಬಿಡಿ...

ಎಲ್ಲಾ ವೈಟು, ಹಾಸಿಗೆ ವೈಟು, ಹೊದ್ದಿಕೆ ವೈಟು ಬೇಕು, ದಿಂಬಿನ ಕವರು ವೈಟು ಬೇಕು, ಗೋಡೆಗೆ ವೈಟು, ಬಾಗಿಲಿಗೆ ವೈಟು, ಎಲ್ಲವೂ ವೈಟು, ವೈಟು ಎಲ್ಲಾ ಕಡೆ ಹೊಡೀಬೇಕು...

ಸರಿ ಸಾರ್ ಹಾಗೇ ಆಗಲಿ...

ತರಾತುರೀಲಿ ಎಲ್ಲವೂನೂ ವೈಟೋವೈಟು ಮಾಡಿದ್ದಾಯಿತು. ಬಣ್ಣದ ಹೊದಿಕೆ ಬದಲಿಗೆ ವೈಟು ಬಂತು, ಬಣ್ಣದ ದಿಂಬಿನ ಕವರಿನ ಬದಲು ವೈಟು ದಿಂಬಿನ ಕವರು ಬಂತು, ಹೊದ್ದಿಕೊಳ್ಳಲು ಬಿಳೀ ಬಣ್ಣದ ಹೊದಿಕೆ ಬಂದವು, ಅದರೊಳಗೆ ಸೇರಿಸಿಕೊಳ್ಳಲು ಮತ್ತೊಂದು ಬಿಳೀದೇ ಹೊದಿಕೆ, ಹಾಸಿಗೆ ವೈಟು, ಹೊಸದಾಗಿ ಹೊಡೆಸಿದ್ದ ಗೋಡೆ ಬಣ್ಣವನ್ನು ಕಿತ್ತು ಕೆರೆದು ವೈಟು ಮಾಡಿಸಿದ್ದೂ ಆಯ್ತು. ಬಣ್ಣದ ಕಿಟಕಿ ಪರದೆ ಬದಲಿಗೆ ಅದನ್ನೂ ವೈಟು ಮಾಡಿಸಿದ್ದೂ ಆಯ್ತು... ಒಟ್ಟಿನಲ್ಲಿ ಸರ್ವವೂ ವೈಟುಮಯವಾಗಿಬಿಟ್ಟಿತು. ದೇವೇಂದ್ರನ ಅರಮನೆ ಹಾಗೆ... ವೈಟ್ ದೇವೇಂದ್ರ....!

ಇದೆಲ್ಲಾ ಸರೀನ್ರೀ ಸ್ಟೂಡೆಂಟ್ಸ್‌ಗೆ ತಿಂಡಿ ಏನು ಕೊಡ್ತೀರೀ ಹೇಗೆ ಕೊಡ್ತೀರೀ?

ಬೆಳಿಗ್ಗೆ ಉಪ್ಪಿಟ್ಟು, ದೋಸೆ, ಕೇಸರಿಬಾತು, ರವೆ ಇಡ್ಲಿ, ಚಿತ್ರಾನ್ನ, ಅವಲಕ್ಕಿ... ಮಧ್ಯಾಹ್ನ ಬಿಸಿಬೇಳೆಬಾತು, ಪಲಾವು, ಬಿರಿಯಾನಿ... ರಾತ್ರಿ ಚಪಾತಿ, ಅನ್ನ ಹುಳಿ, ಸಾಂಬಾರು, ಹಪ್ಪಳ, ಪಲ್ಯ, ಮೊಸರು.....

ಅದನ್ನ ಹೇಗ್ರೀ ಸರ್ವ್ ಮಾಡ್ತೀರೀ?

ಹೀಗೆ ಸ್ಟೀಲ್ ತಟ್ಟೇಲಿ ಕೊಡ್ತೀವೀ ಸಾರ್...

ಬರೀ ತಟ್ಟೆ ಏನ್ರೀ...

ಇಲ್ಲಾ ಸಾರ್, ಸ್ಪೂನು ಇಟ್ಟು ಕೊಡ್ತೀವಿ ಸಾರ್...

ಉಪ್ಪಿಟ್ಟು, ದೋಸೆ, ಕೇಸರಿಬಾತು, ರವೆ ಇಡ್ಲಿ, ಚಿತ್ರಾನ್ನವೇನ್ರೀ? ಇದು ಏನು ತಿಂಡೀನ್ರೀ ಇದೆಲ್ಲಾ ಕಂಟ್ರಿ ಫುಡ್ಡು ಬೇಡ್ರೀ ಎಲ್ಲಾ ಫಾರಿನ್ನು ಅಂದಮೇಗೆ ಅವುನೂ ಫಾರಿನ್ ರೀತೀಲೇ ಇರ್ಲಿ... ಏನು?

ಏನು ಕೊಡಬಹುದು ಸಾರ್?

ಬ್ರೆಡ್ಡು ಬ್ರೆಡ್ಡು ಕೊಡ್ರೀ, ಅದನ್ನ ಸ್ಯಾಂಡ್ ವಿಚ್ ಮಾಡ್ರೀ, ಬನ್ನು ಕೊಡ್ರೀ, ಪೇಸ್ಟ್ರೀ ಮಾಡ್ರೀ, ಪಫ್ ಕೊಡ್ರೀ, ಬೇರೆ ಬೇರೆ ಶೇಪಿನಲ್ಲಿರಲೀ ರೀ. ಫಾರಿನ್‌ನಲ್ಲಿ ಹಾಗೇನೇ ಗೊತ್ತಾ? ಸಂಜೇಗೂ ಅದನ್ನೇ ಕೊಡ್ರೀ...

ಸಾರ್ ಸ್ಟೂಡೆಂಟ್ಸು ನಮ್ಮೂರೋವು ಅದನ್ನ ಒಪ್ತಾವಾ?

ಒಪ್ಪ ಬೇಕ್ರೀ ಒಪ್ಪದೇ ಏನ್ರೀ ಮಾಡುತ್ವೆ? ನೀವು ಮಾಡಿ ತಿನ್ನುತ್ವೆ..ಬೇರೆ ಛಾಯ್ಸ್ ಬೇಡ್ರೀ...

ಸರಿ ಸಾರ್...

ಹುಡುಗ್ರು ಅಂದರೆ ಸ್ಟೂಡೆಂಟ್ಸು ಬಂದವು. ಬಿಳೀ ಹೊದ್ದಿಕೆ,ದಿಂಬು ನೋಡಿದವು ಛಲೋ ಐತೆ ಅಂದವು.

ಸಿಸ್ಟಮು ಸರಿ ಇದೆ ಅಂತ ಬೀಗಿದೆವು.

ಬೆಳಿಗ್ಗೆ ನಾಷ್ಟಾಕ್ಕೆ ಬ್ರೆಡ್ಡು ಕೊಟ್ಟೆವು. ಮುಖ ಸಿಂಡರಿಸಿಕೊಂಡು ತಿಂದವು, ಮಧ್ಯಾಹ್ನ ಊಟಕ್ಕೆ ಮತ್ತೆ ಬ್ರೆಡ್ಡು ಜಾಮು ಸಾಸು ಹಾಕಿ ಕೊಟ್ಟೆವು. ಅದನ್ನೂ ಮುಖವನ್ನು ಮತ್ತೂ ಸಿಂಡರಿಸಿಕೊಂಡೇ ತಿಂದವು. ಸಂಜೆ ಕಾಫಿ ಜತೆಗೆ ಬಿಸ್ಕಟ್ಟು ಕೇಕು ಇಟ್ಟೆವು. ಮುಖವನ್ನು ಮತ್ತೂ ಹುಳಿ ಮಾಡಿಕೊಂಡು ತಿಂದವು. ರಾತ್ರಿ ಊಟಕ್ಕೆ ಐದಾರು ಥರಹ ಬ್ರೆಡ್ಡು, ಸಾಸು, ತರಕಾರಿ ಸರ್ವ್ ಮಾಡಿದೆವು.

ಅಳು ಮೂತಿ ಮಾಡಿಕೊಂಡು ತಿಂದವು. ರಾತ್ರಿ ಒಂದು ಮೀಟಿಂಗು ಮಾಡಿದೆವು. ನೀವೆಲ್ಲಾ ಟ್ರೈನಿಂಗಿಗೆ ಬಂದಿದೀರಿ, ನಮ್ಮದು ಫಾರಿನ್ ರೀತಿ ಆಗಲು ಯತ್ನಿಸುತ್ತಿರುವ ಕಂಪನಿ, ಅದಕ್ಕೇ ನಿಮಗೆಲ್ಲರಿಗೂ ಫಾರಿನಲ್ಲಿ ಇರುವ ಹಾಗೆ ವ್ಯವಸ್ಥೆ ಆಗಿದೆ. ಏನಾದರೂ ತೊಂದರೆ ಇದ್ದರೆ ನಮ್ಮ ಹತ್ತಿರ ಯಾವಾಗ ಬೇಕಾದರೂ ಬನ್ನಿ, ನಿಮ್ಮ ಸಮಸ್ಯೆ ಹೇಳಿಕೊಳ್ಳಿ. ಸಮಸ್ಯೆ ಪರಿಹರಿಸಲು ಕ್ರಮ ತೆಗೆದುಕೊಳ್ಳುತ್ತೇವೆ... ಅಂದೆವು.

ಸರಿ ಸಾರ್ ಅಂತ ತಲೆಯಾಡಿಸಿದವು.

ಹಳ್ಳಿ ಸ್ಟೂಡೆಂಟ್ಸ್‌ನ ಫಾರಿನ್ ಮಾಡ್ತಾ ಇದ್ದೀವಿ, ಅವೂ ಅದಕ್ಕೆ ಹೊಂದುಕೋತಿವೆ ಅಂತ ಬೀಗುತ್ತಾ ನಾಲ್ಕೂವರೆ ಇಂಚು ಉಬ್ಬಿದೆವು.

ಟ್ರೈನಿಂಗಿಗೆ ಬಂದವರಲ್ಲಿ ಆರು ಜನ ಎರಡು ದಿವಸ ಆಗುತ್ತಿದ್ದ ಹಾಗೇ ಸರ, ಊರಿಗೆ ಹೋಗಿ ಬರ್ತೀವಿ ಅಂತ ಹೊರಟವು. ಎರಡು ದಿವಸ ರಜಾ ಇದೆಯಲ್ಲಾ ಸರ, ಅದು ಮುಗಿಸಿಕೊಂಡು ಬರ್ತೀವಿ... ಅಂದವು.

ಸರಿ ಅಂತ ಪರ್ಮಿಷನ್ನೂ ಕೊಟ್ಟೆವು. ಹೊಸಾ ವ್ಯವಸ್ಥೆ ಹೇಗೆ ನಡೀತಿದೆ ಅಂತ ಪರಿಶೀಲಿಸೋಕ್ಕೆ ಅಂತ ಸ್ಟೂಡೆಂಟ್ಸ್ ರೂಮಿಗೆ ನುಗ್ಗಿದೆವು – ಅವರು ತರಗತಿಗಳಿಗೆ ಹಾಜರಿರಬೇಕಾದರೆ.

ಬಿಳೀ ಬಣ್ಣದ ಬೆಡ್ ಶೀಟಿನ ಮೇಲೆ ಅವರ ಮನೆಯಿಂದ ತಂದಿದ್ದ ಬಣ್ಣದ ಬೆಡ್ ಶೀಟು, ಪಂಚೆ, ಲುಂಗಿ ಹಾಸಿಕೊಂಡಿದ್ದವು. ದಿಂಬಿನ ಕವರಿನ ಮೇಲೆ ಅವರೂರಿನ ಟವಲ್ಲು ಹರಡಿತ್ತು. ಹೊದಿಕೆನ ಮಡಿಸಿ ಪಕ್ಕದಲ್ಲಿಟ್ಟು ಅವರ ಮನೆಯಿಂದ ತಂದಿದ್ದ ಕಂಬಳಿ ಹಾಕ್ಕೊಂಡಿದ್ದವು! ಬಿಳೀ ಬಣ್ಣದ ಪರದೆಗಳು ಅಂದವಾಗಿ ಮುದುರಿಕೊಂಡು ಕಬೋರ್ಡು ಸೇರಿದ್ದವು. ಅಲ್ಲಲ್ಲಿ ಅರ್ಧ ತಿಂದು ಬಿಟ್ಟ ತಟ್ಟೆಗಳು ಕಾಣಿಸಿದವು. ಅರ್ಧ ತಿಂದು ಮುಗಿಸಿದ್ದ ರಾಗಿ ಮುದ್ದೆ ಎಲ್ಲರ ಹಾಸಿಗೆ ಅಡೀಲೂ ಪಾಲಿಥೀನಿನ ಕವರಿನಲ್ಲಿ ಕಾಣಿಸಬೇಕೇ? ಒಂದೊಂದು ರೂಮಿನಲ್ಲೂ ನೀರು ಕುಡಿಯೋಕ್ಕೆ ಅಂತ ಇಟ್ಟಿದ್ದ ಲೋಟದಲ್ಲಿ ಅರ್ಧ ತುಂಬಿದ ಅವರೆಕಾಳು, ಸೊಪ್ಪಿನ ಸಾರು ಕಾಣಿಸಬೇಕೇ?

ಎಲ್ಲೋ ಏನೋ ಎಡವಟ್ಟಾಗಿದೆ ಅನಿಸಿತು. ಅವತ್ತು ರಾತ್ರಿಯೇ ಬ್ರೆಡ್ಡಿನ ಡಿನ್ನರ್ ಆದ ಕೂಡಲೇ ಸ್ಟೂಡೆಂಟ್ಸ್‌ನ ಕಾನ್ ಫರೆನ್ಸ್ ಹಾಲಿಗೆ ಮೀಟಿಂಗ್ ಮಾಡೋದಕ್ಕೆ ಕೂಗಿದೆವು.

ಹುಡುಗರು ಹೆದರುತ್ತಲೇ ಜಮಾಯಿಸಿದವು.

ಡಿಯರ್ ಸ್ಟೂಡೆಂಟ್ಸ್... ಅಂತ ನಮ್ಮ ಹೆಡ್ಡು ಪ್ರಸ್ತಾವನೆಗೆ ತೊಡಗಿದರು. ಕೊನೇ ಬೆಂಚಿನವು ಸಾರ್ ಕನ್ನಡ ಕನ್ನಡ ಸಾರ್... ಅಂದವು.

ಸರೀನ್ರಾ ಕನ್ನಡದಲ್ಲೇ ಮಾತಾಡ್ತೀನಿ, ನಿಮಗೆಲ್ಲಾ ಇಲ್ಲಿ ಸರಿ ಐತಾ?

ಸ್ಟೂಡೆಂಟ್ಸ್ ತೆಪ್ಪಗಿದ್ದವು.

ತೊಂದ್ರೆ ಇದ್ರೆ ಹೇಳಿ ಸರಿ ಮಾಡೋಣಾ...

ಮತ್ತೆ ಕೊನೆ ಬೆಂಚಿಂದ ಒಂದು ಪಡ್ಡೆ ನಿಲ್ತು.

ಸಾರ್ ನಾವು ಊರ್ನಾಗೆ ಮುದ್ದೆ ತಿಂದು ಬೆಳ್ದೋರು.. ನೀವು ಕೊಡೋ ಬ್ರೆಡ್ಡು ತಿಂದ್ರೆ ಊಟದ ಮನೆಯಿಂದ ಆಚೆ ಬರ್ತಿದ್ದ ಹಾಗೇ ಹಸಿವಾಗ್ತೈತೆ... ನಮಗೆ ಬ್ರೆಡ್ಡು ಬ್ಯಾಡ್ರೀ... ಇದ್ಕೆ ಹೆದ್ರೇ ನಮ್ಮೋರು ಆರ್ಜುನ ಊರ್ಗೆ ಹೋಗಾರ್ರೀ.....

ಬ್ರೆಡ್ಡು ಬೇಡಾಂದ್ರೆ ಬಿಡಿ ಬೇಕಾದರೆ ಬೇರೆ ಏನಾದರೂ ಮಾಡ್ಸೋವಾ...

ಸರ, ನಮಗೆ ಹಿಟ್ಟು ಮುದ್ದೆ ಅಂದರೆ ಆಗತ್ತೈತ್ರಾ, ಅದೇ ಇರ್ಲಿ ಸರ...

ನಿಮ್ಮನ್ನೆಲ್ಲಾ ಫಾರಿನ್ ಮಾಡಬಕು ಅಂತ ಇದೀವಲ್ಲಾ...?

ಸಾರ್ ಊಟ ಒಟ್ಟೆ ತುಂಬಬೇಕ್ರಾ? ಬ್ರೆಡ್ಡು ತಿನ್ಕೊಂಡು ಓದ್ರೆ ನಮ್ಮ ಮನಸ್ಸೆಲ್ಲಾ ಮುದ್ದೇನೇ ನೆನೀತೈತ್ರೀ...

ಹೋಗಲಿ ಅದು ಸರಿ ಮಾಡೋವಾ. ಬಿಳೀ ಹೊದಿಕೆ ಯಾಗೆ ಯಾರೂ ಹೊದ್ಕೋತಾ ಇಲ್ಲಾ?

ಸಾರ ಅದು ಕೊಳೆಯಾಗ್ತೈತ್ರೀ ಅದಕ್ಕೇ ನಮಗೆ ನಮ್ಮದೇ ಸಾಕ್ರೀ...

ಕೊಳೆಯಾದ್ರೆ ಒಗೆಸಬೋದೂ...

ಸರ ಒಗೆಸಬೋದೂ ಆದ್ರೆ ಇಲ್ಲಿ ಪ್ಯಾಟೆ ಜನ ನೀರಿಗೆ ಪಡ್ತಿರೋ ಪಾಡು ನೋಡಿದ್ರೆ ಬಿಳೀದನ್ನ ಕೊಳೆ ಮಾಡಿ ಅದಕ್ಕೆ ಕರ್ಚು ಮಾಡೋ ನೀರು ನೆನೆಸಿಕೊಂಡ್ರೆ ಒಟ್ಟೆ ಉರಿತದ್ರಾ... ಅದ್ಕೇ ನಮ್ಮೂರ ಕಂಬ್ಳೀನೇ ಸಾಕು ಸರ....

ಬಿಳೀದು ಅದು ಇದು ಅಂತ ಏನೂ ತೊಂದ್ರೆ ತೊಗೋಬೇಡ್ರಾ... ನಮ್ಮೂರಲ್ಲಿ ಓದ್ದೋರೆಲ್ಲಾ ಹಿಂಗೇ ಬೆಳೆದಿರೋದೂ... ಸರ....

ಸರಿ ಇನ್ನೇನಾದ್ರೂ ಅದಾ?

ಊರ್‍ಗೆ ಓಗಿರೋ ಆರ್ಜನಕ್ಕೆ ಮುದ್ದೆ ಊಟ ಐತೆ ಅಂತ ಬರೀರೀ ಸರ ಅವೂ ಬರ್ತಾವೆ....

ಮೀಟಿಂಗು ಮುಗೀತು.

ದೊಡ್ಡ ಹಿಟ್ಟು ತೊಳೆಸುವ ಹಿಂಡಾಲಿಯಂ ಪಾತ್ರೆ ಆರ್ಡರು ಮಾಡಿದೀವಿ. ಹಿಟ್ಟು ಸೌದೆ ಒಲೆ ಮೇಲೆ ಮಾಡಿದರೇ ಚೆನ್ನವಂತೆ - ಸೌದೆ ಒಲೆ ಎಲ್ಲಿ ಸಿಗುತ್ತೆ ಅಂತ ನೋಡುತ್ತಿದ್ದೀವಿ ಮತ್ತು ಹಿಟ್ಟು ಮಾಡುವವರನ್ನೂ ಹಿಟ್ಟು ತೊಳೆಸುವ ಕೋಲು ನಮ್ಮೂರಲ್ಲಿ ಎಲ್ಲಿ ಸಿಗುತ್ತೆ ಅಂತಲೂ ಹುಡುಕುತ್ತಿದ್ದೇವೆ, ಹಾಗೇನೇ ಚಳ್ಳಕೆರೆ, ಚಿತ್ರದುರ್ಗ ಕಡೆಯ ಹೊಸಾ ಕಂಬಳಿಗಳಿಗೂ... ಭವಾನಿ ಜಮಖಾನಕ್ಕೆ ಮತ್ತು ಶಿವಕಾಸಿಯ ಟವಲ್ಲುಗಳಿಗೆ ಸರಬುರಾಜುದಾರರನ್ನು ತಲಾಷಿಸುತ್ತಿದ್ದೇವೆ... ಊರಿಗೆ ಹೋಗಿರುವ ಆರ್ಜನಕ್ಕೆ ಬನ್ರಾ ಮುದ್ದೆ ಎಸರು ಮಾಡ್ತೀವಿ.. ಅಂತ ಟಪಾಲು ಹಾಕಿದ್ದೇವೆ...

ನಮ್ಮೋರನ್ನ ಫಾರಿನ್ ಮಾಡುವುದು ನಾವು ತಿಳಿದಷ್ಟು....

---

## ನಗುಮೊಗ

ಮನೆಯಿಂದಾಚೆ ನಗುವಿನ ಮೊಗವಿರಲಿ
ಸಂಕಟವೇನಿದ್ದರೂ ಮನದೊಳಗೆ ಹುದುಗಿರಲಿ
ಅಳೆಯಿರಿ ಆನಂದವನ್ನು ನಗುವಿನ ಕೊಳಗದಲ್ಲಿ
ಅಳೆದಷ್ಟೂ ಹೆಚ್ಚು ನಗುವಿರುವುದು ಬಳಗದಲ್ಲಿ

**- ಸುಕೇಶವ**



# ಈ ಮಾಯಾಲೋಕದಲ್ಲಿ....

**ಗಣೇಶ ಹೆಗ್ಗಡೆ**

**ಕೃ**ತಿಚೌರ್ಯ ಮಾಡೊ ಸಾಹಿತಿಗಳ ವಿಚಾರ ಕೇಳಿದ್ದೆ. ಆದರೆ ನೀನು ಅವರನ್ನೂ ಒಂದು ಕೈ ಮೀರಿಸಿದ್ದೀಯ ಎಂದು ಗಂಗಪ್ಪ ಹೇಳಿದ್ದು ಏಕೆ?

ನಾನು ಎಂದೂ ಯಾವ ಸಾಹಿತ್ಯ ಸಮ್ಮೇಳನಕ್ಕೂ ಹೋಗದಿದ್ದವನು, ಗಂಗಾವತಿಯ ಗೆಳೆಯ ಗಂಗಪ್ಪನ ಪತ್ರ, ನಂತರ ಫೋನ್, ಆನಂತರ ಈ-ಮೇಲ್ ಆಹ್ವಾನ ಕಂಡು ಧರ್ಮಸಂಕಟದಲ್ಲಿ ಸಿಕ್ಕಿಬಿದ್ದೆ.

''ಎಷ್ಟು ವಿಶ್ವಾಸವಾಗಿ ನಿಮ್ಮ ಗೆಳೆಯ ಕರೀತಿದ್ದಾರೆ. ಮೂರ್ ದಿವ್ಸ ಹಾಯಾಗಿ ಹೋಗಿ ಬರ್‌ಬಾರ್ದೆ. ನಿಮ್ಗಂತೂ ಜನಜಂಗುಳಿಯೇ ಆಗ್ದು... ಎಂಥಹ ಮೂಷಂಡೀರಿ....'' ಎಂಬ ಇವಳ ಬಲವಂತ ಕಂಡು ಯಾಕೋ ಕೆಟ್ಟ ಅನುಮಾನ ಶುರು ಆಯ್ತು. ಮಹಿಳಾಸಮಾಜದಿಂದ ಇದೇ ಟೈಮಿನಲ್ಲಿ ಈಕೆ ಗೆಳತಿಯರೊಡಗೂಡಿ ಪ್ರವಾಸ ಹೊರಟಿರಬಹುದೇ? ಇದೇ ರೀತಿ 'ಗಂಗಪ್ಪನ' ಹೆಂಡತಿಗೂ ಗಂಡನ ಸಹವಾಸ ಬೋರ್ ಆಗಿ ಮೂರು ದಿವಸದ ಪೆರೋಲ್‌ಗಾಗಿ ಅರ್ಜಿ ಗುಜರಾಯಿಸಿಕೊಂಡಿರಬಹುದೇ? ಎಂಬ ಬಲವಾದ ಸಂಶಯವೂ ಆಯ್ತು.

''ರ್ರೀ ... ರಾತ್ರೆ ಒಂಭತ್ತಕ್ಕೆ ಬಸ್ಸಿನಲ್ಲಿ ಕೂತರೆ ಬೆಳಿಗ್ಗೆ ಆರಕ್ಕೆಲ್ಲಾ ಗಂಗಾವತಿಯಲ್ಲಿ ಇರ್ತೀರಂತೆ. ಗಂಗಪ್ಪನ ಹೆಂಡ್ತಿ ಬೆಳಿಗ್ಗೆ ಫೋನ್ ಮಾಡಿದ್ರು. ಬಸ್‌ಸ್ಟ್ಯಾಂಡಿಗೆ ಗಂಗಪ್ಪನವರೇ ಖುದ್ದಾಗಿ ಬಂದು ಮನೆಗೆ ಕರೆದುಕೊಂಡು ಹೋಗ್ತಾರಂತೆ.''

''ಹಳೇ ಖಾದಿ ಜುಬ್ಬ, ಪೈಜಾಮ, ವೇಸ್ಟ್‌ಕೋಟ್ ಎಲ್ಲವೂ ಸೂಟ್‌ಕೇಸಿನಲ್ಲಿ ಇಟ್ಟಿದ್ದೇನೆ. ಪ್ರತಿ ದಿವಸವೂ ಅದನ್ನೇ ಹಾಕಿಕೊಳ್ಳಿ. ಮೂರು ದಿವ್ಸ ಶೇವ್‌ಮಾಡ್ಕೋಬ್ಯಾಡಿ. ಗಡ್ಡವೇ ಇರ್‍ಲಿ.''

''ಸರಿ'' ಅಂದೆ.

★★★

ಅಂದು ಮೊದಲನೇ ದಿವಸದ ಸಾಹಿತ್ಯ ಸಮ್ಮೇಳನದ ಎಲ್ಲಾ ಕಾರ್ಯಕ್ರಮಗಳಲ್ಲೂ ಗಂಗಪ್ಪ ಮತ್ತು ನಾನು ಖುಷಿ-ಖುಷಿಯಿಂದಲೇ ಭಾಗವಹಿಸಿದೆವು.

''ನೋಡು ಮರಿ..., ಎಂಥಹ ಪ್ರೋಗ್ರಾಂ ಇರಲಿ. ಊಟ, ತಿಂಡಿಯ ಸಮಯಕ್ಕೆ ಮುಕ್ಕಾಲು ಘಂಟೆ ಮುಂಚೆಯೇ ನಾವು ಊಟದ ಶಾಮಿಯಾನದಲ್ಲಿ ಹಾಜರಿರಬೇಕು. ಕಣ್ಣು ಮತ್ತು ಕಾಲು ಚುರುಕಾಗಿರಲಿ.''

'ನೀನು ಹೇಳಿದಹಾಗೆ..... ಗಂಗಪ್ಪ' ಎಂದು ಆಶ್ವಾಸನೆ ಕೊಟ್ಟಿದ್ದೆ. ಗಂಗಪ್ಪ ಬಲು ಪ್ರಾಕ್ಟಿಕಲ್ ಮನುಷ್ಯ. ನನ್ನನ್ನು ಬಾಲ್ಯದಿಂದಲೂ ಬಲ್ಲವನು. ರಾತ್ರೆ, ಊಟದ ಶಾಮಿಯಾನದಲ್ಲಿ ಗಂಗಪ್ಪ ಯಾಕೋ ನನ್ನನ್ನೇ ಗಮನಿಸುತ್ತಿರುವಂತೆ ಭಾಸವಾಯ್ತು.

''ಯಾಕೋ ಮರಿ... ಈ ಡಿಸೆಂಬರ್ ಛಳೀಲು ಹೀಗೆ ಬೆವರ್ತಾ ಇದ್ದೀ? ಸಾಂಬಾರ್ ಖಾರಾ ಆಯ್ತೇನೋ?''

''ಇಲ್ಲ ಗಂಗಪ್ಪ. ಒಂದು ಎಡವಟ್ಟಾಗಿದೆ. ಈಗ ಗಮನಕ್ಕೆ ಬಂತು. ಜೇಬಿನಲ್ಲಿಟ್ಟಿದ್ದ ನನ್ನ ಪರ್ಸೇ ಕಾಣಿಸ್ತಿಲ್ಲ. ಅಧ್ಯಕ್ಷರ ಮೆರವಣಿಗೆ ಸಂದರ್ಭದ ನೂಕು ನುಗ್ಗಲಾಟದಲ್ಲಿ ಬೆಳಿಗ್ಗೆಯೇ ಪರ್ಸು ಗಾಯೆಬ್ ಆಗಿರ್ಬೇಕು.''

''ಎಷ್ಟು ಇಟ್ಟಿದ್ದೆ ...?''

''ಹತ್ತು ಸಾವಿರ''

''ರಾಜಕಾರಿಣಿಗಳ ಸಭೆ-ಸಮಾರಂಭದಲ್ಲಿ ಹೀಗೆ ಪಿಕ್‌ಪಾಕೆಟ್ ಆಗೋ ಸುದ್ದಿ ಆಗಾಗ್ಗೆ ಪೇಪರ್‌ನಲ್ಲಿ ಓದ್ತಾ ಇದ್ದೆ. ಆದ್ರೆ... ಈಚೀಚೆಗೆ ಸಾಹಿತ್ಯ ಸಮ್ಮೇಳನದಲ್ಲೂ.... ಅನ್‌ಬಿಲೀವಬಲ್!.... ಹೋಗ್ಲಿ ಬಿಡು. ಟವನ್ ಸ್ಟೇಷನ್‌ಗೆ ಕರ್‍ಕೊಂಡು ಹೋಗ್ತೀನಿ. ಹೆಡ್‌ಕಾನ್ಸ್‌ಟೇಬಲ್ ಹೆಡ್ಡಪ್ಪ ನನ್ನ ಸಂಬಂಧಿ.''

ಇಬ್ಬರೂ ಸ್ಟೇಷನ್ ದಾರಿಯತ್ತ ದಾಪುಗಾಲು ಹಾಕಿದೆವು.

''ಇದೇನೋ ಮರಿ ಸ್ಟೇಷನ್ ಮುಂದೆ ಐವತ್ತು ಅರವತ್ತು ಜನ ಜಮಾಯಿಸಿದ್ದಾರೆ.... ಮಹಾರಾಷ್ಟ್ರ ಏಕೀಕರಣದ ಕೇಸೋ?'' ಅಂತ ಅನುಮಾನಿಸಿದ ಗಂಗಪ್ಪ. ಹತ್ತಿರಕ್ಕೆ ಹೋಗಿ ಗಮನಿಸಿದಾಗ ಅವರೂ ನನ್ನಂತೆಯೇ ಸಾಹಿತಿಗಳು ಹಾಗೂ 'ಪಾಕೆಟ್' ಕಳೆದುಕೊಂಡವರು.

''ಏನ್ಲೇ ಫಜೀತಿ ಇದು'' ಎಂದ ಗಂಗಪ್ಪ.

ಎಲ್ಲಾ ಸಾಹಿತಿಗಳ ಗುಂಪನ್ನುದ್ದೇಶಿಸಿ ಹೆ||ಕಾ|| ಹೆಡ್ಡಪ್ಪ ಏರುದನಿಯಲ್ಲಿ ಗುಂಪನ್ನೇ ಪ್ರಶ್ನಿಸಿದ್ದ.

''ಇಲ್ಲೊಂದು ಟೆಕ್ನಿಕಲ್ ಪ್ರಾಬ್ಲಮ್ ಆಗ್ಬುಟ್ಟದೆ. ನಾವು ಕಳ್ರನ್ನ ಹಿಡ್ದು ಕೇಸ್ ಹಾಕ್ತೀವಿ ಅಂತ್ಲೇ ಒಂದು ಪಕ್ಸ ಇಟ್ಕೊಳ್ಳಿ. ನೀವುಗಳು ಸಾಹಿತಿಗಳು ಅಂತೀರ. ನಿಮ್ಮ ಜೇಬ್ನಲ್ಲಿ ಅಷ್ಟೊಂದು ದುಡ್ಡು ಹ್ಯಾಗೆ ಬಂತು? ಅಂತ ಎದುರು ಲಾಯರ್ ಪಾಟೀಸವಾಲ್‌ನಲ್ಲಿ ಕೇಳಿದ್ರೆ ಏನುತ್ತರ ಹೇಳ್ತೀರಾ? ಪಾಕೆಟ್‌ನಲ್ಲಿ ಇದ್ದ ದುಡ್ಡಿಗೆ ಸೋರ್ಸ್ ಹೆಂಗೆ? ಎಂಬುದಕ್ಕೆ ಸಾಕ್ಸಿ ಇಲ್ದಿದ್ರೆ ಕೇಸ್ ಖುಲಾಸೆ ಆಗ್ಬುಡ್ತದಲ್ಲಾ....''

''ಎಲಾ ಇವನ!....'' ಎಂದು ಗೊಣಗಿಕೊಂಡ ಗಂಗಪ್ಪ.

''ನಡಿ ಗಂಗಪ್ಪ..... ಮನೆಗೆ ವಾಪ್ಸ ಹೋಗೋಣ. ನಿಮ್ಮ ಹೆಡ್ಡಪ್ಪನ ತರ್ಕವನ್ನು ನಾವು ಅಷ್ಟು ಸುಲಭವಾಗಿ ತಳ್ಳಿ ಹಾಕುವಂತಿಲ್ಲ. ಜತೆಗೆ.... ನನ್ನ ಕೇಸಿನಲ್ಲಿ ಇನ್ನೂ ಒಂದು ಟೆಕ್ನಿಕಲ್ ಪ್ರಾಬ್ಲಮ್ ಇದೆ.....''

''ಏನ್ಲೇ...?''

''ಪಿಕ್ ಪಾಕೆಟ್ ಆಗಿರುವ ಈ ದುಡ್ಡು ನನ್ನ ಸ್ವಂತದ್ದೇ ಅಲ್ಲ.....!''

''ವ್ವಾಟ್?''

''ಬೀರುವಿನಲ್ಲಿ ಸೀರೆ ಸಂದಿಯಲ್ಲಿ ನನ್ನ ಹೆಂಡ್ತಿ ಬಚ್ಚಿಟ್ಟಿದ್ದ ದುಡ್ಡನ್ನು ಅವಳಿಗೆ ಗೊತ್ತಾಗದ ಹಾಗೆ ನಾನು ಎ..ಗ..ರಿ..ಸಿದ್ದೆ...''

ಗಂಗಪ್ಪ ಬೆಚ್ಚಿಬಿದ್ದ.

''ಕೃತಿಚೌರ್ಯ! ಮಾಡೊ ಸಾಹಿತಿಗಳ ವಿಚಾರ ಕೇಳಿದ್ದೆ. ಆದರೆ.... ನೀನು.... ಅವರನ್ನೂ ಒಂದು ಕೈ ಮೀರಿಸಿದ್ದೀಯ...!''

ಗಂಗಪ್ಪ ನನ್ನನ್ನೇ ಕುರಿತು ಈ ಮಾತನಾಡಿದನೊ? ಅಥವಾ ಅಲ್ಲಿ ನೆರೆದಿದ್ದ ಸಾಹಿತಿಗಳ ಗುಂಪನ್ನುದ್ದೇಶಿಸಿ ಹೇಳಿದರೂ ತಿಳಿಯದಾಯಿತು ನನಗೆ.

''ಗಂಗಪ್ಪ, ನೀನು ನನ್ಹಾಗೆ ಯಾವಾಗಲಾದ್ರು ಪರ್ಸು ಕಳೆದುಕೊಂಡಿದ್ದುಂಟೆ?'' ಎಂದು ಮನೆಗೆ ಹಿಂತಿರುಗುವಾಗ ಪ್ರಶ್ನಿಸಿದೆ.

''ಮನೆ ಹೊರಗಡೆ ಯಾವತ್ತೂ ಕಳೆದುಕೊಂಡಿದ್ದಿಲ್ಲ. ಆದರೆ ಮ...ನೆ...ಯೊ...ಳ...ಗೆ........''

ಯಾಕೋ ಗಂಗಪ್ಪ ನನ್ನೊಂದಿಗೆ ನಿಜ ಹೇಳಲು ಅನುಮಾನಿಸಿದಂತಿತ್ತು.

---

## ನಗುವರಳಿ

ಮನದ ಕದ ತೆಗೆದು ಬರಮಾಡಿಕೊಳ್ಳಿ ನಗುವನ್ನು
ನೋಡಿ ಆನಂದಪಡಿ ನಗು ಅಲ್ಲಿ ಅರಳುವುದನ್ನು
ಮನ ನಕ್ಕರೆ ಅದು ಪ್ರತಿಫಲಿತವಾಗುತ್ತದೆ ಮುಖದಲ್ಲಿ
ಅಂಥಾ ಮುಖವನ್ನು ಗೌರವಿಸುತ್ತಾರೆ ಅಲ್ಲಲ್ಲಿ

**- ಸುಕೇಶವ**

ಶಾಸಕರು "ಜಾಮೂನು" ತಿನ್ನೋಕೆ
ಎಲ್ಲಾ ವ್ಯವಸ್ಥೆ ಮಾಡ್ಕೊಂಡಿದ್ರು. ಈ
ಲೋಕಾಯುಕ್ತರಿಂದಾಗಿ ಈಗ
"ಜಾಮೀನು" ಸಿಗೋದೂ ಕಷ್ಟವಾಗ್ಬಿಟ್ಟಿದೆ..!





# ಆ ದಿನಗಳ ಭಾನುವಾರದ ಅನುಭವಗಳು!

✿ ಇ.ಆರ್. ರಾಮಚಂದ್ರನ್

**ಈ**ಗೆಲ್ಲಾ ಶಾಪಿಂಗ್ ಅಂದ್ರೆ ಮಾಲ್ಗೆ ಹೋಗಿ ಸಿಡಿಯಿಂದ ಮೊಬೈಲ್ ವರೆಗೆ, ಲ್ಯಾಪ್ ಟಾಪ್‌ನಿಂದ ಡಿಜಿಟಲ್ ವಾಚ್, ಐ ಫೋನಿನಿಂದ ಐ ಪ್ಯಾಡ್ ವರೆಗೆ ಕೊಂಡ್ಕೊಬಹುದು.

ಮುಂಚೆಲ್ಲಾ ಶಾಪಿಂಗ್ ಅಂದ್ರೆ ಏನು ಮಾಡ್ತಿದ್ರು? ಆವಾಗಲೆಲ್ಲಾ ಮಾತುಮಾತಿಗೆ ಶಾಪ ಕೊಡುವ, ತೊಗೊಳ್ಳುವ ಕಾಲ!

ಮೇಲಿರುವ ಯಾವುದೂ ಸಾಮಾನು ಇರಲಿಲ್ಲ ಆಗ. ಅವುಗಳ ಹೆಸರೂ ಹುಟ್ಟಿರ್ಲಿಲ್ಲ.....! ಹಾಗಿರುವಾಗ ಏನ್ತಾನೆ ಕೊಂಡ್ಕೊಳ್ತಿದ್ರು? ಮಾಲೇ ಇಲ್ದಿರುವಾಗ ಏನ್ ಮಾಲ್ ಕೊಂಡ್ಕೊಳೋದು?

ಮುಂಚೆ ಶಾಪಿಂಗ್ ಅಂದ್ರೆ ಭಾನುವಾರ ಕೋಆಪರೇಟೀವ್ ಸೊಸೈಟಿಗೆ ಬೆಳಗಿನಜಾವವೇ ಹೋಗಿ ದಿನವಿಡೀ ಅಲ್ಲೇ ಇದ್ದು ಮನೆಗೆ ತಿಂಗಳಿಗೆ ಬೇಕಾದ ಸಾಮಾನು ತರೋದು. ತಿಂಗಳಿನ ಮೊದಲನೇ ಭಾನುವಾರ ಬಂತಂದ್ರೆ ಮನೆಯಲ್ಲಿ ಎಲ್ಲಾರಿಗೂ ಅದೇ ಕೆಲಸ!

ಸೊಸೈಟಿಗೆ ಮೆಂಬರ್ ಆಗೋದು ಅಷ್ಟು ಸುಲಭ ಇರ್ಲಿಲ್ಲ.

ಅವರಿವರ ಕಾಲು ಹಿಡಿದು, ಸೆಕ್ರೆಟ್ರಿಯಿಂದ ಒಂದು ಫಾರ್ಮ್ ಗಿಟ್ಟಿಸೋದು ಧರ್ಮರಾಯ ರಾಜಸೂಯ ಯಾಗ ಮಾಡಿದಂತೆ.

ಮನೆಯವರಲ್ಲಿ ಎಷ್ಟು ಜನ, ದನ, ಕರು, ಅವರ ವಯಸ್ಸು ಎಲ್ಲಾ ಮಾಹಿತಿ ತುಂಬಿ, ಗೆಜೆಟೆಡ್ ಆಫೀಸರ್ ಎದುರಿಗೆ ಹಲ್ಲುಕ್ಕಿರಿದು ಸಲಾಮು ಹೊಡೆದು ಅವರ ರುಜು ಪಡೆದು ಫಾರ್ಮನ್ನು ಸಬ್ಮಿಟ್ ಮಾಡಿದ್ದಾಯಿತು.

ಎರಡೆರೆಡು ದಿನಕ್ಕೆ ಬಸವನಗುಡಿಯ ಗಣೇಶನಿಗೆ ಕೈಮುಗಿದು, ಪೂಜಾರಿಗೆ ಹೆಸರು ಗೋತ್ರ ಹೇಳಿ, ನಮ್ಮ ಅಪ್ಲಿಕೇಷನ್ ಗೋತ ಹೊಡೆಯದಿರುವ ಹಾಗೆ ನೋಡ್ಕೋಳಪ್ಪಾ ಅಂತ ಪೂಜೆ ಮಾಡಿಸಿ ಶಬರಿಯ ಹಾಗೆ ಕಾಯೋದು.

ಒಂದು ದಿನ ಅಪ್ಪ ಆಫೀಸಿನಿಂದ ಬರ್ತಾ ರೇಷನ್ ಕಾರ್ಡ್ ತಂದಾಗ ಮನೆಯಲ್ಲೆಲ್ಲಾ ಖುಷಿ! ಅಮ್ಮ ದೇವರಿಗೆ ತುಪ್ಪದ ದೀಪ ಹಚ್ಚಿ ರಾತ್ರಿ ಊಟದ ಜೊತೆ ದಿಢೀರ್ ಪಾಯಸ ಮಾಡಿದ್ಲು.

ರೇಷನ್ ಕಾರ್ಡು ದೇವರ ಫೋಟೋಪಕ್ಕದಲ್ಲಿ ಜಾಗ ಮಾಡಿಕೊಂಡು ಕುಳಿತಿದ್ದಾಯಿತು.

ಇದಾದ ಸ್ವಲ್ಪ ದಿವಸದಲ್ಲಿ ಇನ್ನು ಕತ್ತಲಿರುವಾಗಲೇ ಮನೆಯವರಿಗೆಲ್ಲಾ ಮುದ್ದಾದ ಇನ್ನೂ ಮಿಡ್ಲ್ ಸ್ಕೂಲ್ ಓದುವ ಪುಟ್ಟನನ್ನು ಎಬ್ಬಿಸಿ ಕಣ್ಣಿಗೆ ನೀರು ಹಾಕಿ, ಒಂದು ಲೋಟ ಹಾಲು ಕುಡಿಸಿ ಅವನ ಅಕ್ಕನ ಜೊತೆ ಕಳಿಸುವುದು ವಾಡಿಕೆಯಾಯಿತು.

ಅಕ್ಕನು ಮಹಿಳಾಸಮಾಜದಲ್ಲೋ, ಮರಾಠಿ ಅಥವಾ ಟಿನ್ನಿ ಸ್ಕೂಲ್ನಲ್ಲಿ ಇನ್ನೂ ಹೈಸ್ಕೂಲ್‌ನಲ್ಲಿ ಓದುವ ಹುಡುಗಿ.

ಆಗಲೇ ಇಸ್ಪೀಟಿನ ಹಾಗೆ ಒಂದರೊಂದರ ಮೇಲೆ ಜೋಡಿಸಿದ್ದ ಗುಪ್ಪೆಯ ಮೇಲೆ ಕಾರ್ಡು ಇಟ್ಟು, ತಮ್ಮನನ್ನು ನಿಗಾ ಇಡುವಂತೆ ಹೇಳಿ ಮನೆಗೆ ಹೋಗುವಳು ಅಕ್ಕ.

ಸೊಸೈಟಿ ಬಾಗಿಲು ತೆಗೆದಾಗ, 'ಸೈಲೆನ್ಸ್' ಅಂತ ಕೂಗಿಕೊಂಡು ಬರುವನು ಅಲ್ಲಿಯ ಗುಮಾಸ್ತ.

ಸುಮಾರು ಒಂದಡಿ ಎತ್ತರ ಬೆಳೆದ ಕಾರ್ಡುಗಳನ್ನು ತಳಕಪಳಕ ಮಾಡುವಾಗ ಕನಿಷ್ಟ ನೂರು ಕಣ್ಣಾದರೂ ಆಗಿನ ಕಾಲದ ಟೂಜಿ ಘೊಟಾಲ ನಡೆಯದ ಹಾಗೆ ಎವೆಯಿಕ್ಕದೆ ನೋಡುವವು.

ಅದೇ ತರಹ ಜಾಗರೂಕತೆ ನಮ್ಮ ಪಿ.ಎಮ್. ವಹಿಸಿದ್ದರೆ ಟೂಜಿ ನಡೆಯತ್ತಲೇ ಇರಲಿಲ್ಲವೋ ಏನೋ.

ಇದ್ದಕ್ಕಿದ್ದಂತೆ ಸೊಸೈಟಿಲೆಲ್ಲಾ ಗಿಜಿಗಿಜಿ ಅಂತ ಶಬ್ದ.

ಒಬ್ಬೊಬ್ಬರಾಗಿ ಗುಮಾಸ್ತನ ಹತ್ತಿರ ಸಾಮಾನುಗಳನ್ನು ಬರೆಸಲು ಶುರು. ಎಲ್ಲಾ ರೂಪಾಯಿ, ಆಣೆ, ಕಾಸುಗಳಲ್ಲಿ ಲೆಕ್ಕ. ಆಣೆಯೆಲ್ಲಾ ಬೆಳ್ಳಿ ಬಣ್ಣ; ಕಾಸುಗಳು ಮಣ್ಣು ಬಣ್ಣ.

ತಮ್ಮಸರದಿ ಬರುವಷ್ಟರಲ್ಲಿ ಅಕ್ಕ ಬರಲಿಲ್ಲವಲ್ಲಾ ಅಂತ ಯೋಚನೆ ಪುಟ್ಟನಿಗೆ.

ಅಷ್ಟರಲ್ಲಿ ಗುಂಪಿನ ಮಧ್ಯ ಅಕ್ಕ ಕಾಣಿಸಿದಳು; ಜೊತೆಗೆ ಅಣ್ಣನೂ.

ಅಮ್ಮನ ಹತ್ತಿರ ಕೂತು ಪೆರುಮಾಳ್ ಚೆಟ್ಟಿಪೆನ್ಸಿಲ್ನಲ್ಲಿ ಹೇಳಿ ಬರೆಸಿದ ಪಟ್ಟಿಯನ್ನು ಓದಲು ಶುರು.

ಬಿಲ್ ಮಾಡಿಸಿದ ಮೇಲೆ, ಸಾಮಾನು ಕೂಗಿ ಹೇಳುವನು ಇನ್ನೊಬ್ಬ ಸೊಸೈಟಿಯ ಗುಮಾಸ್ತ.

ಬಂಗಾರ ಸಣ್ಣ......................10 ಸೇರು

ಕೊಯಮತ್ತೂರು ಸಣ್ಣ.......... 5 ಸೇರು

ಕಡಲೇಕಾಯಿ ಎಣ್ಣೆ.............. 1 ಸೇ.

ಕೆರೊಸಿನ್ ಆಯಿಲ್.............. 1

ಗೋದಿ................................ 5 ಸೇ.

ಸಕ್ಕರೆ.................................. 3 ಸೇ.

ರಾಜ ಸ್ನೋ.......................... 1 ಬಾಟಲ್

ಕ್ಯುಟಿಕ್ಯುರಾ ಪೌಡರ್............. 1 ಡಬ್ಬ

ಧಾರಾಪುರದ ತುಪ್ಪ.............. 1/2 ಸೇ.

ನಂಜನಗೂಡು ಹಲ್ಲುಪುಡಿ........1 ಪ್ಯಾಕೆಟ್

ಕಾಫಿಪುಡಿ............................ 2 ಪಾವು

ಕಟ್ಟಿಗೆ.................................. 3 ರೂಪಾಯಿ

ಸಾಸುವೆ, ದಾಲ್ಚಿನ್ನಿ, ಜೀರಿಗೆ.......ತಲಾ 1 ಚಟಾಕು

ಯಾಲಕ್ಕಿ, ಕೇಸರಿ.................. 1 ತೊಲ

ಒಂದೊಂದು ಸಾಮಾನನ್ನು ಕೂಗಿ ಕೊಡುತ್ತಾ ಅದನ್ನು ಖಾಖಿ ಪೊಟ್ಟಣದಲ್ಲಿ ಹಾಕಿ, ಸೂರಿನಿಂದ ತಗಲು ಹಾಕಿರುವ ಗೋಣಿ ದಾರದಿಂದ ಕಟ್ಟಿ ಕೊಡುವರು ಅಣ್ಣನಿಗೆ.

ಎಲ್ಲಾ ಸಾಮಾನುಗಳನ್ನು ಹೇರಿಸಿಕೊಂಡು ಅಕ್ಕ ತಮ್ಮ ಮನೆಗೆ ಹೋದರೆ, ಕಟ್ಟಿಗೆಯನ್ನು ಚಿಕ್ಕಚಿಕ್ಕದಾಗಿ ಒಡಿಸಿ, ತಳ್ಳುವ ಗಾಡಿಯಲ್ಲಿ ಹಾಕಿಸಿಕೊಂಡು ಬರುವನು ಅಣ್ಣ.

ದಾರಿಯಲ್ಲಿ ಅಕ್ಕ ತಮ್ಮನಿಗೆ ಶೆಟ್ಟರ ಅಂಗಡಿಯಿಂದ ಒಂದು ಬಾದಾಮಿ ಪೆಪ್ಪರಮೆಂಟನ್ನು ಎರಡು ಗೋಲಿಗಳ್ನು ಕೊಡಿಸುವಳು. ಬೆಳಗಿನ ಜಾವದಿಂದ ಡ್ಯೂಟಿ ಮಾಡಿದ್ದಕ್ಕೆ ಅಲ್ಲಿಗೆ ಅಲ್ಲಿಗೆ ಲೆಕ್ಕ ಸರಿಯಾಯ್ತು.

''ಮುಂದಿನ ಸರ್ತಿ ಏನು ಕೊಡಿಸ್ತಾಳೋ... ಅಂತೂ ಪರವಾಗಿಲ್ಲ ಇವತ್ತಿನ ಸಂಪಾದನೆ'' ಅಂದು ಕೊಂಡು ಜೋಬಿನಲ್ಲಿದ್ದ ಹೊಸಾ ಗೋಲಿಗಳನ್ನು ಸವರುತ್ತಾ ನಡೆಯುವನು ಪುಟ್ಟ.

ಅಮ್ಮ ಮನೆಯ ಹೊರಗೇ ಕಾಯ್ತಾ ಇರುವಳು ಶಥಪಥ ತಿರುಗುತ್ತಾ.

''ಬರ್ತಾರೆ ಬಾರೆ! ದೊಡ್ಡವರಾಗಿದ್ದಾರಲ್ಲಾ ಎಲ್ಲಾ. ಅವನೂ ಹೋಗಿದ್ದಾನಲ್ಲ ಗಡವ!'' ಅನ್ನುವರು ರಾಯರು ಮನೆಯಲ್ಲಿ ಸುಮ್ಮನೇ ಕೂತು.

★★★

ಒಂದು ಭಾನುವಾರ ಹೀಗೆ ಕಳೆದರೆ, ಮತ್ತೊಂದು ಭಾನುವಾರ ಎಣ್ಣೆ ಅಭ್ಯಂಜನಕ್ಕೆ ಮೀಸಲು.

ನಾನು ಹೇಳುತ್ತಿರುವುದು ನಿಜವಾದ ಎಣ್ಣೆ ವಿಷಯವೇ!

ತಲೆಗೆ ಹರಳೆಣ್ಣೆ ಧಾರಾಳವಾಗಿ ಹಚ್ಚಿ ನೆನೆಯುವುದಕ್ಕೆ ಬಿಡುವರು.

ಎಣ್ಣೆ ನಿಧಾನವಾಗಿ ತನ್ನ 'ಲಕ್ಷ್ಮಣ ರೇಖೆ'ಯನ್ನು ದಾಟಿ, ಕಣ್ಣಿಗೆ ಇಳಿಯಲು ಶುರುವಾದಾಗ, ಮೂರನೇ ಮಹಾಯುದ್ಧದ ಕೆಮಿಕಲ್ ವಾರ್ಫೇರ್ ಶುರುವಾಯಿತೇನೋ ಅನ್ನುವ ಹಾಗೆ ಕಣ್ಣೆಲ್ಲಾ ಉರಿಯೋ ಉರಿ! ಕಣ್ಣೆಲ್ಲಾ ಮಂಜು ಮಂಜು. ಕಣ್ಣೇಹೋಯಿತೇನೋ, ಡಾ. ಮೋದಿಗೆ ಹೇಳಿ ಕರೆಸಬೇಕೋ ಅಂದು ಕೊಳ್ಳುತ್ತಿರುವಾಗ, ನಿಮ್ಮಣ್ಣನೋ, ಅಮ್ಮನೋ ಬಂದು ಕಾಯುತ್ತಿರುವ ಹಂಡೆಯಿಂದ ತಲೆಗೆ ಬೊಬ್ಬೆ ಬರುವಹಾಗೆ ಬಿಸಿಬಿಸಿ ನೀರನ್ನು ತಲೆಗೆ ಸುರಿಯುವರು.

ಈ ನರಕ ಹಿಂಸೆಗೆ ಕೊನೆಯೇ ಇಲ್ಲವೇ ಅಂದುಕೊಳ್ಳುತ್ತಿರುವಾಗ, ತೆಂಗಿನಕಾಯಿ ಚಿಪ್ಪಿನಲ್ಲಿರುವ ಸೀಗೇಕಾಯಿ, ನೀರು ಮಿಶ್ರಣ ತಲೆಗೆ ಧಾರಾಳವಾಗಿ ಹಚ್ಚಿ, ತಲೆಯನ್ನು 'ತಪ ತಪ' ತಟ್ಟುವರು.

'ಸೀಗೇಕಾಯಿ – ಎಣ್ಣೆ' ಸಂಬಂಧ ಅಂದ್ರೆ ಏನೂ ಅಂತ ಆಗ ನಿಮಗೆ ಅರ್ಥವಾಗುವುದು.

ನರಕದಲ್ಲಿ ರಾಕ್ಷಸರು ಅವರ ಶತ್ರುಗಳನ್ನು ಬಾಂಡ್ಲಿಯಲ್ಲಿ ಹಾಕಿ ಎಣ್ಣೆಯಲ್ಲಿ ಹುರಿಯುತ್ತಾರೆಂದು ಕೃಷ್ಣ ಭಾಗವತರು ಒಮ್ಮೆ ಹರಿಕಥೆಯಲ್ಲಿ ಹೇಳಿದ್ದು ಜ್ಞಾಪಕಕ್ಕೆ ಬಂದು, ಅದು ಇದೇ ಇರಬೇಕು ಅನ್ನಿಸುವುದು.

ಮತ್ತೆ ಮತ್ತೆ ಕುದಿಯುತ್ತಿರುವ ನೀರನ್ನು ತಲೆಗೆ ಹಾಕಿ, ನಿಮ್ಮ ಬೊಬ್ಬೆ ಕೇಳಲಾರದೆ ಕೊನೆಗೆ ನಿಲ್ಲಿಸುವರು.

ಎಣ್ಣೆಶಾಸ್ತ್ರ ಮುಗಿಯುವ ಹೊತ್ತಿಗೆ ನಿಮ್ಮ ಕೂದಲು ಶುಭ್ರವಾಗಿ ಹೊಳೆದರೆ, ಮೈಯೆಲ್ಲಾ ಬಾಸುಂಡೆ ಬಂದು ಒಂದೇ ಸಮನೆ ನೋವು.

ಗಂಡಸರ ಗತಿ ಹೀಗಾದರೆ, ಹೆಂಗಸರ ಎಣ್ಣೆ ಶಾಸ್ತ್ರ ಎಂಡಿಂಗ್ ಬೇರೇನೇ!

ಅವರ ಸ್ನಾನ ವಾದ ಮೇಲೆ, ಕೇಶೋಪಚಾರ ಶುರು. ಉದ್ದವಾದ, ನೀಳವಾದ ಕೂದಲನ್ನು ಕಾಯುತ್ತಿರುವ ಇದ್ದಲಿಗೆ ಸಾಂಬ್ರಾಣಿಯನ್ನು ಹಾಕಿ ಒಂದು ಬುಟ್ಟಿಯೊಳಗೆ ಇಟ್ಟು, ಅದರಿಂದ ಬರುವ ಘಮಘಮವಾದ ಸುವಾಸನೆ ಹೊಗೆಯಿಂದ ಕೂದಲನ್ನು ಒಣಗಿಸುವರು.

ಮನೆಯಲ್ಲೆಲ್ಲಾ ಸುರುಳಿ ಸುತ್ತಿದ ಹೊಗೆ ಎಲ್ಲಾಕಡೆ ಸುತ್ತಿ ಅಲ್ಲೆಲ್ಲಾ ಸುವಾಸನೆ ಹಬ್ಬಿಸುವುದು ಸಾಂಬ್ರಾಣಿ.

★★★

ಮೂರನೇ ಭಾನುವಾರ ನಿಮ್ಮ ಹೊಟ್ಟೆಗೆ ಮೀಸಲು. ತಿನ್ನುವುದಕ್ಕಲ್ಲ! ಶುದ್ಧಿ ಮಾಡುವುದಕ್ಕೆ!

ಅದರಲ್ಲೂ ನಿಮ್ಮಜ್ಜಿ ಮನೆಯಲ್ಲಿದ್ದರೆ ನಿಮ್ಮ ಗತಿ ಮುಗೀತು!

ಬೆಳಗಿನಜಾವವೇ ನಿಮ್ಮನ್ನು ಎಬ್ಬಿಸಿ, ಮನೆಯಲ್ಲೇ ಮಾಡಿದ ಹರಳೆಣ್ಣೆಯನ್ನು ಒಂದು ಲೋಟಕ್ಕೆ ಹಾಕಿ, ಮೂಗಿನ ಹೊಳ್ಳೆಗಳನ್ನು ಭದ್ರವಾಗಿ ಮುಚ್ಚಿ, ಎಣ್ಣೆಯನ್ನು ಬಾಯೊಳಗೆ ಸುರಿಯುವರು.

ವಾಂತಿ ಬರುವ ಹಾಗೆ ವಾಕರಿಸಿದರೆ, ಅಜ್ಜಿ ಗದರಿಸಿ, ಕೈಗೆ ನಿಂಬೆಹಣ್ಣಿನ ಉಪ್ಪಿನಕಾಯಿ ಹೋಳು ಕೊಡುವರು.

ಘಂಟೆಯಾದರೂ ಬಾತ್ರೂಮಿಗೆ ಹೋಗದೆ ಜಪ್ಪಯ್ಯ ಅಂತ ಕೂತಿದ್ರೆ, ಅಜ್ಜಿಗೆ ಕೋಪಬಂದು ಎರಡನೇ ಶಸ್ತ್ರ ತೆಗೆಯುವಳು ತನ್ನ ಬತ್ತಳಿಕೆಯಿಂದ.

ಡಬಲ್ ಸ್ಟ್ರಾಂಗ್ ಡೋಸ್ ಕೊಟ್ಟ ಹತ್ತು ನಿಮಿಷದಲ್ಲೇ ನೀವು ಹುಟ್ಟಿದ್ದೇ ಬಾತ್ರೂಮಿನಲ್ಲಾ ಅಂದು ಸಂದೇಹ ಬರುವ ಹಾಗಿದೆ ನಿಮ್ಮ ನಡವಳಿಕೆ!

ಕೊನೆಗೆ ನಿಮ್ಮ ಹೊಟ್ಟೆಯಲ್ಲಿ ವರ್ಷಗಳಿಂದ ಆರಾಮಾಗಿ ಜೆಂಡಾಹೂಡಿದ್ದ ಜಂತುಗಳೆಲ್ಲಾ ಅಜ್ಜಿಯ ಡಬಲ್ ಅಟ್ಯಾಕ್ಗೆ ಹೆದರಿ, ಒಂದೊಂದಾಗಿ ನಿಮಗೆ ಟಾಟಾ ಹೇಳಿ ಹೋಗುವವು.

ಸತ್ತ ಜಂತುವಿನ ಹಾಗೆ, ನೀವು ಅದೇ ಸ್ಥಿತಿಯಲ್ಲಿ ಬಂದು ಸ್ನಾನ ಮಾಡಿದ ಮೇಲೆ, ಬಿಸಿ ಬಿಸಿ ಸಾರನ್ನ, ಸಂಡಿಗೆ ಕೊಡುವರು ಅಜ್ಜಿ ವಿಜಯೋತ್ಸವದ ಮಂದಹಾಸದಿಂದ.

ಸಂಪೂರ್ಣವಾಗಿ ಪರಿಶುದ್ಧವಾದ ಹೊಟ್ಟೆಗೆ ಅದೇ ಪರಮಾನ್ನ!

★★★

ಕೊನೆಯ ಭಾನುವಾರ. ಆಗಲೇ ಹೇಳಿದ ಹಾಗೆ ಆಗ ಮಾಲ್ ಇರ್ಲಿಲ್ಲ, ಆದ್ರೆ ಮಿಲ್ ಇತ್ತು. ಅಲ್ಲಿಗೆ ಹೋಗಿ ಗೋಧಿ, ಅಕ್ಕೀನ ಬೀಸಿಕೊಂಡು ಬರೋದು, ಮೆಣಸಿನ ಪುಡಿ ಮಾಡ್ಕೊಂಡ್ಬರೋದು ಇತರ ಕೆಲಸಗಳು ಇರೋದು.

ಸಂಜೆಯಾದ್ರೆ, ಕಬ್ಬನ್ ಪಾರ್ಕ್‌ನಲ್ಲಿ ಆರ್ಕೆಸ್ಟ್ರಾ ಅಥವಾ ಗಾಯನ ಸಮಾಜದಲ್ಲಿ ಹಾಡುಗಾರಿಕೆ ಇತ್ಯಾದಿ ಇರೋವು.

ಮಿಕ್ಕೋವ್ರೆಲ್ಲಾ ಫ್ರೆಂಡ್ಸ್ ಮಧ್ಯೆ ಸೈಕಲ್ನ ತಳ್ಕೊಂಡು ಟೂ ಬೈ ತ್ರೀ ಕಾಫಿನೋ, ಬಾದಾಮಿ ಹಾಲೋ ಕುಡ್ದು ಕಟ್ಟೆಮೇಲೆ ಕೂತು ಅದು ಕುಸಿಯೋ ತನಕ ಹರಟೆ ಹೊಡೀತಾ ಇದ್ರು.

**ಹೀಗಿತ್ತು ಭಾನುವಾರದ ವಿಧವಿಧವಾದ ವೈಭವಗಳು... ಹಿಂದೊಮ್ಮೆ !**

**ನಗುವಿನಾರಂಭ**

ಅವರು ನಗುತ್ತಿದ್ದ ಮದುವೆಯಾಗುವವರೆಗೂ
ಅವಳು ನಗಲಾರಂಭಿಸಿದಳು ಮದುವೆಯ ನಂತರ
ಅವನ ಸಂಕಟ ಬೋನಿಗೆ ಸಿಕ್ಕುಬಿದ್ದೆ ಅಂತ
ಅವಳ ಆನಂದ ಬೋನಿಗೊಂದು ಬಿತ್ತು ಮಿಕ ಅಂತ

- ಸುಕೇಶ



# ತಾತನ ತಾಪತ್ರಯ

(ಒಂದು ಪ್ರಹಸನ)

**✿ ಎನ್. ರಾಮನಾಥ್**

ತಾತ : ತುಂಬಾ ಹೊಟ್ಟೆ ಉರೀತಿದೆ ಡಾಕ್ಟ್ರೆ.

ಡಾಕ್ಟರ್ : ಡೋಂಟ್ ವರಿ, ಮಾತ್ರೆ ಕೊಡ್ತೀನಿ.

ತಾತ : ಬೇಡ. ಉಸಿರಾಡಕ್ಕಾಗಲ್ಲ.

ಡಾಕ್ಟರ್ : ಯಾಕೆ?

ತಾತ : ಕೈ ನಡುಗತ್ತೆ. ಮಾತ್ರೆ ಬಾಯಿಗೆ ಹಾಕ್ಕೊಳಕ್ಕೆ ಹೋಗಿ ಎಷ್ಟೋ ಸರಿ ಮೂಗಿಗೆ ಒಳ್ಳೆ ವೆಡ್ಜ್ ಆದ ಹಾಗೆ ಕೂತ್ಬಿಡತ್ತೆ.

ಡಾಕ್ಟರ್ : ಔಷಧಿ ಕೊಡ್ತೀನಿ.

ತಾತ : ಬೇಡ. ಹೆಂಡ್ತಿ ಬೈತಾಳೆ.

ಡಾಕ್ಟರ್ : ಯಾಕೆ ಬೈತಾರೆ?

ತಾತ : ಡಾಕ್ಟರ್ಸ್ ಬ್ರಾಂದೀನ ಎಷ್ಟೋ ವರ್ಷ ಡಾಕ್ಟರ್ ಕೊಟ್ಟ ಔಷಧೀಂತ ಅವಳಿಗೆ ಸುಳ್ಳು ಹೇಳಿ ಕುಡೀತಿದ್ದೆ. ಗೊತ್ತಾದಾಗ್ಲಿಂದ ಯಾವ ಡಾಕ್ಟ್ರು ಯಾವ ಬಾಟಲ್ ಕೊಟ್ರೂ ಬ್ರಾಂದೀಂತ ಅವಳ ಭ್ರಾಂತಿ!

ಡಾಕ್ಟರ್ : ಇಂಜೆಕ್ಷನ್ನು?

ತಾತ : ನೋವಾಗತ್ತೆ. ಒಂದ್ಸರ್ತಿ ಇಂಜೆಕ್ಷನ್ ತೊಗೊಂಡಿದ್ದೆ, ತಕ್ಷಣ ಟೈರ್ ಅಂಗಡೀಗೆ ಹೋದೆ.

ಡಾಕ್ಟರ್ : ಯಾಕೆ?

ತಾತ : ಆ ನರ್ಸ್ ಮಾಡಿದ ತೂತಿಗೆ ಪಂಕ್ಚರ್ ಹಾಕಿಸ್ಕೊಳಕ್ಕೆ.

ಡಾಕ್ಟರ್ : ಸರೀ, ಹೊಟ್ಟೆ ಉರಿ ಶುರು ಆಗಿದ್ದು ಯಾವಾಗ?

ತಾತ : ಪಕ್ಕದ ಮನೆಯವನು ಹೊಸ ಕಾರ್ ತೊಗೊಂಡಾಗ್ಲಿಂದ!

ಡಾಕ್ಟರ್ : ನೀವು ಈ ವಯಸ್ಸಲ್ಲಿ ಈ ತರಹ ಹೊಟ್ಟೆ ಉರ್ಕೋಬಾರ್ದು.

ತಾತ : ಹಾಗಾದ್ರೆ ಹೊಟ್ಟೆ ಉರ್ಕೊಳಕ್ಕೆ ಸರಿಯಾದ ವಯಸ್ಸು ಯಾವುದು ಡಾಕ್ಟ್ರೆ?

ಡಾಕ್ಟರ್ : ತಾತಾ... ನನ್ನ ಕ್ಲಿನಿಕ್ ಟೈಂ ವೇಸ್ಟ್ ಮಾಡ್ಬೇಡಿ. ನಿಮಗೆ ನಿಜವಾಗಲೂ ಏನಾಗ್ತಿದೆ ಹೇಳಿ.

ತಾತ : ವಯಸ್ಸಾಗ್ತಿದೆ ಡಾಕ್ಟ್ರೆ.

ಡಾಕ್ಟರ್ : ತಾತಾ.....

ತಾತ : ನನ್ನ ಎಡಗಡೆ ಕಾಲು ಬಹಳ ನೋವತ್ತೆ.

ಡಾಕ್ಟರ್ : ಅದು ವಯಸ್ಸಾಗಿರೋದ್ರಿಂದ ಹಾಗೆ ತಾತ.

ತಾತ : ಸುಮ್ಮನೆ ಏನೋ ಹೇಳ್ಬೇಡಿ ಡಾಕ್ಟ್ರೆ. ನನ್ನ ಬಲಗಾಲಿಗೂ ಅಷ್ಟೇ ವಯಸ್ಸಾಗಿದೆ, ಅದ್ಯಾಕೆ ನೋಯ್ತಿಲ್ಲ?

ಡಾಕ್ಟರ್ : ಅದು ಹಾಗಲ್ಲ, ನಾವು ಯಾವುದರ ಮೇಲೆ ಭಾರ ಬಿಡ್ತೀವೋ ಅದು ನೋವು ಬರತ್ತೆ.

ತಾತ : ಆದರೆ ನಾನು ಭಾರ ಬಿಡೋದು ವಾಕಿಂಗ್ ಸ್ಟಿಕ್ ಮೇಲೆ. ಅದಕ್ಕೇ ಅಯೋಡೆಕ್ಸ್ ಹಚ್ಚಿಬಿಡ್ಲೇನು?

ಡಾಕ್ಟರ್ : ತಾತಾ...

ತಾತ : ನೀವು ಡಾಕ್ಟರ್‌ಗಳೇ ಹಾಗೆ

ಡಾಕ್ಟರ್ : ಹೇಗೆ?

ತಾತ : ಪೇಷೆಂಟ್ ಬರ್ತಾ ಇದ್ದ ಹಾಗೇ ತಾ ತಾ ಅಂತ ಬರೀ ಕೈಯೊಡ್ಡೋದೇ ಆಗ್ಹೋಯ್ತು.

ಡಾಕ್ಟರ್ : ಪ್ಲೀಸ್ ಅಜ್ಜ, ನನ್ನ ತಲೆ ತಿನ್ಬೇಡಿ. ನಿಮ್ಮ ಕಂಪ್ಲೇಂಟ್ ಏನೂಂತ ಹೇಳಿ.

ತಾತ : ಬೆಳಗ್ಗೆ ಪಾರ್ಕ್‌ನಲ್ಲಿ ಜೋರಾಗಿ ಓಡಿದಾಗ ಎದೆ ಬಹಳ ಜೋರಾಗಿ ಹೊಡ್ಕೊಳತ್ತೆ.

ಡಾಕ್ಟರ್ : ಈ ವಯಸ್ಸಲ್ಲಿ ನೀವು ಜೋರಾಗಿ ಓಡ್ತೀರಾ?

ತಾತ : ನಾನಲ್ಲ,

ಡಾಕ್ಟರ್ : ಮತ್ತೆ?

ತಾತ : ಸೂಪರ್ ಆಗಿರೋ ಹುಡುಗಿಯರು ಓಡ್ತಾರೆ, ನನ್ನೆದೆ ಹೊಡ್ಕೊಳತ್ತೆ.

ಡಾಕ್ಟರ್ : ಅಜ್ಜ... ಪ್ಲೀಸ್ ಬಿ ಸೀರಿಯಸ್.

ತಾತ : ಯಾಕೆ ಡಾಕ್ಟ್ರೆ, ಸೀರಿಯಸ್ ಆದ್ರೆ ಒಳ್ಳೆ ಕಾಸು ಎಳ್ಕೋಬಹುದು ಅಂತಾನಾ?

ಡಾಕ್ಟರ್ : ಥೂ, ಆ ತರಹ ಸೀರಿಯಸ್ಸಲ್ಲ ಅಜ್ಜ ನಾ ಹೇಳಿದ್ದು, ಸರಿ, ಈಗ ಇಲ್ಲಿಗೆ ಬಂದಿದ್ದಾದ್ರೂ ಯಾಕೆ ಹೇಳಿ.

ತಾತ : ಹೇಳಿದ್ನಲ್ಲ ಡಾಕ್ಟ್ರೇ, ಕಾಲು ಬಹಳ ನೋಯುತ್ತೆ ಅಂತ.

ಡಾಕ್ಟರ್ : ಸರಿ. ಒಬ್ಬ ಸರ್ಜನ್‌ಗೆ ರೆಫರ್ ಮಾಡ್ತೀನಿ, ಅಲ್ಲಿ ತೋರಿಸಿ.

ತಾತ : ಸರ್ಜನ್ನಾ? ಬೇಡ.

ಡಾಕ್ಟರ್ : ಯಾಕೆ?

ತಾತ : ಗಾದೆ ಕೇಳಿಲ್ಲವೇನು? ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ, ಸರ್ಜನರ ಸಹವಾಸ ಹೆಜ್ಜೇನು ಕಡಿದಂತೆ. ನನ್ನ ಫ್ರೆಂಡ್‌ಗೆ ಆಗಿದ್ದನ್ನ ಕೇಳಿ ಏನೇ ಆದರೂ ಸರ್ಜನ್ ಹತ್ರ ಹೋಗಬಾರದೂಂತ ಡಿಸೈಡ್ ಮಾಡಿದ್ದೀನಿ.

ಡಾಕ್ಟರ್ : ಏನಾಯ್ತು?

ತಾತ : ಹೊಟ್ಟೆ ಆಪರೇಷನ್ ಮೊದಲು ಮಾಡಿದರು. ಇವನಿಗೆ ಬಹಳ ಬಾಯಾರಿಕೆ ಶುರುವಾಯ್ತು.

ಡಾಕ್ಟರ್ : ಏಕೆ?

ತಾತ : ಒಳಗೆ ಸ್ಪಂಜ್ ಬಿಟ್ಟಿಟ್ಟಿದ್ರು. ಮತ್ತೆ ಕೊಯ್ದ್ರು.

ಡಾಕ್ಟರ್ : ಸರಿಹೋಯ್ತಾ?

ತಾತ : ಇಲ್ಲ, ಇದ್ದಕ್ಕಿದ್ದ ಹಾಗೆ ಆ ಕಡೆಯಿಂದ ಈ ಕಡೆಗೆ ತಿರುಗಿದಾಗಲೆಲ್ಲಾ ಒಳಗೆ ಕಚಕ್ ಅಂತ ಶಬ್ದ ಬರ್ತಿತ್ತು.

ಡಾಕ್ಟರ್ : ಅಯ್ಯೋ, ಯಾಕಂತೆ?

ತಾತ : ಒಳಗೆ ಕತ್ತರಿ ಬಿಟ್ಟಿಟ್ಟಿದ್ರು. ಮತ್ತೆ ಹೊಟ್ಟೆ ಕೊಯ್ದಿದ್ದಾಯ್ತು.

ಡಾಕ್ಟರ್ : ಆಗ ಸರಿಹೋಯ್ತೂನ್ನಿ.

ತಾತ : ಇಲ್ಲ, ಒಳಗೇ ಏನೋ ಚುಚ್ಚಿದಹಾಗೆ ಆಗ್ತಿತ್ತು. ನೋಡಿದ್ರೆ ಸೂಜಿ.

ಡಾಕ್ಟರ್ : ಮತ್ತೆ ಆಪರೇಷನ್ ಆಯ್ತೂನ್ನಿ.

ತಾತ : ಇಲ್ಲ.

ಡಾಕ್ಟರ್ : ಮತ್ತೆ?

ತಾತ : ಹೊಟ್ಟೆ ಮೇಲೆ ಒಂದು ಮ್ಯಾಗ್ನೆಟ್ ಕಟ್ಕೊಂಡ್ಬಿಟ್ಟಿದ್ದಾನೆ. ಈಗ ಸೂಜಿ ಅಲ್ಲಾಡದೆ ಒಂದೇ ಜಾಗದಲ್ಲೇ ಇರೋದ್ರಿಂದ ನೋವಿಲ್ಲ!

ಡಾಕ್ಟರ್ : ಒಳಗೆ ರಸ್ಟ್ ಆಗ್ಬಿಟ್ರೆ?

ತಾತ : ಆಗಲ್ಲ, ಆಗಾಗ್ಗೆ ಹೊಟ್ಟೆಗೆ ಸ್ವಲ್ಪ ಎಣ್ಣೆ ಬಿಟ್ಕೊಳಕ್ಕೆ ಹೇಳಿದ್ದೀನಿ.

ಡಾಕ್ಟರ್ : ಹಾಗೇ ಇರೋದು ಒಳ್ಳೇದಲ್ಲ ತಾತ. ತೆಗೆಸಿಕೊಂಡುಬಿಡಕ್ಕೆ ಹೇಳಿ.

ತಾತ : ಬೇಡ, ಇನ್ನೇನಾದ್ರೂ ಒಳಗೆ ಬಿಡ್ತಾರೆ. ಇದೇ ವಾಸಿ ಅಂದ.

ಡಾಕ್ಟರ್ : ನೀವೇನಂದ್ರಿ?

ತಾತ : ಆಪರೇಷನ್ ಮಾಡಿಸ್ಕೋ, ಆದರೆ ಹೊಲಿಗೆ ಹಾಕಿಸ್ಕೋಬೇಡ ಅಂದೆ.

ಡಾಕ್ಟರ್ : ಮತ್ತೆ?

ತಾತ : ಝಿಪ್ ಹಾಕಿಸ್ಕೊಂಡೆ. ಏನೇ ಬಿಟ್ಟಿದ್ರೂ ಝಿಪ್ ಝರ್ ಅಂತ ಎಳೆಯೋದು, ತೆಗೆಯೋದು, ಝಿಪ್ ಎಳೆಯೋದು!

ಡಾಕ್ಟರ್ : ಸೂಪರ್ ಐಡಿಯ ಅಜ್ಜ. ಆದರೂ, ನಿಮ್ಮ ಕಾಲುನೋವಿಗೆ ಒಮ್ಮೆ ಸರ್ಜನ್‌ನ ನೋಡಿಬಿಡಿ.

ತಾತ : ಬೇಡ.

ಡಾಕ್ಟರ್ : ಯಾಕೆ?

ತಾತ : ನಮ್ಮ ಮನೆ ಹತ್ತಿರ ಇರೋ ಸರ್ಜನ್ ಬೋರ್ಡ್ ಹಾಕಿದ್ದಾನೆ.

ಡಾಕ್ಟರ್ : ಏನಂತ?

ತಾತ : ನಮ್ಮಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡವರಿಗೆ ಶ್ರಾದ್ಧದ ಖರ್ಚು ಉಚಿತ ಅಂತ!

ಡಾಕ್ಟರ್ : ಹೋಗಲಿ ಬಿಡಿ. ನಿಮಗೆ ಆಯುರ್ವೇದಿಕ್ ಟ್ರೀಟ್‌ಮೆಂಟೇ ಕೊಡ್ತೀನಿ.

ತಾತ : ಇದ್ದಿದ್ರಲ್ಲಿ ಸ್ವೀಟ್ ಆಗಿರೋ ಲೇಹ್ಯಾನೇ ಕೊಡಿ ಡಾಕ್ಟರ್.

ಡಾಕ್ಟರ್ : ಏನಾದರೂ ಡ್ರಿಂಕ್ಸ್ ಗಿಂಕ್ಸ್ ಅಭ್ಯಾಸ ಇದೆಯೇನು?

ತಾತ : ಈಗಿಲ್ಲ ಡಾಕ್ಟ್ರೆ. ನನಗೆ ಡ್ರಿಂಕ್ಸ್ ತೊಗೊಂಡ್ರೆ ಬಹಳ ನೆಗಡಿ ಆಗತ್ತೆ.

ಡಾಕ್ಟರ್ : ಡ್ರಿಂಕ್ಸ್ ತೊಗೊಂಡ್ರೆ ನೆಗಡಿ ಆಗತ್ತಾ?

ತಾತ : ಹೂಂ ಕುಡಿದು ಬಂದಾಗ ಹೆಂಡತಿ ತಲೆಮೇಲೆ ನೀರು ಸುರೀತಾಳಲ್ಲಾ, ಅದರಿಂದ ನೆಗಡಿ ಆಗತ್ತೆ.

ಡಾಕ್ಟರ್ : ಓಕೆ. ಅಲ್ಲಿಗೆ ನೋ ಡ್ರಿಂಕ್ಸ್ ಅಂತಾಯ್ತು. ಖಾರ ತಿಂತೀರಾ?

ತಾತ : ನನ್ನ ಹೆಂಡತಿ ಮಾತಿನ ಮುಂದೆ ಮೆಣಸಿನಪುಡೀನೂ ಸ್ವೀಟ್ ಡಾಕ್ಟ್ರೆ!

ಡಾಕ್ಟರ್ : ಅಂದರೆ ಹೆಂಡತಿ ಮಾತು ಕೇಳ್ತೀರಾನ್ನಿ.

ತಾತ : ಕೇಳದೆ ಇದ್ರೆ ಕಿವಿ ಆಪರೇಷನ್ ಮಾಡಿಸ್ತೀನಿ ಅಂತಾಳೆ ಡಾಕ್ಟ್ರೆ.

ಡಾಕ್ಟರ್ : ಡ್ರಿಂಕ್ಸು, ಖಾರ ಇಲ್ಲಾಂದ್ಮೇಲೆ ನಿಮ್ಮ ಕಾಲುನೋವಿಗೆ ಕಾರಣ ವಾಯುಬಾಧೆ ಅಲ್ಲ; ನಿಮ್ಮ ನಿದ್ರೆ ಹೇಗಿದೆ?

ತಾತ : ರಿಟೈರಾದ ಸ್ವಲ್ಪ ದಿವಸ ನಿದ್ರೇನೇ ಬರ್ತಿರಲಿಲ್ಲ.

ಡಾಕ್ಟರ್ : ಆಮೇಲೆ?

ತಾತ : ನಾನು ವರ್ಕ್ ಮಾಡ್ತಿದ್ದ ಸರ್ಕಾರಿ ಕಚೇರಿಯಿಂದ ನಾನು ದಿನಾ ಕೂತು ನಿದ್ರೆ ಮಾಡ್ತಿದ್ದ ಚೇರ್ ತರಿಸ್ಕೊಂಡೆ. ಅದರಲ್ಲಿ ಕೂತ್ರೆ ಸಾಕು, ಹೈ ಕ್ಲಾಸ್ ನಿದ್ರೆ ಬರತ್ತೆ.

ಡಾಕ್ಟರ್ : ಸರಿ; ನಿದ್ರೆ, ವಾಯು ಪ್ರಾಬ್ಲಂ ಅಲ್ಲಾಂತಾಯ್ತು. ನಿಮಗೆ ಯಾವಾಗ ನೋವು ಜಾಸ್ತಿ ಇರತ್ತೆ?

ತಾತ : ಶನಿವಾರ, ಭಾನುವಾರ.

ಡಾಕ್ಟರ್ : ಅದೇನು?

ತಾತ : ನನ್ನ ಹೆಂಡತಿ ಕಿಟ್ಟಿ ಪಾರ್ಟಿಗೆ ಹೋಗಿರ್ತಾಳೆ.

ಡಾಕ್ಟರ್ : ಅದಕ್ಕೂ ಇದಕ್ಕೂ ಏನು ಸಂಬಂಧ?

ತಾತ : ನಮ್ಮ ಮನೆ ಹಿಂಭಾಗದಲ್ಲಿ ಒಂದು ಲೇಡೀಸ್ ಹಾಸ್ಟೆಲ್ ಇದೆ.

ಡಾಕ್ಟರ್ : ಸರಿ. ಅದಕ್ಕೂ, ಕಿಟ್ಟಿ ಪಾರ್ಟಿಗೂ, ಕಾಲುನೋವಿಗೂ ಏನು ಸಂಬಂಧ?

ತಾತ : ಸುಮ್ಮನೆ ಹಾಗೆ ನಿಂತ್ರೆ ಆ ಹಾಸ್ಟೆಲ್‌ನಲ್ಲಿ ಹುಡುಗಿಯರು ಚೆಲ್ಲುಚೆಲ್ಲಾಗಿ ಆಡೋದು ಕಾಣಲ್ಲ.

ಡಾಕ್ಟರ್ : ಅದಕ್ಕೆ?

ತಾತ : ಒಂದು ಏಣಿ ಹಾಕ್ಕೊಂಡು ನಿಲ್ತೀನಿ.

ಡಾಕ್ಟರ್ : ಹೂಂ?

ತಾತ : ಬಲಗಾಲು ಕಾಂಪೌಂಡ್ ಮೇಲಿರತ್ತೆ, ನೋವಿರಲ್ಲ, ಎಡಗಾಲು ಏಣಿ ಮೇಲಿರತ್ತೆ, ನೋವು ಬರತ್ತೆ!

ಡಾಕ್ಟರ್ : ತಾತಾ... ಈ ವಯಸ್ಸಲ್ಲೀ... ಹುಡುಗೀರ್ನ ಕದ್ದು ನೋಡೋದೂಂದ್ರೆ.... ಛೀ!

ತಾತ : ಹಾಗೆಲ್ಲಾ ಬಿಡಕ್ಕಾಗತ್ತಾ, ಇದು ನನ್ನ ಗೋಲ್ಡನ್ ಜ್ಯೂಬಿಲಿ ವರ್ಷ ಗೊತ್ತಾ?

ಡಾಕ್ಟರ್ : ನಿಮಗೆ ಇನ್ನೂ ಐವತ್ತೇನಾ?

ತಾತ : ನನಗಲ್ಲ, ಹುಡುಗೀರ್ನ ನೋಡಕ್ಕೆ ಶುರು ಮಾಡಿ ಐವತ್ತು ವರ್ಷ. 16ಕ್ಕೆ ಶುರು ಮಾಡ್ದೆ, ಈಗ 66!

ಡಾಕ್ಟರ್ : ಟ್ರೀಟ್ಮೆಂಟ್ ಬೇಕಾದ್ದು ನಿಮ್ಮ ಕಾಲಿಗಲ್ಲ, ತಲೆಗೆ. ಗೆಟ್ ಔಟ್ ತಾತ. ಯಾವುದಾದರೂ ಹುಚ್ಚಾಸ್ಪತ್ರೇಲಿ ಟ್ರೀಟ್ಮೆಂಟ್ ತೊಗೊಳ್ಳಿ, ಸರಿಹೋಗತ್ತೆ.

ತಾತ : ಅಲ್ಲೂ ಹೋಗಿದ್ದೆ, ಸೇರಿಸ್ಕೊಳಲ್ಲಾಂದ್ರು.

ಡಾಕ್ಟರ್ : ಯಾಕಂತೆ?

ತಾತ : ಅಲ್ಲಿ ವಾಸಿಯಾಗೋ ಹುಚ್ಚರನ್ನು ಮಾತ್ರ ಸೇರಿಸ್ಕೊಳ್ತಾರಂತೆ!

ಡಾಕ್ಟರ್ : ಸರಿ ಅಜ್ಜ, ನಿಮಗೇನು ಟ್ರೀಟ್‌ಮೆಂಟ್ ಕೊಡಬೇಕೂಂತ ಗೊತ್ತಾಯ್ತು. ನಿಮ್ಮ ಮನೆಯ ಫೋನ್ ನಂಬರ್ ಏನು?

ತಾತ : ಯಾಕೆ?

ಡಾಕ್ಟರ್ : ಅಜ್ಜಿಗೆ ಕಿಟ್ಟಿ ಪಾರ್ಟಿ ಮನೇಲೇ ಇಟ್ಕೊಳ್ಳಕ್ಕೆ ಹೇಳ್ತೀನಿ, ನಿಮ್ಮ ಆಟ ಕಟ್ ಆಗಿ, ನೋವು ಮಾಯ ಆಗತ್ತೆ.

ತಾತ : ಥ್ಯಾಂಕ್ಯೂ ವೆರಿ ಮಚ್. ನನಗೂ ಅದೇ ಬೇಕಾಗಿತ್ತು.

ಡಾಕ್ಟರ್ : ಯಾಕೆ?

ತಾತ : ಇವಳ ಕಿಟ್ಟಿ ಪಾರ್ಟೀಲಿ ಹಾಸ್ಟೆಲ್ ಹುಡುಗೀರಿಗಿಂತ ಚೆನ್ನಾಗಿರೋವ್ರು ಸೇರ್ತಾರೆ. ಥ್ಯಾಂಕ್ಸ್ ಡಾಕ್ಟರ್. ತೊಗೊಳ್ಳಿ, ನಂಬರ್ ಬರ್ಕೊಳ್ಳಿ!!!

## ಅಮ್ಮನ ಕರಾಮತ್ತು

**ಸೂಪರ್‌ಮಾರ್ಕೆಟ್**‌ನಲ್ಲಿ ಒಬ್ಬ ಯುವಕ ಷಾಪಿಂಗ್ ಮಾಡುತ್ತಿದ್ದ. ಅವನನ್ನು ಒಬ್ಬ ಮುದುಕಿ ಹಿಂಬಾಲಿಸುತ್ತಿದ್ದಳು. ಜೊತೆಗೆ ಅವನನ್ನೇ ದುರುಗುಟ್ಟಿ ನೋಡುತ್ತಿದ್ದಳು.

ಕೊನೆಯಲ್ಲಿ ಅವನಿಗೆ ಹೇಳಿದಳು: ಬೇಜಾರು ಮಾಡಿಕೋಬೇಡಪ್ಪ. ನೀನು ನನ್ನ ಮಗನಂತೆ ಕಾಣುತ್ತೀಯ. ಅವನೀಗಿಲ್ಲ.

'ಸರಿ ಅಜ್ಜಿ' ಎಂದ ಯುವಕ.

'ಒಂದು ಕೆಲಸ ಮಾಡ್ತೀಯೇನಪ್ಪ?'

'ಹೇಳಿ ಹೇಳಿ....'

'ನಾನು ಹೊರಗೆ ಹೋಗುವಾಗ ಗುಡ್ ಬೈ ಮಮ್ಮಿ ಎಂದು ಹೇಳು ನನಗೆ ಸಮಾಧಾನವಾಗುತ್ತದೆ!'

'ಸರಿ'

ಅವಳು ಹೊರಹೋಗುತ್ತಿದ್ದಂತೆ 'ಗುಡ್ ಬೈ ಮಮ್ಮಿ' ಎಂದು ಯುವಕ ಕೂಗಿ ಹೇಳಿದ.

ಅವಳು ಇವನತ್ರ ಕೈ ಬೀಸಿ, ನಗೆ ಸೂಸಿ ಹೋದಳು. ಇವನು ತಾನು ಕೊಂಡ ಸಾಮಾನುಗಳಿಗೆ ಬಿಲ್ ಮಾಡಿಸಲು ಹೋದ.

'625 ರೂಪಾಯಿ ಸರ್' ಎಂದಳು ಹುಡುಗಿ ಬಿಲ್ ಮಾಡುತ್ತಾ.

'ಅರೆ ನಾನು ಕೊಂಡಿರುವುದು ಮೂರೇ ಐಟಂ...'

'ಆದರೆ ನನ್ನ ಬಿಲ್ ನನ್ನ ಮಗ ಕೊಡುತ್ತಾನೆ ಎಂದು ಹೇಳಿ ಹೋದರು ನಿಮ್ಮ ತಾಯಿ ಸರ್' ಎಂದಳು ಹುಡುಗಿ.

- ಕುಬ್ಜ



# ಡೆಡೋನಿಯಾ

❁ ರಾಮು

**ಚಿತ್ರದುರ್ಗದಲ್ಲಿ ವಕೀಲರಾಗಿದ್ದ ಶ್ರೀ ಬಬ್ಬರ್ ಜಂಗ್ ಕೆ. ರಾಮಚಂದ್ರ ರಾವ್ ಅವರು ''ರಾಮು'' ಎಂಬ ಹೆಸರಿನಲ್ಲಿ ಸಾಹಿತ್ಯರಚನೆ ಮಾಡುತ್ತಿದ್ದರು. 1945ರಲ್ಲಿ ಅವರ ಮೊದಲ ಕಥಾಸಂಕಲನ ''ಪ್ರೇಮಚೂರ್ಣ'' ಪ್ರಕಟಗೊಂಡಿತು. ಓ ಹೆನ್ರಿಯವರ ಭಾವಾನುವಾದದ ಕಥೆಗಳು ಇಲ್ಲಿದ್ದರೂ ಪ್ರಸ್ತುತ ಕಥೆ ''ಡೆಡೋನಿಯಾ'' ಇವರದ್ದೇ ಸ್ವಂತ ರಚನೆ. ತಿಳಿ ಹಾಸ್ಯದ ಈ ಸಂಕಲನ ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ ಅವರ ಪ್ರಭಾತ ಸಾಹಿತ್ಯದಲ್ಲಿ ಪ್ರಕಾಶಿತವಾಗಿದೆ. 1945ರ ಈ ಪುಸ್ತಕವನ್ನು ಅಪರಂಜಿ ಓದುಗ ಶ್ರೀ ನಾಗೇಶ್ ಅವರಿಂದ ಪಡೆದೆವು.**

**ಲಾ**ಯರ್ ರಘುನಾಥರಾಯರು - ಹೌದು ಬೆಂಗಳೂರು ಚಾಮರಾಜ ಪೇಟೆಯಲ್ಲಿರುವವರು - ಕಛೇರಿಯಿಂದ ಸಂಜೆಗೆ ಮನೆಗೆ ಬಂದವರು, ಉಪಾಹಾರವನ್ನು ತೆಗೆದುಕೊಂಡ ಮೇಲೆ ಎಂದಿನಂತೆ ಸೀತಮ್ಮನ ಜತೆಗೆ - ಹೌದ್ರಿ, ಅವರ ಹೆಂಡತಿ - ವಿನೋದಕ್ಕೆ ಕೂಡದೆ ಗಂಡುಕಚ್ಚೆ ಹಾಕಿ ಹೊಸದಾಗಿ ತಂದಿದ್ದ ಕೈಗುದ್ದಲ್ಲಿ ತೆಗೆದುಕೊಂಡು ಹೊರಟರು. ಕಸೂತಿ ಹಾಕುತ್ತಾ ಕುಳಿತಿದ್ದ ಸೀತಮ್ಮನವರು ನಸುನಕ್ಕು ''ಸರಿ, ಇನ್ನು ಮೂರು ತಿಂಗಳಿಗೆ ಲಾಲಾಬಾಗ್ ಮುಚ್ಚಿಬಿಡಬೇಕಾಗುತ್ತೆ'' ಎಂದು ಕುಚೇಷ್ಟೆ ಮಾಡಿದರು.

''ನೋಡುತ್ತಿರು, ಮನೆ ಮುಂದೆ ಹೂದೋಟ ಹೇಗಾಗುತ್ತೆ ಅಂತ'' ಎಂದು ರಘುನಾಥರಾಯರು ಉತ್ತರವಿತ್ತು ಹೊರಗಡೆಗೆ ಬಂದರು.

ಸಂದರ್ಭ ಇಷ್ಟು: ರಘುನಾಥರಾಯರದು ಅಂದವಾದ ಚಿಕ್ಕ ಹೊಸ ಬಂಗಲೆ. ಕಾಂಪೌಂಡು ಉಂಟು. ಮನೆ ಮುಂದೆ ಪೌಳಿ ಗೋಡೆಯವರೆಗೂ ವಿಸ್ತಾರವಾದ ಜಾಗ. ಅಂದವಾದ ಹೂದೋಟ ಬೆಳೆಸಲು ಅನುಕೂಲಗಳುಂಟು. ಆದರೂ ತಮ್ಮ ಕಾಲವನ್ನೆಲ್ಲಾ ವಕೀಲಿ ವೃತ್ತಿಗೂ ಸೀತಮ್ಮನೊಡನೆ ಸಿನಿಮಾ ವಾಕಿಂಗ್ ವಿನೋದಗಳಿಗೂ ನಿವೇದನ ಮಾಡಿದ್ದ ರಘುನಾಥರಾಯರಿಗೆ ಹೂದೋಟದ ಭ್ರಮೆ ಮನಹೊಕ್ಕಿರಲಿಲ್ಲ. ಈಗ ಒಂದು ವಾರದ ಹಿಂದೆ ಅಂಚೆಯವನು ಭಾರವಾದ ಲಕೋಟೆಯೊಂದನ್ನು ತಂದು ಕೊಟ್ಟಾಗ, ಹೊಸ ಕೇಸಿಗೆ

ವಕಾಲತ್ತನ್ನು ಯಾರೋ ಕಕ್ಷಿದಾರರು ಕಳುಹಿಸಿರಬಹುದೆಂಬ ಆಕಾಂಕ್ಷೆಯಿಂದ ಅದನ್ನು ಹರಿದ ರಘುನಾಥರಾಯರ ಕೈಗೆ, ಅಂದವಾದ ಬಣ್ಣದ ರಟ್ಟಿನ ಕ್ಯಾಟಲಾಗು ಒಂದು ಸಿಕ್ಕಿತು. ಮನಸ್ಸನ್ನು ಸೆರೆಹಿಡಿದು ನಿಲ್ಲಿಸುವ ಸೊಬಗುಳ್ಳ, ವಿವಿಧ ಬಣ್ಣಗಳಿಂದ ಕೂಡಿ ಸುಂದರವಾದ ಆಕೃತಿಯುಳ್ಳ ಹೂಗೊಂಚಲಿನ ಚಿತ್ರ ರಟ್ಟಿನ ಮಧ್ಯದಲ್ಲಿ ಮುದ್ರಿತವಾಗಿತ್ತು. ಈ ತೆರದ ಹೂ ಮನೆಯ ಮುಂದಿರದಿದ್ದರೆ ಅದು ಮನೆಯೇ? ಎಂಬ ಹೃದಯವನ್ನು ಒಲಿಸಿಕೊಳ್ಳುವ ಪ್ರಶ್ನೆ ಕೆಳಗಡೆ ಎದ್ದು ಕಾಣುತ್ತಿತ್ತು. ''ಡೆಡೋನಿಯಾ ಗಿಡ ಮನೆಯ ಸುತ್ತಲೂ ಇದ್ದರೆ ಅದಕ್ಕೂ ಹೆಚ್ಚಿನ ಅಲಂಕಾರವಿಲ್ಲ'' ಎಂಬ ಸಿದ್ಧಾಂತ ಕೆಳಗಡೆಗೆ ಮುದ್ರಿತವಾಗಿತ್ತು.

''ಡೆಡೋನಿಯಾ

ಬೆಳೆದು ನೋಡಿ

ನೋಡಿ ಆನಂದಿಸಿ

ಆನಂದ ಅನುಭವಿಸಿ!''

ಎಂಬ ಆಹ್ವಾನವೂ ಕಾಣಬರುತ್ತಿತ್ತು.

ಈ ತೆರದ ಹೂಗೊಂಚಲುಗಳು ಕಾಂಪೌಂಡು ಗೋಡೆಯ ಸುತ್ತಲೂ ಇದ್ದರೆ ನಿಜವಾಗಿಯೂ ಚೆನ್ನಾಗಿರುತ್ತದೆಂದು ರಘುನಾಥರಾಯರು ನಿರ್ಧರಿಸಿದರು. ಲಾಲ್‌ಬಾಗಿನಲ್ಲಿ ಬೆಳೆದಿದ್ದ ಹೂಗಳು ಯಾವೂ ರಘುನಾಥರಾಯರ ಮೇಲೆ ಇಷ್ಟು ಪರಿಣಾಮ ಮಾಡಿರಲಿಲ್ಲ. ಕೈಯಲ್ಲಿದ್ದ ಕ್ಯಾಟಲಾಗಿನ ಮೇಲೆ ಮನೋಹರವಾಗಿ ಚಿತ್ರಿಸಿದ್ದ ಆ ಗೊಂಚಲಿನ ರಮ್ಯತೆಯೂ ಅದರ ಕೆಳಗೆ ಮೂದಲಿಸುತ್ತಿದ್ದ ಮಾತುಗಳೂ ರಘುನಾಥರಾಯರ ಸರಳ ಹೃದಯವನ್ನು ಗೆದ್ದವು.

''ಡೆಡೋನಿಯಾ–ಆರಿಸಿದ, ವಿವಿಧ ಬಣ್ಣಗಳ ವಿದೇಶೀ–ಹೂವಿನ ಬೀಜಗಳ ಪೊಟ್ಟಣ; ಮೂರೇ ರೂಪಾಯಿ'' ಎಂದು ನಮ್ರತೆಯಿಂದ ಹೇಳುತ್ತಿದ್ದ ವಾಕ್ಯ ರಘುನಾಥರಾಯರನ್ನು ಕಾರ್ಯದ ಕಡೆ ತಿರುಗಿಸಿತು. ಬಂದಿದ್ದ ಕ್ಯಾಟಲಾಗಿನೊಂದಿಗೆ ಕಂಪನಿಯ ವಿಳಾಸ ಮುದ್ರಿತವಾಗಿದ್ದ ಲಕೋಟೆಯೂ ಅಪೇಕ್ಷಾ ಪತ್ರವೂ ಇದ್ದವು. ''ಇದನ್ನು ಸ್ಟಾಂಪು ಅಂಟಿಸದೆ ಅಂಚೆಗೆ ಹಾಕಬಹುದು'' ಎಂಬ ವಿನಂತಿ ಅದರ ಮೇಲೆ ಬರೆದಿತ್ತು. ಸರಿ, ರಘುನಾಥರಾಯರು ಎರಡು ಪೊಟ್ಟಣಗಳಿಗಾಗಿ ಬರೆದುಹಾಕಿದರು. ಆ ದಿನ ಸಂಜೆಗೆ ಮನೆಗೆ ಬಂದಾಗ ಸೈಕಲ್ ಕ್ಯಾರಿಯರಿನ ಮೇಲೆ ಕಟ್ಟಿದ್ದ ಕೈಗುದ್ದಲಿಯನ್ನು ಸೀತಮ್ಮನವರು ನೋಡಿ, ''ಇದೇನು? ಕೋರ್ಟಿಗೆ ಹೋಗಿದ್ದಿರೋ ಕೂಲಿಗೆ ಹೋಗಿದ್ದಿರೋ?'' ಎಂದು ಕೇಳಿದರು.

ಹೂದೋಟದ ನಿರ್ಮಾಣದಲ್ಲಿ ರಘುನಾಥರಾಯರ ಉತ್ಸಾಹವನ್ನು ಹೇಳತೀರದು. ಮೊದಲ ದಿನ ಹದಿನೈದು ನಿಮಿಷ ಮನೆ ಮುಂದಿನ ಪೌಳಿ ಗೋಡೆಯ ಎರಡು ಮೂಲೆಗಳಲ್ಲಿಯೂ ಪಾತಿ ಮಾಡಲೋಸುಗ ನೆಲ ಅಗೆದರು. ಅನಂತರ ಮನೆಯೊಳಗೆ ಬಂದು ಎರಡು ಲೋಟ ನಿಂಬೆಹಣ್ಣಿನ ಪಾನಕ ಕುಡಿದರು.

ಸೀತಮ್ಮನೂ ಸಹಜವಾದ ಉತ್ಸುಕತೆಯಿಂದ ''ಎಂಥ ಗಿಡ ಹಾಕುತ್ತೀರಿ?'' ಎಂದು ಕೇಳಿದಳು.

''ಡೆಡೋನಿಯಾ!'' ಒಂದು ಬಗೆಯ ವರಸೆ ಮೇಲೆ ಉಚ್ಚಾರಣೆ.

''ಏನು? ಡ–ಢ–ಣ....?''

''ಡೆ–ಡೋ–ನಿ–ಯಾ–––?''

''ಎಂಥ ಹೂವು ಅದು?''

ಮೇಜಿನ ಮೇಲಿದ್ದ ಕ್ಯಾಟಲಾಗನ್ನು ತಂದು ತಾನು ಮನಸೋತಿದ್ದ ಹೂಗೊಂಚಲನ್ನು ಸೀತಮ್ಮನಿಗೆ ತೋರಿಸಿ, ''ನೋಡು, ಎಷ್ಟು ಚೆನ್ನಾಗಿದೆ'' ಎಂದರು. ''ಏನು ಚೆನ್ನವೋ! ಇದರ ಬದಲು ಗುಲಾಬಿ ಮಲ್ಲಿಗೆ ಹಾಕಿದರೆ, ದೇವರಪೂಜೆ ಮಾಡಿ ಹೂವು ಮುಡಿಯಬಹುದು'' ಎಂದರು ಸೀತಮ್ಮ.

ಮೂರು ದಿವಸದಲ್ಲಿ ಪಾತಿಗಳು ಆದವು. ಆಮೇಲೆ ಎರಡು ದಿವಸ ಅವರಿವರ ಸಲಹೆಯ ಮೇರೆಗೆ ಪಾತಿಗಳಿಗೆ ಹೊಸ ಮಣ್ಣು ಗೊಬ್ಬರ ಭರ್ತಿಯಾದವು. ಮಗು ಹುಟ್ಟುವುದಕ್ಕೆ ಮುಂಚೆ ಸೂಲಗಿತ್ತಿಯನ್ನು ಸಿದ್ಧಪಡಿಸುವಂತೆ, ಬೀಜಗಳು ಬರುವುದಕ್ಕೆ ಮುಂಚೆ ರಘುನಾಥರಾಯರು ಎಲ್ಲಾ ಅಣಿ ಮಾಡಿ ಇಟ್ಟಿದ್ದರು. ಪ್ರತಿನಿತ್ಯವೂ ತೋಟದ ಕೆಲಸವಾದ ಮೇಲೆ ಒಂದು ಲೋಟ ಪಾನಕ. ''ಒಂದು ನಿಂಬೆಹಣ್ಣಿನ ಗಿಡ ತಂದು ಮನೆ ಮುಂದೆ ನೆಡಿ ಅಂದ್ರೆ, ಆಗ ಸರಿಹೋಗುತ್ತೆ ಪಾನಕಕ್ಕೆ'' ಎಂದು ಸೀತಮ್ಮನವರು ತಮಾಷೆ ಸಹ ಮಾಡಿದರು. ''ಡೆಡೋನಿಯಾ ಹೂ ಬಿಡಲಿ ತಾಳು, ಆಗ ನೀನೇ ಬಂದು ಎರಡು ಲೋಟ ಪಾನಕ ಹೆಚ್ಚಿಗೆ ಮಾಡಿಕೊಟ್ಟು ಹೂವು ಕೇಳ್ತೀಯಾ ಮುಡಿಯಲಿಕ್ಕೆ'' ಎಂದು ರಘುನಾಥರಾಯರು ಸೀತಮ್ಮನಿಗೆ ಉತ್ತರವಿತ್ತಿದ್ದರು.

ಬೀಜಗಳ ಪೊಟ್ಟಣ ಬಂದ ದಿವಸ ರಘುನಾಥರಾಯರ ಉತ್ಸಾಹ ಹೇಳತೀರದು. ವಿ.ಪಿ. ಏನೆಂದು ಕೇಳಿದ್ದ ಲಾಯರು ಮಿತ್ರರಿಗೆ ''ಡೆಡೋನಿಯಾ ಹೂವಿನ ಬೀಜ – ವಿದೇಶೀದು – ಡೆಡೋನಿಯಾ ಹೂವು ಗೊತ್ತಿಲ್ವೇ – ಲಾಯರ್ ಕೆಲಸ ಇನ್ನೇನ್ರಿ ಮಾಡ್ತೀರಿ, ಅಷ್ಟು ಗೊತ್ತಿಲ್ಲದಿದ್ದರೆ'' ಎಂದು ಉತ್ತರವಿತ್ತು ಅವರಿಗೆ ''ಡೆಡೋನಿಯಾ''ದ ಪರಿಚಯ ಮಾಡಿಕೊಟ್ಟರು. ಆ ದಿನ ಮಧ್ಯಾಹ್ನ ಎರಡು ಗಂಟೆಗೇ ಮನೆಗೆ ಬಂದು Modern Reviewನಲ್ಲಿ ಡಾ. ನೆಹರು ಬರೆದಿದ್ದ ''Electro-cultrue'' ಎಂಬ ಲೇಖನ ತೆಗೆದು, ಅದರಲ್ಲಿ ಬರೆದಿದ್ದಂತೆ ವಿದ್ಯುತ್ ಮಿಶ್ರಿತ ನೀರಿನಲ್ಲಿ ಬೀಜಗಳನ್ನು ನೆನೆಯಿಸಿ ಸಂಭ್ರಮದೊಡನೆ ಬೀಜ ಬಿತ್ತಿದರು. ಆ ದಿವಸ ಅವರು ಎರಡು ಲೋಟ ಪಾನಕ ಕುಡಿದರು. ಮಳೆಯಂತೆ ಧಾರೆಯಾಗಿ ನೀರು ಬೀಳುವಂತೆ ನೀರು ಹಾಕಲು ಅನುಕೂಲ ಮಾಡಿದ್ದ ತಗಡಿನ ಪಾತ್ರೆಯನ್ನೂ ತಂದಿದ್ದರು. ದಾರಿಯಲ್ಲಿ ಓಡಾಡುತ್ತಿದ್ದ ಪರಿಚಯಸ್ಥರನ್ನು ಒಳಗೆ ಕರೆದು ''ಡೆಡೋನಿಯಾ'' ಪಾತಿಗಳನ್ನು ತೋರಿಸಿದ್ದರು. ''ಏನಂದಿರಿ–ಹೂಂ–ನೀರು ಹಾಕೋದರಲ್ಲಿ ಅವಮರ್ಯಾದೆಯೇನು? ಸಂಜೆಗೆ ಬೇರೆ ಕೆಲಸವಿರುವುದಿಲ್ಲ, ಒಂದು ಹವ್ಯಾಸ,

ವ್ಯಾಯಾಮಾನೂ ಆಗುತ್ತೆ. ಛೆ ಛೇ! ಡೆಡೋನಿಯಾ ಯಾವ ಹೂವಿಗೂ ಕಡಿಮೆ ಇಲ್ಲ, ಮಲ್ಲಿಗೆ ಹಾಕಬಹುದು; ಆದರೆ ಡೆಡೋನಿಯಾ ಅಂದ್ರೆ, ಅದರ ಸೊಬಗೇ ಬೇರೆ'' ಹೀಗೆಂದು ಪ್ರಶ್ನೆಗಳಿಗೆ ತಕ್ಕಂತೆ ಉತ್ತರ ಕೊಡುತ್ತಿದ್ದರು. ರಘುನಾಥರಾಯರು ''ಡೆಡೋನಿಯಾ'' ಬೆಳೆಯುವುದು ಆ ಬೀದಿಯವರಿಗೆಲ್ಲಾ ಮಹತ್ತರವಾದ ವಿಷಯವಾಗಿತ್ತು. ಪರಿಚಯಸ್ಥರು ಆಗಾಗ ''ಮೊಳಕೆಯೆದ್ದಿದೆಯೆ?'' ಎಂದು ಕೇಳಿದಾಗ ತಾವೇ ಸಸ್ಯಶಾಸ್ತ್ರದ ಪಂಡಿತರಂತೆ ರಘುನಾಥರಾಯರು ''ಛೆ! ಛೇ! ಎಲ್ಲಾದರೂ ಉಂಟೆ! ಬೀಜ ಹಾಕಿದ ಹದಿನೆಂಟು ಇಪ್ಪತ್ತು ದಿವಸಗಳಿಗೆ ಮೊಳಕೆ ಒಡೆಯುವುದು'' ಎಂದು ಹೇಳುತ್ತಿದ್ದರು.

ಒಂದು ದಿನ ಸಂಜೆ ಸೀತಮ್ಮನವರು ಮಲ್ಲಿಗೆ ದಂಡೆ ಮುಡಿದುಕೊಂಡಿದ್ದಾಗ ''ಮಧ್ಯೆ ಒಂದು ನೀಲಿ ಡೆಡೋನಿಯಾ ಇದ್ದರೆ ಎಷ್ಟು ಚೆನ್ನಾಗಿರುತ್ತೋ'' ಎಂದು ರಘುನಾಥರಾಯರು ತಮ್ಮ ಹೆಂಡತಿಗೆ ಸೂಚಿಸಿದರು. ''ಸರಿ, ಒಳ್ಳೇ ಡೆಡೋನಿಯಾ ಬಂತು ಅಂದ್ರೆ, ಸಿನಿಮಾ ವಾಕಿಂಗು ಎಲ್ಲಾ ಹಾಳಾಯ್ತು... ಇದರಿಂದ'' ಎಂದು ಸೀತಮ್ಮ ಹೇಳಿದರು.

ಬೀಜ ಬಿತ್ತಿದ ಸುಮಾರು ಇಪ್ಪತ್ತು ದಿವಸದ ಮೇಲೆ ಒಂದೊಂದಾಗಿ 'ಡೆಡೋನಿಯಾ' ಮೊಳಕೆ ಹುಟ್ಟಿದವು. ರಘುನಾಥರಾಯರು ಉತ್ಸಾಹ ಹೇಳತೀರದು. ಕಛೇರಿಯಲ್ಲಿ ಕೆಲವು ಮಿತ್ರರು ''ಮಕ್ಕಳು ಹುಟ್ಟದಿದ್ದರೂ ಡೆಡೋನಿಯಾ ಹುಟ್ಟಿದವಲ್ಲಯ್ಯ; ಕಾಫಿ ತಿಂಡಿ ತರಿಸು'' ಎಂದು ತಮಾಷೆ ಮಾಡಿದರು.

ಸಸಿಗಳೆಲ್ಲವೂ ಎಲೆ ಬಿಡಲಾರಂಭಿಸಿದವು. ರಾಮೇನಹಳ್ಳಿಯಲ್ಲಿ ವಾಸವಾಗಿದ್ದು ಅಲ್ಲಿಯೇ ಜಮೀನುದಾರಿ ಲೇವಾದೇವಿ ವೃತ್ತಿಯಲ್ಲಿದ್ದ ರಘುನಾಥರಾಯರ ಅಣ್ಣಂದಿರು, ಶ್ಯಾಮಣ್ಣನವರು ಒಂದು ದಿನ ಸ್ವಂತ ಕೆಲಸದ ನಿಮಿತ್ತ ಬೆಂಗಳೂರಿಗೆ ಬಂದರು. ಅವರು ಬಂದಾಗ ಸಂಜೆಯಾಗಿತ್ತು. 'ಡೆಡೋನಿಯಾ' ಸಸಿಗಳಿಗೆ ನೀರೆರೆಯುತ್ತಿದ್ದ ತಮ್ಮನ ಹೊಸ ಹವ್ಯಾಸವನ್ನು ನೋಡಿ ಸಂತೋಷದಿಂದ ಅಚ್ಚರಿಗೊಂಡು, ''ಏನೋ ರಘು, ಏನು ಗಿಡ ಹಾಕಿದ್ದೀಯಾ'' ಎಂದರು.

''ಡೆಡೋನಿಯಾ; ವಿದೇಶೀ ಜಾತಿಯವು. ಹೂವು ಹೇಗಿರುತ್ತವೆ ಅಂತೀಯಾ. ಇದರ ಮುಂದೆ ಗುಲಾಬಿ ನಿಲ್ಲುವುದಿಲ್ಲ. ಹಳ್ಳಿಗೆ ಒಂದೆರಡು ಸಸಿ ತೆಗೆದುಕೊಂಡು ಹೋಗು'' ಎಂದು ರಘುನಾಥರಾಯರು ಹೇಳಿದರು.

ಹೊಸ ಹೆಸರಿನ ಹೊಸ ಗಿಡಗಳನ್ನು ನೋಡಲು ಉತ್ಸುಕತೆಯಿಂದ ಶ್ಯಾಮಣ್ಣನವರು ಪಾತಿಯ ಬಳಿಗೆ ಬಂದು ಬಗ್ಗಿ ನೋಡಿ ಪರಿಶೀಲಿಸಿ, ''ಏನೋ ರಘು! ಬಂದರಿಕೆ (ಬಣದುರುಬಿ) ಸೊಪ್ಪಿನ ಸಸಿ ಇದ್ದ ಹಾಗೇ ಇವೆಯಲ್ಲೋ'' ಎಂದರು.

ರಘುನಾಥರಾಯರು ಖೊಳ್ಳನೆ ನಕ್ಕರು. ''ಬಂದರಿಕೇನೇ! ಛೆ! ಛೇ! ಬಂದರಿಕೆ ಎಲ್ಲಿ-ಡೆಡೋನಿಯಾ ಎಲ್ಲಿ? ಎಲ್ಲಾದರೂ ಉಂಟೆ? ಅದು ಡೆಡೋನಿಯಾ ಶ್ಯಾಮಣ್ಣ - ಅಪರೂಪದ ಹೂ!''

ಶ್ಯಾಮಣ್ಣನವರು ಮತ್ತೊಮ್ಮೆ ಸಸಿಗಳನ್ನು ಪರಿಶೀಲಿಸಿ ''ಏನೋ ಅಪ್ಪಾ, ನನ್ನ ಕಣ್ಣಿಗೆ ಬಂದರಿಕೆ ಸೊಪ್ಪಿನ ಗಿಡಗಳ ಹಾಗೇ ಕಾಣುತ್ತವೆ. ಯಾರು ಬಲ್ಲರು'' ಎಂದುಬಿಟ್ಟರು.

ಸಸಿಗಳು ಚೆನ್ನಾಗಿ ಬೆಳೆಯುತ್ತಾ ಬಂದವು. ಸುಮಾರು ಒಂದು ಚೋಟು ಎತ್ತರ ಬಂದಿದ್ದವು. ರಘುನಾಥರಾಯರ ಉತ್ಸಾಹವೂ ಬೆಳೆಯುತ್ತಾ ಬಂತು. ''ಹೂ ಎಂದು ಬಿಟ್ಟೀತು, ಎಲ್ಲರಿಗೂ ಎಂದು ತೋರಿಸೇನು, ಸೀತಾಗೆ ಎಂದು ಹೂ ಮುಡಿಯಲಿಕ್ಕೆ ಕೊಟ್ಟೇನು'' ಎಂದು ರಾಯರು ಹಂಬಲ ಪಡುತ್ತಿದ್ದರು.

ಒಂದು ದಿನ ಸಂಜೆಗೆ ರಘುನಾಥರಾಯರ ಕಕ್ಷಿಗಾರನಾದ ಗಿಡ್ಡನಹಳ್ಳಿ ಪಟೇಲ ಮಾದಪ್ಪ ರಘುನಾಥರಾಯರನ್ನು ಕಾಣಲೋಸುಗ ಅವರ ಮನೆಗೆ ಬಂದ. ಸಸಿಗಳಿಗೆ ನೀರೆರೆಯುತ್ತಿದ್ದ ರಘುನಾಥರಾಯರನ್ನು ನೋಡಿ ''ಏನು ಸ್ವಾಮಿ, ಖುದ್ದು ನಿಂತು ಗಿಡದ ಕೆಲಸ ಮಾಡುತ್ತಿದ್ದೀರಿ'' ಎಂದ.

''ಆಂ? – ಹೌದು. ಸಂಜೆ ಹೊತ್ತು ಇನ್ನೇನು ಕೆಲಸವಿರುವುದಿಲ್ಲ. ಒಳಗೆ ಬಾ. ಏನು ಬಂದಿದ್ದು?''

''ಸ್ವಲ್ಪ ಕೆಲಸ ಇತ್ತು ಸ್ವಾಮಿ. ನಿಮ್ಮ ಕೆಲಸ ಮುಗಿದ ಮೇಲೆ ಮಾತಾಡೋಣ. ಅವು ಯಾತರ ಸಸಿ ಸ್ವಾಮಿ?''

''ಇವೇ – ಇಂಗ್ಲೀಷ್ ಗಿಡ. ಹೂವು ಬಿಡುತ್ತೆ. ಗುಲಾಬಿಗೆ ಇದು ಬಲಗೈ.''

''ಹಂಗೇನೂ! ನಮಗೆರಡು ಸಸಿ ಕೊಡಿ ಸ್ವಾಮಿ'' ಎಂದು ಕೇಳುತ್ತಾ ಪಟೇಲ್ ಮಾದಪ್ಪ ಪಾತಿಯ ಬಳಿ ಬಂದು ಸಸಿಗಳನ್ನು ಹತ್ತಿರದಲ್ಲಿ ನೋಡಿದವನೆ, ''ಬಿಡಿ ಸ್ವಾಮಿ, ನನ್ನ ಕೂಡ ತಮಾಷೆಯೆ ನಿಮಗೆ? ಅಲ್ಲ, ಬಂದರಿಕೆ ಸಸಿ ಏಕೆ ಸ್ವಾಮಿ, ಇಷ್ಟು ಕಷ್ಟಪಟ್ಟು ಬೆಳೆಸುತ್ತೀರಿ. ಎದುರಿಗೇ ಪಸಂದಾಗಿ ಬೆಳೆದಿವೆ'' ಎಂದು ಎದುರು ಓಣಿಯಲ್ಲಿ ಚರಂಡಿಯ ಎರಡು ಕಡೆಗಳಲ್ಲೂ ದಟ್ಟವಾಗಿ ಬೆಳೆದಿದ್ದ ಬಂದರಿಕೆ (ಬಣದುರುಬಿ) ಗಿಡಗಳನ್ನು ತೋರಿಸಿದ. ರಘುನಾಥರಾಯರಿಗೆ ಸ್ವಲ್ಪ ಅನುಮಾನ ಬಂದರೂ ತೋರ್ಪಡಿಸದೆ ''ಛೆ! ಛೇ! ಏನು ಮಾತು ನಿಂದು? ಕರೀ ಸೀರೆ ಗಾದೆ ಮಾತಾಡ್ತಿದ್ದೀಯಾ, ಅಷ್ಟೆ ಎಂದು ಬಿಟ್ಟರು.

ಮರುದಿವಸ ರಘುನಾಥರಾಯರು ಕಛೇರಿಯಿಂದ ಮನೆಗೆ ಬರುವಾಗ ಕಾಲೇಜಿಗೆ ಹೋದರು. ಕಾಲೇಜಿನಲ್ಲಿ ಅವರ ಮಿತ್ರರೊಬ್ಬರು ಸಸ್ಯಶಾಸ್ತ್ರದ ಅಧ್ಯಾಪಕರು. ಅವರೊಡನೆ ಆ ಮಾತು ಈ ಮಾತು ಆಡುತ್ತಾ ''ಡೆಡೋನಿಯಾ ಎಂದರೆ ಏನಯ್ಯ?'' ಎಂದು ಕೇಳಿದರು. ಅವರು ''ಇಷ್ಟು ಗೊತ್ತಿಲ್ಲದಿದ್ದರೆ ಏನು ವಕೀಲಿ ಮಾಡುತ್ತೀಯಯ್ಯ. ಡೆಡೋನಿಯಾ ಎಂದರೆ ಬಂದರಿಕೆ ಸೊಪ್ಪಿನ ಗಿಡ'' ಎಂದು ಅರ್ಥ ಹೇಳಿದರು.

ಆ ಸಾಯಂಕಾಲ ರಘುನಾಥರಾಯರು ಡೆಡೋನಿಯಾ ಸಸಿಗಳಿಗೆ ನೀರೆರೆಯಲಿಲ್ಲ. ಬಂದವರೇ ಸೀತಮ್ಮನನ್ನು ಸಿನಿಮಾಕ್ಕೆ ಕರೆದುಕೊಂಡು ಹೋದರು. ಮರುದಿವಸದ ಸಾಯಂಕಾಲವೂ ಗಿಡಗಳಿಗೆ ನೀರಿಲ್ಲ, ಅವು ಬಾಡಿದವು. ರಘುನಾಥರಾಯರು ಸೀತಮ್ಮನನ್ನು ಲಾಲ್‌ಬಾಗಿಗೆ ಕರೆದುಕೊಂಡು ಹೋದರು. ಮರುದಿವಸ ಭಾನುವಾರ. ಆ ದಿವಸ ನಾಲ್ಕು ಗಂಟೆಗೇ ದಂಪತಿಗಳು ಗಾಯನ ಸಮಾಜಕ್ಕೆ ಸಂಗೀತಕ್ಕೆ ಹೋದರು. ಡೆಡೋನಿಯಾ ಸಸಿಗಳು ಒಣಗಿದವು.

ಒಂದು ವಾರದ ಮೇಲೆ ಸೀತಮ್ಮನವರು ತಮ್ಮ ಕಣ್ಣುಪರೀಕ್ಷೆ ಮಾಡಿಸಿಕೊಳ್ಳಲೋಸುಗ ಬೆಂಗಳೂರಿಗೆ ಬಂದರು. ಆ ದಿನ ರಾತ್ರಿ ಅಕ್ಕ ಭಾವ ಇವರೊಂದಿಗೆ ಮಾತನಾಡುತ್ತಾ ಎದುರು ಮೇಜಿನ ಮೇಲಿದ್ದ ಕ್ಯಾಟಲಾಗನ್ನು ನೋಡಿ ಓದುತ್ತಾ, ''ಭಾವ ಡೆಡೋನಿಯಾ ಎಂದರೇನು?'' ಎಂದು ಕೇಳಿದ ರಘುನಾಥರಾಯರು ಸೀತಮ್ಮನ ಕಡೆ ನೋಡದೆ ''ಡೆಡೋನಿಯಾ ಎಂದರೆ ಬಂದರಿಕೆ ಎಂದರ್ಥ'' ಎಂದು ಹೇಳಿದರು.

ಸೀತಮ್ಮನವರು ಬಹಳ ಕಷ್ಟಪಟ್ಟು ನಗುವನ್ನು ತಡೆದುಕೊಂಡರು ಆದರೂ ಅವರ ತುಟಿಗಳ ಮೇಲೆ ರಘುನಾಥರಾಯರು ಪತ್ತೆಮಾಡಿದ ನಸು ನಗೆ ಮಿಂಚಿತು.

## ಕಿಂದರಿ ಜೋಗಿ 2011

ಅಮೆರಿಕದ ಒಂದು ಅಂಗಡಿಗೆ ಭಾರತೀಯ ಪ್ರವಾಸಿಗ ಹೋಗುತ್ತಾನೆ. ಪಂಚಲೋಹದಲ್ಲಿ ಮಾಡಿದ ಇಲಿಯ ವಿಗ್ರಹ ಕಾಣುತ್ತದೆ. ಅದು ಆಕರ್ಷಕವಾಗಿದ್ದು ಅದನ್ನು ಕೊಳ್ಳಲು ಇವನು ನಿರ್ಧರಿಸಿ ಬೆಲೆ ಎಷ್ಟು ಎಂದಾಗ '12 ಡಾಲರ್' ವಿಗ್ರಹಕ್ಕೆ, ಕತೆಗೆ 100 ಡಾಲರ್' ಎಂದು ಮಾಲೀಕ ಹೇಳುತ್ತಾನೆ.

'ನನಗೆ ಕತೆ ಬೇಡ, ವಿಗ್ರಹ ಕೊಡಿ' ಎಂದು ಹೇಳಿ 12 ಡಾಲರ್ ಕೊಟ್ಟು ಕೊಳ್ಳುತ್ತಾನೆ.

ಇಲಿ ಹಿಡಿದು ಹೊರಗೆ ಹೊರಟಾಗ ಅವನು ಥೇಟ್ ಬೊಮ್ಮನ ಹಳ್ಳಿಯ ಕಿಂದರಿ ಜೋಗಿ ಆಗುತ್ತಾನೆ. ಸಣ್ಣಿಲಿ, ದೊಡ್ಡಿಲಿ, ದಪ್ಪಿಲಿ, ಕೆಂಪು ಇಲಿ, ಬಿಳಿ ಇಲಿ, ಅಮ್ಮ ಇಲಿ, ಅಪ್ಪ ಇಲಿ.... ಹೀಗೆ ಇಲಿಗಳ ಹಿಂಡೇ ಅವನನ್ನು ಹಿಂಬಾಲಿಸತೊಡಗುತ್ತದೆ.

ಇವನಿಗೆ ಹೆದರಿಕೆ ಆಗಿ ಸಮುದ್ರದ ಬಳಿ ಹೋಗುತ್ತಾನೆ. ಅವನ ಹಿಂದೆ ಇಲಿಗಳ ದಂಡು. ಇವನು ಗಾಬರಿಯಿಂದ ಆ ವಿಗ್ರಹವನ್ನು ನೀರಿಗೆಸೆಯುತ್ತಾನೆ. ಆಗ ಎಲ್ಲ ಇಲಿಗಳೂ ನೀರಿಗೆ ಹಾರತೊಡಗುತ್ತವೆ.

ಈಗ ಅವನು ಮತ್ತೆ ಅದೇ ಅಂಗಡಿಗೆ ವಾಪಸ್ಸಾಗುತ್ತಾನೆ. 'ವ್ಹಾ! ಈಗ ಕತೆಗಾಗಿ ಬಂದಿರಾ?' ಎಂದು ಮಾಲೀಕ ಕೇಳುತ್ತಾನೆ.

'ಇಲ್ಲ ನಿಮ್ಮ ಬಳಿ ಅಂತಹದೇ ರಾಜಕಾರಣಿಯ ವಿಗ್ರಹ ಇದೆಯೇನು?' ಎಂದು ಕೇಳುತ್ತಾನೆ.

- ಬಸವ ಬೊಮ್ಮನಹಳ್ಳಿ



# ಬೈರಾಗಿಯ ಪವಾಡದಲ್ಲಿ

**✿ ಗೊರೂರು**

**ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬಾಲ್ಯದ ಆತ್ಮಕಥೆಯಿಂದ ಪ್ರಸ್ತುತ ಲೇಖನವನ್ನು ಆಯ್ದುಕೊಳ್ಳಲಾಗಿದೆ. ದಿವಂಗತ ಗೊರೂರರು ಬರೆದು ಎಲ್ಲಿಯೋ ಇಟ್ಟು ಮರೆತಿದ್ದ ಅವರ ಆತ್ಮಕಥೆಯ ಹಸ್ತಪ್ರತಿಯನ್ನು ಅವರ ಪುತ್ರ ಡಾ. ಜಿ.ಆರ್. ಗೋವಿಂದರಾಜು ಅವರು ಸಂಗ್ರಹಿಸಿದ್ದು ಐ.ಬಿ.ಎಚ್. ಪ್ರಕಾಶನ ಪ್ರಕಾಶಿಸಿದ್ದಾರೆ. ಈ ಕೃತಿ ಗೊರೂರರ ಬಾಲ್ಯದ ಚಿತ್ರಣವನ್ನು ನೀಡುತ್ತದೆ.**

**ವ**ರದ, ಮರದಿಂದ ಬಿದ್ದು ನಿರಪಾಯನಾಗಿ ಪಾರಾದುದರಿಂದ ನನಗೆ ಸಂತೋಷದೊಂದಿಗೆ ಮೂಢಭಕ್ತಿಯೂ ಹೆಚ್ಚಿತು. ದೇವರು ನಮ್ಮ ಮೇಲೆ ಸ್ವಲ್ಪ ವಿಶೇಷ ಪ್ರೀತಿ ತೋರಿಸುತ್ತಿದ್ದಾನೆ ಎಂದು ನಾನು ಭಾವಿಸಿದೆ. ಇದರಿಂದ ನನಗೆ ಇದ್ದಕ್ಕಿದ್ದಂತೆ ನಿಷ್ಕ್ರಿಯತೆ, ಭಕ್ತಿಯ ಆಧಿಕ್ಯ ದೇವರು ಪವಾಡಗಳಲ್ಲಿ ಸಹ ನಂಬಿಕೆ ಉಂಟಾಯಿತು. ಪವಾಡಗಳಲ್ಲಿ ನಂಬಿಕೆ ಉಂಟಾದರೆ ಅದಕ್ಕೆ ಮಿತಿಯೇ ಇಲ್ಲ. ಏನು ಬೇಕಾದರೂ ಆಗಬಹುದೆಂದು ನಂಬುತ್ತೇವೆ. ನನ್ನ ಮನಸ್ಸು ಇಂಥ ಮೂಢಭಕ್ತಿಯ ಗುಂಗಿನಲ್ಲಿರುವಾಗ, ಯಾವನೋ ಒಬ್ಬ ಬೈರಾಗಿ ಬಂದ. ಅವನು ಅನೇಕ ಪವಾಡಗಳನ್ನು ಮಾಡುತ್ತಿದ್ದ. ಕೆಲವು ಹಠಯೋಗವನ್ನು ಅಭ್ಯಾಸ ಮಾಡಿದ್ದ. ಒಂದು ಗಡಿಗೆ ನೀರು ಕುಡಿದು ಮತ್ತೆ ಹೊರಕ್ಕೆ ಬಾಯಿನಿಂದ ಬಿಡುವುದು, ನೂಲಿನ ಉಂಡೆಯನ್ನು ನುಂಗಿ ಹೊರಕ್ಕೆ ತೆಗೆಯುವುದು; ಇನ್ನೂ ಏನೋ ಕಣ್ಕಟ್ಟು ಮಾಯಾ ಮಂತ್ರ ಮುಂತಾದುವನ್ನೆಲ್ಲ ಮಾಡಿದ. ''ಓಂ ಹ್ರೀಂ ಫ್ರೀಮ್ ಕ್ರೀಂ ಓಂಭಟಿಸ್ವಾಹ; ಅಸ್ತ್ರಾಯಫಟ್' ಎಂದೆಲ್ಲ ಹೇಳುತ್ತಿದ್ದ. ಅವನು ಚಂಡಿ ಉಪಾಸಕ, ಮುಕಾಂಬಿಕಾ ಉಪಾಸಕ ಎಂದೆಲ್ಲಾ ಹೇಳುತ್ತಿದ್ದರು. ಅವನು ನಮ್ಮ ಊರ ನದಿ ತೀರದ ಮಂಟಪದಲ್ಲಿ ಇರುತ್ತಿದ್ದ, ಅನಂತರ ಅವನು ನೀರು ಕುಡಿದು ಹೊರಕ್ಕೆ ಬಿಡುವುದು, ನೂಲು ನುಂಗಿ ಹೊರಕ್ಕೆ ಎಳೆಯುವುದು ಇವೆಲ್ಲವನ್ನು ಅತಿಮಾನುಷ ಶಕ್ತಿಗಳೆಂದೂ ಇವು ದೇವರ ಮಹಿಮೆಯೆಂದೂ ನಾನು ನಂಬಿದೆ.

ನನಗೆ ಇಂಥ ಮೂಢನಂಬಿಕೆ ಬಾಲ್ಯದಿಂದಲೂ ಇತ್ತು. ಇಂಥ ಒಂದು ಸಿದ್ಧಿ, ನನಗೆ ಲಭಿಸಿದರೆ ನಾನು ಏನೇನು ಮಾಡಬಹುದು ಎಂಬ ಗುಂಗಿನಲ್ಲಿ ನಾನು ಅನೇಕ ಗಂಟೆಗಳನ್ನೇ ನಿಷ್ಕ್ರಿಯನಾಗಿ ಕಳೆಯುತ್ತಿದ್ದೆ. ಬೆಳಗಿನ ಕರ್ಮಗಳಿಗಾಗಿ ನದಿಗೆ ಹೋದಾಗ, ಮಧ್ಯಾಹ್ನ ಸ್ನಾನಕ್ಕೆ ಹೋದಾಗ ಅಥವಾ ಸಂಜೆ ನದಿಗೆ ಹೋದಾಗ ಬೈರಾಗಿಯ ದರ್ಶನವಾಗುತ್ತಿತ್ತು. ಅನೇಕ ಛಳಿಯ ಸಂಜೆಯಲ್ಲಿ ಬೈರಾಗಿ ತೋಪಿನ ಎಲೆ ಪುರಲೆಗಳನ್ನು ಕೂಡಿಸಿ ಬೆಂಕಿ ಹತ್ತಿಸಿ ಅದನ್ನು ಕಾಯಿಸಿ ಕೊಳ್ಳುತ್ತಿದ್ದನು. ನಾನೂ ಅವನೊಡನೆ ಕುಳಿತು ಬೆಂಕಿ ಕಾಯಿಸಿಕೊಳ್ಳುತ್ತಿದೆ. ಒಂದು ದಿನ ನಾನು ಅವನೊಂದಿಗೆ ಮಾತನಾಡುತ್ತ ಇದನ್ನೆಲ್ಲ ನೀನು ಹೇಗೆ ಮಾಡುತ್ತೀಯೆ, ನನಗೂ ಇದನ್ನೆಲ್ಲಾ ಮಾಡಬೇಕೆಂಬ ಆಸೆಯಿದೆಯಲ್ಲ, ಎಂದೆ. ಆಗ ನನಗೆ ಹನ್ನೊಂದು ವರುಷವಿರಬಹುದು.

ಬೈರಾಗಿ ''ಅದೆಲ್ಲ ನಿನಗೆ ಸಾಧ್ಯವಿಲ್ಲ, ನೀನು ಇನ್ನೂ ಹುಡುಗ'' ಎಂದ. ನಾನು ''ಯಾಕೆ ಸಾಧ್ಯವಿಲ್ಲ, ನೀನು ಮಾಡುವುದನ್ನೆಲ್ಲ ನಾನೂ ಮಾಡಬಲ್ಲೆ, ದಾರಿ ತಿಳಿಯದು'' ಎಂದೆ. ಬೈರಾಗಿ, ನಿಧಾನವಾಗಿ ಭಂಗಿಸೊಪ್ಪನ್ನು ಹದಮಾಡಿ ಮಣ್ಣಿನ ಚಿಲುಮೆಗೆ ತುಂಬಿ, ಅದರ ಒಂದು ತುದಿಗೆ ಬಟ್ಟೆ ಸುತ್ತಿ, ತುಟಿಯ ಹತ್ತಿರ ಹಿಡಿದು ಕೊಳವೆಗೆ ಬೆಂಕಿ ಇಟ್ಟು ಉಸಿರೆಳೆದನು. ಮೂರು ನಾಲ್ಕು ದಂ ಎಳೆದು, ಇದ್ದಕ್ಕಿದ್ದಂತೆ ನನ್ನ ಕಡೆ ನೋಡಿ, ''ಭಂಗಿ ಸೇದಬಲ್ಲೆಯಾ?'' ಎಂದನು. ನಾನು ತಲೆಯನ್ನು ಆಕಡೆ ಈಕಡೆಗೆ ಅಲ್ಲಾಡಿಸಿ 'ಇಲ್ಲ' ಎಂದು ಸೂಚಿಸಿದಾಗ ಅವನು ಅವಿಕಾರ ನಗೆಯಿಂದ ''ನೀನು ದಂ ಎಳೆದರೆ ಆಕಾಶದಲ್ಲಿ ತೇಲುವೆ. ಮನೆಗೆ ಹೋಗಿ ಪುಳಚಾರು ತಿನ್ನು'' ಎಂದನು. ನಾನು ಭಯದಿಂದ ಒಂದೇ ಸಮನೆ ಮನೆಗೆ ಓಡಿ ಹೊರಗಿನ ಜಗಲಿಯ ಮೇಲೆ ಕುಳಿತು ಸುಧಾರಿಸಿಕೊಂಡೆ.

ಮಾರನೆ ದಿವಸ ಮತ್ತೆ ಸಾಯಂಕಾಲ ಯಾರಿಗೂ ಕಾಣದಂತೆ ಬೈರಾಗಿಯು ಅಡಗಿಕೊಂಡಿದ್ದ ಮೂಲೆಗೆ ಸದ್ದಿಲ್ಲದೇ ಹೋದೆ, ಅವನು ನಿತ್ಯ ಮಾಡುವುದಾದರೂ ಏನು ಎಂದು ತಿಳಿಯುವುದಕ್ಕೆ. ಸೂರ್ಯನು ಮುಳುಗಿ ಪೂರ್ಣ ಕತ್ತಲೆ ಆಗುವುದಕ್ಕೆ ಮುಂಚಿತ ಇರುವ ಮಬ್ಬು ಬೆಳಕಿನಲ್ಲಿ ಅವನು ಅಡಿಗೆ ಮಾಡುತ್ತಾ ಇದ್ದ. ಅವನ ಒಲೆಯಿಂದ ಎದ್ದ ಹೊಗೆ, ಒಲೆಯಲ್ಲಿನ ಬೆಂಕಿ, ನಿರ್ವಿಕಾರ ಮನುಷ್ಯ ಕುಳಿತುದು ಎಲ್ಲಾ ನೋಡಿದರೆ ಅದು ರಾಕ್ಷಸನು ತಂಗುವ ಸ್ಥಳವೆಂಬಂತೆ ಭಯವನ್ನು ಉಂಟುಮಾಡಿತು.

ಬೈರಾಗಿಯು ನನ್ನ ಕಡೆ ನೋಡಿ ''ಮತ್ಯಾಕೆ ಬಂದೆ'' ಎಂದು ಕೇಳಿದನು. ನಾನು ಬೈರಾಗಿಗೆ ''ನೀನು, ನೀರು ನುಂಗಿ ಹೊರಕ್ಕೆ ಬಿಡುವುದು, ದಾರ ನುಂಗಿ ತೆಗೆಯುವುದು, ಬಟ್ಟೆ ಹರಿದರೂ ಸರಿ ಮಾಡುವುದು ಇವನ್ನೆಲ್ಲಾ ಮಾಡುತ್ತಿ. ನನಗೂ ಅದನ್ನೆಲ್ಲಾ ಮಾಡಬೇಕೆಂದು ಆಸೆ, ಕಲಿಸಿಕೊಡು'' ಎಂದೆ. ಬೈರಾಗಿಯು ''ನೀನು ಇನ್ನೂ ಹುಡುಗ, ಅದಕ್ಕೆಲ್ಲಾ ಖರ್ಚಾಗುತ್ತದೆ. ಅಲ್ಲದೇ ಮೂಕಾಂಬಿಕೆಯ ಜಪ ನಲವತ್ತೆಂಟು ದಿನ ನದಿಯಲ್ಲಿ ನಿಂತು ಮಾಡಬೇಕು'' ಎಂದನು. ನಾನು ಅದಕ್ಕೇನೂ ನದಿ ಇಲ್ಲಿಯೇ ಇದೆಯಲ್ಲ ಎಂದೆ. ಬೈರಾಗಿಯು ನನ್ನ ಮನೆಯ ಸ್ಥಿತಿಗತಿಗಳನ್ನು ವಿಚಾರಿಸಿಕೊಂಡು ಐದು ರೂಪಾಯಿಯಾದರೂ

ಬೇಕು. ಅದಕ್ಕೆ ಕಡಿಮೆಯಾದರೆ ದೇವಿಯನ್ನು ಪ್ರಸನ್ನಗೊಳಿಸಲು ಆಗುವುದಿಲ್ಲ. ಈಗಲೂ ನಾನು ನಿನ್ನ ಪರವಾಗಿ ಬಹಳವಾಗಿ ಅವಳ ಪಾದದಲ್ಲಿ ಬಿದ್ದು ಬೇಡಿಕೋಬೇಕು'' ಎಂದನು.

ನಾನು ಮರುದಿವಸ ಹಣ ಹೊಂಚಿಕೊಂಡು ಬರುವುದಾಗಿ ಹೇಳಿ ಹೋದೆ. ಬೈರಾಗಿ ನನಗೆ ಮತ್ತೆ ''ಆದರೆ ಜೋಕೆ, ನೀನು ವಿಷಯ ನಿನಗೆ ಸಿದ್ಧಿಸುವವರೆಗೆ ಯಾರೊಂದಿಗೂ ಬಾಯಿಬಿಡಬಾರದು. ರೂಪಾಯಿ ತರುವುದೂ ಯಾರಿಗೂ ತಿಳಿಯಕೂಡದು. ಇದಕ್ಕೆ ಎಂದು ಹೇಳದೆ ನೀನು ರೂಪಾಯಿ ತರಬೇಕು. ನೀನು ಈ ವಿಚಾರ ಬಾಯಿ ಬಿಟ್ಟೆಯೋ, ಎಲ್ಲವೂ ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುತ್ತೆ'' ಎಂದನು. ನಾನು ''ಯಾರೊಂದಿಗೂ ಮಾತನಾಡುವುದಿಲ್ಲ, ಬಾಯೇ ಬಿಡುವುದಿಲ್ಲ'' ಎಂದು ಹೇಳಿ ಮನೆಗೆ ಬಂದೆ.

ಐದು ರೂಪಾಯಿ ಜಮಾಯಿಸುವುದು ಹೇಗೆ? ನನ್ನ ಬಳಿ ಇದ್ದದ್ದು ಕೇವಲ ಎರಡು ರೂಪಾಯಿಗಳು ಅದೂ ರಹಸ್ಯವಾಗಿ ಉಳಿದ ಹಣ! ನನ್ನ ಪ್ರಥಮ ಹಿರಿಯಕ್ಕನ ಮದುವೆ ಆ ವರುಷ ನಡೆದಿತ್ತು. ಅದರಲ್ಲಿ ವಧೂವರರಿಗೆ ನಾಗವಲ್ಲಿಯ ದಿನ, ಎಲೆ ಅಡಿಕೆ ಶಾಸ್ತ್ರೋಕ್ತವಾಗಿ ನಾನು ಮಡಿಸಿಕೊಟ್ಟಾಗ, ಗಂಡಿನ ಕಡೆಯವರು ನನಗೆ ಎರಡು ರೂಪಾಯಿ ಬಹುಮಾನವಾಗಿ ಕೊಟ್ಟಿದ್ದರು. ಅದನ್ನು ನಮ್ಮ ತಂದೆ ತಾಯಿಯರು ತೆಗೆದುಕೊಂಡಿರಲಿಲ್ಲ. ಅನಂತರ ಎಲ್ಲರಿಗೂ ಮರೆತು ಹೋಯಿತು.

ನಾನು ಆ ರೂಪಾಯಿಯನ್ನು ನಮ್ಮಕ್ಕನ ಕೈಲಿ ಕೊಟ್ಟಿದ್ದೆ. ಅವಳನ್ನು ಆ ಎರಡು ರೂಪಾಯಿ ಜೊತೆಗೆ ಇನ್ನೂ ಮೂರು ರೂಪಾಯಿ ಸೇರಿಸಿಕೊಡುವಂತೆ ಹೇಳಿದೆ. ಯಾಕೆ ಎಂದು ಕೇಳಿದನು. ನಾನು ''ಅದು ಗುಟ್ಟು. ಆಮೇಲೆ ಹೇಳುತ್ತೇನೆ'' ಎಂದೆ. ಅವಳು ''ದುಡ್ಡು ಹಾಳುಮಾಡಬೇಡ'' ಎಂದು ಹೇಳಿ ತನ್ನ ಎರಡು ರೂಪಾಯಿ ಸೇರಿಸಿ ನಾಲ್ಕು ರೂಪಾಯಿ ಮಾತ್ರ ಕೊಟ್ಟಳು. ''ನನ್ನ ಹತ್ತಿರ ಇರುವುದೇ ಇಷ್ಟು'' ಎಂದುಬಿಟ್ಟಳು. ಅದು ನಿಜವೂ ಇರಬಹುದು. ಆ ಕಾಲದಲ್ಲಿ ನಮ್ಮಂಥವರ ಮನೆಯಲ್ಲಿ ಹುಡುಗಿಯರಿಗೆ ಕಾಸು ಸಿಕ್ಕುತ್ತಿರಲಿಲ್ಲ. ಮದುವೆಯಲ್ಲಿಯೂ ಅಂಥಾ ಹೆಚ್ಚು ಉಡುಗೊರೆಗಳನ್ನು ಆ ಕಾಲದಲ್ಲಿ ಕೊಡುತ್ತಿರಲಿಲ್ಲ. ನಾನು ಮರುದಿನ ಬೆಳಿಗ್ಗೆ ಹೋಗಿ ಬೈರಾಗಿಯನ್ನು ಸಂಧಿಸಿ ಅವನಿಗೆ ನಾಲ್ಕು ರೂಪಾಯಿ ಕೊಟ್ಟೆ. ಅವನು ಇನ್ನು ಒಂದಾದರೂ ತರಬೇಕಿತ್ತೆಂದು ಹೇಳಿದ. ನಾನು ನೀರು ನುಂಗಿ ಹೊರಕ್ಕೆ ಬಿಡುವುದು, ನೂಲು ನುಂಗಿ ತೆಗೆಯುವುದು, ಬಟ್ಟೆಯನ್ನು ಚೂರುಚೂರಾಗಿ ಹರಿದರೂ ಅದು ಮತ್ತೆ ಒಂದಾಗಿಯೇ ಇರುವುದು. ಈ ವಿದ್ಯೆಗಳನ್ನೆಲ್ಲ ಹೇಳಿಕೊಡಬೇಕೆಂದು ಕೇಳಿದೆ. ಬೈರಾಗಿ ಇದಕ್ಕೆ ''ನೀನು ಮೂಕಾಂಬಿಕೆಯನ್ನು ಒಲಿಸಿಕೊಳ್ಳಬೇಕು. ನಲವತ್ತೆಂಟು ದಿನ ಉಪಾಸನೆ ಮಾಡಬೇಕು; ಮೊದಲ 48 ದಿನದಲ್ಲಿ ಸಿದ್ಧಿಸದಿದ್ದರೆ, ಎರಡನೆಯ ನಲವತ್ತೆಂಟು ದಿನ ಮಾಡಬೇಕು. ಹೀಗೆ ಸಿದ್ಧಿಸುವವರೆಗೆ ಮಾಡುತ್ತಲೇ ಇರಬೇಕು. ಆ ಮಂತ್ರವನ್ನು ಹೇಳಿಕೊಡುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ನಿನಗೆ ಅಪರೂಪದ ಒಂದು ವಸ್ತುವನ್ನು ಕೊಡುತ್ತೇನೆ. ಇದೇ ವಶೀಕರಣ ತೈಲ. ಹಿಮಾಲಯದ ಕೈಲಾಸ ಪರ್ವತದಿಂದ ತಂದಿರುವುದು. ಇದರ ಮೂಲಕ ನೀನು ಯಾರನ್ನು ಬೇಕಾದರೂ ನಿನ್ನ

ವಶಮಾಡಿಕೊಳ್ಳಬಹುದು. ಉಪಾಧ್ಯಾಯರನ್ನು ವಶಮಾಡಿಕೊಂಡರೆ – ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸು, ಯಾವುದೇ ಹುಡುಗಿಯನ್ನು ನೀನು ವಶಮಾಡಿಕೊಂಡು ಅವಳ ಪ್ರೇಮವನ್ನು ಸಂಪಾದಿಸಬಹುದು, ವಿರೋಧಿಗಳನ್ನು ಸಹ ನಿನ್ನ ವಶ ಮಾಡಿಕೊಳ್ಳಬಹುದು'' ಎಂದ.

'ಈ ತೈಲವನ್ನು ನೀನು ಯಾರನ್ನು ವಶಮಾಡಿಕೊಳ್ಳಲು ಇಚ್ಛಿಸುತ್ತೀಯೋ ಅವರ ಬಟ್ಟೆ ತುದಿಗೆ, ಬಟ್ಟೆ ಅವರ ಮೈಮೇಲಿರುವಾಗ ಸೋಕಿಸಿದರೆ ಸಾಕು' ಎಂದು ಹೇಳಿದ. ಅನಂತರ ನಾನು 'ಮೂಕಾಂಬಿಕೆಯನ್ನು 48 ದಿನ ಉಪಾಸಿಸಿ ಒಲಿಸಿಕೊಳ್ಳಬೇಕು ಎಂದೆಯಲ್ಲ ಅದಕ್ಕೆ ಮಂತ್ರ ಯಾವುದು? ಕ್ರಮವೇನು' ಎಂದು ಕೇಳಿದೆ. ಬೈರಾಗಿ ಮಂತ್ರವನ್ನು ಹೇಳಿಕೊಡುತ್ತೇನೆ. ಸಂಜೆ ಸಂಧ್ಯಾಸಮಯಕ್ಕೆ ಸರಿಯಾಗಿ ಮಂಡಿಯುದ್ದ ನದಿ ನೀರಿನಲ್ಲಿ ನಿಂತು, 48 ಆವರ್ತಿ ಮಂತ್ರ ಜಪಿಸಿ ಪ್ರತಿ ಮಂತ್ರಕ್ಕೂ ಒಂದೊಂದು ಹೂವಿನಂತೆ 48 ಹೂಗಳನ್ನು ನದಿಗೆ ಬಿಡಬೇಕು. ಹೂವು ಕೆಂಪು ವರ್ಣದ್ದಾಗಿರಬೇಕು ಎಂದನು. ನಾನು ಮಂತ್ರವನ್ನು ಕೇಳಿದೆ. ಅವನು ''ಓಂ ಹ್ರೀಂ ಶ್ರೀಂ ಕ್ಲೀಮ್ ಭೋಂ ರೋಂ ಮಹಾಮಾಯೆ ಮಹಾಕಾಳಿ ಏಳುನಾಲಗೆ ದುರಗಿ ಅಸ್ತ್ರಾಯ ಫಟ್ ಓಂಭಟಸ್ವಾಹಾ'' ಎಂದು ಹೇಳಿ ಪ್ರತಿ ಮಂತ್ರಕ್ಕೂ ಕೆಂಪು ಹೂವನ್ನು ಬಿಡಬೇಕು ಎಂದು ಹೇಳಿದನು.

ನಾಲ್ಕು ಸಲ ನನಗೆ ಮಂತ್ರವನ್ನು ಹೇಳಿ ಕೊಟ್ಟು ನನ್ನಿಂದ ಹೇಳಿಸಿದ ಮೇಲೆ ''ಎಲ್ಲಿ ಮಂತ್ರವನ್ನು ಕಾಗದದಲ್ಲಿ ಬರೆದುಕೊ ಚೆನ್ನಾಗಿ ಬಾಯಿಗೆ ಬರುವವರೆಗೆ ಕಾಗದ ನೋಡಿಕೊಂಡೇ ಉಚ್ಚರಿಸು. ಮಂತ್ರ ತಪ್ಪಕೂಡದು. ತಪ್ಪಿದರೆ ಫಲ ಹೋಗುತ್ತೆ'' ಎಂದು ಹೇಳಿ ಬರೆಸಿದನು. ಒಂದು ಭಾನುವಾರ ಪ್ರಾರಂಭ ಮಾಡು ಎಂದನು. ವಶೀಕರಣ ತೈಲ ಎಂದು ಒಂದು ಸಣ್ಣ ಶೀಸೆಯಲ್ಲಿ ಕೆಂಪು ಬಣ್ಣದ ಒಂದು ನೀರನ್ನು ಕೊಟ್ಟನು. ನಾನು ಮನೆ ಕಡೆ ಹೊರಟಾಗ ಅವನು ''ಒಂದು ವಿಷಯ ಮರೆತೆ. ಜಪ ಸಿದ್ಧಿಸಿದುದು ನಿನಗೇ ಗೊತ್ತಾಗುತ್ತೆ. ಆ ದಿನ ನೀನು ಮನೆಗೆ ಹಿಂದುರುಗುವಾಗ, ನೀನು ಹಿಂದಕ್ಕೆ ನೋಡಕೂಡದು. ಯಾರೋ ಕೂಗಿದಂತೆಯೂ ಆಗುತ್ತೆ, ಆದರೂ ತಿರುಗಕೂಡದು. ಮನೆ ಸೇರಬೇಕು. ನೀನೇನಾದರೂ ಹಿಂದಕ್ಕೆ ತಿರುಗಿದರೆ ನಿನಗೆ ಸಿದ್ಧಿಸುವುದಿಲ್ಲ, ಮತ್ತೆ ನೀನು ಜಪ ಮಾಡಿಕೊಳ್ಳಬೇಕು'' ಎಂದನು. ನಾನು ಹೊರಟಾಗ ಅವನು ''ನೀನು ಇನ್ನೊಂದು ರೂಪಾಯಿ ಕೊಡಲಿಲ್ಲ, ಗುರುದಕ್ಷಿಣೆ ಕೊಡಿದಿದ್ದರೆ ಮಂತ್ರ ಸಿದ್ಧಿಸುವುದಿಲ್ಲ, ನಾಳೆ ಬೆಳಿಗ್ಗೆ ತಂದುಕೊಡು ನಿನ್ನನ್ನು ಕಾಯುತ್ತಿರುತ್ತೇನೆ'' ಎಂದನು. ನಾನು ವಶೀಕರಣ ತೈಲದ ಸೀಸೆಯನ್ನು ಜೇಬಿನಲ್ಲಿಟ್ಟುಕೊಂಡು ಮನೆಗೆ ಹಿಂದಿರುಗಿದೆ. ಮರುದಿನವೇ ಭಾನುವಾರ, ನಾನು ಆವತ್ತೇ ಜಪವನ್ನು ಪ್ರಾರಂಭಿಸಬೇಕಾಗಿತ್ತು. ಆದರೆ ಇನ್ನೊಂದು ರೂಪಾಯಿ ಕೊಡದಿದ್ದರೆ ಮಂತ್ರ ಫಲಿಸುವುದಿಲ್ಲ ಎಂದು ಬೈರಾಗಿ ಹೇಳಿದ್ದುದರಿಂದ ರೂಪಾಯಿಯನ್ನು ಹೇಗಾದರೂ ಮಾಡಿ ಕೊಡೋಣ ಎಂದು ಜಪವನ್ನು ಪ್ರಾರಂಭಿಸುವುದನ್ನು ಒಂದು ವಾರ ಮುಂದಕ್ಕೆ ಹಾಕಿದೆ.

ಮೂರು ದಿನಗಳಲ್ಲಿ ನನಗೆ ಒಂದು ರೂಪಾಯಿ ದೊರೆಯುವ ಸಂಧಿ ದೊರಕಿತು. ಬೆಂಗಳೂರಿನಿಂದ ದೊಡ್ಡ ಸರ್ಕಾರಿ ಅಧಿಕಾರದಲ್ಲಿದ್ದವರೊಬ್ಬರು ಬಂದು, ನಮ್ಮ ಊರಿನ ದೇವಸ್ಥಾನದಲ್ಲಿ ಮಗನಿಗೆ ಉಪನಯನ ಮಾಡಿದರು. ಉಪನಯನವಾದ ಬಾಲಕನಿಗೆ

ಸಂಧ್ಯಾವಂದನೆ ಮಾಧ್ಯಾಹ್ನಿಕ ಕಲಿಸಬೇಕು. ನನಗೆ ಅವು ಚೆನ್ನಾಗಿ ಅಭ್ಯಾಸವಾಗಿದ್ದುದರಿಂದ ನಾನು ಆ ಬಾಲಕನಿಗೆ ಅವುಗಳನ್ನು ಮಾಡುವುದನ್ನು ಕಲಿಸಿಕೊಟ್ಟೆ. ಬಾಲಕನ ತಂದೆ ನನ್ನ ಕಾರ್ಯವನ್ನು ಮೆಚ್ಚಿ ನನಗೆ ಒಂದು ರೂಪಾಯಿ ಕೊಟ್ಟರು. ಆ ಸಂಜೆಯೇ ನಾನು ರೂಪಾಯಿಯನ್ನು ಬೈರಾಗಿಗೆ ಕೊಡಲು ನದಿ ತೀರದ ಮಂಟಪಕ್ಕೆ ಹೋದೆ, ಬೈರಾಗಿ ಅಲ್ಲಿ ಇರಲಿಲ್ಲ. ಯಾರನ್ನೋ ಕೇಳಿದಾಗ ಅವರು ''ಅವನು ಎರಡು ಮೂರು ದಿನಗಳಿಂದ ಕಾಣುತ್ತಿಲ್ಲ, ಹೊರಟು ಹೋಗಿರಬೇಕು'' ಎಂದರು. ಬೈರಾಗಿಗೆ ರೂಪಾಯಿ ಕೊಡದುದರಿಂದ ನನಗೆ ಅತೃಪ್ತಿಯಾಯಿತು. ಮಂತ್ರ ಸಿದ್ಧಿಸುವುದಿಲ್ಲವೇನೋ ಎಂದು ಹೆದರಿದೆ.

ಭಾನುವಾರ ಬರಲು ಇನ್ನೂ ನಾಲ್ಕು ದಿನವಿತ್ತು. ಈ ನಡುವೆ ಮಂತ್ರವನ್ನು ಚೆನ್ನಾಗಿ ಉರು ಹಾಕಿದೆ. ಸದಾ ಅದನ್ನು ಹೇಳುತ್ತಲೇ ಇದ್ದೆ. ತರಗತಿಯ ಪಾಠ ಅಷ್ಟೇನೋ ಕಷ್ಟವಾಗಿರಲಿಲ್ಲ. ಕನ್ನಡ ಮೂರೋ ಅಥವಾ ನಾಲ್ಕನೆಯ ತರಗತಿಯೋ ಇರಬೇಕು. ಮಂತ್ರ ಚೆನ್ನಾಗಿ ಬಂತು. ಇನ್ನು ಕೆಂಪು ಹೂವುಬೇಕು. ಆಗ ಕೆಂಪು ಹೂವು ಸಿಕ್ಕುತ್ತಿರಲಿಲ್ಲ. ದಾಸವಾಳ ಇಲ್ಲ. ನದಿಯ ತೀರದಲ್ಲಿಯೇ ರೈತರು ಜಮೀನಿಗೆ ಹಾಕಿದ್ದ ಬೇಲಿಗಳಲ್ಲಿ ಚದುರಂಗಿ ಗಿಡದ ಬೇಲಿ ಇತ್ತು. ಬೇಕಾದಂತೆ ಕೆಂಪು ಹೂವು ಬಿಡುತ್ತಿತ್ತು. ಅದರಿಂದಲೇ ಕೆಂಪು ಹೂವುಗಳನ್ನು ಕುಯ್ದುಕೊಂಡು, ಜನರ ಕಣ್ಣಿನಿಂದ ಸ್ವಲ್ಪ ದೂರವಾದ ತೋಪಿನ ಸಮೀಪದಲ್ಲಿ ನದಿಯಲ್ಲಿ ಇಳಿದು ಜಪ ಮಾಡಿ ನಲವತ್ತೆಂಟು ಹೂವುಗಳನ್ನು ನೀರಿಗೆ ಬಿಟ್ಟು ಉಳಿದ ಹೂವುಗಳನ್ನೂ ನೀರಿಗೆ ಸುರಿದು - ಮನೆಗೆ ಹಿಂದಿರುಗಿದೆ. ಶಾಲೆ ಬಿಟ್ಟ ಕೂಡಲೇ ಹೋಗಿ ಸಾಯಂಕಾಲದೊಳಗೆ ಹಿಂದಿರುಗುತ್ತಿದ್ದುದರಿಂದ ನನ್ನ ಕಾರ್ಯ ಯಾರಿಗೂ ತಿಳಿಯಲಿಲ್ಲ.

ಹೀಗೆ ನಾನು ನಲವತ್ತೆಂಟು ದಿನವೂ ಬಿಡದೆ ಮಾಡಿ ಮುಗಿಸಿದೆ. ಕೊನೆಯ ದಿನ ವ್ರತವನ್ನು ಮುಗಿಸಿದುದರಿಂದ ಆದ ಸಂತೋಷಕ್ಕಿಂತ ಸದ್ಯ ನಾಳೆಯಿಂದ ಇಲ್ಲವಲ್ಲ ಎಂಬ ಸಂತೋಷವೇ ಅಧಿಕವಾಯಿತು. ನಾನು ಕೊನೆಯ ದಿನದ ಜಪ ಮುಗಿಸಿ, ಯಾರೊಂದಿಗೂ ಮಾತನಾಡಬಾರದೆಂದು ಸರಸರನೆ ಹಿಂದಿರುಗುತ್ತಿರುವಾಗ, ತೋಟದಿಂದ ಬರುತ್ತಿದ್ದ ಶಲ್ವಪಿಳ್ಳೆ, ''ರಾಮು, ರಾಮು, ರಾಮಾ ರಾಮಾ'' ಎಂದು ಕೂಗಿದನು. ನಾನು ಹಿಂದಿರುಗಿ ನೋಡಲಿಲ್ಲ. ಅದು ನಿಜವಾಗಿ ನಮ್ಮ ಬೀದಿಯ ಶಲ್ವಪಿಳ್ಳೆ ಧ್ವನಿ; ಭೂತ ಅಥವಾ ನನ್ನ ವ್ರತವನ್ನು ಕೆಡಿಸಲು ಉದ್ದೇಶಿಸಿರುವ ದೆವ್ವದ ಚೇಷ್ಟೆಯಲ್ಲ ಎಂದು ನನಗೆ ನಿಸ್ಸಂದೇಹವಾಗಿ ತಿಳಿದಿದ್ದರೂ ನಾನು ಹಿಂದಿರುಗಿ ನೋಡಲಿಲ್ಲ. ಬದಲು, ನನ್ನ ವೇಗವನ್ನೇ ಅಧಿಕಗೊಳಿಸಿದೆ. ಶಲ್ವಪಿಳ್ಳೆ ''ರಾಮಾ ರಾಮಾ ನಿಲ್ಲು'' ಎಂದು ಕೂಗಿದುದು ಕೇಳಿದ ಕೂಡಲೇ ನಾನು ಇನ್ನೂ ವೇಗವಾಗಿ, ಅವನನ್ನು ಹಿಂದಕ್ಕೆ ಹಾಕುತ್ತ ಸರಸರನೆ ನಮ್ಮ ಮನೆ ಬಾಗಿಲಿಗೆ ಬಂದೆ. ನಮ್ಮ ತಂದೆಯವರು ಜಗಲಿಯ ಮೇಲೆ ಕುಳಿತಿದ್ದರು. ಅವರು ನನ್ನನ್ನು ಮಾತನಾಡಿಸುವುದಕ್ಕೆ ಮುಂಚೆಯೇ ನಾನು ಮನೆಯೊಳಕ್ಕೆ ನುಗ್ಗಿ ಬಿಟ್ಟೆ. ಹೀಗೆ ನಾನು ವತ್ರವನ್ನು ಮುಗಿಸಿದ್ದೆ.

ಮರುದಿನ ಬೆಳಿಗ್ಗೆ ನಾನು ಒಂದು ಬಟ್ಟೆಯನ್ನು ಹರಿದೆ. ಅದರ ಮೇಲೆ ಕೈಯಿಟ್ಟು ''ಓಂ ಹ್ರೀಂ ಕ್ಲೀಮ್ ಭೋಂ ರೋಂ ಮಹಾಮಾಯೆ ಮಹಾಕಾಳಿ ಭೈರವಿ ಏಳುನಾಲಗೆ ದುರಗಿ ಅಸ್ತಯ ಫಟ್, ಓಂ ಭಟ ಸ್ವಾಹಾ'' ಎಂದು ಹೇಳಿ ನಿಧಾನವಾಗಿ ಬಟ್ಟೆಯನ್ನು ಮೇಲಕ್ಕೆ

ಎತ್ತಿದೆ. ಬಟ್ಟೆ ಮೇಲಕ್ಕೆ ಬಂತು, ಆದರೆ ಚೂರು ಮಾತ್ರ ಬಂತು. ಹರಿದದ್ದು ಸೇರಿಕೊಂಡಿರಲಿಲ್ಲ. ನನ್ನ ಕಪಾಳಕ್ಕೆ ಫಟಾರನೆ ಏಟು ಬಿದ್ದಂತಾಯಿತು. ನನಗೇ ನನ್ನಲ್ಲಿ ಕನಿಕರವುಂಟಾಗಿ ನನ್ನ ಕಣ್ಣಿನಿಂದ ನೀರು ಧಾರಾಕಾರವಾಗಿ ಹರಿಯಿತು. ನಾನು ಚೆನ್ನಾಗಿ ಅತ್ತುಬಿಟ್ಟೆ. ನಲವತ್ತೆಂಟು ದಿವಸಗಳ ಶ್ರಮವೂ ಕಣ್ಣೀರಿನಲ್ಲಿ ಹರಿದುಹೋಗಿ ಮನಸ್ಸು ಹಗುರವಾಯಿತು. ಅಂಧಕಾರದಲ್ಲಿ ಇದ್ದಕ್ಕಿದ್ದಂತೆ ಪ್ರಚಂಡ ಪ್ರಕಾಶದ ಸೂರ್ಯೋದಯ ವಾದಂತೆ ಇದರಲ್ಲಿ ದೇವರ ಅದ್ಭುತ ಪವಾಡ ಇಲ್ಲ. ಇದೊಂದು ಕೈಚಳಕ ಅಭ್ಯಾಸ ಸಾಧನೆ ಎಂಬುದು ಮನದಟ್ಟಾಯಿತು. ಅಂದಿನಿಂದ ಇಂದಿನವರೆಗೆ ನಾನು ಪವಾಡಗಳನ್ನು ನಂಬಲೇ ಇಲ್ಲ. ಆದರೂ ಮುಂದೊಂದು ಸಲ, ನಾನು ಯಕ್ಷಿಣಿ ಆಟವನ್ನು ನೋಡಿದಾಗ ಯಕ್ಷಿಣಿಯನ್ನು ಕಲಿಯಲು ಪ್ರಯತ್ನಿಸಿದುದುಂಟು. ಆ ವೃತ್ತಾಂತ ಮುಂದೆ ಹೇಳುತ್ತೇನೆ.

## ವಿದ್ಯಾರ್ಥಿಗಳು ಏಕೆ ನಪಾಸಾಗುತ್ತಾರೆ?

ಒಂದು ವರ್ಷದಲ್ಲಿ 365 ದಿನಗಳಿವೆ.

ಅದರಲ್ಲಿ 52 ಭಾನುವಾರಗಳು. ಅಂದರೆ 313 ದಿನಗಳು ಉಳಿದವು.

ಬೇಸಿಗೆ ರಜೆ 50. ಬಿಸಿಲು ಜಾಸ್ತಿ. ಶೆಖೆ ಓದಲು ಕಷ್ಟ. ಉಳಿದ ದಿನಗಳು 263.

ದಿನಕ್ಕೆ ಎಂಟು ತಾಸು ನಿದ್ದೆ ಅಂದರೆ 130 ದಿನಗಳು. ಉಳಿದ ದಿನಗಳು 141.

ಆಟಕ್ಕೆ ಸಮಯ ಬೇಡವೆ? ಅದು ಆರೋಗ್ಯಕರ. ದಿನಕ್ಕೆ 1 ತಾಸಿನಂತೆ 15 ದಿನಗಳು. 15 ದಿನಗಳು ಕಳೆಯಿತು. ಉಳಿದ ದಿನಗಳು 126.

ಊಟ ತಿಂಡಿ ಉಪಚಾರ ಎಂದು ಪ್ರತಿ ದಿನ 2 ತಾಸು. ಅಂದರೆ 30 ದಿನಗಳು. ಒಟ್ಟು 30 ದಿನಗಳು ಕಳೆದವು. ಉಳಿದಿದ್ದು 96 ದಿನಗಳು.

ಮಾತುಕತೆ ಎಂದು ದಿನಾ 1 ತಾಸು. (ಮಾತನಾಡದಿರಲು ಸಾಧ್ಯವೆ?) ಅಂದರೆ 15 ದಿನಗಳು. ಉಳಿದ ದಿನಗಳು 81.

ಪರೀಕ್ಷೆಗಳು ಎಂದು 35 ದಿನಗಳು ಕಳೆಯುತ್ತವೆ. ಉಳಿದದ್ದು 46 ದಿನಗಳು.

ರಜೆ, ಹಬ್ಬ ಇತ್ಯಾದಿ 40 ದಿನಗಳು. ಉಳಿದಿದ್ದು 6 ದಿನಗಳು.

ಕಾಯಿಲೆ ಕಸಾಲೆ ಎಂದು ಕನಿಷ್ಠ 3 ದಿನಗಳು. ಉಳಿದಿದ್ದು 3 ದಿನಗಳು.

ಸಿನಿಮಾ, ಸಮಾರಂಭಕ್ಕೆ 2 ದಿನಗಳು. ಉಳಿದಿದ್ದು ಒಂದು ದಿನ.

ಆ ದಿನ ಹುಟ್ಟಿದ ಹಬ್ಬಕ್ಕೆ ಮೀಸಲು. ಉಳಿದಿದ್ದು 0 ದಿನಗಳು.

ಓದಲು ಸಮಯ ಎಲ್ಲಿದೆ? ನೀವೇ ಹೇಳಿ. ಅದಕ್ಕೆ ವಿದ್ಯಾರ್ಥಿಗಳು ನಪಾಸ್.

- ಪರೀಸ್ವಾರ್ಥಿ



# ಮೊಬೈಲಾಯಣ

❀ ನಾಗರಾಜ್

## ಆಭಾಸ

ಚೆಂದದ ಹುಡುಗಿ ನನ್ನನ್ನು ನೋಡುತ್ತಿದ್ದಳು
ಅಷ್ಟೇ ಅಲ್ಲ ಬಾಯ್ಬಿಟ್ಟು ನಕ್ಕಿದ್ದಳು
ಹತ್ತಿರ ಹೋದಾಗ ಆಕಡೆ ತಿರುಗಿದ್ದಳು
Hands free mobileನಲ್ಲಿ ಮಾತಾಡುತ್ತಿದ್ದಳು

## ಜಾಗರಣೆ

ಏಕಕಾಲದಲ್ಲಿ ಹತ್ತಾರು ಹಾಡಿನ ತುಣುಕುಗಳು
ಹಿಂದೆಯೇ ದೌಡಾಯಿಸಿತ್ತು ಕರ್ಕಶ ದನಿಗಳು
ನೈಟ್ ಬಸ್ಸಲ್ಲಿ ದೂರದ ಪ್ರಯಾಣ ಮಾಡುತ್ತಿದ್ದೆ
ಎಲ್ಲಿಯೋ ಹಿಂದೆ ಬಿದ್ದಿತ್ತು ನನ್ನ ನಿದ್ದೆ

## ಕಲಿಯುಗದ ವಾಲಿಗಳು

ಇಂದಿನ ಯುವಕ ಮೊಬೈಕ್ ಸರದಾರರು
ಗಾಡಿ ವಾಲಿಸಿ ರಭಸದಿಂದ ಓಡಿಸುತ್ತಿದ್ದರು
ಈಗೆಲ್ಲ ಅವರ ಕತ್ತುಕೂಡ ವಾಲಿರುತ್ತೆ
ಕಿವಿ, ಭುಜಗಳ ಮಧ್ಯೆ ಮೊಬೈಲ್ ಸಿಕ್ಕಿಕೊಂಡಿರುತ್ತೆ

## ಆಫೀಸಿಗೆ ಹೊರಟಾಗ

ಅಂದೆಲ್ಲ ಮಡದಿಯ ಅಕ್ಕರೆಯ ಪ್ರಶ್ನೆಗಳು
ಕೀ, ಪರ್ಸ್, ಬಾಕ್ಸ್ ತೆಗೆದುಕೊಂಡಿರಾ?
ಈಚೆಗೆಲ್ಲಾ ದೂರವಾಗಿವೆ ಅವುಗಳು
ಹತ್ತಿರದ್ದು ಒಂದೇ ಮೊಬೈಲ್ ಇಟ್ಟುಕೊಂಡಿರಾ?

## ಮೊಬೈಲ್ ಸಂಭಾಷಣೆ

ಹುಡುಕಾಡುತ್ತಿದ್ದರು ಒಬ್ಬರನ್ನೊಬರು
ಇದ್ದೇನೆ ಮಂತ್ರಿಮಾಲ್‌ನಲ್ಲಿ
ಹೌದಾ? ಮಂತ್ರಿಮಾಲ್‌ನಲ್ಲಿ ಎಲ್ಲಿ?
ಇದ್ದರು ಒಬ್ಬರ ಹಿಂದೆ ಮತ್ತೊಬ್ಬರು

## False Alarm

ತುಂಬು ಗರ್ಭಿಣಿ ಕುಳಿತಿದ್ದಳು ಕ್ಲಿನಿಕ್‌ನಲ್ಲಿ
ಅತಿ ಮುಲುಗುತ್ತಿದ್ದಳು ನೋವಿನಲ್ಲಿ
ಹಠಾತ್ತನೆ ಮಗು ಅಳುವುದು ಕೇಳಿಸಿತ್ತು
ಹತ್ತಿರದ ರಿಂಗ್‌ಟೋನ್ ಧ್ವನಿ ಮಾಡಿತ್ತು

## Cellmates

ಕೈಕಾಲುಗಳು ಆಡಿಸುತ
ನಿರಂತರವಾಗಿ ನಸುನಗುತ
ಎಲ್ಲಿ ನೋಡಿದರೆ ಅಲ್ಲಿ
Cellmates ಖುಷಿಯಲ್ಲಿ!

## ಅಖಂಡತೆ

ಇತ್ತು ಒಮ್ಮೆ ವರ್ಗೀಕರಣ ಕರಾವಳಿಯವರು
ಗುಡ್ಡಗಾಡಿನವರು, ಬಯಲುಸೀಮೆಯವರು
ಈಚೆಗೆಲ್ಲ ಎಲ್ಲರೂ ಒಂದೇ ವರ್ಗದವರು
ಮತ್ತಿನ್ನೇನು ಮೊಬೈಲ್ ಸೀಮೆಯವರು

## ಅಚ್ಚುಮೆಚ್ಚು

ಎಲ್ಲಿ ಬಚ್ಚಿಟ್ಟುಕೊಂಡಿದ್ದೀಯಾ ನನ್ನ ಮುದ್ದುಕಂದಾ
ಬೀರುವಿನಲ್ಲೋ, ಬಾತ್‌ರೂಂನಲ್ಲೋ ಮತ್ತೆಲ್ಲೋ?
ಹುಡುಕುತ್ತಿರಲಿಲ್ಲ ಅವರು ತಮ್ಮ ಕಂದಮ್ಮನನ್ನು
ಎಂದಿನಂತೆ ಕಾಣದಾಗಿತ್ತು ಅವರ ಮೊಬೈಲು!



# ಜನನೀ ಜನ್ಮ ಭೂಮಿಶ್ಚ....

**ವಾಣೀ ಸುರೇಶ್**

ನಿಮಗೆ ಅಂದು ಹೇಳಿದ ಹಾಗೆ, ಅರ್ಧ ದಿನದಲ್ಲಿ ಎಲ್ಲಾದ್ರೂ Ann Arbor ಸ್ಟ್ರೀಟ್ ಆರ್ಟ್ ಫೇರ್-ನ್ನ ನೋಡಕ್ಕೆ ಸಾಧ್ಯವೇಂತ ಅನುಮಾನಿಸಿಕೊಂಡೇ ಅವತ್ತು ಹೊರಟ್ಟೆ.

Ann Arbor ಒಂದು ಯೂನಿವರ್ಸಿಟಿ ನಗರ. ಒಂದರ ಮಗ್ಗುಲಲ್ಲೊಂದು ನಿಬಿಡವಾಗಿ ಕಟ್ಟಿರುವ ಪ್ರಸಿದ್ಧ ಮಿಷಿಗನ್ ವಿಶ್ವವಿದ್ಯಾನಿಲಯದ ಬೃಹತ್ ಡಿಪಾರ್ಟ್‌ಮೆಂಟುಗಳ ಮಧ್ಯ-ಮಧ್ಯದಲ್ಲೇ ಇರುವ-ಅಂಗಡಿ ಬೀದಿಗಳು, ಬಿಡುವಿಲ್ಲದ ಟ್ರಾಫಿಕ್ಕು, ಜಗತ್ಪ್ರಸಿದ್ಧ ಹೋಟೆಲುಗಳು, ಸಂಗೀತ-ನಾಟಕ-ಸಿನೆಮಾ ಮಂದಿರಗಳು, ಮಾಲ್‌ಗಳು, ಅಪಾರ್ಟ್‌ಮೆಂಟ್ ಗುಚ್ಛಗಳನ್ನು - ನಮ್ಮ ವಿಶ್ವವಿದ್ಯಾನಿಲಯಗಳ ಕ್ಯಾಂಪಸ್ಸಿನ ಮಧ್ಯದಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯವಾದರೆ, ನೀವು Ann Arbor ಇರುವ ರೀತಿಯನ್ನು ಸ್ವಲ್ಪ ಮಟ್ಟಿಗೆ ಊಹಿಸಬಲ್ಲಿರಿ ಅನ್ನಬಹುದು. ವರ್ಷಕ್ಕೊಮ್ಮೆ ಇಲ್ಲಿಯ ಬೇಸಗೆಯಲ್ಲಿ ಏರ್ಪಡಿಸುವ ಈ ಫೇರ್, ಕರಕುಶಲ ವಸ್ತುಗಳಿಂದ ಹಿಡಿದು ಮಕ್ಕಳ ಆಟಿಕೆಗಳು, ಕೈ ಮಗ್ಗದ ನೇಯ್ಗೆ, ಮಣ್ಣು (ಪಾಟರಿ)-ಮರ-ಲೋಹ-ಗಾಜು-ಪಿಂಗಾಣಿಯ ವಸ್ತುಗಳು, ವಿವಿಧ ಮಾಧ್ಯಮದಲ್ಲಿನ ಶಿಲ್ಪ, ಡಿಜಿಟಲ್ ಕಲೆ, ಬಾಟಿಕ್ ಮತ್ತು ಇತರ ತರಹೇವಾರಿ ಪೈಂಟಿಂಗ್-ಗಳು, ಲೆದರ್‌ನಿಂದ ಮಾಡಲ್ಪಟ್ಟ ವಸ್ತುಗಳು, ಪ್ರಿಂಟಿಂಗ್,- ಇವೇ ಇತ್ಯಾದಿ ಅನೇಕಾನೇಕ ಪ್ರಕಾರಗಳನ್ನು ಒಳಗೊಂಡಿರುತ್ತದೆ. ಎತ್ತ ಕಣ್ಣು ಹಾಯಿಸಿದರೂ ವರ್ಣರಂಜಿತವಾದ, ಮನಸೂರೆಗೊಳ್ಳುವ ಕಲಾ ಪ್ರಪಂಚದ ಕಲ್ಪನೆಗಳು ಕಾಣಸಿಗುವ ಈ ಪ್ರದರ್ಶನದ ವಿಶೇಷ ಎಂದರೆ ಅದನ್ನು ಆಯೋಜಿಸಿರುವ ಸರಳ ರೀತಿ! ಪ್ರದರ್ಶನದ ಹೆಸರೇ ಸೂಚಿಸುವಂತೆ ವಿಶ್ವವಿದ್ಯಾನಿಲಯದ ಆಯ್ದ ಕೆಲವು ರಸ್ತೆಗಳ ಹೊರತಾಗಿ ಬಹುತೇಕ ರಸ್ತೆಗಳಲ್ಲಿ ವಾಹನ ಸಂಚಾರವನ್ನು ಸ್ಥಗಿತಗೊಳಿಸದೆ, ರಸ್ತೆಗಳ ಮೇಲೆಯೇ ಶ್ವೇತವರ್ಣದ ಗುಡಾರಗಳನ್ನೆಬ್ಬಿಸಿ, ಆ ಮಳಿಗೆಗಳಲ್ಲಿ ರಸ್ತೆ ಬದಿಯಲ್ಲೇ ನಡೆಸುವ ಮೂರು ನಾಲ್ಕು ದಿನಗಳ ಈ ಫೇರ್, ಇಲ್ಲಿಯ ಇಂಥಹ ಪ್ರದರ್ಶನಗಳ ಮುಂಚೂಣಿಯಲ್ಲಿದೆ. ಕುಶಲ ಕಲಾ ರಸಿಕರಿಗೆ ಇದೊಂದು ವಿಶಿಷ್ಟ ಅನುಭವ ಎನ್ನಬಹುದು.

ಸಾವಿರದ ಒಂಬೈನೂರ ಅರವತ್ತರಲ್ಲಿ ದೇಶದ ಕುಶಲಕರ್ಮಿಗಳು, ಕಲಾವಿದರಿಗಾಗೆಂದೇ ಪ್ರಾರಂಭಿಸಿದ ಈ ಕಾರ್ಯಕ್ರಮ ಈ ವರ್ಷ, ಮುನ್ನೂರೈವತ್ತಕ್ಕೂ ಮಿಕ್ಕಿ ಕಲಾವಿದರನ್ನು

ಹಾಗೂ ಐವತ್ತು ಸಾವಿರಕ್ಕೂ ಮಿಕ್ಕ ನೋಡುಗರನ್ನು ಆಕರ್ಷಿಸಿದೆ ಎನ್ನುವುದು ಆಯೋಜಕರ ಮಾತು. ಇದರಲ್ಲಿ ಭಾಗವಹಿಸುವ ಎಲ್ಲಾ ಮಳಿಗೆಗಳೂ ಸಹಾಯಕರನ್ನು ಅವಲಂಬಿಸದೆ ತನ್ನ ಕಲಾವಿದರನ್ನೇ ಹೊಂದಿರಬೇಕು ಎನ್ನುವುದೊಂದು ಅವರು ಪಾಲಿಸಲೇ ಬೇಕಾದ ಷರತ್ತು.




ಮಿಷಿಗನ್ನಿನವರಿಗೆ ಅಪರೂಪವಾಗಿ ಕಾಣಸಿಗುವ ಉರಿಯುವ ಬಿಸಿಲಿನ ಝಳದಲ್ಲೂ ತಣ್ಣೀರಿನ ಸೀಸೆಗಳನ್ನು ಹೊತ್ತು ಖುಷಿಯಾಗಿ ಅಲೆದಾಡುತ್ತಿದ್ದರಿಂದ ಇಲ್ಲಿಯವರ ಮೊದಲೇ ಕೆಂಚಗಿರುವ ಮುಖಗಳು ಒಂದೊಂದೂ ನಮ್ಮ Apple ಟೊಮ್ಯಾಟೋವನ್ನು ಹೋಲುವಂತಾಗಿತ್ತು. ಐಸ್ ಕ್ರೀಮ್, ತಂಪು ಪಾನೀಯ, ಮತ್ತು ತಣ್ಣೀರಿನ ಬಾಟಲಿಗಳ ಲಭ್ಯತೆ ಎಲ್ಲೆಲ್ಲೂ.....

ಪ್ರವೇಶ ಶುಲ್ಕವಿಲ್ಲದ, ಪ್ರವೇಶ ದ್ವಾರವಿಲ್ಲದ ಬಿಡುಬೀಸಾಗಿ ಹಮ್ಮಿಕೊಂಡಿದ್ದ ಒಂದು ಅಪರೂಪದ ಪ್ರದರ್ಶನ ಅದು. ನಮಗಿದ್ದ ಸಮಯಾಕಾಶದ ಅಭಾವದ ಪ್ರಯುಕ್ತ ಅಂದು ನಾವು ಕೇವಲ ಅದರ ದೂರರಲ್ಲೊಂದಷ್ಟನ್ನು ನೋಡಿದ್ವಿ ಅನ್ನಬಹುದು. ನಾವು ಪ್ರಾರಂಭಿಸಿದ ಕಡೆಯಿಂದ ನಮಗೆ ಸಿಕ್ಕ ಮೊದಲನೇ ಮಳಿಗೆಯೇ ಮರದ ಆಟಿಕೆಗಳದ್ದು. ಅದರ ಎದುರಿದ್ದದ್ದು ಕಪ್ಪೆಚಿಪ್ಪುಗಳಲ್ಲಿ ಅತ್ಯಂತ ಕೌಶಲ್ಯದಿಂದ ನಿರ್ಮಿಸಿದ ಅನೇಕ ವಸ್ತು ವಿಶೇಷಗಳ ಮಳಿಗೆ. ತವರೂರಿನಲ್ಲಾಗಲೇ ವಿಹರಿಸುತ್ತಿದ್ದ ನನ್ನ ಮನಸ್ಸಿಗೆ ಅದು, ಕಚ್ಚಾವಸ್ತುವಿನಲ್ಲಿದ್ದ ಸಾಮ್ಯತೆಯಿಂದಾಗಿ ಚನ್ನಪಟ್ಟಣದ ಹಾಗೂ ನಮ್ಮ ಬೀಚುಗಳ ಅಂಗಡಿ ಸಾಲುಗಳ ನೆನಪನ್ನು ತಂದರೂ, ಪೌರ್ವಾತ್ಯ-ಪಾಶ್ಚಿಮಾತ್ಯ ಮನೋಧರ್ಮಗಳ ನಡುವಿನ ವ್ಯತ್ಯಾಸ ಮಾತ್ರ ಹೇಗೆ ಎದ್ದು ಕಾಣುತ್ತಿತ್ತು ಅಂತೀರಿ?

ಅಂದ ಹಾಗೇ, ಅಲ್ಲಿ ಫುಟ್-ಪಾತಿನ ಕುರ್ಚಿಯೊಂದರಲ್ಲಿ ಕುಳಿತು ಮಾಮಾಲು ಗರಗಸ ಒಂದರಿಂದ ಪಿಟೀಲಿನ ನಾದ ಹೊಮ್ಮಿಸುತ್ತಿದ್ದ ಅಲ್ಲಿದ್ದ ಒಬ್ಬ ನಾದಬ್ರಹ್ಮನ ಮುರುಕಿನ ಬಗ್ಗೆ ನಿಮಗೆ ಹೇಳಲೇಬೇಕು! ವಿಶೇಷ ರೀತಿಯಲ್ಲಿ ಆತನೇ ನಿರ್ಮಿಸಿದ್ದ ಒಂದು ಕಮಾನೊಂದು ತಾನು ಘಾಸಿಗೊಳಗಾಗದೆ, ಅವನ ಕಾಲುಗಳ ನಡುವೆ ಬಗ್ಗಿಸಿ ಹಿಡಿದಿದ್ದ, ಉದ್ದವಾದ ತೆಳ್ಳನೆಯ ಒಂದು ಉಕ್ಕಿನ ಗರಗಸವೊಂದರ ಮೇಲೆ ಲೀಲಾಜಾಲವಾಗಿ ಹರಿದಾಡುತ್ತಿತ್ತು. ಎತ್ತರದ ಕೀಚುದನಿಯ ಸಂಗೀತವಾದರೂ ನಿಸ್ಸಂಶಯವಾಗಿ ಆತನ ಈ ಪ್ರಯೋಗ ಎಲ್ಲರ ಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾಗಿತ್ತು. ಸಾಧ್ಯವಿದ್ದಿದ್ದರೆ ಅವನ ಭವಿಷ್ಯದ

ಶಿಷ್ಯಕೋಟಿಯಲ್ಲಿ ಪಾಲುಗೊಳ್ಳಲು ನಾನೂ ಅರ್ಜಿ ಹಾಕ್ತಿದ್ನೇನೋ! ಆದರೆ ಏನ್ಮಾಡೋದು ತಾಯ್ನೆಲದ ಕರೆಗೆ (ಸುಳ್ಳು ಹೇಳಿದ ಪಾಪ ಸುತ್ತಿಕೊಳ್ಳದಿರಬೇಕಾದ್ರೆ, ಬೆಣ್ಣೆ ಮಸಾಲೆಯ ಘಮದ ಕರೆಗೆ) ಓಗೊಟ್ಟು ವಿಮಾನದಲ್ಲಿ ಸೀಟ್ ಬುಕ್ ಮಾಡಾಗಿತ್ತಲ್ಲ.... ಕೆ.ಎಸ್. ನರಸಿಂಹಸ್ವಾಮಿಯವರ – ''ತವರೂರ ದಾರಿಯಲಿ ತೆಂಗುಗಳು ತಲೆದೂಗಿ, ಬಾಳೆಗಳು ತೋಳ ಬೀಸಿ, ಮಲ್ಲಿಗೆಯ ಮೊಗ್ಗುಗಳು ಮುಳ್ಳಬೇಲಿಯ ವರಿಸಿ ಬಳುಕುತಿವೆ ಕಂಪ ಸೂಸಿ''– ಅನ್ನೋ ಸಾಲುಗಳನ್ನು ಗುಣುಗುಣಿಸ್ತಾ, ಬೆಂಗಳೂರಲ್ಲಿ ಕಾಲಿಟ್ಟ ತಕ್ಷಣ ಎಲ್ಲೆಲ್ಲಿ ಹೋಗ್ಬೇಕು, ಏನೇನ್ಮಾಡ್ಬೇಕು, (ಅರ್ಥಾತ್ ಎಲ್ಲೆಲ್ಲಿ ಏನೇನು ತಿನ್ಬೇಕು), ಯಾರ್ಯಾರನ್ನು ನೋಡ್ಬೇಕು ಅಂತೆಲ್ಲಾ ಹನುಮಂತನ ಬಾಲದಷ್ಟಿದ್ದ ಪಟ್ಟಿ ತಯಾರಿಸಿದ್ದೆ.

ಕಣ್ಣು ಮುಚ್ಚಿ ಬಿಡೋಷ್ಟರಲ್ಲಿ ಅಂತನ್ನೋಹಾಗೆ, ನಂತರದ ಒಂದು ಮುಂಜಾನೆ, ಅರ್ಧ ದಾರಿ ಕ್ರಮಿಸಿ ಚಕ್ರಭೀಮನ ಕೋಟೆ ಹಾಗಿರೋ ಫ್ರಾಂಕ್ ಫರ್ಟಿನ ವಿಮಾನ ನಿಲ್ದಾಣವನ್ನೂ ತಲಪಿದ್ದಾಯ್ತು. ಈ ಜರ್ಮನ್ನರು ನಮ್ಮ ಮಹಾಭಾರತ ಓದಿರಲೇ ಬೇಕು ಅನ್ನೋ ಗುಮಾನಿ ನಂಗೆ. ಇಲ್ದಿದ್ರೆ, ಹಾಗೆ ಅಲ್ಲಿಯ ಚಕ್ರವ್ಯೂಹ, ಪದ್ಮವ್ಯೂಹದಂಥಾ ವ್ಯೂಹಗಳನ್ನು ಕಾಪಿ ಹೊಡೆದು, ವಿನಾಕಾರಣ ಕ್ಲಿಷ್ಟವಾದ ಏರ್ ಪೋರ್ಟ್ ಕಟ್ಟೋಕ್ಕೆ ಹೇಗ್ತಾನೇ ಸಾಧ್ಯ ನೀವೇ ಹೇಳಿ! ಇನ್ನು ಅವತ್ತೋ, ದೂರು ದಿಕ್ಕುಗಳಿಂದಲೂ ಅಲ್ಲಿ ಸೇರಿದ್ದ, ಅಂದರೆ – ಆಮ್ಸ್ಟರ್ ಡ್ಯಾಂ, ಲಾಸಾಂಜಲೀಸ್ ಹಾಗೂ ಡೆಟ್ರಾಯ್ಟ್–ನಿಂದ ಬಂದಿದ್ದ ಎಲ್ಲ ಪ್ರಯಾಣಿಕರನ್ನೂ ಹೊತ್ತು ಬೆಂಗಳೂರಿಗೆ ಹೊರಡಬೇಕಿದ್ದ ನಮ್ಮ ಏರ್ ಬಸ್ ವಿಮಾನ, ದುರದೃಷ್ಟವಶಾತ್ ಕೇವಲ ಮೂರೂವರೆ ಘಂಟೆ ತಡವಾಗಿ ಹೊರಟಿದ್ದರಿಂದ, ಒಂದೇ ದೊಂಬಿ, ಇನ್ನಿಲ್ಲದ ಅವ್ಯವಸ್ಥೆ ಅಲ್ಲಿ! ಆತಂಕ, ನಿದ್ದೆಗೆಟ್ಟದ್ದರಿಂದಾದ ಸುಸ್ತು ಇವುಗಳಿಂದ ಸಾಕಾದ ನಮ್ಮವರಲ್ಲಿ ಅನೇಕರು, ಕುಸಿಯುತ್ತಿರುವ ಯುರೋಪಿಯನ್ ದೇಶಗಳ ಎಕಾನಮಿ ಇತ್ಯಾದಿಗಳನ್ನು ಅವರ ದಣಿವನ್ನೂ ಮರೆತು ಜಾಲಾಡಿಸಿದ್ದೇ ಜಾಲಾಡಿಸಿದ್ದು! ಆದ್ರೆ ನಂಗೇನೂ ಅನ್ನಿಸಲಿಲ್ಲ ಬಿಡಿ, ಚಿಕ್ಕ ವಯಸ್ಸಲ್ಲೊಂದ್ಸಲ ನಮ್ಮ ತಂದೆ ಜೊತೆ, ಊರಿಂದ ಬಂದಿದ್ದ ನನ್ನ ಕಜ್ಜಿನ್ನನ್ನ ಮನೆಗೆ ಕರ್ಕೊಂಡ್ಬರಕ್ಕೆ ಕರಗದ ದಿನ ಬೆಂಗಳೂರು ರೈಲ್ವೆಸ್ಟೇಷನ್ನಿಗೆ ಹೋಗಿದ್ದೆನಲ್ಲ!

ಅಂತೂ ಕವಿ ವರ್ಣಿಸಿದ 'ಮಲ್ಲಿಗೆಯ ಮೊಗ್ಗುಗಳಿದ್ದ ಮುಳ್ಳಬೇಲಿ' ಸಿಗದಿದ್ರೂ ಮನೆಯಂತೂ ತಲುಪಿದ್ದಾಯ್ತು. ಮನೆಯ ತಣ್ಣನೆಯ ಮೊಸಾಯಿಕ್ ನೆಲದ ತಂಪಿನ ಸುಖದ ಮುಂದೆ ಎಲ್ಲವೂ ತೃಣ ಸಮಾನ ಅನ್ನಿಸ್ಬಿಟ್ತು ನೋಡಿ! ಅಷ್ಟೇ ಅಂದ್ಕೊಂಡ್ರಾ? ತಡೀರಿ, ಇನ್ನು ಮುಂದಿನ ದಿನಗಳ ಖುಷಿಯ ಅನುಭವಗಳನ್ನೂ ಹಂಚಿಕೊಳ್ಳಲೇಬೇಕು...

ಸಂಗೀತದ ಸುರಿಮಳೆ ನಡೆಯುವ ಸುವರ್ಣಾವಕಾಶದ ದಿನಗಳು ನಾನಿಲ್ಲಿಗೆ ಬಂದಾಗ. ಗಾಯನ ಸಮಾಜಕ್ಕೆ ಹೋಗೋದೋ, ಚೌಡಯ್ಯಾಗೋ? ಇಲ್ಲ ರಂಗಶಂಕರದ ನಾಟಕಕ್ಕೋ? ಉಲ್ಲಾಸ್ ಕಶಾಲ್ಕರ್–ರವರ ಜೈಜೈವಂತಿ, ಬಸಂತ್ ಬಹಾರ್–ಗಳು, ಅಶ್ವಿನಿ ಭಿಡೆಯವರ ಗೌರೀ ಹಾಗೂ ದೇಶ್ ರಾಗದ ತಾನ್‌ಗಳು ಒಂದು ಕಡೆ ಮನಸ್ಸನ್ನು ಕಟ್ಟಿ ಹಾಕಿದರೆ ಇನ್ನೊಂದ್ಕಡೆ ಶಾಹಿದ್ ಪರ್ವೇಜ್–ರ ಸಿತಾರಿನ ಮನ ಸೆಳೆಯುವ ಝೇಂಕಾರ! ಮಗದೊಂದು ಕಡೆ ನಿತ್ಯಶ್ರೀಯ ಕಲ್ಯಾಣಿಯ ಸೊಗಸು! ಮಗದೊಂದು ಕಡೆ ಮಲ್ಲಾಡಿ ಸಹೋದರರ ಗಾಂಭೀರ್ಯ ತುಂಬಿದ ಗಾಯನದ ಮೋಡಿ! ಇದೆಲ್ಲದರ ಮಧ್ಯೆ ಜೆಟ್ ಲ್ಯಾಗಿಗೆಲ್ಲಿ ಸಮಯ?

ಇದೇ ಸಮಯದಲ್ಲಿ ರಂಗಶಂಕರದಲ್ಲಿ ರಾಜೇಂದ್ರ ಕಾರಂತರ ನಿರ್ದೇಶನದಲ್ಲಿ ನಡೆದ, ವರಕವಿ ಬೇಂದ್ರೆಯವರ ಸಾಹಿತ್ಯ, ವಿಚಾರಗಳನ್ನಾಧರಿಸಿದ ''ಗಂಗಾವತರಣ''ವನ್ನು ಆಸ್ವಾದಿಸುವ ಅವಕಾಶ ಒದಗಿಬಂತು. ಎವರ್ ಗ್ರೀನ್'' ಮೂಡಲ ಮನೆಯ ಮುತ್ತಿನ ನೀರಿನ'' ಸುಂದರ ಬೆಳಗಿನ ವರ್ಣನೆಯೊಂದಿಗೆ ಹೆಣೆದುಕೊಂಡಿದ್ದ ಅವರ ಆಳವಾದ ಚಿಂತನೆ, ''ಅವು ಈ ದಿನ ನಾವು ನೀವಿಗೆ ಆನು ತಾನದ ತನನನಾ'' ಎನ್ನುವ ನಾಕುತಂತಿಯಲ್ಲಿನ ನಿಗೂಢತೆ, ''ಶ್ರಾವಣಾ ಬಂತು ಶ್ರಾವಣಾ'' ಎನ್ನುವಾಗಿನ ಅವರ ಸಂಭ್ರಮ, ''ಚೈತನ್ಯದ ಪೂಜೆ''ಗಾಗಿ ಅವರು ನಮ್ಮೆಲ್ಲರಿಗಿತ್ತ ಕರೆ, ಸುಂದರ ಕವಿತೆಗಳಲ್ಲಿ ಹಾಸು ಹೊಕ್ಕಾಗಿದ್ದ ಅವರ ಆಧ್ಯಾತ್ಮದ ಸೆಳಕು, ''ಯಾರಿಗೂ ಹೇಳೋಣು ಬ್ಯಾಡ'' ಗೀತೆಯ ಭಾವಕ್ಕೆ ಅವರ ಮನಕ್ಕೊಪ್ಪಿದ ಸೂಕ್ಷ್ಮ ಸಂಹಿತೆಯನ್ನು ಪ್ರೇಕ್ಷಕರಿಗೆ ತಿಳಿಸಿದ ರೀತಿ, ''ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು'' ಕವಿತೆಯ ಸರಳ ಸುಂದರ ಬೆಚ್ಚಗಿನ ಪ್ರೀತಿಯ ಅಭಿವ್ಯಕ್ತಿಯನ್ನು ನಿರ್ದೇಶಕರು ಬಳಸಿಕೊಂಡ ಸಂದರ್ಭದ ಜಾಣ್ಮೆ, ಅಬ್ಬಾ ಒಂದೊಂದೂ ಒಂದು ಟ್ರೀಟೇ ಅನ್ನಿಸಿಬಿಡ್ತು! ಬೇಂದ್ರೆಯವರೊಡನೆಯೇ ಇದ್ದೀವೇನೋ ಎಂಬ ಭಾವ ಸ್ಫುರಿಸುವಂತಿದ್ದ ಅವರ ಗೀತೆಗಳಲ್ಲಿನ ದರ್ಶನದ ನಿರೂಪಣೆ, ಸಮರ್ಥ ನಿರ್ದೇಶನದಲ್ಲಿ ಎಲ್ಲ ಕಲಾವಿದರ ಮನಮುಟ್ಟುವಂತಿದ್ದ ಅಭಿನಯ, ನೆರಳು ಬೆಳಕಿನ ಮೋಡಿಯಲ್ಲಿ ಗೀತೆಗಳಲ್ಲಿನ ಶ್ರಾವ್ಯತೆಯೊಂದಿಗೆ ಒಡಗೂಡಿದ ನೃತ್ಯಾಭಿನಯ! ಎಂಥಹ ಸಂತೃಪ್ತತೆ ಕೊಟ್ಟ ಅನುಭವ ಅದೂಂದ್ರೆ ನಾನು ಹೇಳಿ ಪೂರೈಸಲಾರೆ!... ತಿಂಗಳಾನುಗಟ್ಟಲೆಯಿಂದ ನನಗೇ ತಿಳಿಯದೆ ನನ್ನ ನರನಾಡಿಗಳಲ್ಲೆಲ್ಲ ಸೇರಿರಬಹುದಾದ ಕಿಸುರನ್ನು ಕಿತ್ತೆಗೆದು ಶುಭ್ರಗೊಳಿಸಿದಂತೆ, ನನ್ನ ಮಟ್ಟಿಗೆ ಅದು ಗಂಗಾವಾತವರಣದ ಅನ್ವರ್ಥವೇ ಎಂದೆನ್ನಿಸಿದಂತೆ ..... ಅಂತೆಲ್ಲಾ ಪುಟಗಟ್ಟಲೆ ಹೇಳಬಹುದೇನೋ!

ಅಂತೂ ಒಟ್ಟಲ್ಲಿ, ವಿಜಯೋತ್ಸವದ ತರುವಾಯ ಲಂಕೆಯಲ್ಲೇ ನಿಂತು ರಾಜ್ಯಭಾರ ನಡೆಸೆಂದು ವಿಭೀಷಣನಿತ್ತ ಕರೆಗೆ ಓಗೊಡದ ಶ್ರೀ ರಾಮಚಂದ್ರನ ಬಾಯಲ್ಲಿ ಆನಂದ ರಾಮಾಯಣದ ಕವಿ ಅಂದು ನುಡಿಸಿದ ಹಾಗೆ-''ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ'' - ಎಂಬ ಮಾತೇ ಎಂದಿಗಿಂತಾ ಇನ್ನೂ ಹೆಚ್ಚು ಪ್ರಸ್ತುತಾಂತನ್ನಿಸಿಬಿಡ್ತು ನೋಡಿ!

*(ಮುಗಿಯಿತು)*

---

**ನಗುವಿಗನುಮತಿ**

ಯಾರ ಅನುಮತಿಯೂ ಬೇಡ ನಗುವುದಕ್ಕೆ
ತಿಳಿಯಿರಿ ಬದುಕಿರುವುದೇ ನಗುವುದಕ್ಕೆ
ಸಂಕಟ, ನೋವು ಇವುಗಳ ಪರಿಹಾರಕ್ಕೆ
ನಗ್ತಾ ಇರಿ ಅಂತಾ ಹೇಳೋದು ಅದಕ್ಕೇ

- ಸುಚೇತ



# ಜನವರಿ 2012

**❁ ಜ್ಯೋತಿಷಿ ಸತ್ಯೋತ್ತಮಾಚಾರ್ಯ**

**ಮಾಸ ಸೂಕ್ತಿ :** 2012ನೇ ಇಸವಿಗೆ ಕಾಲಿಡುತ್ತಿರುವ ನಿಮ್ಮೆಲ್ಲರನ್ನೂ ದೇವರು ಕಾಪಾಡಲಿ. ನಿಮ್ಮ ರಾಶಿಯ ಪ್ರಭಾವದಿಂದ ನಿಮ್ಮ ಮನೋಧರ್ಮ ಹೇಗಿರುತ್ತೆ ಎಂಬುವುದು ನಿಮಗೆ ಅರಿವಿದೆಯೇ? ಉದಾಹರಣೆಗೆ: ಬೊಗಳೋ ನಾಯಿ ಕಚ್ಚಲ್ಲ, ಕಚ್ಚೋ ನಾಯಿ ಬೊಗಳೊಲ್ಲ ಅಂತ ಒಂದು ಗಾದೆ ಇದೆ ಅಲ್ಲವೇ? ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನಿರಬಹುದು?

**ಮೇಷ :** ಮೂಲ ಗುಣ (ಮೂ.ಗು.) : ಧೈರ್ಯ : ಕಚ್ಚಿದ್ರೆ ಕಚ್ಚಲಿ. ಪ್ರಾಬ್ಲಮ್ ನನಗಲ್ಲ, ನಾಯಿಗೆ! ಆಂಟಿ ರ್‍ಯಾಬೀಸ್ ನನಗೆ ಕೊಡಿಸಬೇಕು, ನಾಯಿಗಲ್ಲ! ಬೆಂಗಳೂರಿನ ಸೊಳ್ಳೆಗಳು, ತುಮಕೂರಿನ ಜಿಗಣೆಗಳು, ಮಂಗಳೂರಿನ ಝುರಿಗಳು – ಇವೆಲ್ಲಾ ಕಚ್ಚಿರೋ ದೇಹ ನನ್ನದು. ಈ ಜುಜುಬಿ ನಾಯಿಗೆ ನಾನು ಯಾಕೆ ಹೆದರಬೇಕು?

**ವೃಷಭ :** ಮೂ.ಗು. : ಕರುಣಾಮಯಿ : ಅಯ್ಯೋ ಪಾಪ, ಬೊಗಳಿದರೆ ಬೊಗಳಿಕೊಳ್ಳಲಿ, ಕಚ್ಚಿದರೆ ಕಚ್ಚಿಕೊಳ್ಳಲಿ! ನಮ್ಮಂತಹ ಓದಿ ಬರೆದವರೇ ನಾಯಿಯ ಕೈಲಿ ಕಚ್ಚಿಸಿಕೊಳ್ಳಲ್ಲ ಅಂತ ಹಠ ಮಾಡಿದ್ರೆ, ಅದು ತಾನೇ ಯಾರನ್ನ ಕಚ್ಚಬೇಕು? ಅಷ್ಟರ ಮೇಲೆ ಅದು ಕಚ್ಚಿದ್ರೂ, ನಮಗೆ ಡಾಕ್ಟರುಗಳಿಲ್ವೆ? ಔಷಧಿಗಳಿಲ್ವೆ? ಅಕಸ್ಮಾತ್ ನಾವೇ ನಾಯಿಗೆ ಕಚ್ಚಿದೆವೂ ಅಂದರೆ, ಅದಕ್ಕೆ ಯಾವ ಡಾಕ್ಟರುಗಳು ಔಷಧಿಗಳು ಇವೆ? ಕಚ್ಚಿಕೊಳ್ಳಲಿ ಬಿಡಿ. ಹೆಚ್ಚು ಕಮ್ಮಿ ಆದರೆ ನಮಗೆ ಹುಚ್ಚು ಹಿಡಿಯುತ್ತೆ. ಈಗಾಗಲೇ ನಮಗೆ ಹುಚ್ಚು ಹಿಡಿದಿಲ್ಲವೆ?

**ಮಿಥುನ :** ಮೂ.ಗು. : ವಿಪರೀತ ಸಹನೆ : ಏನೋ ಅಡ್ಜಸ್ಟ್ ಮಾಡ್ಕೋತೀವಿ ಬಿಡಿ. ಈಗಾಗಲೇ ಆರ್ತರೈಟಿಸ್ ಮಂಡಿ, ಹಿಮ್ಮಡಿಗಳಿವೆ. ಕಚ್ಚಿದರೂ ಸ್ವಲ್ಪ ಹಿಮ್ಮಡಿ ಮೇಲ್ಭಾಗಕ್ಕೆ ಕಚ್ಚಿದರೆ ಒಳ್ಳೆಯದು. ಕ್ರೇಪ್ ಬ್ಯಾಂಡೇಜ್ ಜೊತೆ ಇನ್ನೊಂದು ಬ್ಯಾಂಡೇಜ್ ಕಟ್ಬೇಕು ಅಷ್ಟೆ. ಆದರೆ ದೇವರಲ್ಲಿ ನನ್ನ ಒಂದೇ ಒಂದು ಬೇಡಿಕೆ ಏನೆಂದರೆ, ಪ್ರತಿ ಸಲಾನೂ ನಾಯಿ ನನಗೇ ಕಚ್ಚಬಾರದು ಅಂತ; ನಮ್ಮ ಅಕ್ಕಪಕ್ಕದ ಮನೆಯವರಿಗೂ ಈ ವರಪ್ರಸಾದ ಸಿಕ್ಕಲಿ ಅಷ್ಟೆ. ಆಗ ನಮ್ಮ ರಸ್ತೇಲಿ ಒಂದು ಸಮತೋಲನವಿರುತ್ತೆ.

**ಕಟಕ :** ಮೂ.ಗು. : ಅನಿಶ್ಚಿತ ಮನಸ್ಸು : ಬೊಗಳೋ ನಾಯಿ ಬಾಯಲ್ಲಿ ಬೆರಳಿಟ್ಟು ನೋಡಲೆ? ಬೇಡ, ಅಕಸ್ಮಾತ್ ಕಚ್ಚಿದರೆ.... ಹಾಗಾದರೆ ಬೊಗಳದೇ ಇರೋ ನಾಯಿ ಬಾಯಲ್ಲಿ ಬೆರಳು ಇಡಲೆ? ಕಚ್ಚಿಸ್ಕೊಂಡು ಹೇಗಿರುತ್ತೆ ಅಂತ ಟ್ರೈ ಮಾಡಲೆ? ಇಷ್ಟರ ಮೇಲೆ

ಯಾಕೆ ಕಚ್ಚಿಸ್ಕೋಬೇಕೂ ಅಂತೀನಿ? ಬೇಡ, ಮೊನ್ನೆತಾನೆ ಹೊಸಾ ಶೂಗಳು ಬೇರೆ ಕಚ್ಚಿವೆ. ಮುಂದಿನ ವರ್ಷ ಕಚ್ಚಿಸ್ಕೋತೀನಿ. ಹೇಗಿದ್ರೂ ಆಫೀಸಿನಲ್ಲಿ ಉಪಯೋಗಿಸದೇ ಇರೊ ಮೆಡಿಕಲ್ ಲೀವ್ ಬೇಕಾದ ಹಾಗಿವೆ.

**ಸಿಂಹ :** ಮೂ.ಗು. : ಸಾರ್ವಭೌಮತ್ವ : ಬೀದೀಲಿ ಓಡಾಡೋ ಯಾವ ಕಂತ್ರಿ ನಾಯಿ ನನ್ನ ಹತ್ರ ಸುಳಿಯುತ್ತೆ ಹೇಳಿ? ನನ್ನನ್ನು ಕಚ್ಚಿ ಅದು ಬದುಕೋದುಂಟೆ? ಕಚ್ಚೋದಿರಲಿ, ನನ್ನ ಕಡೆ ತಿರುಗಿ ನೋಡೊಕ್ಕೂ ಅದಕ್ಕೆ ಧೈರ್ಯವಿದೆಯೆ? ಏನೋ, ಲಾಬ್ರಡಾರ್ ಆಲ್ಸೇಶಿಯನ್ ಜಾತಿ ನಾಯಿ ಆದರೆ ಹುಷಾರಾಗಿರಬೇಕು ಅಷ್ಟೆ. ಆದರೆ ಅವು ದೊಡ್ಡ ಮನುಷ್ಯರ ನಾಯಿಗಳು. ಯಾವಾಗಲೂ ಚೈನ್‌ನಲ್ಲಿ ಕಟ್ಟಿರುತ್ತಾರೆ. ಚೈನ್‌ನಿಂದ ಕಳಚಿಕೊಂಡ್ರೂ ಏನು ಭಯವಿಲ್ಲ. ಎಷ್ಟೋ ಸಲ ನನ್ನ ಫ್ರೆಂಡ್ಸ್ ನಾನೂ ನೋಡೋಕ್ಕೆ ಲಾಬ್ರಡಾರ್ ತರಹಾನೇ ಇದೀನಿ ಅಂತ ಹೇಳ್ತಿರ್ತಾರೆ. Birds of the same teethu! No Problem!

**ಕನ್ಯ :** ಮೂ.ಗು. : ಅಚ್ಚುಕಟ್ಟುತನ : ಬೊಗಳೋ ನಾಯಿ ಕಚ್ಚಲ್ಲ ಅಂತ ದೃಢೀಕರಿಸೋಕ್ಕೆ ಎರಡು ಮೂರು ಸಲ ಕೊಡೇಲೋ ವಾಕಿಂಗ್ ಸ್ಟಿಕ್‌ನಲ್ಲೋ ಅದನ್ನು ತಿವಿದು ನೋಡಬೇಕು. ಅಥವಾ ಒಂದು ಸಲ ಅದರ ಬಾಲದ ಮೇಲೆ ಕಾಲಿಟ್ಟು ಅಮುಕಬೇಕು. ಹಾಗೇನೇ, ಕಚ್ಚೊ ನಾಯಿ ಬೊಗಳೊಲ್ಲ ಅಂತ ನಿರ್ಧಾರಕ್ಕೆ ಬರಬೇಕಾಗಿದ್ರೆ, ಅದರ ಬಾಯಿಯಲ್ಲಿ ಹೆಬ್ಬೆರಳನ್ನಿಟ್ಟು ಕಡೇ ಪಕ್ಷ 24 ಗಂಟೆಗಳ ಕಾಲವಾದ್ರೂ ಕಾದು ನೋಡಬೇಕು. ಅಕಸ್ಮಾತ್ ಬೆರಳು ಕಾಣೆಸದಿದ್ರೆ, ನಾಯಿ ಪ್ರೀತಿಯಿಂದ ಕಚ್ಚಿತೋ ಅಥವಾ ಕೋಪದಿಂದ ಕಚ್ಚಿತೋ ಅಂತ ವಿಶ್ಲೇಷಿಸಬೇಕು....

**ತುಲಾ :** ಮೂ.ಗು. : ಸ್ನೇಹಪರತೆ : ಜಾನಿ, ಜಾನಿ ಯಾಕೆ ಬೊಗಳ್ತೀ ಜಾನಿ? ನಿನಗೆ ಕಚ್ಚೋಕ್ಕೆ ಗೊತ್ತಿಲ್ವಾ? ಹೋಗ್ಲಿ ಬಿಡು ಜಾನಿ, ಸದ್ಯ ಮೂಳೇನಾದ್ರೂ ಕಚ್ಚೋಕ್ಕೆ ನಿನಗೆ ಗೊತ್ತಲ್ಲ! ಬೊಗಳಿದರೆ ಮನುಷ್ಯರನ್ನ ನೋಡಿ ಬೊಗಳು ಕಂದಾ. ಆಟೋ, ಮೋಟರ್ ಬೈಕ್, ಎಮ್ಮೆ ಇಂತಹವನ್ನೆಲ್ಲಾ ನೀನು ನೋಡಿ ಬೊಗಳಿದರೂ ಒಂದೇ, ಇಲ್ಲದಿದ್ದರೂ ಒಂದೇ! ಓ್ಹ ರಾಣೀ ಕಚ್ಚುತ್ತೀಯಾ? ಕಚ್ಚು. ಆದರೆ ಈ ಸಲ ಸ್ವಲ್ಪ ಈ ಕಡೆ ಕಚ್ಚುಮರಿ. ಕಚ್ಚಿದ ಜಾಗದಲ್ಲೆ ಮತ್ತೆ ಮತ್ತೆ ಕಚ್ಚುತಿದ್ರೆ, ಹೀಲ್ ಆಗೋದು ಕಷ್ಟ.....

**ವೃಶ್ಚಿಕ :** ಮೂ.ಗು. : ಜಂಬ : ಅಯ್ಯೋ ಬಿಡಿ, ಮೊನ್ನೆ ದೀಪಾವಳಿ ಸಮಯದಲ್ಲಿ – ನಾಯಿ ಬಾಲಾನ ಪಟಾಕಿ ಬತ್ತಿ ಅಂತ ಮಿಸ್ಟೇಕ್ ಮಾಡ್ಕೊಂಡು ಬೆಂಕಿ ಇಟ್ಟಾಗ ಕಚ್ಚಿಸ್ಕೊಂಡಿದ್ದೂ ಸೇರಿ – ನಾನು ಆಗಲೇ ಎಂಟು ಡಾಗ್ ಬೈಟ್ಸ್‌ಗಳ ಚಾಂಪಿಯನ್ನು! ಆದರೆ ತಮಾಷೆ ನೋಡಿ, ಆ ಎಂಟು ನಾಯಿಗಳೂ, ನನ್ನನ್ನು ಕಚ್ಚಿ ಒಂದೆರಡು ದಿನಗಳಲ್ಲೇ ಸತ್ತು ಹೋದ್ವು! ನೋ, ನೋ ರ್‍ಯಾಬಿಸ್‌ನಿಂದಲ್ಲ, ವೆಟರಿನರಿ ಡಾಕ್ಟರುಗಳ ಪ್ರಕಾರ, ಅವು ನನಗೆ ಕಚ್ಚಿದಾಗ ಆದ ಶಾಕ್‌ನಿಂದ ಸತ್ತವಂತೆ! ಹಾಗಾಗಿ ನಮ್ಮ ರೋಡಿನಲ್ಲಿ ಬೊಗಳೋ ನಾಯಿಗಳೂ ಇಲ್ಲ, ಕಚ್ಚೋ ನಾಯಿಗಳೂ ಇಲ್ಲ!

**ಧನಸ್ಸು :** ಮೂ.ಗು. : ವಾಚಾಳಿ ನಾಲಿಗೆ : ಬೊಗಳೀ, ಬೊಗಳೀ ನನ್ನ ತಲೆ ಯಾಕೆ ಚಿಟ್ಟು ಹಿಡಿಸ್ತೀ ಮುಂಡೇದೇ...? ಬಡಿದು ಸಾಯಿಸ್ಬಿಡ್ತೀನಿ ನೋಡು. ನನ್ನನ್ನು ನೋಡಿ ಬೊಗಳೋಕ್ಕೆ ನಾನೇನು ನಿನ್ನ ಬೀಗರು ಅಂತ ಅಂದ್ಕೊಂಡ್ಯಾ? ಏನ್ ಗುರ್, ಗುರ್ ಅಂತಿದೀಯಾ? ಕಚ್ತೀಯಾ? ಕಚ್ಚಿದರೆ ನಾನೆ ವಾಪಸ್ ನಿನ್ನ ಕಚ್ಬಾಕ್ತೀನಿ ಹುಷಾರ್! ಅಷ್ಟು ಕಚ್ಚಬೇಕು ಅನ್ನಿಸಿದ್ರೆ, ನಮ್ಮನೇಲಿ ಬಾಡಿಗೆಗೆ ಇದಾರಲ್ಲ ಅವರನ್ನ ಕಚ್ಚು – ಮೂರು ತಿಂಗಳಿಂದ ಬಾಡಿಗೆ ಕೊಟ್ಟಿಲ್ಲ.

**ಮಕರ :** ಮೂ.ಗು. : ಅಂತರ್ಮುಖಿ : ಬೊಗಳೋವು ಬೊಗಳಿಕೊಳ್ಳಲಿ... ಕಚ್ಚೋವು ಕಚ್ಚಿಕೊಳ್ಳಲಿ... ಆದರೆ ನಾಯಿಗಳೇ ವಾಸಿ... ಒಂದು ನಿಯಮವನ್ನಾದರೂ ಪಾಲಿಸುತ್ವೆ. ಕಚ್ಚೋನಾಯಿ ಬೊಗಳಲ್ಲ, ಬೊಗಳೋ ನಾಯಿ ಕಚ್ಚಲ್ಲ. ಆದರೆ, ನಾವು? ಅತ್ತಲಾಗೆ ಬೊಗಳ್ತಾನೂ ಇರ್ತೀವಿ... ಕಚ್ತಾನು ಇರ್ತೀವಿ... ನಾವು ಯಾವ ಕಾಲಕ್ಕೆ ಸದ್ಗುಣರಾಗ್ತೀವಿ ಅಂತೀನಿ.

**ಕುಂಭ :** ಮೂ.ಗು. : ವಿಪರೀತ ಬುದ್ಧಿ : ನಾಯಿಗಳು ಬೊಗಳುತ್ವಾ? ಕಚ್ಚಲ್ಲಾತಾನೇ? ನೋವರ್‍ರಿ, ಐಪ್ಯಾಡ್ ಡೌನ್‌ಲೋಡ್ ವಾಲ್ಯೂಮ್‌ನ ಮ್ಯಾಕ್ಸಿಮಂನಲ್ಲಿ ಇಟ್ಕೊಂಡು, ಮೋಟರ್ ಸೈಕಲ್ ಸೈಲನ್ಸರ್ ಕಿತ್ಹಾಕಿ ಹೋಗ್ತೀನಿ ಅಷ್ಟೇ! ಕಚ್ಚುತ್ತಾ? ನೋವರ್‍ರಿ! ಕೈಗೆ ಲೆದರ್ ಗ್ಲೌಸ್ ಹಾಕ್ಕೊತ್ತೀನಿ, ಕಾಲಿಗೆ ಗಮ್ ಬೂಟ್‌ಗಳನ್ನು ಹಾಕ್ಕೋತೀನಿ. ಅಷ್ಟರ ಮೇಲೆ ಕಚ್ಚಿದ್ರೆ, ನನ್ನ ಪಿಲಿಯನ್ ರೈಡರ್‌ನ ಕಚ್ಚಿಕೊಳ್ಳಲಿ ಬಿಡಿ.

**ಮೀನಾ :** ಮೂ.ಗು. : ಅಧ್ಯಾತ್ಮಕತೆ : ಕಚ್ಚಲಿ, ಎಲ್ಲಾ ದೇವರ ಇಚ್ಛೆ ! ಬೊಗಳಲಿ, ಅದೂ ದೇವರ ಇಚ್ಛೆ! ಎಲ್ಲಾ ಅವನ ಮಹಿಮೆ. ಅದು ಯಾವ ಪ್ರಬಲವಾದ ಕಾರಣಕ್ಕೋ ಏನೋ ಆತ ಬೊಗಳೋ ನಾಯೀನೂ ಸೃಷ್ಟಿಸಿದ, ಕಚ್ಚೋ ನಾಯೀನೂ ಸೃಷ್ಟಿಸಿದ, ಕಚ್ಚಿಸಿಕೊಳ್ಳೋಕ್ಕೇ ನಮ್ಮನ್ನೂ ಸೃಷ್ಟಿಸಿದ. ಹಿರಿಯ ಪಾಂಡವ ಧರ್ಮರಾಜ ಸ್ವರ್ಗದೆಡೆಗೆ ಹೋಗುತ್ತಿದ್ದಾಗ, ಅವನನ್ನು ಹಿಂಬಾಲಿಸುತ್ತಿದ್ದ ನಾಯಿ ಬೊಗಳುತ್ತಲೇ ಇರಲಿಲ್ಲ. ಹಾಗಾಗಿ, ಕಚ್ಚುತ್ತೋ ಏನೋ ಎಂದು ಆ ವೀರ ಪುತ್ರನಿಗೂ ಅಳುಕಿತ್ತು ಅಂತ ಮಹಾಭಾರತದಲ್ಲಿ ಓದಿಲ್ಲವೆ? ಅಷ್ಟರ ಮೇಲೆ ಕಚ್ಚಿದರೂ ನಾವು ಸಾಯುತ್ತೀವಿ ಅಥವಾ ನಾಯಿ ಸಾಯುತ್ತೆ. ಸಧ್ಯ, ಇಬ್ಬರೂ ಸಾಯುವುದಿಲ್ಲವಲ್ಲ! ಎಲ್ಲಾ ಅವನ ಆಟ!

***2012ರಲ್ಲಿ ನೀವು ಯಾರನ್ನೂ ಕಚ್ಚದೆ, ಯಾರು ನಿಮ್ಮನ್ನೂ ಕಚ್ಚದೆ,***
***ನಿಮ್ಮ ಜೀವನವು ಸುಗಮವಾಗಿರಲಿ.***

**ನಗುವಿನ ದಿನಗಳು**

ಇಂದು, ನಾಳೆ, ನಾಡಿದ್ದು, ಆಚೆನಾಡಿದ್ದು ಒಂದೇ
ನಗುವಿನ ಭಾವದವರಿಗೆ ಎಲ್ಲಾ ದಿನ ಒಂದೇ
ನಕ್ಕರಷ್ಟು ನಿರಾಳ ಎಲ್ಲರ ಅಂತರಾಳ
ಆಗಲಿ ನಗದಿರುವ ದಿನಗಳೇ ತುಂಬಾ ವಿರಳ

**– ಸುಕೇಶವ**